"ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಜಲಮಂಡಲಿ, ಕಲುಷಿತ ನೀರು ಪೂರೈಸುತ್ತಿಲ್ಲ, ನೀರು ಸೋಸುವಲ್ಲಿ ಎಲ್ಲಾ ಸಂರಕ್ಷತಾ ಹಾಗೂ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನೀರು ಸೋಸುವ ಮುಂಚೆ ಹಾಗೂ ನಂತರ, ಎರಡೆರಡು ಸಲ ನೀರಿಗೆ ಕ್ಲೋರಿನ್ ಮಿಶ್ರಮಾಡಲಾಗುತ್ತಿದೆ. ಸೋಸಿದ ನಂತರವೇ ನೀರು ಪೂರೈಸಲಾಗುತ್ತಿದೆ. ಒಳಚರಂಡಿ ಪೈಪುಗಳು ಕುಡಿಯುವ ನೀರಿನ ಪೈಪು ಜೊತೆ ಇರುವುದರಿಂದ, ಕೆಲವೆಡೆ ಕುಡಿಯುವ ನೀರಿನಲ್ಲಿ ಹುಳುಗಳು ಸೇರಿಕೊಂಡಿರುವ ಸಾಧ್ಯತೆ ಇದೆ.

೩. ಈ ಬಗ್ಗೆ ಪರಿಷತ್ತಿನಲ್ಲಿ ಚರ್ಚೆ ನಡೆದ ಮೇಲೆ ವಿಷಯು ತುಂಬಾ ಗಂಭೀರವಾದ್ದರಿಂದ, ಖುದ್ದಾಗಿ ಪರಿಶೀಲಿಸಲು ಮಂಡಲಿಯ ಮುಖ್ಯ ಅಭಿಯಂತರರು ದಿನಾಂಕ ೧೧ ಮತ್ತು ೧೨-೬-೧೯೮೮ ರಂದು ಹುಬ್ಬಳ್ಳಿ-ಧಾರವಾಡದ ನೀರಸಾಗರ ಜಲಾಶಯಕ್ಕೆ, ಮಂಡಲಿಯ ಕಾರ್ಯಪಾಲಕ ಅಭಿಯಂತರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರೊಡನೆ ಭೇಟಿ ಕೊಟ್ಟಿರುತ್ತಾರೆ. ಮತ್ತು ನೀರು ಶುದ್ಧೀಕರಣಾಗಾರಕ್ಕೆ ಭೇಟಿಕೊಡುವ ಮೊದಲು, ಮಾನ್ಯ ಕಂದಾಯ ಸಚಿವರು ಕರೆದಿದ್ದ ನಗರಸಭೆ ಅಧಿಕಾರಿಗಳ ಸಭೆಯಲ್ಲಿ ಭಾಗವಹಿಸಿದ್ದಾರೆ. ಕಂದಾಯ ಸಚಿವರು, ಮಂಡಲಿ ಅಧಿಕಾರಿಗಳು, ನೌಕರರು ಹಾಗೂ ನಗರಸಭೆ ಅಧಿಕಾರಿಗಳೊಂದಿಗೆ, ೧೨ನೇ ತಾರೀಖು ಸದರಿ ಶುದ್ಧೀಕರಣಾಗಾರಕ್ಕೆ ಭೇಟಿಕೊಟ್ಟಿರುವರು.

೪. ನೀರಸಾಗರ ಶುದ್ಧೀಕರಣಾಗಾರಕ್ಕೆ ಭೇಟಿಕೊಟ್ಟಾಗ, ಶುದ್ಧೀಕರಣಾಗಾರದ ಗೋಡೆಯ ಮೇಲೆ ಮತ್ತು ನೀರಿನಲ್ಲಿ ಸೊಳ್ಳೆಗಳು ಮುತ್ತಿಕೊಂಡಿದ್ದು ಕಂಡುಬಂದವೆಂದೂ, ಸೊಳ್ಳೆಗಳ-ಲಾರ್ವಾಗಳು ಸಹ ದೊಡ್ಡ ಸಂಖ್ಯೆಯಲ್ಲಿ ಶುದ್ಧೀಕರಣಾಗಾರದ ಅನೇಕ ಕಡೆಗಳಲ್ಲಿ ಬೆಳೆದಿದ್ದು ಕಂಡು ಬಂತೆಂದು, ಮಂಡಲಿಯ ಮುಖ್ಯ ಅಭಿಯಂತರರು ಸ್ವೀಕರಿಸಿದ್ದಾರೆ. ಕಂದಾಯ ಸಚಿವರು ಮಂಡಲಿಯ ಅಧಿಕಾರಿಗಳ ಬೇಜವಾಬ್ದಾರಿ ಬಗ್ಗೆ ಕ್ರಮ ತೆಗೆದುಕೊಳ್ಳುವ ದಿಶೆಯಲ್ಲಿ ಜಿಲ್ಲಾಧಿಕಾರಿಗಳಿಗೆ ತನಿಖೆಮಾಡಿ, ಒಂದು ತಿಂಗಳಲ್ಲಿ ವರದಿಕೊಡಲು ತಿಳಿಸಿದ್ದಾರೆ.

೫. ಈಗಾಗಲೆ ಸೊಳ್ಳೆಗಳನ್ನು ಮತ್ತು ಲಾರ್ವಾಗಳನ್ನು ನಿರ್ಮೂಲ ಮಾಡಲು ಶುದ್ಧೀಕರಣಾಗಾರದ ಎಲ್ಲಾ ಸ್ಥಳಗಳನ್ನು ಸ್ವಚ್ಛ ಮಾಡಿ ಬ್ಲೀಚಿಂಗ್ ಪೌಡರ್ ಹಾಕಿದೆ. ಶುದ್ಧೀಕರಣಾ ಕಟ್ಟಡದ ಮೇಲ್ಛಾವಣಿ ಗೋಡೆಗಳ ಮೇಲೆ ಕುಳಿತಂತಹ ಸೊಳ್ಳೆಗಳನ್ನು ಕೊಲ್ಲಲು ರಾಸಾಯನಿಕ ದ್ರವವನ್ನು ಸಿಂಪಡಿಸಲಾಗಿದೆ. ಶುದ್ಧೀಕರಿಸಿದ ಜಲಸಂಗ್ರಹಾಗಾರ ಕಣವಿ ಹೊನ್ನಾಪುರದಿಂದ-ಹುಬ್ಬಳ್ಳಿ ಯವರೆಗೆ ಇರುವ ೬೦೦ ಮಿ.ಮೀ. ಗಾತ್ರದ ಗುರುತ್ವಾಕರ್ಷಣ ಕೊಳವೆಯನ್ನು ಫ್ಲಶ್‌ಮಾಡಲಾಗಿದೆ. ಇದೇ ರೀತಿ ಎಲ್ಲ ಸ್ಥಳಗಳನ್ನು ಶುದ್ಧಗೊಳಿಸಿ, ಬ್ಲೀಚಿಂಗ್ ಪೌಡರ್ ಅಥವಾ ಕ್ಲೋರಿನ್ ಗ್ಯಾಸ್ ಸರಿಯಾದ ಪ್ರಮಾಣದಲ್ಲಿ ಉಪಯೋಗಿಸಲು ವ್ಯವಸ್ಥೆ ಮಾಡಲಾಗಿದೆ.

೬. ಈ ವಸ್ತುಸ್ಥಿತಿಯ ಬಗ್ಗೆ ಮಂಡಲಿಯ ಮುಖ್ಯ ಅಭಿಯಂತರ ವರದಿಯ ಪ್ರಕಾರ ಮಂಡಲಿಯ ನಿರ್ವಾಹಕ ನಿರ್ದೇಶಕರಿಗೆ ತಪ್ಪು ಮಾಹಿತಿ ನೀಡಿದ ಸಂಬಂಧಿಸಿದ ಸ್ಥಳೀಯ ಅಧಿಕಾರಿಗಳ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಮತ್ತು ನೇರ ಜವಾಬ್ದಾರಿಯಾದವರನ್ನು ಅಮಾನತ್ತಿನಲ್ಲಿಡಲು ಆದೇಶ ಮಾಡಲಾಗಿದೆ. ಈಗಾಗಲೇ ಒಬ್ಬ ಕಿರಿಯ ಅಭಿಯಂತರರನ್ನು ಅಮಾನತ್ತಿನಲ್ಲಿ ಇಡಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆ : ಕ್ರಮ ಸಂಖ್ಯೆ : ೩೧, ೬೨, ೧೪, ೨೯ ಮತ್ತು ೪, ವೈದ್ಯಕೀಯ ಸೇವೆ, ಕುಟುಂಬ ಕಲ್ಯಾಣ ಜನಾರೋಗ್ಯ ಇಲಾಖೆ, ಕಾರ್ಮಿಕ ವಾರ್ತಾ ಪ್ರವಾಸೋದ್ಯಮ, ಬಿ.ಡಿ.ಎ. ಪಶುಸಂಗೋಪನೆ, ಗೃಹ ಮಂಡಳಿ ಕಲೆ ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮಂಜೂರಾತಿ.

೧-೩೦ ಪಿ. ಎಂ.

ಅಧ್ಯಕ್ಷರು.—ಈಗ ಬೇಡಿಕೆ ಕ್ರಮಾಂಕ ೩೧ನ್ನು ಮಾನ್ಯ ಆರೋಗ್ಯ ಮಂತ್ರಿಗಳು ಮಂಡಿಸುವುದು.

ಅಭಿಯಾಚನೆ ಕ್ರಮಾಂಕ : ೩೧-ವೈದ್ಯಕೀಯ ಸೇವೆ ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ.

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ,

> "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಸೇವೆ, ಮತ್ತು ಕುಟುಂಬ ಕಲ್ಯಾಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೧೯,೬೨,೨೦,೦೦೦-ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೨,೦೦ ೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು" ಮಂಡಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು.—ಬೇಡಿಕೆಯನ್ನು ಮಂಡಿಸಲಾಗಿದೆ. ಈಗ ಮಾನ್ಯ ಪಟಮಕ್ಕಿ ರತ್ನಾಕರ್‌ರವರು ಚರ್ಚೆ ಪ್ರಾರಂಭ ಮಾಡಬಹುದು. ನಿಮ್ಮ ಕಡೆಯಿಂದ ೧೦ ಜನರಿದ್ದಾರೆ. ಐದು ಘಂಟೆಗೆ ಚರ್ಚೆ ಮುಗಿಯಬೇಕು,

ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಬೇಡಿಕೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇನೆ. ಮಾನ್ಯ ಆರೋಗ್ಯ ಸಚಿವರಾಗಿರತಕ್ಕಂಥ ರಾಚಯ್ಯನವರು ಸುಮಾರು .....

ಅಧ್ಯಕ್ಷರು —ತಾವುಗಳು ಮಾತನಾಡುವಾಗ, ಅಭಿಯಾಚನೆ ಕ್ರಮಾಂಕ : ೬೨:೧೪:೨೯:೪:೩೧: ಈ ಎಲ್ಲಾ ಡಿಮಾಂಡ್ಸ್ ಮೇಲೆ ತಮ್ಮ ಭಾಷಣ ಮಾಡಬೇಕು.

ಶ್ರೀ ಎಂ. ಎಸ್. ಪಾಟೀಲ್.—ಉಳಿದ ಡಿಮಾಂಡ್‌ಗಳಿಗೆ ಸಂಬಂಧಪಟ್ಟ ಹಾಗೆ ಸಚಿವರುಗಳು ಮಂಡನೆ ಮಾಡಿಲ್ಲ.

ಅಧ್ಯಕ್ಷರು.—ಆ ಡಿಮಾಂಡ್‌ಗಳನ್ನೂ ಮೊನ್ನೆಯ ದಿವಸ ಸಂಬಂಧಪಟ್ಟ ಸಚಿವರುಗಳು ಮಂಡನೆ ಮಾಡಿದ್ದಾರೆ. ಡೆಪ್ಯುಟಿ ಸ್ಪೀಕರ್ ಇದ್ದಾಗ ಮಂಡನೆ ಮಾಡಿದ್ದಾರೆ. ತಾವು ಈಗ ಚರ್ಚೆ ಪ್ರಾರಂಭ ಮಾಡಿ, ಎಲ್ಲಾ ವಿಷಯಗಳ ಬಗ್ಗೆ ಮಾತನಾಡಿ.

† ಶ್ರೀ ಪಟಮಕ್ಕಿ ರತ್ನಾಕರ್.—(ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಮಂತ್ರಿಗಳಾಗಿರತಕ್ಕಂಥ ಮಾನ್ಯ ರಾಚಯ್ಯನವರು ಸುಮಾರು ೨೩೨ ಕೋಟಿ ರೂಪಾಯಿಗಳನ್ನು ಕೇಳಿ ತಮ್ಮ ಇಲಾಖೆಯ ಮೇಲಿನ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಮಾನ್ಯ ರಾಚಯ್ಯನವರು ಹಿರಿಯರು ಮತ್ತು ಅನುಭವಿಗಳು ಆದರೆ ಅವರ ದೇಹ ಮತ್ತು ಮನಸ್ಸು ಈ ಬೃಹತ್ ಇಲಾಖೆಯನ್ನು ನಿಭಾಯಿಸತಕ್ಕಂತಹ ಶಕ್ತಿ ಹೊಂದಿದೆಯೋ ಎಂದು ಕೇಳಿದರೆ ನನಗೆ ಈ ಬಗ್ಗೆ ಸ್ವಲ್ಪ ಅನುಮಾನ ಇದೆ. ಅವರ ದೇಹ ಮತ್ತು ಮನಸ್ಸು ಎರಡೂ ಕೂಡ ವಿಶ್ರಾಂತಿಯನ್ನು ಬಯಸ ತಕ್ಕಂತಹ ಇಚ್ಛೆ ಇದೆ ಎಂದು ನಾನು ಭಾವಿಸಿದ್ದೇನೆ, ಮೊಮ್ಮಕ್ಕಳನ್ನು ಮನೆಯಲ್ಲಿ ಆಡಿಸಿಕೊಂಡು ಇರಬೇಕಾಗಿರತಕ್ಕಂತಹವರ ರಾಚಯ್ಯನವರ ಕೈಯಲ್ಲಿ ಈ ಇಲಾಖೆ ಸಿಕ್ಕಿ ನರಳಿದೆಯೋ ಏನೋ ಎಂಬ ಸಂಶಯ ನನಗೆ ಇದೆ. ಅದೇನೇ ಇರಲೀ, ಈ ರಾಜ್ಯದ ಅತ್ಯಂತ ಪ್ರಮುಖ ಖಾತೆಗಳಲ್ಲಿ ಒಂದಾಗಿರ ತಕ್ಕಂತಹ ಆರೋಗ್ಯ ಖಾತೆ ಮತ್ತು ಅದರ ಬೇಡಿಕೆ ಇವೆಲ್ಲವನ್ನೂ ಕೂಲಂಕಷವಾಗಿ ಚರ್ಚೆ ಮಾಡ ತಕ್ಕಂಥಾದ್ದು ಅತ್ಯಂತ ಅವಶ್ಯಕವೆಂದು ನಾನು ಭಾವಿಸಿದ್ದೇನೆ. ವ್ಯಕ್ತಿ, ಕುಟುಂಬ ಮತ್ತು ಸಮಾಜ ಈ ಮೂರರ ಸ್ವಾಸ್ಥ್ಯ ಈ ರಾಷ್ಟ್ರದ, ರಾಜ್ಯದ ಸಮುದಾಯದ ಸ್ವಾಸ್ಥ್ಯವನ್ನು ಅವಲಂಬಿಸಿಕೊಂಡಿದೆ. ವ್ಯಕ್ತಿಗತವಾಗಿರತಕ್ಕಂತಹ ಸ್ವಾಸ್ಥ್ಯ ಒಂದು ಕಡೆ ದೇಹ ಮತ್ತು ಮನಸ್ಸಿನ ಕೌಟುಂಬಿಕವಾಗಿರತಕ್ಕಂತಹ ಸ್ವಾಸ್ಥ್ಯ ಒಂದು ಕಡೆ ಆಮೇಲೆ ಸಮಾಜದ ಸ್ವಾಸ್ಥ್ಯ, ಈ ಮೂರನ್ನು ಕೂಡ ಬಹಳಷ್ಟು ಕೂಲಂಕುಷ ವಾದ ದೃಷ್ಟಿಯಿಂದ ಇದನ್ನು ಅಧ್ಯಯನ ಮಾಡಿ ದೀರ್ಘವಾದ ಚಿಂತನೆ ಮತ್ತು ನಮ್ಮ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದರೆ ಒಂದು ರಾಷ್ಟ್ರದ ಭವಿಷ್ಯವನ್ನು ಭದ್ರತೆಯನ್ನು ಆರೋಗ್ಯವನ್ನು ಕಾಪಾಡಲಿಕ್ಕೆ ಸಾಧ್ಯವೆಂದು ನಾನು ಭಾವಿಸಿದ್ದೇನೆ. ಈ ಇಲಾಖೆಯನ್ನು ವಿಂಗಡಿಸಿ ಚರ್ಚೆ ಮಾಡಲಿಕ್ಕೆ ಇಷ್ಟಪಟ್ಟರೆ ಮೊದಲನೆಯದಾಗಿ ಪ್ರಾಮುಖ್ಯವಾದುದು ರೋಗವನ್ನು ನಿರೋಧ ಮಾಡತಕ್ಕಂತಹ ಅಂದರೆ ರೋಗಬಾರದೇ ತಡೆಗಟ್ಟತಕ್ಕಂತಹ ವಿಧಾನ ಒಂದು, ಇನ್ನೊಂದು ಆಮೇಲೆ ಬಂದಿರತಕ್ಕಂತಹ

ರೋಗಗಳನ್ನು ಚಿಕಿತ್ಸೆ ಮುಖಾಂತರ ಗುಣಪಡಿಸತಕ್ಕಂಥಾದ್ದು, ಮತ್ತೊಂದು ವೈದ್ಯಕೀಯ ಶಿಕ್ಷಣ, ಈ ಮೂರನ್ನೂ ವಿಂಗಡಿಸಿ ನೋಡಿದರೆ ಈ ಖಾತೆಯ ಮೇಲೆ ಹೆಚ್ಚು ಚರ್ಚೆ ಮಾಡಬಹುದೆಂದು ಅನಿಸುತ್ತದೆ, ರೋಗವನ್ನು ತಡೆಗಟ್ಟತಕ್ಕಂತಹ ರೋಗ ಬಾರದಂತೆ ನೋಡಿಕೊಳ್ಳತಕ್ಕಂಥ ಕಾರ್ಯಕ್ರಮ ರಾಷ್ಟ್ರೀಯ ಕಾರ್ಯಕ್ರಮಗಳು, ರಾಜ್ಯದ ಕಾರ್ಯಕ್ರಮಗಳೂ ಕೂಡ ಇದೆ. ಇವು ಯಾವ ಯಾವ ರೋಗಗಳು ಎಂಬ ಬಗ್ಗೆ ಸ್ವಲ್ಪ ತಮ್ಮ ಗಮನಕ್ಕೆ ತರಲು ಇಷ್ಟ ಪಡುತ್ತೇನೆ. ಅದರಲ್ಲೂ ಪ್ರಮುಖವಾಗಿರತಕ್ಕಂತಹ ಅಂದರೆ ರಾಷ್ಟ್ರೀಯ ಯೋಜನೆಗಳಲ್ಲಿ ಬರತಕ್ಕಂತಹ ರೋಗಗಳಲ್ಲಿ ಈಗ ಮಲೇರಿಯಾ, ಕ್ಷಯಾ, ಅಂಧತ್ವ ಹೀಗೆ ಬೇರೆ ಬೇರೆ ರೋಗಗಳನ್ನು ನಾವು ಇಂದು ಕಾಣುತ್ತಿದ್ದೇವೆ. ಇವೆಲ್ಲವೂ ಬಾರದ ರೀತಿಯಲ್ಲಿ ಈ ಸಮಾಜದಲ್ಲಿ ಅದನ್ನು ತಡೆಗಟ್ಟಬೇಕಾದರೆ ಅದಕ್ಕೂ ಕೂಡ ನಾವು ಕೆಲವು ಮೂಲಭೂತವಾಗಿರತಕ್ಕಂತಹ ಪ್ರಾಥಮಿಕ ಕೆಲಸಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಮಲೇರಿಯಾ ರೋಗ ಏನು ಇದೆ ಅದನ್ನು ಸಂಪೂರ್ಣವಾಗಿ ಈ ರಾಜ್ಯದಿಂದ. ರಾಷ್ಟ್ರದಿಂದ ನಿರ್ಮೂಲನ ಮಾಡಿದ್ದೇವೆ ಎಂಬ ಭಾವನೆ ನಮಗಿದ್ದರೂ ಕೂಡ ಮಲೇರಿಯಾ ರೋಗ ಮತ್ತೆ ಮರುಕಳಿಸತಕ್ಕಂತಹ ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ರೋಗ ಹರಡತಕ್ಕಂತಹ ಸ್ಥಳಗಳು ಏನು ಇದೆ ಅಲ್ಲಿ ಡಿ.ಡಿ.ಟಿ ಮತ್ತು ಇನ್ನು ಇತರ ಬೇರೆ ಬೇರೆ ನಿರೋಧಕ ವಸ್ತುಗಳಿಗೆ ಬಾರದೇ ಇರತಕ್ಕಂತಹ ಶಕ್ತಿಯನ್ನು ಬೆಳೆಸಿಕೊಂಡಿದೆ. ನಾನು ಕೆಲವು ಡಾಕ್ಟರ್‌ಗಳನ್ನು ಭೇಟಿ ಮಾಡಿದಾಗ ಮತ್ತೆ ಮಲೇರಿಯಾ ರೋಗ ಕಾಣಿಸಿಕೊಳ್ಳುತ್ತಿದೆ ಅದನ್ನು ತಡೆಗಟ್ಟತಕ್ಕಂತಹ ಪೂರ್ವಭಾವಿ ಕ್ರಮಗಳನ್ನು ರಾಷ್ಟ್ರೀಯ ಮತ್ತು ರಾಜ್ಯದ ಯೋಜನೆಗಳನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿದರು. ಕ್ಷಯ ರೋಗ ಏನು ಇದೆ ಇದು ಬರದಂತೆ ತಡೆಗಟ್ಟಬೇಕಾದರೆ ಕೆಲವು ಪೂರ್ವಭಾವಿಯಾಗಿರತಕ್ಕಂತಹ ಕೆಲವು ವಿಚಾರಗಳನ್ನು ಗಮನಿಸಬೇಕಾಗುತ್ತದೆ. ಇವತ್ತು ಕ್ಷಯ ರೋಗ ಕೇಂದ್ರಗಳು ಕರ್ನಾಟಕ ರಾಜ್ಯದಲ್ಲಿ ಇದೆ ಆದರೆ ಇರತಕ್ಕಂತಹ ಕ್ಷಯ ರೋಗ ಕೇಂದ್ರಗಳಲ್ಲಿ ಮೂಳೆ ಕ್ಷಯ, ಚರ್ಮ ಕ್ಷಯ, ಗ್ರಂಥಿ ಕ್ಷಯಗಳು ಹೀಗೆ ಹೆಚ್ಚು ಕಾಣ ಬರುತ್ತಿದೆ.ಆದರೆ ಕ್ಷಯ ರೋಗಕ್ಕೆ ಸಂಬಂಧಪಟ್ಟಂತೆ ತಜ್ಞರು ಕ್ಷಯ ರೋಗ ಕೇಂದ್ರಗಳಲ್ಲಿ ಕಾಣಬರುತ್ತಿದೆ. ಯಾವ ಯಾವ ಸೆಂಟರ್‌ಗಳಲ್ಲಿ......

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರು, ಕ್ಷಯ ರೋಗ ಕೇಂದ್ರ ಎಂದು ಹೇಳುತ್ತಿದ್ದಾರೆ. ಅದು ಕ್ಷಯ ರೋಗ ನಿವಾರಣಾ ಕೇಂದ್ರ.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಕ್ಷಯರೋಗ ನಿವಾರಣಾ ಕೇಂದ್ರದಲ್ಲಿ ಈ ತಜ್ಞರ ಕೊರತೆಯಿಂದ ಅಲ್ಲಿ ಏನಾಗಿದೆ ಎಂದು ಹೇಳಿದರೆ ಸಂಬಂಧಪಟ್ಟಂಥ ಖಾಯಿಲೆಗಳನ್ನು ನಿವಾರಣೆ ಮಾಡತಕ್ಕಂಥ ಅಥವಾ ಬಾರದೇ ಇರತಕ್ಕಂಥ ಅಥವಾ ತಡೆಗಟ್ಟತಕ್ಕಂಥದ್ದು ಆಗಿಲ್ಲ. ಕುಷ್ಠ ರೋಗ ಕಂಟಾಕ್ಟ್‌ನಿಂದ ಬರತಕ್ಕಂಥದ್ದು, ಪರಸ್ಪರ ಕಂಟಾಕ್ಟ್‌ನಿಂದ ಬೆಳೆಯತಕ್ಕಂಥದ್ದು, ಕೆಲವು ಕುಷ್ಠರೋಗಿಗಳು ಜಿಲ್ಲಾ ಕೇಂದ್ರಗಳಲ್ಲಿ ವಾಸ ಮಾಡುತ್ತಿದ್ದಾರೆ ಎಂದು ರಿಪೋರ್ಟ್‌ನಲ್ಲಿದೆ. ಪ್ರತಿ ಜಿಲ್ಲಾ ಮಟ್ಟದಲ್ಲಿರತಕ್ಕ ಈ ಕುಷ್ಠ ರೋಗಿಗಳನ್ನೆಲ್ಲಾ ಒಂದು ಕೇಂದ್ರದಲ್ಲಿ ಇಟ್ಟುಕೊಂಡು ಅವರಿಗೆ ಸಕಾಲಿಕವಾಗಿ ಚಿಕಿತ್ಸೆಗಳನ್ನು ಕೊಡಬೇಕು. ಅವರು ಗುಣವಾದ ನಂತರ ನೀವು ಕಳುಹಿಸುವುದನ್ನು ಮಾಡಿದರೆ ಅತ್ಯಂತ ಅನುಕೂಲವಾದ ಕ್ರಮ ಎಂದು ನಾನು ಭಾವಿಸುತ್ತೇನೆ. ಕುಷ್ಠ ರೋಗಿಗಳು ಭಿಕ್ಷೆ ಬೇಡುತ್ತಿರುತ್ತಾರೆ, ಆ ರೀತಿ ಭಿಕ್ಷೆ ಬೇಡುವವರಿಗೆ ಕಾಯಿನ್ಸ್‌ಗಳನ್ನು ಅಥವಾ ರೂಪಾಯಿಗಳನ್ನು ನಾವು ಕೇಳಿದವರಿಗೆ ಕೊಡುತ್ತೇವೆ ಇದರಿಂದ ಏನಾಗುತ್ತದೆಎಂದರೆ ಅವರುಗಳು ಆ ಕಾಯಿನ್ಸ್‌ಗಳನ್ನು ಮುಟ್ಟುವುದರಿಂದ ಆ ಕಾಯಿಲೆ ಮತ್ತೊಬ್ಬರಿಗೆ ಹೋಗಿ ಹರಡತಕ್ಕಂಥ ಸಂದರ್ಭಗಳು ಇದೆ ಎನ್ನತಕ್ಕಂಥದ್ದು ಡಾಕ್ಟರಗಳ ಅಭಿಪ್ರಾಯ. ಆದ್ದರಿಂದ ಕುಷ್ಠ ರೋಗಿಗಳು ಸಾರ್ವಜನಿಕವಾಗಿ ತಿರುಗಾಡದೇ ಇರತಕ್ಕಂಥ ಮತ್ತು ಭಿಕ್ಷೆ ಬೇಡದೇ ಇರತಕ್ಕಂಥ ಸ್ಥಿತಿಯನ್ನು ನಿರ್ಮಾಣ ಮಾಡಬೇಕಾಗಿದೆ ಆದ್ದರಿಂದ ಅವರನ್ನು ಕ್ಷಯ ರೋಗ ನಿವಾರಣಾ ಕೇಂದ್ರಗಳಲ್ಲಿ ಇಟ್ಟುಕೊಂಡು ಅವರಿಗೆ ಸರಿಯಾದಂಥ ಚಿಕಿತ್ಸೆಯನ್ನು ಕೊಟ್ಟು ಅವರು ಆರೋಗ್ಯವಾದ ನಂತರದಲ್ಲಿ ಅವರನ್ನು ಬಿಡುಗಡೆ ಮಾಡಿದರೆ ಈಗ ನಾವು ಏನು ಪೂರ್ವಭಾವಿ ಸಿದ್ಧತೆಗಳಿಗೆ ಒಂದು ಪೂರಕವಾಗಿರತಕ್ಕಂಥ ಶಕ್ತಿ ಬರುತ್ತದೆ ಎಂದು ನನ್ನ ಭಾವನೆ. ಆ ರೀತಿಯಲ್ಲಿ ಮಾಡಬೇಕು. ಕುಷ್ಠರೋಗ, ಕ್ಷಯರೋಗ, ಮಲೇರಿಯ ರೋಗಗಳು, ಕಾಲರಾ ರೋಗ, ಹಾಗೂ ಇತ್ತೀಚಿಗೆ ಕಾಲರಾ ರೋಗ ಬಗೆ ಕೂಡ ಕೇಳಿದ್ದೇವೆ. ಇತ್ತೀಚಿಗೆ ಕಾಲರಾ ರೋಗಗಳು ಹರಡುತ್ತಿದೆ ಕಾಲರಾ ರೋಗವನ್ನು ಪೂರ್ವಭಾ

ಭಾವಿಯಾಗಿ ತಡೆಗಟ್ಟತಕ್ಕಂಥ ಸಿದ್ಧತೆಯನ್ನು ನಾವು ಮಾಡಿಕೊಳ್ಳದೆ ಇರತಕ್ಕಂಥದ್ದು. ಆದ ರಿಂದ ವಿಶೇಷವಾಗಿ ಕಡೆಗಟ್ಟುವಿಕೆಯಲ್ಲಿಯೂ ಕೂಡಾ ಏನಾಗಿದೆ ಎಂದು ಹೇಳಿದರೆ ಇದಕ್ಕೆ ಕೇಂದ್ರ ಆರೋಗ್ಯ ಸಂಶೋಧನಾ ಸಂಸ್ಥೆಯವರು ಕೂಡಾ ನಿಮಗೆ ಸಹಾಯ ಮಾಡಬಹುದು. ಐ.ಸಿ.ಎಂ.ಆರ್. ಅಂದರೆ ಕೇಂದ್ರ ಸಂಶೋಧನಾ ಸಂಸ್ಥೆಯವರು ಜ್ಞಾನ ಸಲಕರಣೆ ಮತ್ತು ಸಹಾಯಗಳನ್ನು ನೀವು ಬೆಳೆಸಿಕೊಂಡು ಅದಕ್ಕೆ ಬೇಕಾಗಿರತಕ್ಕಂಥ ಕೇಂದ್ರಗಳನ್ನು ತಜ್ಞರಂಗಳನ್ನು ಜಿಲ್ಲಾ ಮಟ್ಟದಲ್ಲಿ ನೀವು ಎಲ್ಲಿಯವರೆಗೂ ಪ್ರಾರಂಭಮಾಡುವುದಿಲ್ಲವೋ ಎಲ್ಲಿಯವರೆಗೆ ಇದು ಜಿಲ್ಲಾ ಮಟ್ಟದಿಂದ ಪ್ರಾರಂಭ ವಾಗುವುದಿಲ್ಲವೋ ಅಲ್ಲಿಯವರೆಗೆನೀವು ಯಾವುದೇ ಕಾರ್ಯ ಕ್ರಮಗಳನ್ನು ಹಾಕಿಕೊಂಡರೂ ಈ ರೋಗಗಳನ್ನು ತಡೆಗಟ್ಟಲಿಕ್ಕೆ ಪೂರ್ವಭಾವಿ ಕ್ರಮಗಳನ್ನು ಮಾಡಲಿಕ್ಕೆ ಖಂಡಿತಾ ಸಾಧ್ಯ ಇಲ್ಲ ಎಂದು ನನ್ನ ಭಾವನೆ. ಇನ್ನು ಅಂಧತ್ವದ ಬಗ್ಗೆ ಸರಿಯಾದ ಕಲ್ಪನೆಯನ್ನು ನಾವು ನಮ್ಮ ಗ್ರಾಮೀಣ ಪ್ರದೇಶದ ಜನಗಳಲ್ಲಿ ನಾವು ಇನ್ನೂ ಕೊಟ್ಟಿಲ್ಲ ಅಂಧತ್ವ ಹೇಗೆ ಬರುತ್ತದೆ ? ಏತಕ್ಕೆ ಬರುತ್ತದೆ ? ಯಾವ ಕಾರಣಗಳಿಗೋಸ್ಕರ ಅಂಧತ್ವವನ್ನು ನಾವು ಅನುಭವಿಸುತ್ತಿದ್ದೇವೆ ? ಅದರ ನಿವಾರಣೆಯನ್ನು ಹೇಗೆ ಮಾಡಬಹುದು ಎನ್ನುವುದರ ಬಗ್ಗೆ ತಿಳಿವಳಿಕೆಯನ್ನೂ ಕೂಡಾ ಸಾಹಿತ್ಯದ ಮುಖಾಂತರವಾಗಿ ಯಾಗಲೀ ಅಥವಾ ಪ್ರಚಾರ ಮಾಧ್ಯಮಗಳ ಮುಖಾಂತರವಾಗಿಯಾಗಲೀ, ಚಲನಚಿತ್ರಗಳ ಮುಖಾಂತರವಾಗಿಯಾಗಲೀ ನಾವು ಕೊಡತಕ್ಕಂಥ ಕೆಲಸವನ್ನು ಗ್ರಾಮೀಣಮಟ್ಟದಲ್ಲಿ ಮಾಡುತ್ತಿಲ್ಲ. ಶಾಲಾ ಮಕ್ಕಳಿಗೂ ಕೂಡಾ ಅಷ್ಟೆ. ಈ ಶಾಲಾ ಮಕ್ಕಳಿಗೆ ಕೊಡತಕ್ಕಂಥ ಎ. ಅನ್ನಾಂಗದ ಕೊರತೆಯಿಂದ ಇವತ್ತು ಅಂಧತ್ವ ಬರುತ್ತದೆ ಎಂದು ನಾವು ಭಾವಿಸಿದ್ದೇವೆ. ಅದಕ್ಕೆ ಬೇಕಾಗಿರತಕ್ಕಂಥ ಶಾಲಾ ಮಕ್ಕಳಿಗೆ ಇದು ಏನು ಕೇಂದ್ರದ ಯೋಜನೆ ಏನು ಇದೆ, ಅದಕ್ಕೆ ನೂರಕ್ಕೆ ನೂರರಷ್ಟು ಅವರು ಹಣವನ್ನು ಕೊಡುತ್ತಾರೆ. ಶಾಲಾ ಮಕ್ಕಳ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಶೇಕಡ ನೂರಕ್ಕೆ ನೂರರಷ್ಟು ಹಣವನ್ನು ಕೊಡ ತಕ್ಕಂಥದ್ದು ಇದೆ. ಬೇಕಾಗಿರತಕ್ಕಂಥದ್ದು ಶಾಲಾ ಮಕ್ಕಳ ಆರೋಗ್ಯವನ್ನು ಕಾಪಾಡ ಬೇಕಾಗಿರುವುದು. ಇಲ್ಲಿ ಇದೆ. ''ಈ ಕಾರ್ಯಕ್ರಮ ಶೇಕಡ ನೂರು ಪಾಲು ಭಾರತ ಸರ್ಕಾರವು ನೆರವು ನೀಡುವ ಒಂದು ಕಾರ್ಯ ಕ್ರಮ ಬೃಹತ್ ಯೋಜನೆ. . ...

ಶ್ರೀ ಬಿ.ಎಂ. ತಿಪ್ಪೇಸ್ವಾಮಿ.—ಮಾನ್ಯ ಅಧ್ಯಕ್ಷರೇ, ಕುಷ್ಠರೋಗವು ಒಬ್ಬರ ಕೈಯಿಂದ ಮತ್ತೊಬ್ಬರಿಗೆ ಕಾಯಿನ್ಸ್ ಕೊಡುವುದರಿಂದ ಬರುತ್ತದೆ ಎಂದು ಡಾಕ್ಟರು ಹೇಳಿದ್ದಾರೆ ಎಂದು ಸನ್ಮಾನ್ಯ ಸದಸ್ಯರು ಹೇಳಿದ್ದಾರೆ. ದಯವಿಟ್ಟು ಆ ರೀತಿ ಹೇಳಬೇಡಿ. ಈ ಕುಷ್ಠರೋಗವನ್ನು ಕಂಟ್ರೋಲ್ ಮಾಡುವುದಕ್ಕೆ ಏನು ಮಾಡಬೇಕೆಂದು ಹೇಳಿ ರ್ಯಾಂಪೆಂಟ್ ಆಗಿ ಬೇರೆ ಎಲ್ಲಾ ಕಡೆಯಲ್ಲೂ ಇದೆ. ಕರ್ನಾಟಕದಲ್ಲಿಬೇರೆ ಕಡೆ ಇದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ. ಯಾರೂ ಈ ಖಾಯಿಲೆಯ ಬಗ್ಗೆ ನಿಕೃಷ್ಟವಾಗಿ ಕಾಣಬೇಕಾಗಿಲ್ಲ. ಕಾಯಿನ್ಸ್ ಕೊಡುವುದರಿಂದ ಬರುತ್ತದೆ ಎಂದು ನಿಮಗೆ ಯಾವ ಡಾಕ್ಟರ್ ಹೇಳಿದ್ದಾರೆ ? ದಯವಿಟ್ಟು ಆ ರೀತಿ ತಪ್ಪು ಮಾಹಿತಿಯನ್ನು ಕೊಡಬೇಡಿ. ಕುಷ್ಠ ರೋಗ ಕಾಯಿನ್ಸ್‌ನಿಂದ ಹರಡುತ್ತದೆ ಎನ್ನತಕ್ಕಂಥದ್ದು ಸುಳ್ಳು. ಬಹುಶಃ ಕ್ವಾಲಿಫೈಡ್ ಡಾಕ್ಟರ್ ಯಾರಾದರೂ ಆ ರೀತಿ ಹೇಳಿದ್ದರೆ ಆ ಡಾಕ್ಟರ್ ಹೆಸರನ್ನು ಹೇಳಿದ್ದರೆ ಅವರ ಮೇಲೆ ನಾನು ಇವತ್ತು ಹೆಲ್ತ್ ಮಿನಿಸ್ಟರ್‌ಗೆ ಹೇಳಿ. ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ. ಕುಷ್ಠರೋಗವನ್ನು ಕಂಟ್ರೋಲ್ ಮಾಡುವುದು ಬಹಳ ಇದೆ. ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ. ಅದರ ಬಗ್ಗೆ ನೀವು ಎಷ್ಟು ಬೇಕಾದರೂ ಹೇಳಿ. ಆದರೆ ಕಾಯಿನ್ಸ್‌ನಿಂದ ಮಾತ್ರ ಹರಡುತ್ತದೆ ಎನ್ನ ತಕ್ಕಂಥದ್ದನ್ನು ದಯವಿಟ್ಟು ಆ ರೀತಿ ಹೇಳಬೇಡಿ.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ಅದು ಸ್ವತಃ ದೇಹದಿಂದ ಉತ್ಪತ್ತಿ ಆಗತಕ್ಕಂಥ ಖಾಯಿಲೆ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ರೋಗದ ಡಿಟೇಲ್ ಬಗ್ಗೆ ಮಾತನಾಡಬೇಡಿ, ರೋಗದ ಕಾರಣದ ಬಗ್ಗೆ ಡಿಸ್ಕಸ್ ಮಾಡಬೇಡಿ. ಅದನ್ನು ಕಂಟ್ರೋಲ್ ಮಾಡಬೇಕಾದ್ದರ ಬಗ್ಗೆ ಮಾತ್ರ ಮಾತನಾಡಿ ಎಂದು ಹೇಳುತ್ತೇನೆ,

ಶ್ರೀ ಪಟಮಕ್ಕಿ ರತ್ನಾಕರ್.—ಅದು ಸಾಂಕ್ರಾಮಿಕ ರೋಗವೆಂಬ ಭಾವನೆಯಿಂದ ನಾನು ಮಾತನಾಡಿದ್ದಲ್ಲ, ನನ್ನ ಉದ್ದೇಶ ಏನು ಅಂದರೆ ಈ ರೋಗ ಕಾಂಟ್ಯಾಕ್ಟ್‌ನಿಂದ ಮತ್ತೊಬ್ಬರಿಗೆ ಬರಬಹುದು, ಪರಸ್ಪರ ಕಂಟ್ಯಾಕ್ಟ್‌ನಿಂದ ಬರಬಹುದು, ಯಾಕೆಂದರೆ ಆಸ್ತಿಯಾದ ಫಾದರ್......

ಶ್ರೀ ಬಿ. ಎಂ. ಶಿವ್ವೇಸ್ವಾಮಿ.—ಅವರು ಮಾತನಾಡುವುದಕ್ಕೆ ಹೆಚ್ಚು ಅವಕಾಶ ಮಾಡಿಕೊಡು ತ್ತಿದ್ದಾರೆ, ದಯವಿಟ್ಟು ಕಾಂಟಾಕ್ಟ್ ವಿಷಯ ಬಿಟ್ಟು ಬೇರೆ ವಿಷಯ ಮಾತನಾಡಿದರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ. 'ಏಡ್ಸ್' ಕಂಟ್ಯಾಕ್ಟ್‌ನಿಂದ ಬರುತ್ತದೆ, ಕಾಂಟ್ಯಾಕ್ಟ್‌ನಿಂದ ಅಲ್ಲ, ವೈರಸ್‌ನಿಂದ ಬರುತ್ತದೆ ಎನ್ನುತ್ತಾರೆ. ಕಾಂಟ್ಯಾಕ್ಟ್ ಬಗ್ಗೆ ಬಿಟ್ಟು ಬಿಡಿ, ಕುಷ್ಟರೋಗ ಬರುವುದಕ್ಕೆ ಬೇಕಾದಷ್ಟು ಕಾರಣ ಇದೆ, ಅಟ್ಮಾಸ್ಫಿಯರ್ ಕೂಡ ಕಾರಣ, ಕಾಯಿನ್ಸ್ ಕೊಟ್ಟರೆ ಬರುತ್ತದೆ ಎಂದು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಪಟವರ್ಧನ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಪೂರ್ಣ ಪ್ರಮಾಣದಲ್ಲಿ ಸಹ ಸದಸ್ಯರ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಸಂಶೋಧನೆಗಳು ದಿನನಿತ್ಯ ಹೊಸಹೊಸ ರೂಪುಗಳನ್ನು ತಳೆಯುವುದರಿಂದ ಪ್ರಾಯಶಃ ನಮ್ಮ ಡಾಕ್ಟರ್ ಪಕ್ಕದ ತಾಲ್ಲೂಕಿನಲ್ಲಿ ಕೆಲಸ ಮಾಡಿದ್ದಾರೆ. ಆದರೆ ಒಂದೇ ಸಲಕ್ಕೆ ಆ ತೀರ್ಮಾನಕ್ಕೆ ಬರಬೇಡಿ. ಈಗ ಸಂಶೋಧನೆಗಳು, ರೋಗದ ವಿಧಾನಗಳು, ಕ್ರಿಮಿಗಳು ಬೆಳೆಯತಕ್ಕ ರೀತಿಗಳನ್ನು ನೋಡಿದರೆ ಬರುವುದಿಲ್ಲ ಎಂದು ಖಡಾ ಖಂಡಿತವಾಗಿ ಬರುವುದಿಲ್ಲ ಎಂದು ತಿರಸ್ಕಾರ ಮಾಡದೇ ಇರತಕ್ಕ ಸ್ಥಿತಿಯಲ್ಲಿ ಇವೊತ್ತು ನಾವು ಇದ್ದೇವೆ. ವೈಜ್ಞಾನಿಕ ಬೆಳವಣಿಗೆ ಆ ಮಟ್ಟದಲ್ಲಿ ಬೆಳೆದಿದೆ. ನಾನು ಯಾಕೆ ಈ ಮಾತನ್ನು ಹೇಳಿದೆ ಅಂದರೆ ಒಬ್ಬ ಫಾದರ್ ಕುಷ್ಟರೋಗಿ ಗಳನ್ನು ಒಂದು ದ್ವೀಪದಲ್ಲಿ ಇಟ್ಟುಕೊಂಡು ಸಂರಕ್ಷಣೆ ಮಾಡುವ ಸಂದರ್ಭದಲ್ಲಿ ಆತ ಕುಷ್ಟರೋಗಕ್ಕೆ ಈಡಾಗಿ ಸತ್ತು ಹೋದ, ಅದಕ್ಕೆ ಬೇಕಾದ ದಾಖಲೆಗಳನ್ನು ನಿಮಗೆ ಕೊಡುತ್ತೇನೆ. ಅವರು ಏನು ಹೇಳುತ್ತಾರೆ ಅಂದರೆ ಕಾಂಟ್ಯಾಕ್ಟ್ ಮುಖಾಂತರ ಅದು ಕ್ರಮೇಣ ಬರಬಹುದು, ಇತ್ತೀಚಿನ ವೈಜ್ಞಾನಿಕ ಬೆಳವಣಿಗೆಗೆ ಈ ರೀತಿ ಇದೆ......

ಶ್ರೀ ಬಸವರಾಜ್.—ಆದರಿಂದಲೇ ಸತ್ತಿದ್ದಾರೆಂದು ನಿಮ್ಮ ಹತ್ತಿರ ಮಾಹಿತಿ ಇದೆಯಾ ?

ಶ್ರೀ ಪಟವರ್ಧನ ರತ್ನಾಕರ್.—ಇದೆ, ಅದನ್ನು ಸಕಲೇಶಪುರಕ್ಕೆ ಕಳಿಸಿಕೊಡುತ್ತೇನೆ. ಆನೆ ಕಾಲು ರೋಗ, ಮಲೇರಿಯಾ ರೋಗಗಳು, ಇದು ಬಂದಾಗ ರಕ್ತ ಪರೀಕ್ಷೆ ಮಾಡಿ ಆ ರೋಗ ಬಂದಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದ್ದನ್ನು ಪರೀಕ್ಷೆ ಮಾಡತಕ್ಕ ಒಂದು ವಿಧಾನ ಇವೊತ್ತು ಗ್ರಾಮೀಣ ಮಟ್ಟ ಬೇಡ ಇವೊತ್ತು ತಾಲ್ಲೂಕು ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಆಗಲಿ ಏನು ಆಗಿದೆ, ರಕ್ತವನ್ನು ತೆಗೆದು ಅದನ್ನು ಪರೀಕ್ಷೆ ಮಾಡತಕ್ಕಂಥ ಸಲಕರಣೆಗಳಾಗಲೀ, ಅಥವಾ ಅದಕ್ಕೆ ಇರತಕ್ಕ ನುರಿತ ತಜ್ಞರಾಗಲೀ. ಇಲ್ಲದೇ ಇರತಕ್ಕ ಸನ್ನಿವೇಶ ಇವೊತ್ತು ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾಣುತ್ತಿದ್ದೇವೆ. ಎಲ್ಲಿಯವರೆಗೆ ಇದನ್ನು ಮಾಡುವುದಿಲ್ಲ ಅಲ್ಲಿಯವರೆಗೆ ಈ ಫಿಲೇರಿಯಾ ಅಥವಾ ಆನೇಕಾಲು ರೋಗವನ್ನು ಒಂದು ತಹಬಂದಿಗೆ ತರುತ್ತೇವೆ ಎಂಬ ಭಾವನೆ ಇಟ್ಟುಕೊಂಡಿದ್ದರೆ ಅದು ಖಂಡಿತ ಸುಳ್ಳು ಆಗುತ್ತದೆ ಯಾಕೆಂದರೆ ನಮ್ಮ ಊರಿನಲ್ಲಿ ಕೆಲವುಸಾರಿ ಯಾವನೋ ಒಬ್ಬ ಡಾಕ್ಟರ್ ಒಂದು ರೋಗ ಇರಬಹುದು ಎಂದು ಔಷಧಿ ಕೊಡುತ್ತಾನೆ ಅದು ಗುಣ ಆಗದಿದ್ದರೆ ಮಲೇರಿಯಾ ಇರಬಹುದು ಎಂದು ರಕ್ತವನ್ನು ಪರೀಕ್ಷೆ ಮಾಡಿ ಕಳಿಸಿಕೊಡುತ್ತಾನೆ. ಕಳಿಸಿಕೊಟ್ಟ ನಂತರ ನಾವು ಕೇಳಿದರೆ ಕನಿಷ್ಟ ೮–೧೦ ದಿನಗಳಾದರೂ ರಿಪೋರ್ಟ್ ಬಂದಿಲ್ಲ, ರಿಪೋರ್ಟ್ ಬಂದಿಲ್ಲ ಎಂದು ಹೇಳುತ್ತಾನೆ, ಅದಕ್ಕೋಸ್ಕರ ತಾಲ್ಲೂಕು ಮಟ್ಟದಲ್ಲಿ ಇಂತಹ ಒಂದು ಉಪಕರಣವನ್ನು ಇಟ್ಟು ತಜ್ಞರಾದಂತಹ, ನುರಿತರಾದಂತಹವರನ್ನು ಇಟ್ಟು ರಕ್ತ ಪರೀಕ್ಷೆ ಮಾಡಿ ಬಹುಬೇಗ ರಿಪೋರ್ಟ್ ತಲುಪುವ ಹಾಗೆ ಮಾಡಿದರೆ ಕೂಡಲೇ ಸೂಕ್ತ ಚಿಕಿತ್ಸೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿದೆ. ಹೀಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಮಾಡಿದರೆ ಈ ಆನೇಕಾಲು ರೋಗ ಅಥವಾ ಮಲೇರಿಯಾ ರೋಗ ಇವೆಲ್ಲವನ್ನು ಬಗೆಹರಿಸುವಂತಹ ಕೆಲಸವನ್ನು ತಾವು ಮಾಡಬಹುದು ಆ ಮೇಲೆ ಈ ವಿಚಾರದಲ್ಲಿ ಹೊಸ ಚಿಕಿತ್ಸೆಯ ಯೋಜನೆಗಳು, ಏನು ಇದೆ ಅದನ್ನು ಕೂಡ ಯೋಚನೆ ಮಾಡಬೇಕಾಗುತ್ತದೆ ಇವೊತ್ತು ವೈಜ್ಞಾನಿಕ ಬೆಳವಣಿಗೆಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಾಗಲೀ ಅಥವಾ ನಮ್ಮ ರಾಷ್ಟ್ರದಲ್ಲಿ ಸಂಶೋಧನೆಗಳು ಆಗಿರತಕ್ಕದ್ದನ್ನು ತಿಳಿದುಕೊಂಡು ಅದನ್ನು ಗ್ರಾಮೀಣ ಮಟ್ಟದಲ್ಲಿ ತಲುಪಿಸ ತಕ್ಕದ್ದು, ಹೊಸ ಚಿಕಿತ್ಸಾ ವಿಧಾನಗಳು ಏನು ಇದೆ ಅದನ್ನು ಕೂಡ ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ. ಜೊತೆಗೆ ರೋಗ ನಿರೋಧಕದ ಬಗ್ಗೆ ಆಗಿರತಕ್ಕ ಸಂಶೋಧನೆಯನ್ನು ಅಳವಡಿಸಿಕೊಳ್ಳಬೇಕು, ಹೊಸ ಚಿಕಿತ್ಸಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ರೋಗನಿರೋಧಕವನ್ನು ಅಥವಾ ರೋಗ ಬರದಂತೆ ತಡೆಗಟ್ಟದಂತೆ ಮಾಡಿದರೆ ಈ ಕಾರ್ಯಕ್ರಮಗಳು ಯಶಸ್ವಿಯಾಗಿ ಮಾಡಬಹುದು. ಹೀಗೆ ಎಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಮಾತ್ರ ನಾವು ಈ ವಿಚಾರದಲ್ಲಿ ಸಕ್ಸಸ್ ಆಗಬಹುದು

ಎನ್ನತಕ್ಕದ್ದನ್ನು ನಾನು ಯೋಚನೆ ಮಾಡುತ್ತಿದ್ದೇನೆ. ಪ್ರತಿ ಒಂದು ಜಿಲ್ಲೆಯಲ್ಲಿ ಈ ರೀತಿ ಮಾಡಬೇಕೆಂದು ಮಾನ್ಯ ಆರೋಗ್ಯ ಸಚಿವರಲ್ಲಿ ಹೇಳುತ್ತೇನೆ. ಐ.ಸಿ.ಎಂ.ಆರ್. ಏನು ಸಂಶೋಧನಾ ಕೇಂದ್ರ ಮಾಡಿದ್ದಾರೆ, ಆ ರೀತಿಯಾಗಿ ಒಂದು ಸಂಶೋಧನಾ ಕೇಂದ್ರವನ್ನು ಪ್ರತಿ ಜಿಲ್ಲಾ ಮಟ್ಟದಲ್ಲೂ ತಮಗೆ ಸ್ಥಾಪನೆ ಮಾಡಲು ಸಾಧ್ಯವಿದೆಯೇ ಎನ್ನುವುದರ ಬಗ್ಗೆ ಪರಿಶೀಲನೆ ಮಾಡಬೇಕು, ಕೇಂದ್ರ ಆರೋಗ್ಯ ಸಂಶೋಧನಾ ಕೇಂದ್ರದವರಿಂದ ಈ ಕೆಲಸವನ್ನು ತಾವು ಮಾಡಿದರೆ ನಿಜಕ್ಕೂ ಅದರಿಂದ ಒಳ್ಳೆಯದಾಗುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ರೋಗಗಳನ್ನು ತಡೆಗಟ್ಟುವ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಹೇಳಿದೆ. ಈಗ ನಾವು ಚಿಕಿತ್ಸಾ ವಿಧಾನದ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈಗ ನೀವು ಗ್ರಾಮೀಣ ಮಟ್ಟದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕ ಎಂದು ಸ್ಥಾಪನೆ ಮಾಡಿದ್ದೀರಿ. ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಲ್ಪನೆ ಏನು ಎಂಬುದು ನನಗೆ ಅರ್ಥವಾಗಿಲ್ಲ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಹೊಸದಾಗಿ ಸ್ಥಾಪನೆ ಆದರೆ, ಅಲ್ಲಿಗೆ ಮೊದಲು ಒಂದು ಜೀಪ್ ಬರುತ್ತದೆ, ಡ್ರೈವರ್‌ನ್ನು ಪೋಸ್ಟ್ ಮಾಡುತ್ತೀರಿ. ಇದನ್ನು ಬಿಟ್ಟರೆ ಆ ಕೇಂದ್ರಕ್ಕೆ ಅಗತ್ಯವಾದ ಉಪಕರಣಗಳಾಗಲೀ, ಸವಲತ್ತುಗಳಾಗಲೀ, ಸೌಲಭ್ಯಗಳಾಗಲೀ ಬರುವುದಿಲ್ಲ. ಅಲ್ಲಿ ಕೆಲಸ ಮಾಡುವವರಿಗೆ ಸಂಬಳ ವಿತರಣೆ ಮಾಡಲು ನಾಲ್ಕೈದು ಹಳ್ಳಿಗಳನ್ನು ಸೇರಿಸಿ ಒಂದು ಡ್ರಾಯಿಂಗ್ ಸೆಂಟರ್ ಎಂದು ತೆರೆಯುತ್ತೀರಿ, ಪ್ರಾಥಮಿಕ ಆರೋಗ್ಯದ ಕೇಂದ್ರದ ಕಲ್ಪನೆ ಈಗ ಇಷ್ಟಕ್ಕೆ ಮಾತ್ರ ಸೀಮಿತವಾಗಿದೆ. ಇದು ಸರಿಯಾದ ವ್ಯವಸ್ಥೆ ಅಲ್ಲ. ನನ್ನ ಅಭಿಪ್ರಾಯದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲವು ಮೂಲಭೂತವಾದಂಥ ಸೌಲಭ್ಯಗಳು ಇರಬೇಕು, ಅವು ಯಾವುವು ಎಂದರೆ, ಒಂದು ಫ್ರಿಡ್ಜ್ ಇರಬೇಕು. ಪುರುಷ ಡಾಕ್ಟರ್ ಜೊತೆಗೆ ಲೇಡಿ ಡಾಕ್ಟರ್ ಇರಬೇಕು, ವಾಹನ ಸೌಲಭ್ಯ ಇರಬೇಕು, ಇಬ್ಬರು ನರ್ಸ್‌ಗಳು ಇರಬೇಕು, ರೋಗಿಗಳನ್ನು ಅಡ್ಮಿಟ್ ಮಾಡಿಕೊಳ್ಳಲು ಹತ್ತು ಹಾಸಿಗೆಗಳ ಸೌಲಭ್ಯ ಇರಬೇಕು, ಹೀಗೆ ಎಲ್ಲ ಅನುಕೂಲಗಳು ಇದ್ದರೆ, ಅದನ್ನು ಸಂಸಜ್ಜಿತವಾಗಿ ನಡೆಸಲು ಸಾಧ್ಯವಾಗುತ್ತದೆ. ಈಗ ಅಲ್ಲಿ ಯಾರಿಗಾದರೂ ಮಿದುಳು ಜ್ವರ ಬಂದರೆ ಅದಕ್ಕೆ ಬೇಕಾದ ಲಸಿಕೆಯನ್ನು ಶಿವಮೊಗ್ಗದಿಂದ ಇಲ್ಲವೇ ಬೆಂಗಳೂರಿನಿಂದ ತರಿಸಬೇಕಾದ ಪರಿಸ್ಥಿತಿ ಇದೆ. ಕೆಲವು ಸಲ ಜಪಾನ್ ದೇಶದಿಂದ ಸಹ ತರಿಸಬೇಕಾಗುತ್ತದೆ. ಈ ಮಿದುಳು ಜ್ವರವನ್ನು ಪೂರ್ವಭಾವಿಯಾಗಿ ತಡೆಗಟ್ಟಬೇಕಾದರೆ, ಅದಕ್ಕೆ ಬೇಕಾದ ಲಸಿಕೆಯನ್ನು ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಫ್ರಿಡ್ಜ್‌ನಲ್ಲಿಟ್ಟಿರಬೇಕು. ಆಗ ಮಾತ್ರ ಇದನ್ನು ಯಶಸ್ವಿಯಾಗಿ ತಡೆಗಟ್ಟಬಹುದು. ಇಲ್ಲದಿದ್ದರೆ ಏನಾಗುತ್ತದೆಂದರೆ, ಈ ಜ್ವರ ಬಂದು ಏಳೆಂಟು ಜನ ಸತ್ತ ಮೇಲೆ, ಅದನ್ನು ವಿಧಾನಸಭೆಯಲ್ಲಿ ಮತ್ತು ಜಿಲ್ಲಾಪರಿಷತ್‌ನಲ್ಲಿ ಪ್ರಸ್ತಾಪ ಮಾಡಿ, ಗಲಾಟೆ ಮಾಡಿದ ಮೇಲೆ, ಸರ್ಕಾರದವರು ಹಂದಿಗಳನ್ನು ಕೊಲ್ಲುತ್ತೇವೆ, ಸೊಳ್ಳೆಗಳನ್ನು ನಾಶಪಡಿಸುತ್ತೇವೆ, ಡಿ. ಡಿ. ಟಿ.ಯನ್ನು ಸಿಂಪಡಿಸುತ್ತೇವೆಂದು ಇಲ್ಲಿ ಹೇಳಬೇಕಾಗುತ್ತದೆ. ಇದಕ್ಕೆ ಬದಲು ಈ ಲಸಿಕೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಟ್ಟರೆ, ಈ ಕೇಂದ್ರಗಳಿಗೆ ಘನತೆ ಮತ್ತು ಗೌರವ ಬರುತ್ತದೆ. ಯಾರಿಗಾದರೂ ನಾಯಿ ಕಡಿದರೆ, ಅದಕ್ಕೆ ಬೇಕಾದ ಇಂಜೆಕ್ಷನ್ ಈ ಕೇಂದ್ರಗಳಲ್ಲಿರುವುದಿಲ್ಲ. ತಾಲ್ಲೂಕ್ ಆಸ್ಪತ್ರೆಗೇಗೆ ಹೋಗಬೇಕಾಗುತ್ತದೆ. ಕೆಲವು ಸಲ ಅಲ್ಲಿಯೂ ಈ ಇಂಜೆಕ್ಷನ್ ಇರುವುದಿಲ್ಲ. ಅವರು ಬೆಂಗಳೂರಿನಿಂದ ತರಿಸಬೇಕಾಗಿವೆ, ಟೆಲಿಗ್ರಾಂ ಕೊಟ್ಟಿದ್ದೇವೆ, ಅವರು ಇನ್ನೂ ಕಳುಹಿಸಿಕೊಟ್ಟಿಲ್ಲ, ಎಂದು ಹೇಳುತ್ತಾರೆ. ಮತ್ತೆ ಕೆಲವು ಸಲ ಅವರು ಕಳುಹಿಸಿ ಕೊಟ್ಟಿದ್ದಾರೆ. ನಾವು ಇನ್ನೂ ಬಿಡಿಸಿಕೊಂಡಿಲ್ಲ ಎಂದು ಹೇಳುತ್ತಾರೆ. ತಾಲ್ಲೂಕ್ ಮಟ್ಟದ ಆಸ್ಪತ್ರೆಗಳ ಸ್ಥಿತಿಯೇ ಈ ರೀತಿ ಆದರೆ ಇನ್ನು ಹಳ್ಳಿ ಮಟ್ಟದ ಆಸ್ಪತ್ರೆಗಳು ಯಾವ ರೀತಿ ಇರುತ್ತವೆ ಎಂಬುದನ್ನು ತಾವೇ ಊಹಿಸಿಕೊಳ್ಳಬಹುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಾಯಿ ಕಡಿತಕ್ಕೆ ಬೇಕಾದ ಇಂಜೆಕ್ಷನ್ ಇಲ್ಲದಿದ್ದರೆ ಅವುಗಳಿಗೆ ಆ ಹೆಸರನ್ನು ಇಟ್ಟು ಸಹ ಏನು ಪ್ರಯೋಜನ ಇಲ್ಲ. ಈ ಕೇಂದ್ರಗಳಿಗೆ ತಾವು ಕೇವಲ ವಾಹನ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಅದರ ಜೊತೆಗೆ ಅಗತ್ಯವಾದ ಔಷಧಗಳನ್ನು ಸಹ ಒದಗಿಸಬೇಕು. ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಂಟಿಬಯೊಟಿಕ್ಸ್ ಅಂದರೆ ಸಂಜೀವಿನಿ ಔಷಧಗಳು ಯಾವುವೂ ಇರುವುದಿಲ್ಲ. ಇದರಿಂದ ಅಲ್ಲಿನ ಡಾಕ್ಟರ್‌ಗಳು ಚೀಟಿ ಬರೆದುಕೊಡುತ್ತಾರೆ. ಆ ಚೀಟಿ ತೆಗೆದುಕೊಂಡು ತಾಲ್ಲೂಕ್ ಆಸ್ಪತ್ರೆಗಳಿಗೆ ಹೋಗಿ ಪಡೆಯಬೇಕಾಗುತ್ತದೆ, ಅಲ್ಲಿ ಸಿಗದಿದ್ದರೆ ಔಷಧದ ಅಂಗಡಿಗಳಿಗೆ ಹೋಗಿ ಖರೀದಿ ಮಾಡಿ ತಂದು ಕಾಯಿಲೆಯನ್ನು ವಾಸಿಮಾಡಿಕೊಳ್ಳಬೇಕಾಗುತ್ತದೆ.

ಆದುದರಿಂದ ಈ ಆಂಟಿ ಬಯೋಟೀಕ್ ಔಷಧಿಗಳನ್ನೂ ಕೂಡ ಕೊನೇ ಪಕ್ಷ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ತಾವು ಇಡತಕ್ಕ ಕೆಲಸವನ್ನು ಮಾಡಬೇಕು ಎಂದು ಹೇಳುತ್ತೇನೆ. ಆಮೇಲೆ ಶೈತ್ಯಾಗಾರ ಮತ್ತು ವಾಹನ ಸೌಕರ್ಯವನ್ನು ತಾವು ಕೊಡಬೇಕು, ಲೇಡಿ ಡಾಕ್ಟರನ್ನು ಕೊಡಬೇಕು ಮತ್ತು ೧೦ ಹಾಸಿಗೆಗಳನ್ನು ಆ ಕೇಂದ್ರಗಳಿಗೆ ಅಟಾಚ್ ಮಾಡಿದರೆ ಅದು ಪ್ರಾಥಮಿಕ ಆರೋಗ್ಯ ಕೇಂದ್ರ ಎನಿಸಿಕೊಳ್ಳುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷರೆ, ಈಗ ಆರೋಗ್ಯ ಕೇಂದ್ರದಿಂದ ಆರೋಗ್ಯ ಘಟಕಕ್ಕೆ ಬರೋಣ. ಈ ಆರೋಗ್ಯ ಘಟಕ ಹೇಗಿದೆಯೆಂದರೆ ಕೆಲವು ಕಡೆ ಔಷಧಿ ಇದ್ದರೆ ಡಾಕ್ಟರ್ ಇಲ್ಲ ಡಾಕ್ಟರ್ ಇದ್ದರೆ ಔಷಧಿ ಇಲ್ಲ, ಕೆಲವು ಕಡೆ ಔಷಧಿ ಇಲ್ಲ. ಡಾಕ್ಟರ್ ಇಲ್ಲ ಕಾಂಪೌಂಡರ್ ಇಲ್ಲ, ಜವಾನ ಇರುತ್ತಾನೆ. ನಮ್ಮ ಹಳ್ಳಿಯಲ್ಲಿ ಒಂದು ಆಸ್ಪತ್ರೆ ಇದೆ. ಅಲ್ಲಿ ಕಾಂಪೌಂಡರನ್ನೇ ಜನ ಡಾಕ್ಟರ್ ಎಂದು ಕರೆಯುತ್ತಾರೆ. ಅವನು ಮನೆಯಲ್ಲಿರುತ್ತಾನೆ, ಯಾರಾದರೂ ಪೇಷಂಟ್ ಹೋದರೆ ಅಲ್ಲಿನ ಜನ ಹೋಗಿ ಆ ಕಾಂಪೌಂಡರನ್ನು ಕರೆದುಕೊಂಡು ಬರಬೇಕು ಇಂತಹ ಒಂದು ದುರವಸ್ಥೆ ಆ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಬಂದಿದೆ ಈಗ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಔಷಧಿಯನ್ನು ಕೊಡತಕ್ಕದ್ದು ಕೊನೇಪಕ್ಷ ವೈದ್ಯರನ್ನು ಕೊಡತಕದ್ದು ಅಲ್ಲಿ ಒಬ್ಬ ಕಾಂಪೌಂಡರ್ ಇರತಕ್ಕಂಥಾದ್ದು ಈರೀತಿ ವ್ಯವಸ್ಥೆಯನ್ನು ಮಾಡಿದರೆ ಅನುಕೂಲವಾಗುತ್ತದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಆರೋಗ್ಯ ಕೇಂದ್ರಗಳು ಬಿಡಿ, ಆರೋಗ್ಯ ಘಟಕಗಳೂ ಕೂಡ ಇವತ್ತು ಅತ್ಯಂತ ದುರವಸ್ಥೆಯಲ್ಲಿರತಕ್ಕಂಥ ಸಂದರ್ಭವನ್ನು ನಾವು ಕಾಣಬಹುದು. ಆಮೇಲೆ ಡಾಕ್ಟರ್ಸ್ ಖಂಡಿತವಾಗಿಯೂ ಈ ಘಟಕಗಳಿಗೆ ಬರುವುದೇ ಇಲ್ಲ, ಯಾವ ಡಾಕ್ಟರ್ಸ್ ಬರುವುದಿಲ್ಲ. ಯಾರೋ ಡಾಕ್ಟರನ್ನು ಹಾಕುತ್ತಾರೆ, ಅವರು ಎಂಟೇ ದಿವಸದಲ್ಲಿ ಬೇರೆ ಕಡೆ ಟ್ರಾನ್ಸ್‌ಫರ್ ಮಾಡಿಸಿ ಕೊಳ್ಳುತ್ತಾರೆ. ಏಕೆಂದರೆ ಅಲ್ಲಿ ಅವರಿಗೆ ಇರಲಿಕ್ಕೆ ವಸತಿ ಸೌಲಭ್ಯ ಇರುವುದಿಲ್ಲ, ನೀರಿನ ಸೌಲಭ್ಯ ಇರುವುದಿಲ್ಲ ಇರತಕ್ಕಂಥ ಒಂದು ಬಿಲ್ಡಿಂಗಿಗೆ ಕರೆಂಟ್ ಇರುವುದಿಲ್ಲ ಇಲ್ಲದೇಹೋದರೆ ಬಾಗಿಲು ಸರಿಯಾಗಿ ಇರುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ಆಸ್ಪತ್ರೆ ಕೊಠಡಿ ಇದೆ, ಡಾಕ್ಟರ್ ಇರಲಿಕ್ಕೆ ಅದಕ್ಕೆ ಬಾಗಿಲು ಗಳೇ ಇಲ್ಲ. ಸರ್ಕಾರಕ್ಕೆ ನಾವು ಬರೆದರೆ ಜಿಲ್ಲಾ ಪರಿಷತ್ತಿಗೆ ಹೋಗಿದೆ ಎಂದು ಹೇಳುತ್ತಾರೆ. ಜಿಲ್ಲಾ ಪರಿಷತ್ತಿಗೆ ಬರೆದರೆ ಪಿ ಡಬ್ಲ್ಯು. ಡಿ.ಗೆ ಸೇರಿದೆ ಎಂದು ಹೇಳುತ್ತಾರೆ. ಪಿ ಡಬ್ಲ್ಯು. ಡಿಯಲ್ಲಿ ಕೇಳಿದರೆ ನಮಗೆ ಅಲಾಟ್ ಆಗಿಲ್ಲ ಎಂದು ಹೇಳುತ್ತಾರೆ. ಕೊನೆಗೆ ಬಾಗಿಲು ಇಲ್ಲದೇ ಇರತಕ್ಕಂಥ ವೈದ್ಯರ ವಸತಿಗೃಹ ಇವತ್ತೂ ಹಾಗೆ ಉಳಿದುಕೊಂಡಿದೆ. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ವೈದ್ಯರಿಗೆ ಕೆಲಸ ಮಾಡಲಿಕ್ಕೆ ಒಂದು ಉತ್ಸಾಹವಾಗಲಿ ಅಥವಾ ಪ್ರೋತ್ಸಾಹ ವಾಗಲಿ ಅಥವಾ ಈ ಬಗ್ಗೆ ನಾವು ಪ್ರಾಮಾಣಿಕವಾಗಿ ಸೇವೆ ಮಾಡಬೇಕು ಎನ್ನತಕ್ಕಂಥ ಮನೋಭಾವ ಇದ್ದರೂ ಕೂಡ ಈ ದುರವಸ್ಥೆಯನ್ನು ನೋಡಿ ಅವರಿಗೆ ಈ ಕೆಲಸ ಮಾಡುವುದು ಬೇಡ, ಬೇರೆ ಕಡೆ ಹೋಗೋಣ ಎನ್ನತಕ್ಕಂಥ ಭಾವನೆ ಬರುತ್ತದೆ. ಕೆಲವು ಆಸ್ಪತ್ರೆಗಳಲ್ಲಿ ಪ್ರಾಥಮಿಕ ಘಟಕಗಳಲ್ಲಿ ಔಷಧೀನೇ ಇಲ್ಲ. ಡಾಕ್ಟರು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಸುಮ್ಮನೆ ಕುಳಿತುಕೊಂಡಿರಬೇಕು, ಅಲ್ಲಿ ಸ್ವಲ್ಪ ಲ್ಯಾಸಿಕ್ ಟ್ಯಾಬ್ಲೆಟ್ಸ್ ಇರುತ್ತವೆ, ನಾವು ಆ ಆಸ್ಪತ್ರೆಗೆ ಭೇಟಿ ಕೊಟ್ಟಾಗ ಹೇಳಿದರು. ಲ್ಯಾಸಿಕ್ ಟ್ಯಾಬ್ಲೆಟ್‌ಗಳನ್ನು ಕಳಿಸಿಕೊಟ್ಟಿದ್ದಾರೆ. ಈ ಲ್ಯಾಸಿಕ್ ಟ್ಯಾಬ್ಲೆಟ್ಸನ್ನು ಏಕೆ ಕೊಡುವುದು ಅಂದರೆ ಯಾರಿಗಾದರೂ ಮೂತ್ರ ಬಂದ್ ಆಗಿದ್ದರೆ ಅವರಿಗೆ ಈ ಲ್ಯಾಸಿಕ್ ಟ್ಯಾಬ್ಲೆಟ್ಸ್ ಕೊಡುವುದು. ಆ ಜನಗಳಿಗೆ ಕುಡಿಯಲಿಕ್ಕೆ ನೀರಿಲ್ಲ ಅಲ್ಲಿ ಬಂದವರಿಗೆ ಈ ಲ್ಯಾಸಿಕ್ ಟ್ಯಾಬ್ಲೆಟ್‌ಗಳನ್ನು ಕೊಡಲೇ ನಾನು ಎಂದು ನಮ್ಮ ಡಾಕ್ಟರ್ ಹೇಳುತ್ತಾರೆ. ಒಂದಷ್ಟು ಲ್ಯಾಸಿಕ್ ಟ್ಯಾಬ್ಲೆಟ್‌ಗಳನ್ನು ನಮ್ಮ ಆಸ್ಪತ್ರೆಗಳಿಗೆ ಕಳಿಸಿ ಕೊಟ್ಟಿದ್ದಾರೆ. ಆಮೇಲೆ ಯಾರಾದರೂ ಬರೀ ಜ್ವರ ಎಂದು ಹೇಳಿದರೆ ಹೊಟ್ಟೆ ನೋವಿಗೆ ಮಾತ್ರೆ ಕೊಡುತ್ತಾರೆ, ಹೊಟ್ಟೆನೋವು ಎಂದು ಹೇಳಿದರೆ ಬೇರೆ ಮಾತ್ರೆ ಕೊಡುತ್ತಾರೆ. ಹೀಗಾಗಿ ಪ್ರಾಥಮಿಕ ಘಟಕಗಳಲ್ಲಿ ಕನಿಷ್ಠ ಅಗತ್ಯಗಳಿಗೆ ಬೇಕಾಗಿರತಕ್ಕಂಥ ಔಷಧಿಗಳು ಖಂಡಿತ ಇಲ್ಲ. ಅಲ್ಲಿ ಬರತಕ್ಕಂಥ ಔಷಧಿಗಳನ್ನು ಯಾರು ಇಂಡೆಂಟ್ ಹಾಕುತ್ತಾರೋ, ಯಾರು ಕಳಿಸಿಕೊಡುತ್ತಾರೊ, ಯಾವ ಡಾಕ್ಟರನ್ನು ಕೇಳಿ ಕಳಿಸಿಕೊಡುತ್ತಾರೋ ಒಂದಕ್ಕೊಂದು ಸಂಬಂಧಗಳೇ ಇಲ್ಲ, ಒಂದಕ್ಕೊಂದು ಸಂಬಂಧವಿಲ್ಲದೇ ಇರತಕ್ಕಂಥ ವಹಿವಾಟಾಗಿದೆ ಯಾರೋ ಪ್ಯಾಕ್ ಮಾಡುತ್ತಾರೆ ಯಾರೋ ಕಳಿಸುತ್ತಾರೆ ಅದಕ್ಕೆ ಸಂಬಂಧಾನೇ ಇಲ್ಲ ಆ ರೀತಿಯ ವಹಿವಾಟನ್ನು ನಿಮ್ಮ ಆರೋಗ್ಯ ಇಲಾಖೆಯಲ್ಲಿ ಮಾಡುವುದಾದರೆ ಖಂಡಿತವಾಗಿಯೂ ಈ ಇಲಾಖೆಗೆ ಒಳ್ಳೆಯ ಹೆಸರು ತರುವುದಿಲ್ಲ, ನೀವೂ ಕೂಡ ಒಳ್ಳೆಯ ಹೆಸರು ತರುವುದಿಲ್ಲ, ನೀವೂ ಕೂಡ ಒಳ್ಳೆಯ ಹೆಸರು ತೆಗೆದುಕೊಳ್ಳುವುದಿಲ್ಲ ನಿಮ್ಮ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಏಕೆಂದರೆ ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಪ್ರಾಥಮಿಕ ಘಟಕಗಳಲ್ಲಿ ಕೆಲಸ

ಮಾಡತಕ್ಕಂಥ ಸಿಬ್ಬಂದಿವರ್ಗಕ್ಕೆ ಪ್ರಾಥಮಿಕವಾದ ಮೂಲ ಸೌಲಭ್ಯಗಳಾದ ವಸತಿ, ನೀರು ಕೊಟ್ಟು ಮತ್ತು ಅಗತ್ಯವಾದ ಔಷಧಿ ಕೊಟ್ಟುಬಿಟ್ಟರೆ, ಅಲ್ಲಿರತಕ್ಕ ರೈತರ, ಕೂಲಿ ಮಾಡತಕ್ಕ ಜನಗಳ ಆರೋಗ್ಯವನ್ನು ನೋಡಿಕೊಂಡು ಕಾಲ ಹಾಕತಕ್ಕಂಥ ಕೆಲಸವನ್ನು ಮಾಡಬಹುದು. ಇಲ್ಲದೇ ಹೋದರೆ ಬೆಳಿಗ್ಗೆಯಿಂದ ಸಾಯಂಕಾಲದತನಕ ಲ್ಯಾಸ್ಟಿಕ್ ಟ್ಯಾಬ್ಲೆಟ್ಸ್ ಕೊಟ್ಟುಕೊಂಡು ಇರಬೇಕಾಗುತ್ತದೆ. ಆದುದರಿಂದ ಡಾಕ್ಟರಿಗೆ ಮತ್ತು ಸಿಬ್ಬಂದಿವರ್ಗಕ್ಕೆ ಬೇಕಾಗಿರತಕ್ಕಂಥ ಔಷಧಿ ಹಾಗೂ ವಸತಿ ಸೌಕರ್ಯವನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಇನ್ನೊಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈ ಗ್ರಾಮೀಣ ಪ್ರದೇಶಗಳಿಗೆ ಸಾಮಾನ್ಯವಾಗಿ ಓದಿ ಕೋರ್ಸ್ ಮಾಡಿರತಕ್ಕಂಥ ಹೊಸ ಡಾಕ್ಟರುಗಳು ಬರಲಿಕ್ಕೆ ಇಷ್ಟಪಡುವುದಿಲ್ಲ. ಇದನ್ನು ಯಾವರೀತಿ ನಿಭಾಯಿಸಬಹುದು ಅಂದರೆ, ಹಳ್ಳಿಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಕಡ್ಡಾಯವಾಗಿ ವೈದ್ಯರ ಸೇವೆಯನ್ನು ಏಕೆ ತರಬಾರದು ? ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಹಳ್ಳಿಗಳಲ್ಲಿ ಯಾರೇ ಒಬ್ಬ ಹೊಸ ಡಾಕ್ಟರ್ ಹತ್ತು ವರ್ಷಗಳವರೆಗೆ ಕಡ್ಡಾಯವಾಗಿ ಸೇವೆ ಮಾಡಬೇಕು. ಯಾರು ಹತ್ತು ವರ್ಷಗಳವರೆಗೆ ಸೇವೆ ಮಾಡಿರುತ್ತಾರೆ, ಅಂಥವರಿಗೆ ಬಡ್ತಿ ಕೊಡಿ, ಅಂಥವರಿಗೆ ಎಂ.ಡಿ. ಮತ್ತು ಎಂ.ಎಸ್.ನಂತ ಉನ್ನತ ವ್ಯಾಸಂಗಕ್ಕೆ ಹೋಗುವುದಕ್ಕೆ ಅವಕಾಶ ಕೊಡಿ. ಅಂಥವರು ಪಟ್ಟಣ ಪ್ರದೇಶಗಳಿಗೆ ಬರುವುದಕ್ಕೆ ಇಚ್ಛೆಪಟ್ಟರೆ ಹಾಕಿ ಕೊಡಿ. ನನಗೆ ಗೊತ್ತಿರುವ ಹಾಗೆ ಇಂಥ ಒಂದು ಕಾನೂನನ್ನು ಆಂಧ್ರದಲ್ಲಿ ಜಾರಿಗೆ ತಂದಿದ್ದಾರೆ ಕನಿಷ್ಟಪಕ್ಷ ೫-೧೦ ವರ್ಷಗಳ ಕಾಲ ಗ್ರಾಮೀಣ ಪ್ರದೇಶದಲ್ಲಿ ಒಬ್ಬ ವೈದ್ಯ ಸೇವೆ ಮಾಡಿರಲೇಬೇಕೆಂಬ ಒಂದು ಕಾನೂನು ಮಾಡಿ. ಅಂಥ ಒಂದು ಕಾನೂನು ತಂದರೆ ವೈದ್ಯರು ಹಳ್ಳಿಗಳಿಗೆ ಹೋಗಿ ಕೆಲಸ ಮಾಡುತ್ತಾರೆ. ಯಾರು ಗ್ರಾಮೀಣ ಪ್ರದೇಶಗಳಿಗೆ ಹೋಗಿ ಕೆಲಸ ಮಾಡುವುದಿಲ್ಲ ಅಂಥವರಿಗೆ ಬಡ್ತಿಯನ್ನು ನಿಲ್ಲಿಸಿ. ಉನ್ನತ ವ್ಯಾಸಂಗಕ್ಕೆ ಕಳುಹಿಸುವುದನ್ನು ನಿಲ್ಲಿಸಿ. ಕೆಲವು ಡಾಕ್ಟರುಗಳು ಡ್ಯೂಟಿ ರಿಪೋರ್ಟ್ ಮಾಡಿಕೊಂಡು ಎರಡು ತಿಂಗಳು ಲೀವ್ ಹಾಕಿ ಹೋಗುತ್ತಾರೆ. ಮತ್ತೆ ಬಂದು, ಪುನಃ ಲೀವ್ ಹಾಕಿ ಹೋಗುತ್ತಾರೆ. ಆಸ್ಪತ್ರೆಗಳಿಗೆ ಬೆಳಿಗ್ಗೆ ಬಂದರೆ, ಸಾಯಂಕಾಲ ಬರುವುದಿಲ್ಲ ಸಾಯಂಕಾಲ ಬಂದರೆ ಬೆಳಿಗ್ಗೆ ಬರುವುದಿಲ್ಲ. ಆಮೇಲೆ ಟ್ರಾನ್ಸ್‌ಫರ್‌ಗೆ ಪ್ರಯತ್ನ ಮಾಡುತ್ತಾರೆ. ಇಲ್ಲದೇ ಹೋದರೆ, ಹೈಯರ್ ಸ್ಟಡೀಗೆ ಹೋಗಿ ಎಂ. ಡಿ. ಮತ್ತು ಎಂ ಎಸ್. ಮಾಡಿಕೊಳ್ಳುತ್ತಾರೆ. ಇತ್ತೀಚೆಗೆ ಕಡ್ಡಾಯವಾಗಿ ಸೇವೆ ಮಾಡುವ ಬಗ್ಗೆ ಬಾಂಡ್ ಬರೆಸಿಕೊಳ್ಳುತ್ತಿದ್ದಾರೆ ಹತ್ತು ವರ್ಷಗಳವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ಕಡ್ಡಾಯವಾಗಿ ವೈದ್ಯರು ಸೇವೆ ಮಾಡಲೇಬೇಕೆಂಬ ಒಂದು ಕಡ್ಡಾಯ ಕಾನೂನನ್ನು ಮಾನ್ಯ ಮಂತ್ರಿಯವರು ತರಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪಟ್ಟಣ ಪ್ರದೇಶಗಳಲ್ಲಿ ಕೆಲಸ ಮಾಡತಕ್ಕ ವೈದ್ಯರುಗಳಿಗೆ ವಿಶೇಷ ಭತ್ಯಗಳನ್ನು ಕೊಡುತ್ತಿದ್ದಾರೆ. ಅವುಗಳನ್ನು ಕೂಡಲೇ ನಿಲ್ಲಿಸಿಬಿಡಿ. ಹಳ್ಳಿ ಪ್ರದೇಶಗಳಲ್ಲಿ ಕೆಲಸ ಮಾಡತಕ್ಕ ವೈದ್ಯರುಗಳಿಗೆ ಇಂಥ ಸವಲತ್ತುಗಳನ್ನು ಕೊಡಿ. ವಿಶೇಷ ಭತ್ಯಗಳನ್ನು ಮತ್ತು ಸಂಬಳದ ಆಕರ್ಷಣೆಯನ್ನು ತೋರಿಸಿದರೆ, ಖಂಡಿತವಾಗಿಯೂ ವೈದ್ಯರುಗಳು ಬಂದು ಕೆಲಸ ಮಾಡುತ್ತಾರೆ ಈ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಡಿ.ಪಿ.ಟಿ. ಮತ್ತು ಪೋಲಿಯೋ ವ್ಯಾಕ್ಸಿನೇಷನ್‌ಗಳನ್ನು ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಯಾವರೀತಿ ಸ್ಟೋರೇಜ್ ಮಾಡುತ್ತೀರಿ ? ಅಲ್ಲಿ ಶೈತ್ಯಾಗಾರಗಳು ಇಲ್ಲ. ಪ್ರಾಥಮಿಕ ಆರೋಗ್ಯ ಘಟಕಗಳ ಪರಿಸ್ಥಿತಿ ಬಹಳಷ್ಟು ಕೆಟ್ಟುಹೋಗಿವೆ. ಅವುಗಳು ಒಂದು ರೀತಿಯಲ್ಲಿ ಜನತಾ ಮನೆಗಳು ಇದ್ದ ಹಾಗೆ. ಜನತಾ ಮನೆಯಲ್ಲಿ ಗಂಡಹೆಂಡತಿ, ಮಕ್ಕಳು ಇರಬೇಕು. ಜೊತೆಗೆ ಐ.ಆರ್.ಡಿ.ಪಿ. ಯವರು ಕೊಟ್ಟಿರುವ ಎಮ್ಮೆ ಇರಬೇಕು. ಜೊತೆಗೆ ಅವನ ನಾಯಿ. ಕೋಳಿಗಳು ಇರಬೇಕು. ಯಾವುದೇರೀತಿಯ ಬದ್ರತೆಗಳು ಇಲ್ಲ. ಇಂಥ ಒಂದು ಸಂಕೀರ್ಣವಾದ ಬದುಕನ್ನು ಇವರು ನಡೆಸುತ್ತಿದ್ದಾರೆ. ಇವತ್ತು ಪ್ರಾಥಮಿಕ ಆರೋಗ್ಯ ಘಟಕದಲ್ಲಿ ವೈದ್ಯರುಗಳು ಇಲ್ಲ. ಇಂಜಕ್ಷನ್‌ಗಳು ಇರುವುದಿಲ್ಲ, ಮಾತ್ರೆಗಳು ಇರುವುದಿಲ್ಲ. ಅವಶ್ಯಕವಾದಂಥ ಡಿ.ಪಿ.ಟಿ ಪೋಲಿಯೋ ಡ್ರಾಪ್ಸ್ ಇರುವುದಿಲ್ಲ. ಅವುಗಳನ್ನು ಖಂಡಿತವಾಗಿಯೂ ಕಾಣುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ ನಗರ ಪ್ರದೇಶಗಳ ಆಸ್ಪತ್ರೆಗಳನ್ನು ತೆಗೆದುಕೊಂಡರೂ ಪರಿಸ್ಥಿತಿ ಹಾಗೆ ಇದೆ. ಇತ್ತೀಚಿನ ದಿನಗಳಲ್ಲಿ ಆರೋಗ್ಯದ ಬಗ್ಗೆ ಬಹಳಷ್ಟು ಸಂಶೋಧನೆಗಳು ನಡೆದಿವೆ. ಇವತ್ತು ಸಂಶೋಧನೆಯ ಉಪಕರಣಗಳನ್ನು ಖಾಸಗೀ ಆಸ್ಪತ್ರೆಗಳಲ್ಲಿ ಕಾಣುತ್ತೇವೆ. ಅಲ್ಲಿ ಅವುಗಳ ಸೇವೆಯನ್ನು ಪಡೆಯಬಹುದು. ಆದರೆ, ಸರ್ಕಾರೀ ಆಸ್ಪತ್ರೆಗಳಲ್ಲಿ ಸೇವೆಯೂ ಇಲ್ಲ, ಉಪಕರಣಗಳು ಇಲ್ಲ. ನಗರ ಆಸ್ಪತ್ರೆಗಳಲ್ಲಿ ಆಧುನಿಕ ಯಂತ್ರಗಳ ಕೊರತೆ ಇದೆ. ತಂತ್ರಜ್ಞರ ಕೊರತೆ ಇದೆ. ಸ್ಕ್ಯಾನಿಂಗ್ ಮತ್ತು ಡಯಾಲಿಸಿಸ್ ಮಾಡತಕ್ಕ ತಂತ್ರಜ್ಞರ ಕೊರತೆ ಮತ್ತು ಅದಕ್ಕೆ

ಸಂಬಂಧಪಟ್ಟ ಉಪಕರಣಗಳ ಕೊರತೆ ಜಿಲ್ಲಾ ಮಟ್ಟದ ಮತ್ತು ನಗರ ಆಸ್ಪತ್ರೆಗಳಲ್ಲಿ ಇದೆ. ಖಾಸಗೀ ನರ್ಸಿಂಗ್ ಹೋಂಗಳಲ್ಲಿ ಎಲ್ಲಾ ರೀತಿಯ ಉಪಕರಣಗಳು ಸಿಗುತ್ತವೆ. ವೇಲೂರಿಗೆ ಹೋದರೆ ಅವಶ್ಯಕವಾದ, ಆಧುನಿಕವಾದ ಉಪಕರಣಗಳು ದೊರೆಯುತ್ತವೆ. ಮಣಿಪಾಲದಲ್ಲಿ ಕಾಣಬಹುದು.

೨–೧೦ ಪಿ.ಯಂ.

ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಏತಕ್ಕೆ ಖಾಸಗಿ ನರ್ಸಿಂಗ್‌ಹೋಮ್‌ನಲ್ಲಿ ಅತ್ಯಂತ ಆಧುನೀಕರಣವಾಗಿರತಕ್ಕ ಉಪಕರಣಗಳು ಮತ್ತು ಸೇವಾಸೌಲಭ್ಯಗಳು ಮತ್ತು ಉತ್ತಮ ತಜ್ಞರನ್ನು ಕಾಣಬಹುದು. ಇದು ಸರ್ಕಾರಿ ಆಸ್ಪತ್ರೆಗಳಲ್ಲಿ ಏತಕ್ಕೆ ಇಲ್ಲ ? ಏತಕ್ಕೆ ಈ ಕಡೆ ಗಮನ ಕೊಟ್ಟಿಲ್ಲ ? ಈ ಒಂದು ನಿಟ್ಟಿನಲ್ಲಿ ತಾವು ಏತಕ್ಕೆ ಯೋಚನೆ ಮಾಡಲಿಲ್ಲ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಡಯಾಲಿಸಿಸ್, ರೇಡಿಯಾಲಜಿ ಅಥವಾ ಕಾರ್ಡಿಯಾಲಜಿಯಲ್ಲಿ ತಜ್ಞರ ಕೊರತೆಯನ್ನು ರಾಜ್ಯದ ಮತ್ತು ನಗರ ಪ್ರದೇಶದ ಆಸ್ಪತ್ರೆಗಳಲ್ಲಿ ನಾವು ಕಾಣಬಹುದು. ಆದ್ದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಇಂಥ ತಜ್ಞರುಗಳನ್ನು ನೇಮಕ ಮಾಡುವಂಥಾದ್ದು ಆಗಬೇಕು. ಮತ್ತು ಆಧುನೀಕರವಾಗಿರತಕ್ಕ ಉಪಕರಣಗಳನ್ನೂ ಕೂಡ ಒದಗಿಸಿಕೊಡತಕ್ಕಂಥ ಕೆಲಸ ಮಾಡಬೇಕೆಂದು ಹೇಳುವಂಥ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಈ ಸಂದರ್ಭದಲ್ಲಿ ಇನ್ನೊಂದು ಪ್ರಮುಖವಾದ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಇವೊತ್ತು ಏನಾಗುತ್ತಿದೆ ಎಂದರೆ ಸರ್ಕಾರಿ ವೈದ್ಯರುಗಳು ಖಾಸಗಿಯಾಗಿ ತಮ್ಮ ಕ್ಲಿನಿಕ್‌ಗಳನ್ನು ಬೆಳಿಗ್ಗೆ ಮತ್ತು ಸಾಯಂಕಾಲದ ಸಮಯದಲ್ಲಿ ನಡೆಸುತ್ತಾರೆ. ಈ ರೀತಿಯಾಗಿ ಖಾಸಗಿ ಕ್ಲಿನಿಕ್ ನಡೆಸುವುದನ್ನು ನಿಲ್ಲಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ತಜ್ಞ ವೈದ್ಯರುಗಳು ಏನಿದ್ದಾರೆ ಇವರು ಸರ್ಕಾರಿ ಆಸ್ಪತ್ರೆಗಳಲ್ಲಿ ತಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದಿಲ್ಲ ಅವರ ಹತ್ತಿರ ಬರತಕ್ಕ ರೋಗಿಗಳಿಗೆ ಏನು ಹೇಳುತ್ತಾರೆ ಅಂದರೆ ಸಂಜೆ ಮನೆಯ ಹತ್ತಿರ ಬಂದು ನೋಡಿ ಎಂದು ಹೇಳುತ್ತಾರೆ. ಇಲ್ಲ ಅಂದರೆ ಬೆಳಿಗ್ಗೆ ಕ್ಲಿನಿಕ್ ಹತ್ತಿರ ಬಂದು ನೋಡಿ ಎಂದು ಹೇಳುತ್ತಾರೆ. ಅವರು ಖಾಸಗಿಯಾಗಿ ಕ್ಲಿನಿಕ್ ನಡೆಸಲಿಕ್ಕೆ ಪರವಾನಿಗೆಯನ್ನು ತೆಗೆದುಕೊಂಡ ಮೇಲೆ ಸರ್ಕಾರಿ ಕೆಲಸದ ಮೇಲೆ ನಿಗಾ ಮತ್ತು ಆಸಕ್ತಿ ಕಡಿಮೆಯಾಗುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ಅವರಿಗೆ ಯಾವಾಗಲೂ ದುಡಿಯತಕ್ಕಂಥ ಯೋಚನೆ ಇರುತ್ತದೆ. ಅದಕ್ಕೋಸ್ಕರ ಅವರು ಏನು ಮಾಡುತ್ತಾರೆ ಅಂದರೆ ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ತಮ್ಮ ಕ್ಲಿನಿಕ್ ನಡೆಸುತ್ತಾರೆ. ಸರ್ಕಾರಿ ಆಸ್ಪತ್ರೆಗಳಿಗೆ ಜನರು ಹೋದಾಗ ಇಲ್ಲಿ ಔಷಧಿ ಇಲ್ಲ. ಸರಿಯಾದಂಥ ಉಪಕರಣ ಇಲ್ಲ, ಸಂಜೆ ನಮ್ಮ ಕ್ಲಿನಿಕ್‌ಗೆ ಬನ್ನಿ ಎಂದು ಹೇಳುತ್ತಾರೆ. ಇವೊತ್ತು ಜನರು ಆರೋಗ್ಯದ ಬಗ್ಗೆ ಆರೋಗ್ಯದ ಮಹತ್ವವನ್ನು ಅರಿತುಕೊಂಡಿದ್ದಾರೆ. ಜನರು ಆರೋಗ್ಯದ ಬಗ್ಗೆ ವಿಶೇಷವಾದ ಕಾಳಜಿಯನ್ನು ಇಟ್ಟುಕೊಂಡಿದರಿಂದ, ಸರ್ಕಾರಿ ಆಸ್ಪತ್ರೆಗೆ ಹೋಗುವುದು ಬೇಡ, ನಾವು ಕ್ಲಿನಿಕ್‌ಗೆ ಹೋಗೋಣ ಎಂದು ಅವರು ಕ್ಲಿನಿಕೆಗೆ ಹೋಗಿ ಅಲ್ಲಿಯೇ ವೈದ್ಯರ ಸೇವೆಯನ್ನು ಪಡೆಯತಕ್ಕ ಕೆಲಸವನ್ನು ಮಾಡುತ್ತಾ ಇದ್ದರೆ. ಈ ವೈದ್ಯರಿಗೆ ಸರ್ಕಾರಿ ಸಂಬಳ ಒಂದು ಕಡೆ ಇನ್ನೊಂದುಕಡೆ ಖಾಸಗಿ ಕ್ಲಿನಿಕ್‌ನಲ್ಲಿ ದುಡ್ಡು ಮಾಡಿಕೊಳ್ಳುವುದು ಒಂದು ಕಡೆ. ಇವೊತ್ತು ವೈದ್ಯರುಗಳಿಗೆ ನೀವು ಕೊಟ್ಟಿರತಕ್ಕ ಈ ಶೋಷಣ ರಹದಾರಿ ಏನಿದೆ ಇದನ್ನು ಬಂದ್ ಮಾಡಿದರೆ ತಾವು ಒಳ್ಳೆಯ ಕಾರ್ಯಕ್ರಮವನ್ನು ತೆಗೆದುಕೊಂಡ ಹಾಗೆ ಆಗುತ್ತದೆ. ಇವೊತ್ತು ಸರ್ಕಾರಿ ಆಸ್ಪತ್ರೆಗಳಲ್ಲಿರತಕ್ಕ ವೈದ್ಯರು ಏನು ಹೇಳುತ್ತಾರೆ ಅಂದರೆ ನೀವು ಇಂತಹ ನರ್ಸಿಂಗ್ ಹೋಮ್‌ನಲ್ಲಿಯೇ ಅಡ್ಮಿಟ್ ಆಗಿ ಈ ಸರ್ಕಾರಿ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಬೇಡಿ, ಎಂದು ಹೇಳುವಂಥಾದ್ದು ಇದೆ. ಎಕ್ಸ್‌ಪರ್ಟ್ ಡಾಕ್ಟರುಗಳೆಲ್ಲಾ ಖಾಸಗಿ ನರ್ಸಿಂಗ್ ಹೋಮ್‌ಗೆ ಹೋಗಿ ಶಸ್ತ್ರ ಚಿಕಿತ್ಸೆ ಮಾಡುತ್ತಾರೆ. ಇನ್ನು ಕೆಲವು ವೈದ್ಯರು ಪಾರ್ಟ್‌ನರ್‌ಷಿಪ್ ಮೇಲೆ ಖಾಸಗಿ ನರ್ಸಿಂಗ್‌ಹೋಂ ನಡೆಸುತ್ತಾರೆ. ಇವೊತ್ತು ಸರ್ಕಾರಿ ವೈದ್ಯರುಗಳಿಗೆ ಖಾಸಗಿಯಾಗಿ ಪ್ರಾಕ್ಟೀಸ್ ಮಾಡಲಿಕ್ಕೆ ಏನು ಅವಕಾಶ ಇದೆ, ಅದನ್ನು ಕೂಡಲೆ ರದ್ದು ಮಾಡಿ. ಅದಕ್ಕೆ ಬದಲಿಯಾಗಿ ಬೇರೆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಬದಲಿ ವ್ಯವಸ್ಥೆ ಅಂದರೆ ಕೇರಳದಲ್ಲಿ ಪೇ ವಾರ್ಡ್ ಸಿಸ್ಟಮ್ ಇದೆ. ಪೇ ವಾರ್ಡ್‌ನ ಸಿಸ್ಟಮ್‌ನಲ್ಲಿರತಕ್ಕ ರೋಗಿ ಯಾವುದೇ ಡಾಕ್ಟರನ್ನು ಕರೆಸಿಕೊಂಡು ಚಿಕಿತ್ಸೆಯನ್ನು

ಪಡೆಯಬಹುದು. ಈ ರೀತಿ ಚಿಕಿತ್ಸೆಯನ್ನು ಪಡೆದುಕೊಂಡ ರೋಗಿ ಹಣವನ್ನು ಗೌರ್ನಮೆಂಟ್ ಮುಖಾಂತರ ಕೊಡಬೇಕು. ಈ ರೀತಿ ಮಾಡಿದರೆ ಗೌರ್ನಮೆಂಟ್ ಡಾಕ್ಟರ್‌ಗೂ ಆದಾಯ ಸಿಕ್ಕುತ್ತದೆ. ಈ ರೀತಿ ಪೇವಾರ್ಡ್ ಮಾಡಿದರೆ ಜನರಿಗೂ ಒಳ್ಳೆಯದು ಆಗುತ್ತದೆ. ಖಾಸಗಿಯಾಗಿ ಚಿಕಿತ್ಸೆ ಪಡೆಯಬೇಕೆಂದು ಆಸೆ ಇದ್ದರೆ ಇದರ ಮುಖಾಂತರ ಅವರು ಚಿಕಿತ್ಸೆ ಪಡೆದುಕೊಳ್ಳಬಹುದು. ಆದ್ದರಿಂದ, ಕೇರಳದ ಪೇ ವಾರ್ಡ್ ಸಿಸ್ಟಂ ಬಗ್ಗೆ ಅಧ್ಯಯನ ಮಾಡಿ. ಅದರ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಅದಕ್ಕೆ ಇನ್ನೂ ಹೆಚ್ಚಿಗೆ ಸೇರಿಸಿಕೊಳ್ಳುವುದು ಏನಾದರೂ ಇದ್ದರೆ ಅದನ್ನು ಸೇರಿಸಿಕೊಂಡು ಪೇ ವಾರ್ಡ್ ಸಿಸ್ಟಮ್ ನಮ್ಮ ರಾಜ್ಯದಲ್ಲಿ ಜಾರಿಗೆ ತಂದರೆ ಒಳ್ಳೆಯದು. ಅದಕ್ಕಿಂತಲೂ ಹೆಚ್ಚಿನದು ಅಂದರೆ, ಇವೊತ್ತು ಸರ್ಕಾರಿ ವೈದ್ಯರುಗಳು ನಡೆಸತಕ್ಕ ಕ್ಲಿನಿಕ್ ಬಂದ್ ಮಾಡದೇ ಹೋದರೆ ಜನರ ಇಡೀ ಶಾಪಕ್ಕೆ ಗುರಿಯಾಗುತ್ತೀರಿ. ಅವರ ಒಂದು ಶಾಪಕ್ಕೆ ವಿಮೋಚನೆ ಖಂಡಿತಾ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಔಷಧಿಗಳ ಗುಣಮಟ್ಟದ ಬಗ್ಗೆಯೂ ನಾವು ಸ್ವಲ್ಪ ಮಟ್ಟಿಗೆ ಯೋಚನೆ ಮಾಡಬೇಕಾಗಿದೆ. ಇದು ಎಲ್ಲರ ಮನಸ್ಸಿನಲ್ಲಿರತಕ್ಕ ಸಂಶಯ. ನಮ್ಮ ದೇಶದಲ್ಲಿ ಸಿಕ್ಕತಕ್ಕ ಔಷಧಿಗಳ ಗುಣಮಟ್ಟ ಅಷ್ಟೊಂದು ನಿಗದಿತ ಪ್ರಮಾಣದಲ್ಲಿಲ್ಲ. ನಂಬಿಕೆಗೆ ಅನರ್ಹವಾದ ಗುಣಮಟ್ಟದಲ್ಲಿದೆ. ಇವುಗಳಿಂದ ಜನರಿಗೆ ಉಪಯೋಗವಿಲ್ಲ ಎಂಬುದು ಸರ್ವೇಸಾಧಾರಣವಾಗಿರತಕ್ಕ ಭಾವನೆ. ಇದಕ್ಕೆ ಸಂಬಂಧಪಟ್ಟಂತೆ ಅನೇಕ ಘಟನೆಗೂ ಕೂಡ ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ನಡೆದಿವೆ. ಇದು ಒಂದು ಆತಂಕ ಕಾರಿಯಾದ ವಿಚಾರ. ಯಾವ ಜೀವವನ್ನು ಈ ಔಷಧಿಗಳು ಉಳಿಸುತ್ತವೋ ಅದೇ ಔಷಧಿಗಳೇ ಇವತ್ತು ಅದೇ ಜೀವಗಳಿಗೆ ಹಾನಿಕರಕವಾಗಿವೆ, ಇದು ನಮ್ಮ ಮನುಕುಲಕ್ಕೇ ಒಂದು ರೀತಿಯ ಅಪಮಾನವನ್ನು ಮಾಡುತ್ತಿವೆ. ಇಷ್ಟೇ ಅಲ್ಲ ಇದು ನಾವು ಹೊತ್ತಿರತಕ್ಕ ಜವಾಬ್ದಾರಿ ಒಂದುಕಡೆಯಾದರೆ ಇನ್ನೊಂದು ಕಡೆ ಇದು ಒಂದು ಸವಾಲೂ ಕೂಡ ನಮಗೆ ಆಗಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು ಯಾವ ಕಾರಣಗಳಿಗೋಸ್ಕರ ನಾವು ಇದನ್ನು ಮಾಡಿದ್ದೇವೋ ಅದು ನಮ್ಮ ಜವಾಬ್ದಾರಿಯೂ ಆಗಿದೆ. ಈ ಔಷಧಿಗಳ ಗುಣಮಟ್ಟ ನಮಗೆ ಒಂದು ಸವಾಲಾಗಿದೆ. ಇದೇರೀತಿ ಕಳಪೆ ಔಷಧಿಗಳು, ಕಲಬೆರಕೆ ಔಷಧಿ ಗಳನ್ನೂ ನಾವು ಕಾಣುತ್ತಿದ್ದೇವೆ. ಪರಿಣಾಮಕಾರಿ ಔಷಧಿಗಳೆಂದು ಹಿಂದೆ ಏನು ಹೇಳುತ್ತಿದ್ದೆವು ಅವು ಇವತ್ತು ಪರಿಣಾಮಕಾರಿಯಾಗಿಲ್ಲ ಎಂಬುದನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಕಾರಣಗಳು ಇವೆಯೆಂದು ನಾನು ಹೇಳುತ್ತೇನೆ. ಇವತ್ತು ಔಷಧಿಗಳ ತಯಾರಿಕೆ ಹಂತದಲ್ಲೇ ಕಲಬೆರಕೆಯನ್ನು ಮಾಡುತ್ತಿದ್ದಾರೆ. ಇದರಲ್ಲಿ ಒಂದು ದೊಡ್ಡ ಜಾಲವೇ ಇದೆ. ಔಷಧಿಗಳ ಸಂಶೋಧನೆಯನ್ನು ಏನು ಮಾಡುತ್ತಾರೆ ಅಲ್ಲಿಂದ ಹಿಡಿದು ಇದು ಮಾರುಕಟ್ಟೆಗೆ ಬರುವವರೆಗೂ ಈ ಜಾಲ ತನ್ನ ಕೈವಾಡವನ್ನು ಹೊಂದಿದೆ. ಇದನ್ನು ನಾವು ಇಂದು ಗಮನಿಸಬೇಕು. ಈ ಒಂದು ಚಕ್ರವ್ಯೂಹ ಅಥವಾ ಈ ಜಾಲ ವನ್ನು ನಾವು ಭೇಧಿಸದಿದ್ದರೆ ರಾಜ್ಯದಲ್ಲಾಗಲಿ, ರಾಷ್ಟ್ರದಲ್ಲಾಗಲಿ ಈ ಜೀವ ರಕ್ಷಕ ಔಷಧಿಗಳೇ ಜೀವ ಭಕ್ಷಕ ಔಷಧಿಗಳಾಗತಕ್ಕ ಸಂದರ್ಭ ಬರುತ್ತದೆ. ಇದಕ್ಕೆ ನಾವು ಮೂಲಕಾರಣವಾಗಬೇಕಾಗುತ್ತದೆ. ಈ ವಿಚಾರದಲ್ಲಿ ಒಂದು ಕ್ರಾಂತಿಕಾರಕವಾದ, ಪ್ರಗತಿದಾಯಕವಾದ ಕಾನೂನುಗಳನ್ನು ಮಾಡಿ ಇಂಥ ಕಲಬೆರಕೆಮಾಡುವವರನ್ನು ಬಲಿ ಹಾಕಬೇಕೆಂದು ನಾನು ತಮ್ಮ ಮೂಲಕ ಹೇಳಬಯಸುತ್ತೇನೆ ಆ್ಯಂಟಿ ಬಯಟಿಕ್ ಗಳಲ್ಲಿ ಚಾಕ್‌ಪೀಸ್ ಪೌಡರನ್ನು ಸೇರಿಸುತ್ತಿದ್ದಾರೆಂದು ಕೇಳಿದ್ದೇನೆ. ಟೈಫಾಯ್ಡ್ ಗೆ ಕೊಡತಕ್ಕ ಕ್ಲೋರೋ ಮೆಡಿಸನ್ ಮಾತ್ರೆಯಲ್ಲಿ ಕ್ಲೋರೋಮೆಷಿನ್ನೇ ಇರುವುದಿಲ್ಲ. ಇಂಥ ಸಂದರ್ಭ ಕೂಡ ಇದೆ. ಇಂಥ ಕಳಪೆ ಔಷಧಿಗಳು ಮಾರುಕಟ್ಟೆಯಲ್ಲಿ ಸಿಕ್ಕುತ್ತೀವೆ. ಇದು ಒಂದು ಆತಂಕಕಾರಿ ಮತ್ತು ಗಂಡಾಂತರಕಾರಿ ಎಂಬುದನ್ನು ನಾನು ತಮಗೆ ಹೇಳಬಯಸುತ್ತೇನೆ.

ಇನ್ನು ವಿಟಮಿನ್ ಮತ್ತು ಟಾನಿಕ್‌ಗಳು ಏನಿವೆ ಇವುಗಳಲ್ಲಿ ಯಾವುದೇ ರೀತಿಯ ಖನಿಜಾಂಶಗಳೂ ಇಲ್ಲದೆ ನೀರಸವಾದ ಟಾನಿಕ್‌ಗಳ ಒಂದು ದೊಡ್ಡ ತಂಡವಾಗಿದೆ. ಇದು ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಜನರ ಶೋಷಣೆ ಸಂಪೂರ್ಣವಾಗಿ ನಡೆಯುತ್ತಿದೆ. ಇದನ್ನು ಪ್ರಚಾರ ಮಾಧ್ಯಮದಲ್ಲಿ ನಾವು ನೋಡುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಬೋರ್ನ್‌ವಿಟ, ವಾಟರ್‌ಬರೀಸ್ ಕಾಂಪೌಂಡ್, ತೆಗೆದುಕೊಳ್ಳಿ, ಅಥವಾ ಜ್ವರ ಬಂದರೆ ಆ್ಯನ್ಸಿನ್ 300 ತೆಗೆದುಕೊಳ್ಳಿ ಎಂದು ಹೇಳತಕ್ಕದು, ಈರೀತಿ ಪ್ರಚಾರ ಮಾಧ್ಯಮಗಳ ಮುಖಾಂತರ ಔಷಧಿಗಳಿಗೆ ಸಂಬಂಧಪಟ್ಟಂತೆ, ಪೌಷ್ಟಿಕಾಹಾರಗಳಿಗೆ ಸಂಬಂಧ ಪಟ್ಟಂತೆ ಏನು ಪ್ರಚಾರ ಮಾಧ್ಯಮಗಳು ಬರುತ್ತಿವೆ ಇದರಿಂದ ಜನರಲ್ಲಿ ಪ್ರಚೋದನೆಯುಂಟಾಗುವುದಕ್ಕೆ ಕಾರಣವಾಗಿದೆ. ಇದರಿಂದ ನಿರೀಕ್ಷಿಸಿದ ಮಟ್ಟದಲ್ಲಿ ಅಥವಾ ಗುಣಮಟ್ಟ ಯಾವರೀತಿ ಇರಬೇಕೋ ಆ

ರೀತಿ ಇಲ್ಲದಿರತಕ್ಕ, ಶಕ್ತಿ ಇಲ್ಲದಿರತಕ್ಕ ಟಾನಿಕ್‌ಗಳನ್ನು ನಾವು ಇಂದು ಮಾರುಕಟ್ಟೆಯಲ್ಲಿ ಕಾಣುತ್ತಿದ್ದೇವೆ. ಇದೂ ಕೂಡ ಜನರನ್ನು ಶೋಷಣೆ ಮಾಡುವುದಕ್ಕೆ ನಾವು ಮಾಡಿಕೊಟ್ಟಂಥ ಹಲವಾರು ಮಾಧ್ಯಮಗಳಲ್ಲಿ ಒಂದಾಗಿದೆ. ಇದನ್ನೆಲ್ಲಾ ನೋಡಿದ ಮೇಲೆ ಇದು ಒಳ್ಳೆಯದಿರಬಹುದೆಂದು ಬಹಳಷ್ಟು ಜನ ಇದಕ್ಕೆ ಬಲಿಬೀಳುತ್ತಿದ್ದಾರೆ. ಇವತ್ತು ಚಲನಚಿತ್ರ ಮಾಧ್ಯಮಗಳು ಮನುಷ್ಯನ ಮನಸ್ಸಿನಮೇಲೆ ಬೇರೆ ಯಾವುದೇ ರೀತಿಯ ಪ್ರಚಾರ ಸಾಹಿತ್ಯವೂ ಮಾಡದೇ ಇರತಕ್ಕಷ್ಟು ಮಟ್ಟಿಗೆ ಗಾಢವಾದ ಪರಿಣಾಮವನ್ನು ಬೀರುತ್ತಿವೆ. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಶ್ರೀರಾಮುಲುಗು ಎನ್ನುವವರು ಬಹಳ ಪ್ರಸಿದ್ಧ ಡಾಕ್ಟರ್ ಅವರು ಬಹುಶಃ ಅನಾಸಿನ್‌ಗೆ ಇರಬಹುದು ಒಂದು ಪ್ರಸಿದ್ಧ ಜಾಹಿರಾತನ್ನು ಕೊಡುತ್ತಿದ್ದರು. ಇದರಿಂದ ಜನರಲ್ಲಿ ಒಂದು ರೀತಿಯ ನಂಬಿಕೆ ಬರುತ್ತದೆ. ಇದರಿಂದ ಜನರು ಮೋಸ ಹೋಗುತ್ತಾರೆ. ಈ ರೀತಿ ಪ್ರಚಾರ ಮಾಧ್ಯಮಗಳ ಮುಖಾಂತರ ಗಂಡಾಂತರಕಾರಿ ಔಷಧಿಗಳನ್ನಾಗಲಿ, ಶಕ್ತಿದಾಯಕ ಟಾನಿಕ್‌ಗಳನ್ನಾಗಲಿ ಕುಡಿಯಿರಿ ತೆಗೆದುಕೊಳ್ಳಿರಿ ಎಂದು ಹೇಳುವುದು ಏನಿದೆ ಇವನ್ನೆಲ್ಲಾ ಕೂಲಂಕಷವಾಗಿ ಪರೀಕ್ಷೆಗೆ ಒಳಪಡಿಸಿ ನಂತರ ಇವುಗಳನ್ನು ಜನರ ಉಪಯೋಗಕ್ಕೆ ಮಾರುಕಟ್ಟೆಗೆ ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ಸರ್ಕಾರ ಒಂದು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಹೇಳಬಯಸುತ್ತೇನೆ.

ಈ ಸಂಸ್ಥೆಗಳು ಡಾಕ್ಟರುಗಳನ್ನೇ ಬುಕ್ ಮಾಡುತ್ತಿದ್ದಾರೆನ್ನುವ ಮಾತುಕೂಡ ಇದೆ. ಪ್ರಸಿದ್ಧ ವೈದ್ಯರುಗಳನ್ನು ಇಂಥ ಪ್ರಭಾವಿ ಸಂಸ್ಥೆಗಳು ತಮ್ಮ ವಶಕ್ಕೆ ತೆಗೆದುಕೊಂಡು ಅವರ ಮುಖಾಂತರ ಪ್ರಚಾರ ಪಡೆಯುತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಡಾಕ್ಟರುಗಳು ಔಷಧಿಗಳನ್ನು ಬರೆದು ಕೊಡುವಾಗ ಇಂಥ ಕಡೆ ಇಂಥ ಟಾನಿಕ್, ಇಂಥ ಬೋರನ್‌ವಿಟಾ ಇಂಥ ಬೂಸ್ಟ್, ಇಂಥ ಫೆರೆಕ್ಸ್‌ಗಳನ್ನೇ ತೆಗೆದುಕೊಳ್ಳಬೇಕೆಂದು ಬರೆದು ಕೊಟ್ಟುಬಿಡುತ್ತಾರೆ. ನಮ್ಮ ಜನರು ಬಹಳ ಬೇಗ ಇಂಥದ್ದಕ್ಕೆ ಮೋಸ ಹೋಗತಕ್ಕಂಥ ಸಂದರ್ಭಗಳು ಜಾಸ್ತಿ ಇರುತ್ತದೆ. ವೈದ್ಯರೂ ಕೂಡ ಈ ರೀತಿಯಾದ ಕೆಲಸಗಳು ನಡೆಯಲಿಕ್ಕೆ ಕಾರಣೀಭೂತರಾಗಿದ್ದಾರೆಂದು ಹೇಳಿ ಈ ರೀತಿಯಾದ ಸಮಾಜಿಕ ದುರಂತದ ಬಗ್ಗೆ ತಾವು ಗಮನ ಹರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಕಲಬೆರಕೆ ಔಷಧಿಗಳನ್ನು ಕೂಡ ಕೆಲವು ಸ್ವಾರ್ಥ ವೈದ್ಯರುಗಳ ಆಶೀರ್ವಾದದಿಂದ ಬಳಕೆಯಲ್ಲಿರುವುದು ಕೇಳಿಬಂದಿದೆ. ಅದರ ಬಗ್ಗೆಯೂ ಕೂಡ ತಾವು ಗಮನಹರಿಸಬೇಕು. ಪ್ರತಿನಿತ್ಯ ಬಳಕೆಯಲ್ಲಿರುವ ಇಂಥ ಕಲಬೆರಕೆ ಔಷಧಿಗಳ ಬಗ್ಗೆ ಗಮನಹರಿಸದೆ ಹೋದಲ್ಲಿ ಬಹಳಷ್ಟು ಜನ ಗಂಡಾಂತರಕ್ಕೆ ಸಿಕ್ಕಿಹಾಕಿಕೊಳ್ಳುವ ಪ್ರಸಂಗಗಳು ಇರುತ್ತವೆಂದು ಹೇಳಬಯಸುತ್ತೇನೆ.

ಇನ್ನು ನಮ್ಮಲ್ಲಿ ಡಾಕ್ಟರ್ಸ್‌ಗಳು ಬ್ಯಾನ್ಡ್ ಡ್ರಗ್ಸ್‌ನ್ನು ಉಪಯೋಗಿಸಬಾರದೆಂದು ನಿಯಮಾವಳಿ ಇರುತ್ತದೆ. ಆದರೂ ನಮ್ಮ ರಾಜ್ಯದಲ್ಲಿ ಇವುಗಳನ್ನು ಮಾರಾಟ ಮಾಡುತ್ತಿರುವುದು ಬಹಳ ಗಂಭೀರವಾದ ವಿಚಾರವಾಗಿರುತ್ತದೆ. ಅನಾಲಜಿನ್ ಸ್ಟೆರಾಯಿಡ್ಸ್, ಮೆಕ್ಸಫಾರ್ಮ್ ಇವುಗಳನ್ನು ಬೇರೆ ಬೇರೆ ದೇಶಗಳಲ್ಲಿ ಬ್ಯಾನ್ ಮಾಡಿರುವ ವಿಚಾರವಿದ್ದರೂ ಈ ಬ್ಯಾನ್ ಮಾಡಿರುವಂಥ ಔಷಧಿಗಳನ್ನು ತರ್ಡ್‌ವರ್ಲ್ಡ್ ಎಂದು ಪರಿಗಣಿಸಿರುವ ರಾಜ್ಯಗಳಿಗೆ ಕಳುಹಿಸಿಕೊಟ್ಟು ಅದರಿಂದ ನಮ್ಮ ಆರೋಗ್ಯದ ಬಗ್ಗೆ ಪೂರ್ಣಪ್ರಮಾಣದಲ್ಲಿ ಹಾನಿ ತಟ್ಟುವಂತೆಮಾಡಿದ್ದಾರೆ. ಇದರಬಗ್ಗೆಯೂ ಗಮನಹರಿಸಬೇಕು. ಈ ಬ್ಯಾನ್ಡ್ ಡ್ರಗ್ಸ್ ಪ್ರಯೋಗಿಕವಾಗಿ ಇರುವ ಔಷಧಿಗಳನ್ನು ಇವುಗಳನ್ನು ನಮ್ಮ ದೇಶಕ್ಕೆ ಏತಕ್ಕೆ ತರಬೇಕು? ಇವುಗಳನ್ನು ತರುವುದನ್ನೇ ಏತಕ್ಕೆ ನಿಲ್ಲಿಸಬಾರದು ಈ ನಿಟ್ಟಿನಲ್ಲಿ ಸರ್ಕಾರ ಏಕೆ ಯೋಚನೆ ಮಾಡಬಾರದು? ಇದರ ಬಗ್ಗೆ ಸರ್ಕಾರದವರು ಗಮನ ಹರಿಸಬೇಕು. ಇದು ಅತ್ಯಂತ ಗಂಭೀರವಾದ ವಿಚಾರವಾಗಿರುವುದರಿಂದ ಮಾನ್ಯ ಸಚಿವರು ಉತ್ತರವನ್ನು ಕೊಡುವ ಸಮಯದಲ್ಲಿ ಬ್ಯಾನ್ಡ್ ಡ್ರಗ್ಸ್ ಯಾವುದೇ ದೇಶದ್ದು ಇರಲಿ ಅದರ ಬಗ್ಗೆ ವರದಿಯನ್ನು ತರಿಸಿಕೊಂಡು ಮಾರ್ಕೆಟ್‌ನಿಂದ ಅಮೂಲಾಗ್ರವಾಗಿ ಉಚ್ಛಾಟನೆ ಮಾಡಲಿಕ್ಕೆ ದಯವಿಟ್ಟು ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸಮಾಜಲ್ಲಿ ಅತ್ಯಂತ ಪ್ರಮುಖವಾಗಿರತಕ್ಕಂಥ ಸಂಸ್ಥೆಗಳಲ್ಲಿ ಡ್ರಗ್ಸ್ ಅಡಿಕ್ಷನ್ ಜಾಸ್ತಿಯಾಗಿದೆ. ನಮ್ಮ ರಾಷ್ಟ್ರದ ಯುವಕ ಯುವತಿಯರು ಈ ಮಾದಕ ವಸ್ತುಗಳ ಸೇವನೆಗೆ ಬಲಿಯಾಗಿ ಸಾಮಾಜಿಕ ದುರಂತಕ್ಕೆ ಕಾರಣವಾಗಿದ್ದಾರೆ. ಮಾನ್ಯ ಅಧ್ಯಕ್ಷರೇ ಇದು ಸಾಮಾಜಿಕ ದುರಂತವಾಗಿರತಕ್ಕಂಥ ವಿಚಾರವಷ್ಟೇ ಅಲ್ಲ ಇದು ರಾಷ್ಟ್ರಕ್ಕೆ ಗಂಭೀರವಾದ ಸವಾಲಾಗಿರತಕ್ಕಂಥ ವಿಚಾರವಾಗಿದೆ ಎಂದು ಭಾವಿಸ

ಬೇಕಾಗಿದೆ. ಎಲ್‌ಎಸ್‌ಡಿ, ಬ್ರೌನ್ ಶುಗರ್, ಹೆರಾಯಿನ್ ಎಂದು ಏನು ಕರೆಯುತ್ತೇವೆ ಇಂಥ ಮಾದಕ ವಸ್ತುಗಳ ವಿಷ ವರ್ತುಲದಲ್ಲಿ ನಮ್ಮ ಯುವಕ ಯುವತಿಯರು ಸಿಕ್ಕಿಹಾಕಿಕೊಂಡಿರುತ್ತಾರೆ. ಇದರ ಬಗ್ಗೆ ಮಾನ್ಯ ಆರೋಗ್ಯ ಸಚಿವರ ನಿಲುವು ಏನು? ಆರೋಗ್ಯ ಇಲಾಖೆಯವರು ಇದರ ಬಗ್ಗೆ ಕೈಕೊಂಡ ಕ್ರಮಗಳೇನು? ಇದನ್ನು ಯಾವ ರೀತಿ ಕಂಡುಹಿಡಿಯಬೇಕೋ ಆ ರೀತಿಯಲ್ಲಿ ಕಂಡು ಹಿಡಿದಿದ್ದಾರೆಯೋ ಎನ್ನುವ ವಿಚಾರವನ್ನು ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಡ್ರಗ್ಸ್ ಅಡಿಕ್ಷನ್ ಬಗ್ಗೆಯೂ ಹೇಳಬೇಕು. ಈ ಮಾದಕವಸ್ತುಗಳು ಸರ್ವತೋಮುಖವಾಗಿ ತಮ್ಮ ಹಿರಿಮೆಯನ್ನು ಘನತೆಯನ್ನು ಕಾಯ್ದುಕೊಂಡು ಬರುತ್ತಿದೆ. ಇದನ್ನು ಮುರಿಯುವುದಕ್ಕೆ ತಮ್ಮ ಚಿಂತನೆಯ ಬಗ್ಗೆ ತಮ್ಮ ಕಾಳಜಿಯ ಬಗ್ಗೆ ಹೇಳಬೇಕು. ಇದು ತಮಗೆ ಗೊತ್ತಿದೆಯೋ ಗೊತ್ತಿಲ್ಲವೋ, ಯುವಕ ಯುವತಿಯರ ಸದುಪಯೋಗ ಈ ರಾಷ್ಟ್ರಕ್ಕೆ, ನಮ್ಮ ರಾಜ್ಯಕ್ಕೆ ಇದೆಯೋ ಇಲ್ಲವೋ ಎಂಬುದನ್ನು ಕೂಡ ಹೇಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಬಗ್ಗೆ ತಾವು ದಯಮಾಡಿ ಯೋಚನೆ ಮಾಡಬೇಕು. ತಾವು ಯಾವ ನಿಟ್ಟಿನಲ್ಲಿ ಯೋಚನೆ ಮಾಡಿದ್ದೀರಿ? ತಮ್ಮ ಕಾರ್ಯಕ್ರಮ ಏನು? ಯುವಕ ಯುವತಿಯರು ಈ ವಿಷ ವರ್ತುಲಕ್ಕೆ ಸಿಕ್ಕದೆ ಇರುವ ಹಾಗೆ ನೋಡಿಕೊಳ್ಳುವ ಗುರುತರವಾದ ಜವಾಬ್ದಾರಿ ತಮ್ಮ ಮೇಲಿದೆ. ಏತಕ್ಕೆ ಅವರು ಈ ಡ್ರಗ್ಸ್‌ಗೆ ಹೋಗುತ್ತಾರೆಂದರೆ ಆಲ್ಕೋಹಾಲ್‌ಗಿಂತ ಡ್ರಗ್ಸ್ ಅಗ್ಗವಾಗಿ ಸಿಗುತ್ತವೆ. ಇವತ್ತಿನ ದಿವಸ ನೀವು ಹೆಂಡ ಸಾರಾಯಿ ಮೇಲೂ ತೆರಿಗೆ ಹಾಕಿ 220 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದೀರಿ ಅಂದಾಗ ಯಾವುದನ್ನು ಬಿಟ್ಟಿದ್ದೀರಿ? ಆಲ್ಕೋಹಾಲ್‌ಗಿಂತ ಮ್ಯಾನ್‌ಡ್ರಗ್ಸ್ ಅಗ್ಗವಾಗಿ ಸಿಗುವುದರಿಂದ ಯುವಕರು ಅದಕ್ಕೆ ಅಡಿಕ್ಟ್ ಆಗುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ ಈ ತರಹ ಅಡಿಕ್ಟ್ ಆದವರನ್ನು ಗುರುತಿಸಿದ್ದೀರಾ? ಎಷ್ಟು ಜನರನ್ನು ಗುರುತಿಸಿದ್ದೀರಿ? ಆ ರೀತಿ ಗುರುತಿಸಿರತಕ್ಕ ಜನಗಳಿಗೆ ಸೂಕ್ತವಾದ ಚಿಕಿತ್ಸೆ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅದಕ್ಕೋಸ್ಕರ ಎಷ್ಟು ಕೇಂದ್ರಗಳನ್ನು ಸ್ಥಾಪಿಸಿದ್ದೀರಿ? ಇದಕ್ಕೋಸ್ಕರ ನಿಮ್ಮ ಇಲಾಖೆಯಲ್ಲಿ ಎಷ್ಟು ಜನ ತಜ್ಞರಿದ್ದಾರೆ? ಇವೆಲ್ಲವನ್ನು ಗಮನಿಸಿ ಉತ್ತರಿಸಬೇಕೆಂದು ಹೇಳುತ್ತೇನೆ. ಈ ರೀತಿ ಡ್ರಗ್ ಅಡಿಕ್ಟ್ ಆದವರಿಗೆ ರಾಜ್ಯದಲ್ಲಿ ಎರಡು ಕಡೆ ಚಿಕಿತ್ಸೆ ನೀಡುತ್ತಿದ್ದಾರೆ. ಒಂದು, ಸೆಂಟ್‌ಜಾನ್ಸ್ ಮೆಡಿಕಲ್‌ಕಾಲೇಜು ಮತ್ತೊಂದು ನಿಮ್ಹಾನ್ಸ್ ಸೆಂಟ್ ಜಾನ್ಸ್ ಖಾಸಗಿಯದು. ನಿಮ್ಹಾನ್ಸ್ ಸೆಂಟ್ರಲಿ ಸ್ಪಾನ್ಸರ್ಡ್. ಡ್ರಗ್ ಅಡಿಕ್ಟ್ ಆದವರಿಗೆ ಚಿಕಿತ್ಸೆನೀಡಲು ಸರ್ಕಾರದ ವತಿಯಿಂದ ಬೇರೆ ಕಡೆ ಏಕೆ ಮಾಡಿಲ್ಲ?

ಶ್ರೀ ಬಿ. ರಾಚಯ್ಯ.— ಡ್ರಗ್ ಅಡಿಕ್ಟ್ ಆದವರ ಬಗ್ಗೆ ಕ್ರಮ ಕೈಗೊಳ್ಳುವುದು ಗೃಹ ಇಲಾಖೆಗೆ ಬರುವುದರಿಂದ ನಾನು ಸುಮ್ಮನೆ ಕುಳಿತಿದ್ದೇನೆ. ಅದು ನನ್ನ ಇಲಾಖೆಗೆ ಬರುವುದಿಲ್ಲ.

ಶ್ರೀ ಪಟವಾಕ್ಕಿ ರತ್ನಾಕರ್.— ಅಪರಾಧಿಗಳನ್ನು ಪತ್ತೆ ಮಾಡತಕ್ಕದ್ದು ಮತ್ತು ಕಾನೂನು ಪ್ರಕಾರ ಕ್ರಮ ಕೈಗೊಳ್ಳತಕ್ಕದ್ದು ಗೃಹಸಚಿವರಿಗೆ ಸಂಬಂಧಪಟ್ಟದ್ದು. ಡ್ರಗ್ಸ್ ಅಡಿಕ್ಟ್ ಆದವರಿಗೆ ಗೃಹಸಚಿವರು ಏನು ಮಾಡುತ್ತಾರೆ? ಅವರಿಗೆ ಸೂಕ್ತ ಮಾನಸಿಕ ಚಿಕಿತ್ಸೆ ಅತ್ಯಂತ ಅಗತ್ಯ ಇರುವುದರಿಂದ ಆ ಚಿಕಿತ್ಸೆ ಮಾಡತಕ್ಕ ಜವಾಬ್ದಾರಿ ನಿಮಗೆ ಸೇರುತ್ತದೆ. ನೀವು ಗೃಹಸಚಿವರ ಮೇಲೆ ಹೊಣೆಗಾರಿಕೆ ಹಾಗೆ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಸೆಂಟ್ ಜಾನ್ಸ್ ಮತ್ತು ನಿಮ್ಹಾನ್ಸ್‌ನಲ್ಲಿರುವ ಹಾಗೆ ಸೆಂಟರ್‌ಗಳನ್ನು ಮಾಡಬೇಕಾಗುತ್ತದೆ, ಆ ಬಗ್ಗೆ ಏತಕ್ಕೆ ತಾವು ಯೋಚನೆ ಮಾಡುತ್ತಿಲ್ಲ? ಅಥವಾ ಯೋಚನೆ ಮಾಡಿದ್ದೀರಾ? ಇದನ್ನು ಗಂಭೀರವಾಗಿ ಪರಿಗಣಿಸಿದ್ದೀರಾ? ಈ ಬಗ್ಗೆ ತಮ್ಮ ಅಭಿಪ್ರಾಯ ಹೇಳಿದರೆ ಮುಂದಿನ ಕಾರ್ಯಕ್ರಮದ ಬಗ್ಗೆ ಯೋಚನೆ ಮಾಡಬಹುದೆಂದು ನನ್ನ ಭಾವನೆ. ಮಧ್ಯಪಾನದ ಚಟವನ್ನು ಬಿಡಿಸುವುದು ಕೂಡ ಇದರಲ್ಲಿ ಸೇರಿರುತ್ತದೆ. ಮಧ್ಯಪಾನಿಗಳು ಅಂದರೆ ಹೆಂಡ ಸಾರಾಯಿ ಚಟಕ್ಕೆ ಬಲಿಬಿದ್ದವರು ಕರ್ನಾಟಕ ರಾಜ್ಯದಲ್ಲಿ ಬಹಳ ಮಂದಿ ಇದ್ದಾರೆ. ಇದರಲ್ಲಿ ಹಿರಿಯರು ಕೂಡ ಒಂದು ಕಡೆ ಇದ್ದರೆ ಯುವಕರು ಮತ್ತು ನಿ ್ಮ ದೇಯಿಂದ ಹುಡುಗಿಯರು ಕೂಡ ಕುಡಿಯುವ ಚಟಕ್ಕೆ ಬಿದ್ದಿದ್ದಾರೆ. ಮಧ್ಯಪಾನ ವ್ಯಸನಿಗಳು ಎಂದು ಏನು ಕರೆಯುತ್ತೇವೆ ಅವರಿಗೆ ಸೂಕ್ತ ಚಿಕಿತ್ಸೆ ಕೊಟ್ಟು ಮಧ್ಯಪಾನದಿಂದ ವಿಮುಕ್ತರನ್ನಾಗಿ ಮಾಡಬಹುದು. ಅವರಿಗೆ ಮಾನಸಿಕ ಚಿಕಿತ್ಸೆ ಕೊಟ್ಟರೆ ಮದ್ಯಪಾನದ ಚಟದಿಂದ ಬಿಡಿಸಬಹುದು. ಆ ಒಂದು ವ್ಯವಸ್ಥೆ ಸೆಂಟ್ ಜಾನ್ಸ್ ಮತ್ತು ನಿಮ್ಹಾನ್ಸ್‌ನಲ್ಲಿ ಇದೆ. ರಾಜ್ಯದಲ್ಲಿರತಕ್ಕ ಸರ್ಕಾರಿ ಆಸ್ಪತ್ರೆಗಳಲ್ಲಿ ಏತಕ್ಕೆ ಈ ಯೋಜನೆಯನ್ನು ಜಾರಿಗೆ ತರಲಿಲ್ಲ? ಇದರ ಬಗ್ಗೆ ತಮಗೆ ಕಲ್ಪನೆ ಇಲ್ಲವೇ ಚಿಂತನೆ ಇಲ್ಲವೇ ?

ಶ್ರೀ ಬಿ. ರಾಚಯ್ಯ.—ಬಹುಶಃ ಹೆಣ್ಣು ಮಕ್ಕಳು ಕುಡಿಯುವುದು ಮಲೆನಾಡಿನ ಕಡೆ ಇರಬೇಕು, ನಮ್ಮ ಕಡೆ ಕಾಣಲಿಲ್ಲ. ನಮ್ಮ ಮನೆಗಳಲ್ಲಿ ಕೂಡ ಆ ಅಭ್ಯಾಸ ಇಲ್ಲ. ಅದಕ್ಕೋಸ್ಕರ ಆ ಬಗ್ಗೆ ಪೂರ್ಣ

ಆಸಕ್ತಿ ವಹಿಸಲಿಲ್ಲ. ಕಳೆದ ೪೦ ವರ್ಷಗಳಿಂದ ಪಾನನಿರೋಧವನ್ನು ಜಾರಿಗೆ ತರಬೇಕೆಂಬ ವಿಷಯದಲ್ಲಿ ನನ್ನ ಥಿಂಕಿಂಗ್ ಏನಿದೆ ಎಂಬುದು ಸಾರ್ವಜನಿಕರಿಗೆ ಗೊತ್ತಿದೆ.

ಶ್ರೀ ಪಟವಾಕ್ಕಿ ರತ್ನಾಕರ್.—ಅಧ್ಯಕ್ಷರೇ, ನಮ್ಮ ಸಚಿವರ ಚಿಂತನೆಯು ಕ್ರಮ ನನಗೆ ಅರ್ಥವಾಗಲಿಲ್ಲ. ನನಗೂ ಸಿಗರೇಟ್ ಸೇದುವ, ಕುಡಿಯುವ ಅಭ್ಯಾಸ ಇಲ್ಲ. ಆದರೆ ಪ್ರಪಂಚದಲ್ಲಿ ಇರುವವರೆಲ್ಲರೂ ಸರ್ವಗುಣ ಸಂಪನ್ನರು ಎಂದು ಹೇಳುವುದಕ್ಕಾಗುತ್ತದೆಯೇ ? ತಾವು ಮಂತ್ರಿಗಳು ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಇಂಥ ಸಾಮಾಜಿಕ ಸಮಸ್ಯೆಗಳನ್ನು, ಅದರ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಈ ನಿಟ್ಟಿನಲ್ಲಿ ಯೋಚನೆ ಮಾಡಿಲ್ಲ ಎಂದರೆ ನನಗೆ ಅರ್ಥವಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಯೋಚನೆ ಮಾಡಿದ್ದೇನೆ. ಯೋಚನೆ ಮಾಡಿಲ್ಲ ಎಂಬುದನ್ನು ನಾನು ಒಪ್ಪುವುದಿಲ್ಲ. ಯೋಚನೆ ಮಾಡಿದ್ದೇನೆ. ಬಹುಶಃ ಸಮಾಜದಲ್ಲಿ ಎಷ್ಟರಮಟ್ಟಿಗೆ ಫಲಕಾರಿಯಾಗಿದೆಯೋ ಗೊತ್ತಿಲ್ಲ. ಬಹಳ ವರ್ಷ ಇಂದ ಎಲ್ಲಾ ಚಿಂತನೆ ಮಾಡಿದ್ದೇವೆ.

ಶ್ರೀ ಪಟವಾಕ್ಕಿ ರತ್ನಾಕರ್.—ಅಲ್ಲ. ಚಿಂತನೆ ಮಾಡುವುದು ಬೇರೆ. ಚಿಂತನೆಯನ್ನು ಸಾಮಾಜೀಕರಣ ಮಾಡುವುದು ಬೇರೆ. ಅದನ್ನು ಸಾಮಾಜೀಕರಣ ಮಾಡಬೇಕು. ಚಿಂತನೆಯನ್ನು ಪೂರ್ತಿಗೊಳಿಸಬೇಕು. ಸಮಾಜದಲ್ಲಿ ಚಿಂತನೆ ಮಾಡಿ ಸುಮ್ಮನೆ ಇದ್ದರೆ ಪ್ರಯೋಜನವಾಗುವುದಿಲ್ಲ. ಮಂತ್ರದಿಂದ ಮಾವಿನಕಾಯಿ ಉದುರುವುದಿಲ್ಲ. ಆದ್ದರಿಂದ ತಮ್ಮ ಚಿಂತನೆಯನ್ನು ಯಾವಾಗ ಸಾಮಾಜೀಕರಣ ಮಾಡುತ್ತೀರೋ ಆಗ ಮಾತ್ರ ತಮ್ಮ ಚಿಂತನೆಗೆ ಬೆಲೆ ಬರುತ್ತದೆ. ಆದ್ದರಿಂದ ಈ ಪರಿಕಲ್ಪನೆಯನ್ನು ಹೊಂದಿದ್ದೇವೆ. ಈ ನಿಟ್ಟಿನಲ್ಲಿ ಯೋಚನೆ ಮಾಡದ್ದೇವೆ, ಕ್ರಮ ಜರುಗಿಸಿದ್ದೇವೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎಂದರೆ ಅದು ತೃಪ್ತಿ ಕೊಡತಕ್ಕ ವಿಚಾರ. ಈ ಚಿಕಿತ್ಸಾ ಕೇಂದ್ರಗಳನ್ನು ತಾವು ರಾಜ್ಯದಲ್ಲಿ ಪ್ರಾರಂಭ ಮಾಡುತ್ತೀರಿ ಈ ಬಗ್ಗೆ ಯೋಚನೆ ಮಾಡುತ್ತೀರಿ ಎಂದು ಆಶಿಸಿದ್ದೇನೆ, ಅಧ್ಯಕ್ಷರೇ, ಇನ್ನು ನರ್ಸಿಂಗ್‌ನಲ್ಲಿ ವಿಶೇಷವಾಗಿರತಕ್ಕ ಅಧ್ಯಯನ ಮಾಡತಕ್ಕದು...

ಉಪಾಧ್ಯಕ್ಷರು,—ರತ್ನಾಕರ್ ಅವರೇ, ತಾವು ಭಾಷಣ ಶುರುಮಾಡಿ ೫೦ ನಿಮಿಷ ಆಯಿತು, ಬೇಗ ಕನ್‌ಕ್ಲೂಡ್ ಮಾಡಿ.

ಶ್ರೀ ಪಟವಾಕ್ಕಿ ರತ್ನಾಕರ್.—೨೦೦೦ನೇ ವರ್ಷಕ್ಕೆ ಎಲ್ಲರಿಗೂ ಆರೋಗ್ಯ ಎಂಬ ಒಂದು ತಾತ್ವಿಕ ಅಭಿಪ್ರಾಯಕ್ಕೆ, ಸಾಮಾಜಿಕ ಅಭಿಪ್ರಾಯಕ್ಕೆ ನಾವೆಲ್ಲಾ ಬಂದಿದ್ದೇವೆ. ಆದರೆ ಮಾನ್ಯ ರಾಚಯ್ಯನವರ ಮಟ್ಟದಲ್ಲಿ ಯೋಚನೆ ಮಾಡಿದರೆ ಎರಡೂವರೆ ಸಾವಿರ ವರ್ಷಕ್ಕೆ ಏನಾದರೂ ಈ ಗುರಿಯನ್ನು ಮುಟ್ಟಬಹುದೇನೋ ! ಈ ರೀತಿ ಆಮೆ ನಡಿಗೆಯಲ್ಲಿ ಹೋದರೆ ೨೦೦೦ನೇ ಇಸವಿಗೆ ಕರ್ನಾಟಕ ರಾಜ್ಯದಲ್ಲಂತೂ ಎಲ್ಲರಿಗೂ ಆರೋಗ್ಯ ಕೊಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಕ್ರಾಂತಿಕಾರಕ ಹೆಜ್ಜೆಗಳನ್ನು ಇಡಬೇಕು. ಸಮಾಜದಲ್ಲಿ ತಾವು ಸಮಾಜ ವ್ಯಾಧಿಗಳಲ್ಲಿ ಸಮಾಜವಾದಿಗಳು ಆಗಬೇಕು. ಏಕೆಂದರೆ ರಾಚಯ್ಯನವರಿಗೆ ಸೋಷಲಿಸ್ಟ್ ಪರಂಪರೆ ಇದೆ. ಅದರಲ್ಲಿ ಅವರೂ ಕೆಲಸ ಮಾಡಿದ್ದಾರೆ, ಅದರ ಬಗ್ಗೆ ಚಿಂತನೆ ಇದೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮೊದಲು ಆರಿಸಿಬಂದಿದ್ದೇ ಪಿ. ಎಸ್. ಪಿ.ನಿಂದ,

ಶ್ರೀ ಪಟವಾಕ್ಕಿ ರತ್ನಾಕರ್.—ಆದ್ದರಿಂದಲೇ ಅವರಿಗೆ ಚುಚ್ಚಿ ಚುಚ್ಚಿ ಹೇಳುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆದರೆ ಜೆ. ಹೆಚ್. ಪಟೇಲರ ಪಿ. ಎಸ್. ಪಿ. ಗೂ ಇದಕ್ಕೂ ಸಂಬಂಧ ಇಲ್ಲ.

ಉಪಾಧ್ಯಕ್ಷರು.—ಮುಂದುವರೆಸಿ. ವಿಷಯಾಂತರ ಆಗುತ್ತದೆ.

ಶ್ರೀ ಪಟವಾಕ್ಕಿ ರತ್ನಾಕರ್.—ನರ್ಸಿಂಗ್ ವಿಷಯದಲ್ಲಿ ವಿಶೇಷವಾಗಿರತಕ್ಕ ಅಧ್ಯಯನವನ್ನು ಮಾಡಬೇಕಾಗುತ್ತದೆ. ಏಕೆಂದರೆ ದಾದಿಯರು ಒಂದು ರೀತಿಯಲ್ಲಿ ಸಾಮಾಜಿಕ ಭದ್ರತೆ ಇಲ್ಲದೆ ಸಾಮಾಜಿಕ ಶೋಷಣೆಗೊಳಗಾಗಿ ಮಾನಸಿಕವಾಗಿ ನರಳುತ್ತಿದ್ದಾರೆ. ಆ ಒಂದು ಹುದ್ದೆಗೆ ಗೌರವ ಕೊಡಬೇಕು. ಅದಕ್ಕೆ ಸಾಮಾಜಿಕವಾಗಿ ಭದ್ರತೆ ಕೊಡಬೇಕು. ಅವರಿಗೂ ಕೂಡ ಸಾಮಾಜಿಕ ಜವಾಬ್ದಾರಿ ಇದೆ. ಎಲ್ಲಾ ಕೆಲಸಗಳನ್ನೂ ಸೇವಾ ಮನೋಭಾವದಿಂದ ಮಾಡಿ ಎಂದು ಬರೀ ಭಾಷಣವನ್ನು ಹೊಡೆಯುತ್ತಾ ಇದ್ದರೆ ಸೇವಾ ಮನೋಭಾವ ಅವರಲ್ಲಿದ್ದರೂ ನಾವು ನಿರ್ಮಾಣ ಮಾಡಿರತಕ್ಕ ಸನ್ನಿವೇಶ, ಆಸ್ಪತ್ರೆ ವಾತಾವರಣ ಇದೆಲ್ಲಾ ನೋಡಿ ದಿಗ್ಭ್ರಮೆಯಿಂದ ಸೇವಾ

ಮನೋಭಾವವೂ ಹೋಗುತ್ತದೆ. ಕಠೋರವಾದ ಮನೋಭಾವವನ್ನು ತಾಳಬೇಕಾಗುತ್ತದೆ, ೨೦೦೦ನೇ ಇಸವಿ ಹೊತ್ತಿಗೆ ಅಮೇರಿಕಾದಲ್ಲಿ ಸುಮಾರು ೨ ಸಾವಿರಕ್ಕೂ ಮಿಕ್ಕು ನರ್ಸಿಂಗ್‌ನಲ್ಲಿ ಪಿ. ಎಚ್. ಡಿ. ಮಾಡತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ನರ್ಸಿಂಗ್‌ನಲ್ಲಿ ಪಿ. ಎಚ್. ಡಿ. ಮಾಡತಕ್ಕಂಥದ್ದು. ಅದರ ಬಗ್ಗೆ ಅಂಕಿ ಅಂಶಗಳು ಇಲ್ಲೇ ಇವೆ. ಕೊಡುತ್ತೇನೆ. ತೆಗೆದುಕೊಳ್ಳಿ.

ಉಪಾಧ್ಯಕ್ಷರು.—ತಮಗೆ ಇನ್ನೂ ಎಷ್ಟು ಸಮಯಬೇಕು.

ಶ್ರೀ ಪಟಮಕ್ಕಿ ರತ್ನಾಕರ್.—ಇನ್ನೂ ಅರ್ಧ ಗಂಟೆ ಬೇಕು. ೨೦೦೦ನೇ ಇಸವಿಯೊತ್ತಿಗೆ ಸುಮಾರು ೨೦೦೦ ಜನ ನರ್ಸ್‌ಗಳು ಪಿ. ಹೆಚ್. ಡಿ. ಯನ್ನು ಪಡೆಯಲಿದ್ದಾರೆ, ಹೊರರಾಷ್ಟ್ರದಲ್ಲಿ ಸುಮಾರು ೨೦ ವಿಶ್ವವಿದ್ಯಾನಿಲಯಗಳು ಈ ವ್ಯವಸ್ಥೆಯನ್ನು ಒದಗಿಸಿಕೊಟ್ಟಿವೆ. ಕರ್ನಾಟಕ ರಾಜ್ಯದಲ್ಲಾಗಲಿ, ಅಥವಾ ನಮ್ಮ ರಾಷ್ಟ್ರದಲ್ಲಾಗಲಿ ನರ್ಸಿಂಗ್‌ನಲ್ಲಿ ಪಿ. ಎಚ್. ಡಿ. ಯನ್ನು ಒದಗಿಸಲು ಯಾವ ವಿಶ್ವವಿದ್ಯಾನಿಲಯವೂ ಮುಂದೆ ಬಂದಿಲ್ಲ. ಕರ್ನಾಟಕದಲ್ಲಿ ಇಂತಹ ಪದವಿಯನ್ನು ಪಡೆಯಲು ಒಂದೇ ಕಾಲೇಜು ಇರುವುದು. ಈ ಬಗ್ಗೆ ನರ್ಸಿಂಗ್ ಕ್ಷೇತ್ರದಲ್ಲಿ ಸಂಶೋಧನೆ ಮಾಡತಕ್ಕದ್ದು. ಆ ನಿಟ್ಟಿನಲ್ಲಿ ರಾಜ್ಯದಲ್ಲಿ ನರ್ಸಿಂಗ್ ವ್ಯವಸ್ಥೆಯನ್ನು ಮಾಡುವಂತಹದ್ದು ಅತಿ ಅವಶ್ಯಕ ಎಂಬುದಾಗಿ ಬರೆದಿದ್ದಾರೆ, ಅದರ ವಿವರಗಳನ್ನು ತಮ್ಮ ಮೂಲಕ ಅವರಿಗೆ ಕಳುಹಿಸಿಕೊಡುತ್ತಿದ್ದೇನೆ. ಅವರು ಅದನ್ನು ತಿಳಿದುಕೊಳ್ಳಲಿ. ಇದರ ಬಗ್ಗೆ ಯಾವ ರೀತಿ ಮಾಡಬಹುದು ? ಆ ನಿಟ್ಟಿನಲ್ಲಿ ಯಾವ ರೀತಿಯಲ್ಲಿ ಯೋಜನೆಗಳನ್ನು ಮಾಡಬಹುದು ? ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದೆಂಬುದರ ಬಗ್ಗೆ ತಿಳಿಸಿದ್ದಾರೆ. ಈ ರೀತಿ ಮಾಡಿದ್ದೇ ಆದರೆ ನರ್ಸಿಂಗ್ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತರಬಹುದು ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಂತರ ನರ್ಸಿಂಗ್ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಕೇಂದ್ರ ಯೋಜನಾ ಹಾಗೂ ಆರೋಗ್ಯ ರಾಜ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಕುಮಾರ್ ಅವರು ಒಂದು ಸಲಹೆಯನ್ನು ಕೇಂದ್ರ ಸರ್ಕಾರದ ಮುಂದಿಟ್ಟಿದ್ದಾರೆ ಎನ್ನತಕ್ಕಂತಹ ವಿಚಾರ ಕೂಡ ಇದರಲ್ಲಿದೆ, ಅದನ್ನು ನಮ್ಮ ಆರೋಗ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದನ್ನೇನು ನಾನು ಬರೆದುಕೊಂಡು ಬಂದಿಲ್ಲ. ಆ ಬಗ್ಗೆ ಒಂದು ಆರ್ಟಿಕಲ್ಲೇ ಬಂದಿದೆ, ಆದ್ದರಿಂದ ನಾವು ಹೇಳತಕ್ಕಂತಹ ವಿಚಾರಗಳು ಕೆಲವರು ಹೊಸದಾಗಿ ಕಾಣುತ್ತವೆ, ನಾನು ಯಾವುದೇ ಒಂದು ವಿಷಯದಲ್ಲಾಗಲಿ ಮಾತನಾಡಬೇಕಾದರ ಅದರ ಬಗ್ಗೆ ಅಧ್ಯಯನ ಮಾಡಿಕೊಂಡು ಬಂದೇ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಅಧ್ಯಯನ ಮಾಡದೆ ವಿಚಾರವನ್ನು ಪ್ರಸ್ತಾಪ ಮಾಡುವುದಿಲ್ಲ. ಏನೋ ಹೊಸದಾಗಿ ಹೇಳುತ್ತಿದ್ದಾರಲ್ಲಾ, ಇದನ್ನು ಎಲ್ಲಿಂದ ತೆಗೆದುಕೊಂಡು ಬಂದರು ಎಂಬುದು ಅವರಿಗೆ ಅನುಮಾನವಾಗಿರಬಹುದು, ಆದ್ದರಿಂದ ಈ ಕ್ಷೇತ್ರದಲ್ಲಿ ತಾವು ನಮ್ಮ ರಾಷ್ಟ್ರ ಮಟ್ಟದಲ್ಲಿ ಯಾವುದಾದರು ವೈದ್ಯಕೀಯ ಸಭೆಗಳಲ್ಲಿ ಪಾಲುಗೊಂಡಂತಹ ಸಂದರ್ಭದಲ್ಲಿ ಈ ವಿಚಾರಗಳನ್ನು ಪ್ರಸ್ತಾಪ ಮಾಡಿ ಆ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡಿ, ಇರತಕ್ಕ ನರ್ಸಿಂಗ್ ಪದ್ಧತಿಯನ್ನು ಇನ್ನೂ ಸುಧಾರಣೆ ಮಾಡಿ ಎಂಬುದಾಗಿ ಸಲಹೆ ಕೊಡುವುದಕ್ಕೆ ಬಯಸುತ್ತೇನೆ.

೨-೩೦ ಪಿ. ಎಂ.

ಇನ್ನು ಜನಸಂಖ್ಯಾ ಸ್ಫೋಟವನ್ನು ತಡೆಯುವುದರಲ್ಲಿ ನಾವು ಎಷ್ಟು ಸಫಲರಾಗಿದ್ದೇವೆ ? ಎಷ್ಟು ವಿಫಲರಾಗಿದ್ದೇವೆ ? ಸಾಫಲ್ಯಕ್ಕೆ ಏನು ಕಾರಣಗಳು ? ವೈಫಲ್ಯಕ್ಕೆ ಏನು ಕಾರಣಗಳು ಎನ್ನುವ ಬಗ್ಗೆ ಸ್ವಲ್ಪ ಯೋಚನೆ ಮಾಡಿದರೆ ಈ ರಾಷ್ಟ್ರದ ಅತ್ಯಂತ ಗಂಭೀರ ಸಮಸ್ಯೆಯನ್ನು ನಾವು ಬಗೆಹರಿಸುವುದರಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬಹುದೆಂದು ಹೇಳುತ್ತೇನೆ. ಒಂದು ಅಂಕಿ ಅಂಶದ ಪ್ರಕಾರ ನಮ್ಮ ದೇಶದಲ್ಲಿ ವರ್ಷಕ್ಕೆ ೧ ಕೋಟಿ ೪೫ ಲಕ್ಷ ಮಕ್ಕಳುಗಳು ಹುಟ್ಟುತ್ತಿದ್ದು ಇವುಗಳಲ್ಲಿ ಕನಿಷ್ಟ ೧೫ ಲಕ್ಷ ಮಕ್ಕಳು ಬೇರೆ ಬೇರೆ ಕಾರಣಗಳಿಂದ ತೀರಿಕೊಂಡು ಸುಮಾರು ೧.೨೫ ಕೋಟಿ ಮಕ್ಕಳು ರಾಷ್ಟ್ರದ ಸಂಖ್ಯೆಗೆ ಸೇರುತ್ತವೆ. ಇದು ಈ ರಾಷ್ಟ್ರದ ಒಂದು ಜ್ವಲಂತ ಸಮಸ್ಯೆ. ಈ ನಿಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರವೂ ಕೂಡಾ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಈಗ ಹಾಕಿರತಕ್ಕ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ವಿಫಲತೆ ಕಾಣುವುದಕ್ಕೆ ಕಾರಣವೆಂದರೆ, ನಮ್ಮ ಜನರಿಗೆ ಕುಟುಂಬ ಯೋಜನೆ ಬಗ್ಗೆ ಸ್ಪಷ್ಟವಾಗಿರತಕ್ಕ ಕಲ್ಪನೆಯನ್ನು ಇದುವರೆ ಗೂ ಕೊಡದೇ ಇರ

ತಕ್ಕದ್ದು. ನಮ್ಮಲ್ಲಿ ಮಾಡುವುದೆಂದರೆ, ಮೂರು-ನಾಲ್ಕು ಮಕ್ಕಳಿರುವವರ ಪಟ್ಟಿ ಮಾಡಿ ಆ ಪಟ್ಟಿ ಪ್ರಕಾರ ಅವರ ಮನವನ್ನು ಒಲಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆ ನಂತರ ಆಪರೇಷನ್ ಮಾಡಿಸಿ ವಾಪಸ್ ಕಳುಹಿಸುತ್ತಾರೆ. ಇವತ್ತು ನಮ್ಮ ಹಳ್ಳಿಗಳ ಕಡೆ ನಮ್ಮ ಡಾಕ್ಟರುಗಳಿಗೆ ಈ ಬಗ್ಗೆ ಸರಿಯಾದ ತರಬೇತಿ ಕೊಟ್ಟಿರುವುದಿಲ್ಲ. ಮತ್ತೆ ಹೆಚ್ಚು ಒತ್ತಡಕ್ಕೆ ಸಿಲುಕಿದಾಗ ಸೂಕ್ತವಾಗಿರತಕ್ಕ ಚಿಕಿತ್ಸೆ ಕೊಡತಕ್ಕ ಸಂದರ್ಭಗಳು ಕಡಿಮೆ ಇವೆ. ಇವತ್ತು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣ ದಲ್ಲಿ ಪ್ರಚಾರಕ್ಕಿಂತಾ ಅಪಪ್ರಚಾರಗಳೇ ಹೆಚ್ಚು. ಇವತ್ತು ಲೆಪ್ರೋಸ್ಕೋಪಿಕ್ ಆಪರೇಷನ್ ಏನಿದೆ ಅದಕ್ಕೆ ಹಳ್ಳಿಗಳ ಕಡೆ ಕರೆಂಟ್ ಆಪರೇಷನ್ ಎಂದು ಕರೆಯುತ್ತಾರೆ ಈ ಕರೆಂಟ್ ಆಪರೇಷನ್ ಮಾಡಿಸಿಕೊಂಡರೆ ದೈಹಿಕವಾಗಿ, ಮಾನಸಿಕವಾಗಿ ಕಷ್ಟವಾಗುತ್ತದೆ ಹಾಗೂ ಬೇರೆ ಬೇರೆ ರೋಗಗಳು ಬರುತ್ತದೆಯಾದ್ದರಿಂದ ಈ ಶಸ್ತ್ರ ಚಿಕಿತ್ಸೆಗೆ ಹೋಗಬಾರದು ಎನ್ನುವ ಭಾವನೆ ಗ್ರಾಮೀಣ ಪ್ರದೇಶ ದಲ್ಲಿದೆ. ಇದನ್ನು ತಡೆಗಟ್ಟಲಿಕ್ಕೆ, ಅವರಿಗೆ ಸರಿಯಾದ ತಿಳುವಳಿಕೆ ಕೊಡತಕ್ಕದರ ಬಗ್ಗೆ ಗ್ರಾಮೀಣ ಮುಂಖಡ ತರಬೇತಿ ಶಿಬಿರ ಎಂದು ಏನು ಮಾಡುತ್ತೇವೆ. ಆಗ ಆ ಶಿಬಿರದಲ್ಲಿ ಡಾಕ್ಟರುಗಳು ಕೂಡಾ ಈ ವಿಚಾರದ ಬಗ್ಗೆ ಹೇಳುವುದಕ್ಕೆ ಒಲವನ್ನು ತೋರಿಸುವುದಿಲ್ಲ. ಈ ಬಗ್ಗೆ ಅವರಲ್ಲೂ ತಿಳುವಳಿಕೆ ಇರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರ ಗಮನಹರಿಸಬೇಕಾಗಿದೆ. ಅಧ್ಯಕ್ಷರೇ, ಇನ್ನೊಂದು ವಿಚಾರ ಹೇಳುತ್ತೇನೆ. ಇವತ್ತು ಒಂದೆರಡು ಮಕ್ಕಳಾದ ಮೇಲೆ ಕುಟುಂಬ ಯೋಜನೆ ಮಾಡಿಸಿ ಕೊಂಡಿದ್ದು ಆ ನಂತರ ಅವರು ಮಕ್ಕಳನ್ನು ಕಳೆದುಕೊಂಡಿದ್ದರೆ ಮತ್ತು ಮಕ್ಕಳು ಆಗುವ ಹಾಗೆ ಶಸ್ತ್ರಕ್ರಿಯೆ ಮಾಡಲು ಮರು ಜೋಡಣಾ ಕೇಂದ್ರಗಳು ಏನಿವೆ ಅವುಗಳನ್ನು ಜಿಲ್ಲಾಮಟ್ಟದಲ್ಲಿ ಇವತ್ತು ಪ್ರಾರಂಭ ಮಾಡಿ ಇವುಗಳ ಬಗ್ಗೆ ಆ ಜನರಿಗೆ ತಿಳುವಳಿಕೆ ಬರುವಂತೆ ಅವುಗಳ ಬಗ್ಗೆ ತಿಳಿಹೇಳಬೇಕಾಗು ತ್ತದೆ. ರೀಕ್ಯಾನಲೈಸೇಷನ್ ಕೂಡಾ ಮಾಡತಕ್ಕ ಸಂದರ್ಭ ಕೂಡಾ ಉಂಟು ಎನ್ನುವುದು ಜನರಿಗೆ ಗೊತ್ತಾಗಬೇಕು. ಈ ಬಗ್ಗೆ ಜನರಲ್ಲಿ ಸ್ಪಷ್ಟ ತಿಳುವಳಿಕೆ ಇಲ್ಲ. ಮತ್ತೆ ಮಕ್ಕಳು ಬೇಕೆಂದಾಗ ಈ ಸೆಂಟರ್‌ಗಳ ಮೂಲಕ ಸರ್ಕಾರ ಸಹಾಯ ಮಾಡುತ್ತದೆ ಎನ್ನುವ ಭಾವನೆ ಜನರಲ್ಲಿ ಬಂದರೆ ಆಗ ಕುಟುಂಬ ಯೋಜನೆ ಬಗ್ಗೆಯೂ ಕೂಡ ಜನರಲ್ಲಿ ಮನಸ್ಸು ಬರುತ್ತದೆಂದು ಹೇಳುತ್ತೇನೆ. ಇವತ್ತು ಯಾವುದೋ ಒಬ್ಬ ಬಡವನಿಗೆ ಹೆಣ್ಣು ಅಥವಾ ಗಂಡುಮಗುವಿಗಾಗಲೀ ಖಾಯಿಲೆ ಹೆಚ್ಚಾದಾಗ ಆ ಮಗುವನ್ನು ಜಿಲ್ಲಾ ಮಟ್ಟದ ಆಸ್ಪತ್ರೆಗೆ ಅಥವಾ ಖಾಸಗಿ ನರ್ಸಿಂಗ್ ಹೋಂಗಾಗಲೀ ಸೇರಿಸಬೇಕಾದ ಪ್ರಸಂಗ ಬರುತ್ತದೆ. ಹಾಗೆ ಆತ ಜಿಲ್ಲಾ ಮಟ್ಟದ ಆಸ್ಪತ್ರೆ ಅಥವಾ ನರ್ಸಿಂಗ್ ಹೋಂಗೆ ಬಂದಾಗ ಆತನ ಹತ್ತಿರ ಹಣ ಇರುವುದಿಲ್ಲ ಇಂತಹ ಸಂದರ್ಭದಲ್ಲಿ ತಾಲ್ಲೂಕು ಮಟ್ಟದಲ್ಲಿ ನಿಧಿಯನ್ನು ತಹಶೀಲ್ದಾರರ ಕಚೇರಿಯಲ್ಲಿ ಸ್ಥಾಪಿಸಿ ಅದರಲ್ಲಿ ಕನಿಷ್ಟ ಪಕ್ಷ ೫೦ ಸಾವಿರ ರೂಪಾಯಿಗಳನ್ನು ಇಡುವುದು ಸೂಕ್ತ. ಯಾವ ಬಡವನ ಆದಾಯ ವರ್ಷಕ್ಕೆ ೪,೮೦೦ ರೂ. ಒಳಗೆ ಇರುತ್ತದೆ ಅಂತಹ ಬಡವನ ಮಗುವನ್ನು ಈ ನಿಧಿಯ ಸಹಾಯದಿಂದ ಉಳಿಸುವುದಕ್ಕೆ ಅನುಕೂಲವಾಗುತ್ತದೆ. ಈತ ಜಿಲ್ಲಾ ಮಟ್ಟದ ಆಸ್ಪತ್ರೆ ಅಥವಾ ನರ್ಸಿಂಗ್ ಹೋಂಗೆ ಹೋಗಬೇಕಾದ ಸಂದರ್ಭ ಬಂದಾಗ ಆ ಹಣವನ್ನು ತಹಶೀಲ್ದಾರರ ಮೂಲಕ ಆತನಿಗೆ ಕೊಡುವ ವ್ಯವಸ್ಥೆ ಮಾಡಬೇಕು ಇಂತಹ ಕಾರ್ಯಕ್ರಮಗಳನ್ನು ಹಾಕಿದರೆ ಜನರಿಗೂ ಕೂಡ ನಮ್ಮ ಮೇಲೆ ನಂಬಿಕೆ ಬರುತ್ತದೆ. ಅವರಿಗೆ ಇದರಿಂದ ಸರ್ಕಾರದ ಯೋಜನೆಗಳ ಮೇಲೆ ನಂಬಿಕೆ ಬರುತ್ತದೆ. ಹೀಗೆ ನಂಬಿಕೆ ಬಂದಾಗ ನಮ್ಮ ಪ್ರಗತಿಪರ ಕಾರ್ಯಕ್ರಮ ಗಳನ್ನು ಸುಲಭವಾಗಿ ನಡೆಸಿಕೊಂಡು ಹೋಗಬಹುದು ಎಂದು ನನ್ನ ಅಭಿಪ್ರಾಯ. ಇನ್ನು ಕರ್ನಾಟಕ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣದ ಬಗ್ಗೆ ನಾನು ಸ್ವಲ್ಪ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿ ಸುಮಾರು ೧೫ ಖಾಸಗಿ ಮೆಡಿಕಲ್ ಕಾಲೇಜುಗಳು ೪ ಸರ್ಕಾರಿ ಮೆಡಿಕಲ್ ಕಾಲೇಜುಗಳು ಸ್ಥಾಪನೆ ಯಾಗಿವೆ. ಮ್ಯಾನೇಜ್‌ಮೆಂಟ್‌ನವರು ನಮಗೆ ಕಾಲೇಜು ಬೇಕೆಂದು ಕೇಳುತ್ತಾರೆ. ರಾಜಕೀಯದ ಒತ್ತಡಕ್ಕೆ ಒಳಗಾಗಿ ಸರ್ಕಾರ ಕಾಲೇಜುಗಳನ್ನು ಮಂಜೂರು ಮಾಡುತ್ತದೆ. ಕಾಲೇಜನ್ನು ಮಂಜೂರು ಮಾಡಿಯಾಯಿತು, ಒಂದು ವೈದ್ಯಕೀಯ ಕಾಲೇಜು ಸುಸಜ್ಜಿತವಾದ ವೈದ್ಯಕೀಯ ಶಿಕ್ಷಣವನ್ನು ಕೊಡಲಿಕ್ಕೆ ಬೇಕಾಗಿರತಕ್ಕ ಸಿಬ್ಬಂದಿ, ಉಪಕರಣಗಳು ಹಾಗೂ ಕೊಠಡಿಗಳು ಇವುಗಳೆಲ್ಲಾ ಇವೆಯೋ ಎಂದು ನೋಡಿ ಪ್ರಾಯಶಃ ಕಾಲೇಜುಗಳನ್ನು ಮಂಜೂರು ಮಾಡುವುದಿಲ್ಲ. ಕರ್ನಾಟಕ ರಾಜ್ಯದಲ್ಲಿನತಕ್ಕ ಹೆಚ್ಚು ಮೆಡಿಕಲ್ ಕಾಲೇಜುಗಳಲ್ಲಿ ಇವುಗಳು ಇಲ್ಲವೆಂದು ನಾನು ಕೇಳಿದ್ದೇನೆ. ಅಂದರೆ ನಾವು ಜಾತಿ ಗೊಂದು, ಧರ್ಮಕ್ಕೊಂದು ಊರಿಗೊಂದು ಈ ತರಹ ಮೆಡಿಕಲ್ ಕಾಲೇಜುಗಳನ್ನು ಹಂಚುತ್ತಾ ಹೋದರೆ ಅದರಿಂದ ಒಳ್ಳೆಯದನ್ನು ನಿರೀಕ್ಷೆ ಮಾಡುವುದಕ್ಕಿಂತ ಇದು ನಮ್ಮ ಸಮಾಜದ ಮೇಲೆ

ವೈದ್ಯಕೀಯ ಶಿಕ್ಷಣದ ಮೇಲೆ ಕೆಟ್ಟ ಪರಿಣಾಮವನ್ನು ಬೀರತಕ್ಕ ವಿಪರ್ಯಾಸವಾಗಿದೆಯೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮ್ಯಾನೇಜ್‌ಮೆಂಟ್‌ನವರು ಹಾಗೂ ಸರ್ಕಾರದವರು ನಡೆಸತಕ್ಕ ಮೆಡಿಕಲ್ ಕಾಲೇಜುಗಳ ವಿದ್ಯಾರ್ಥಿಗಳಿಗೆ ಯೂನಿವರ್ಸಿಟಿಯವರು ಪರೀಕ್ಷೆಗಳನ್ನು ನಡೆಸುತ್ತಾರೆ. ಅವರ ಜವಾಬ್ದಾರಿ ಒಂದು ಕಡೆಯಾದರೆ ಐಎಂಸಿ ಯವರು ರೆಕಗ್ನೈಸ್ ಇಲ್ಲಿ ಬಂದು ನೋಡಿ ಯಾವ ಕಾಲೇಜು ನಿಯಮಾವಳಿಯ ಚೌಕಟ್ಟಿನಲ್ಲಿದೆ ಅಂತಹ ಕಾಲೇಜುಗಳಿಗೆ ರೆಕಗ್ನಿಷನ್ ಕೊಡುತ್ತಾರೆ ಯಾವ ಮೆಡಿಕಲ್ ಕಾಲೇಜುಗಳು ನಿಯಮಾವಳಿಯಲ್ಲಿ ಬರುವುದಿಲ್ಲವೋ ಅಂತಹ ಕಾಲೇಜುಗಳಿಗೆ ಮಾನ್ಯತೆ ಸಿಗುವುದಿಲ್ಲ. ಮೊನ್ನೆ ತಾನೇ ಕೇಂದ್ರದ ಆರೋಗ್ಯ ಸಚಿವರು ಕರ್ನಾಟಕ ರಾಜ್ಯದ ೮ ಮೆಡಿಕಲ್ ಕಾಲೇಜುಗಳಿಗೆ ಮಾನ್ಯತೆ ಸಿಕ್ಕಿಲ್ಲವೆಂದು ಹೇಳಿದ್ದಾರೆ. ಇನ್ನೊಂದು ಮಾತನ್ನು ಹೇಳಿದ್ದಾರೆ, ''ನಾಯಿ ಕೊಡೆಗಳಂತೆ ಹುಟ್ಟಿಕೊಳ್ಳುತ್ತಿರುವ ಮೆಡಿಕಲ್ ಕಾಲೇಜುಗಳ ಬೆಳವಣಿಗೆಯನ್ನು ತಡೆಹಿಡಿಯಲಿಕ್ಕೆ ಸರ್ಕಾರ ೧೯೫೬ನೇ ಇಸವಿಯ ವಿಧೇಯಕಕ್ಕೆ ತಿದ್ದುಪಡಿಯನ್ನು ತರಲಿಕ್ಕೆ ನಿರ್ಧರಿಸಿದ್ದೇವೆ'' ಎಂದು ಸಹ ಹೇಳಿದ್ದಾರೆ. ಇವರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಿದರೆ ವೈದ್ಯಕೀಯ ಶಿಕ್ಷಣದ ಮಹತ್ತರವಾಗಬಹುದೆಂದು ನನ್ನ ಭಾವನೆ. ವೈದ್ಯಕೀಯ ಕಾಲೇಜುಗಳನ್ನು ನಡೆಸುತ್ತಿರುವವರು ಸಲಕರಣೆ, ಸಿಬ್ಬಂದಿ, ಆಸ್ಪತ್ರೆ, ಹಾಸಿಗೆ ಹಾಗೂ ಶಿಕ್ಷಕರು ಇದಾವುದರ ಬಗ್ಗೆಯೂ ಅವರು ಗಮನಹರಿಸಿಲ್ಲ. ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿಯೇ ಶಿಕ್ಷಕರ ಕೊರತೆ ಅಪಾರವಾಗಿದೆ ಎನ್ನುವುದನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಖಾಸಗಿ ಕಾಲೇಜುಗಳವರದು ಅವರದೇ ಒಂದು ರೀತಿ, ಅವರದೇ ಆದ ಒಂದು ರೀತಿಯಲ್ಲಿ ಮೆಡಿಕಲ್ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಐಎಂಸಿ ಅವರ ರೆಕಗ್ನಿಷನ್ ಇಲ್ಲದೇ ಇರತಕ್ಕ ೮ ಖಾಸಗಿ ಮೆಡಿಕಲ್ ಕಾಲೇಜುಗಳು ನಮ್ಮ ರಾಜ್ಯದಲ್ಲಿವೆ. ನಾವು ಇದರ ಬಗ್ಗೆ ಅತ್ಯಂತ ಗಂಭೀರವಾಗಿ ಯೋಚನೆ ಮಾಡತಕ್ಕ ವಿಚಾರವಾಗಿದೆ. ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಸುಸಜ್ಜಿತವಾದ ಆಸ್ಪತ್ರೆಯನ್ನು ಒದಗಿಸತಕ್ಕದ್ದು ಬಹಳ ಮುಖ್ಯ. ಅದನ್ನು ನಮ್ಮ ರಾಜ್ಯ ಸರ್ಕಾರದವರು ತಮ್ಮ ನಿಯಮಾವಳಿಯಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ ಮೆಡಿಕಲ್ ಕಾಲೇಜುಗಳಿಗೆ ಸರಿಯಾದ ಆಸ್ಪತ್ರೆ ಸೌಲಭ್ಯ ಇಲ್ಲದಿದ್ದರೆ, ಶಿಕ್ಷಕರ ಕೊರತೆ ಇದ್ದರೆ, ಸಿಬ್ಬಂದಿ ಕೊರತೆ ಇದ್ದರೆ, ಉಪಕರಣಗಳ ಕೊರತೆ ಇದ್ದರೆ ಸರಿಯಾದ ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಇದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಆರೋಗ್ಯ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆಂದು ಕಾಣುತ್ತದೆ. ಹೇಳಿಕೆಯಲ್ಲಿ ಏನು ಹೇಳಿದ್ದಾರೆಂದರೆ ಮೆಡಿಕಲ್ ಕಾಲೇಜುಗಳಿಗೆ ಇರುವ ನಿಯಮಾವಳಿಗಳಿಗೆ ಮೀರಿ ಹೆಚ್ಚಿನ ಸೀಟುಗಳನ್ನು ಕೊಟ್ಟಿದ್ದಾರೆ. ೧೯೮೭-೮೮ನೇ ಸಾಲಿನಲ್ಲಿ ೨೩೮ ಹೆಚ್ಚು ಸೀಟುಗಳನ್ನು ಭರ್ತಿ ಮಾಡಿದ್ದಾರೆ. ನಿನ್ನೆ ಈ ಬಗ್ಗೆ ಶಿಕ್ಷಣ ಸಚಿವರನ್ನು ಕೇಳಿದಾಗ ಅವರು ಆರೋಗ್ಯ ಸಚಿವರನ್ನು ಕೇಳಿಯೆಂದು ಹೇಳಿದರು.

೧೯೮೬-೮೭ ರಲ್ಲಿ ಕರ್ನಾಟಕದಲ್ಲಿ ಒಟ್ಟು ೨೩೮ ಹೆಚ್ಚುವರಿ ವಿದ್ಯಾರ್ಥಿಗಳು ಆಮೇಲೆ ೧೯೮೭-೮೮ ರಲ್ಲಿ ೧೫೫೫ ಹೆಚ್ಚುವರಿ ವಿದ್ಯಾರ್ಥಿಗಳು. ಯಾವ ಪುರುಷಾರ್ಥಕ್ಕೆ ಈ ಹೆಚ್ಚುವರಿ ವಿದ್ಯಾರ್ಥಿಗಳನ್ನು ತಾವು ಸೇರಿಸಿಕೊಂಡಿದ್ದೀರಿ ? ತಾವು ಸಾಧಿಸಿರತಕ್ಕಂಥ ಪುರುಷಾರ್ಥವಾದರೂ ಏನು ? ಇದರ ಬಗ್ಗೆ ಯೋಚನೆ ಮಾಡಬೇಕು. ಇದರಿಂದ ಏನಾಗಿದೆ ಎಂದರೆ ಸರ್ಕಾರ ಹಾಕಿರತಕ್ಕಂಥ ಏನು ಮಿತಿ ಇದೆ. ಈ ಗಡುವನ್ನು ದಾಟಿ ಮ್ಯಾನೇಜ್‌ಮೆಂಟ್‌ನವರು ಬೇಕಾದ ಹಾಗೆ ಬೇಕಾಬಿಟ್ಟಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಶುಲ್ಕ ವಸೂಲು ಮಾಡಿಕೊಳ್ಳುತ್ತಿದ್ದಾರೆ. ಖಂಡಿತವಾಗಿಯೂ ಈ ಶಿಕ್ಷಣವೆನ್ನುವುದು ಒಂದು ಆಕರ್ಷಕ ದಂಧೆ ಎನ್ನುವ ರೀತಿಯಲ್ಲಿ ಮಾಡುವುದಕ್ಕೆ ನೀವು ಪರವಾನಗಿಯನ್ನು ಮತ್ತು ಆಶೀರ್ವಾದವನ್ನು ಕೊಟ್ಟ ಹಾಗೆ ಆಯಿತೇ ಹೊರತು ಇದಕ್ಕಿಂತ ಹೆಚ್ಚಿನ ಸಾಧನೆಯನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲವೆಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಯಾವ ಕಾರಣಕ್ಕೋಸ್ಕರ, ಯಾವ ಪುರುಷಾರ್ಥಕ್ಕೋಸ್ಕರ ಇದನ್ನು ಮಾಡಿದಿರಿ ಎಂಬುದನ್ನು ದಯಮಾಡಿ ತಿಳಿಸಬೇಕು ಎಂಬ ವಿಚಾರವನ್ನು ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು.—ಬೇಗ ಮುಗಿಸಿಬಿಡಿ.

ಶ್ರೀ ಪಟಮಕ್ಕಿ ರತ್ನಾಕರ್.—ಆಮೇಲೆ ಅಧ್ಯಕ್ಷರೆ, ಮೊನ್ನೆ ಶಾಸನಸಭೆಯಲ್ಲಿ ಒಂದು ಗಂಭೀರವಾದಂಥ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು ಅದು ಈ ಭ್ರೂಣವನ್ನು ಅದು ಹೆಣ್ಣು ಭ್ರೂಣವೋ ಅಥವಾ ಗಂಡು ಭ್ರೂಣವೋ ಎಂದು ಪತ್ತೆ ಮಾಡಿ ನಂತರ ಹೆಣ್ಣಾದರೆ ಅದನ್ನು

ನಾಶ ಮಾಡತಕ್ಕಂಥ ಒಂದು ವೈಜ್ಞಾನಿಕ ತಂತ್ರಜ್ಞಾನ ನಮ್ಮ ರಾಜ್ಯದಲ್ಲಿ ಇಂತಹ ಎರಡು ಖಾಸಗಿ ಸಂಸ್ಥೆಗಳಲ್ಲಿ ಇದೆ ಎಂಬ ಮಾತನ್ನು ಮೊನ್ನೆ ಶಾಸನಸಭೆಯಲ್ಲಿ ಪ್ರಸ್ತಾಪ ಮಾಡಲಾಯಿತು. ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಕೂಡ ಬಹಳಷ್ಟು ಗಂಭೀರವಾಗಿ ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ ಜೀವ ಜಾಲದ ಕೊಂಡಿಯನ್ನು ಅಥವಾ ನಿಸರ್ಗದ ನಿಯಮವನ್ನು ನಾವು ಮುರಿದು ಬದುಕುತ್ತೇವೆ ಎಂದು ಯೋಚನೆ ಮಾಡಿದರೆ ಖಂಡಿತವಾಗಿಯೂ ಇದರಿಂದ ಸಮಾಜದ ಮೇಲೆ ನಮ್ಮ ಬದುಕಿನ ಮೇಲೆ ಅತ್ಯಂತ ಕೆಟ್ಟ ದುಷ್ಪರಿಣಾಮ ಬೀರತಕ್ಕಂಥ ಕೆಲಸ ಆಗಬಹುದು ಎನ್ನತಕ್ಕದ್ದು. ಇದು ಮಹಾ ರಾಷ್ಟ್ರದಲ್ಲಿ ಬಹಳಷ್ಟು ಶೀಘ್ರಗತಿಯ ಬೆಳವಣಿಗೆಯನ್ನು ಪಡೆಯಿತು. ನಂತರ ಅಲ್ಲಿಯ ಸರ್ಕಾರ ಇದನ್ನು ಕಾನೂನು ಮುಖಾಂತರ ನಿಯಂತ್ರಣ ಮಾಡಿತು ಎಂದು ಕೇಳಿದ್ದೇನೆ. ಈ ಅಮ್ನಿಯೋ ಸಿಂಥಸಿಸ್ ಈ ಆಧುನಿಕ ತಂತ್ರಜ್ಞಾನದ ಮೂಲಕ ನಾವು ಭ್ರೂಣದ ಲಿಂಗವನ್ನು ಪತ್ತೆ ಮಾಡಬಹುದು. ಈ ತಂತ್ರಜ್ಞಾನದ ಮೂಲಕ ಬೇಡವಾಗಿರತಕ್ಕಂಥ ಭ್ರೂಣವನ್ನು ನಾಶ ಮಾಡಬಹುದು ಎನ್ನತಕ್ಕಂಥ ತಾಂತ್ರಿಕ ತಜ್ಞತೆ ನಮ್ಮ ರಾಜ್ಯದಲ್ಲಿದೆ ಎನ್ನುವುದಾದರೆ ಅದು ಯಾವ ಉದ್ದೇಶ ಕ್ಕೋಸ್ಕರ ಇದೆ ಮತ್ತು ಇದರ ಪರಿಣಾಮವಾಗಿ ಇಂತಹ ಪ್ರಕರಣಗಳು ನಮ್ಮ ರಾಜ್ಯದಲ್ಲಿ ಎಷ್ಟು ನಡೆದಿರಬಹುದು ? ಜೊತೆಗೆ ಒಂದು ಪತ್ರಿಕಾ ಘರ್ಷಣೆ ಕೂಡ ನಡೆಯಿತು. ಈ ಖಾಸಗಿ ನರ್ಸಿಂಗ್ ಹೋಮ್‌ನವರು ಮತ್ತು ವಿಶ್ವವಿದ್ಯಾನಿಲಯದವರ ನಡುವೆ ಒಂದು ಪತ್ರಿಕಾ ಘರ್ಷಣೆ ನಡೆಯಿತು ಅದರಲ್ಲಿ ಸಂಶೋಧನೆ ಒಪ್ಪಂದ ಕುಲಪತಿಯವರ ಹೇಳಿಕೆ ಎಂದು ಕೂಡ ಬಂತು. ಒಂದು ಖಾಸಗಿ ನರ್ಸಿಂಗ್ ಹೋಮ್‌ನವರು ಅದಕ್ಕೆ ವಿರುದ್ಧವಾಗಿ ಪತ್ರಿಕಾ ಹೇಳಿಕೆಯನ್ನು ಕೂಡ ಕೊಟ್ಟರು ಏನೇ ಇದ್ದರೂ ಕೂಡ ಸಧ್ಯ ನಮ್ಮ ರಾಜ್ಯದಲ್ಲಿ ಇಂತಹ ಎರಡು ಕಡೆಗಳಲ್ಲಿ ಈ ತಾಂತ್ರಿಕ ಉಪಕರಣವನ್ನು ಇಟ್ಟುಕೊಂಡು ಬಹಳಷ್ಟು ಗುಪ್ತವಾಗಿ ಈ ಕೆಲಸ ನಡೆಯುತ್ತಿದೆ. ಇದು ನಮ್ಮ ಮಾನವ ಕುಲಕ್ಕೆ ಒಂದು ಅಪಚಾರ ಎಸಗುವಂತಾದ್ದು ಆಗಿದೆ ಇದರಿಂದ ನಾವೆಲ್ಲರೂ ತಲೆತಗ್ಗಿಸತಕ್ಕಂಥ ವಿಚಾರ ಆಗಿರುವುದರಿಂದ ಇದನ್ನು ನಮ್ಮ ಸರ್ಕಾರದವರು ಬಹಳಷ್ಟು ಪೂರ್ಣಪ್ರಮಾಣದಲ್ಲಿ ಗಮನಹರಿಸಬೇಕು.

ಪೂರ್ಣ ಸಮಾಜದ ನಿರ್ಮಾಣ ಆಗಬೇಕಾದರೆ ಇಂತಹ ಕೆಟ್ಟ ವಿಚಾರಗಳ ಬಗ್ಗೆ ಕಠಿಣ ನಿಲುವನ್ನು ತಾವು ತೆಗೆದುಕೊಳ್ಳಬೇಕೆಂಬ ಮಾತನ್ನು ತಮಗೆ ಹೇಳ ವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಜನ ಜಾಗೃತಿಯನ್ನು ಈ ನಿಟ್ಟಿನಲ್ಲಿ ತರುವ ಬಗ್ಗೆ ತಾವು ಕಾರ್ಯಮಗ್ನರಾಗಬೇಕೆಂದು ಹೇಳುತ್ತೇನೆ. ನಾನು ಈ ವಿಷಯವನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ತಾವು ಇದರ ಬಗ್ಗೆ ಹೆಚ್ಚಿನ ಮಾಹಿತಿ ಯನ್ನು ತರಿಸಿಕೊಂಡು, ಇಂತಹ ಘಟನೆಗಳು ಯಾವುದಾದರೂ ಖಾಸಗಿ ನರ್ಸಿಂಗ್ ಹೋಮ್‌ಗಳಲ್ಲಿ ನಡೆದಿದ್ದರೆ, ಅವುಗಳನ್ನು ಪತ್ತೆ ಮಾಡಿ ಕಾನೂನು ಪ್ರಕಾರವಾಗಿ ಕ್ರಮ ತೆಗೆದುಕೊಳ್ಳುವ ನಿರ್ಧಾರ ವನ್ನು ನಮ್ಮ ಮಾನ್ಯ ರಾಚಯ್ಯನವರು ಮಾಡಬೇಕೆಂಬ ಭಾವನೆಯನ್ನು ಇಲ್ಲಿ ವ್ಯಕ್ತಪಡಿಸುತ್ತೇನೆ.

ಉಪಾಧ್ಯಕ್ಷರು.—ಬೇಗ ಮುಗಿಸಿ. ಇನ್ನೂ ೨೧ ಜನ ಮಾತನಾಡುವವರು ಇದ್ದಾರೆ. ತಾವೇ ಎಲ್ಲಾ ವೇಳೆಯನ್ನೂ ತೆಗೆದುಕೊಂಡರೆ ಹೇಗೆ ? ಸಂಕ್ಷಿಪ್ತವಾಗಿ ಹೇಳಿ ಮುಗಿಸಿ............

ಶ್ರೀ ಪಟಮಕ್ಕಿ ರತ್ನಾಕರ್.—ನಾನೂ ಇನ್ನೂ ಮಾನಸಿಕ ಆರೋಗ್ಯದ ವಿಚಾರಕ್ಕೆ ಬಂದೇ ಇಲ್ಲ. ನಮಗೆ ದೈಹಿಕ ಮತ್ತು ಮಾನಸಿಕ ಆರೋಗ್ಯಗಳೆರಡೂ ಮುಖ್ಯ. ಆದ್ದರಿಂದ ನಾವು ಇದುವರೆಗೆ, ನಮ್ಮ ಚಿಂತನೆಯನ್ನು ದೈಹಿಕ ಆರೋಗ್ಯದ ಬಗ್ಗೆ ಸಮಾಜದಲ್ಲಿ ಆರೋಗ್ಯದ ಕಾರ್ಯಕ್ರಮಗಳು ಯಾವ ರೀತಿಯಾಗಿ ನಡೆಯುತ್ತಿವೆ, ಇದರ ಏರುಪೇರುಗಳ ಬಗ್ಗೆ ಇದುವರೆಗೆ ಚರ್ಚೆಯನ್ನು ವಿಮರ್ಶೆ ಮಾಡಿದ್ದೇವೆ. ನಮಗೆ ದೇಹದ ಆರೋಗ್ಯ ಎಷ್ಟು ಮುಖ್ಯವೋ ಅಷ್ಟೆ ಮುಖ್ಯ ಮಾನಸಿಕ ಆರೋಗ್ಯವೂ ಕೂಡ ಎಂಬುದು ನಾವು ಗಮನಿಸಬೇಕಾದ ಅಂಶ. ಮಾನಸಿಕ ಆರೋಗ್ಯ ನಮ್ಮ ಪಟ್ಟಣ ಪ್ರದೇಶ ಇರಲಿ, ಅಥವಾ ಗ್ರಾಮೀಣ ಪ್ರದೇಶ ಇರಲಿ, ನಮ್ಮ ಜನಗಳಿಗೆ ಇದರ ಕಲ್ಪನೆ ಸರಿಯಾಗಿ ಆಗಿಲ್ಲ. ಎಲ್ಲಾದರೂ ಸ್ವಲ್ಪ ಮಾನಸಿಕವಾಗಿ ಅಸ್ತವ್ಯಸ್ತ ಆಯಿತು ಟ್ರೀಟ್‌ಮೆಂಟ್ ಕೊಡಬೇಕೆಂದು ಹೇಳಿದರೆ, ಅವನೊಬ್ಬ ಹುಚ್ಚ ಎಂಬ ತೀರ್ಮಾನಕ್ಕೆ ಬರತಕ್ಕ ಸಂದರ್ಭಗಳೂ ಗ್ರಾಮೀಣ ಪ್ರದೇಶಗಳಲ್ಲಿ ಇದೆ. ಯಾವ ರೀತಿಯಾಗಿ ದೈಹಿಕ ಅನಾರೋಗ್ಯ ಉಂಟಾಗುತ್ತದೋ ಅದೇ ರೀತಿಯಲ್ಲಿ ಮಾನಸಿಕ ಆರೋಗ್ಯವೂ ಉಂಟಾಗುತ್ತದೆ. ಅನೇಕ ತರದಲ್ಲಿ ಅದು ಪರಿಸರ ಮಾಲಿನ್ಯ ಇರಬಹುದು, ಕೌಟುಂಬಿಕ ಒತ್ತಡ ಇರಬಹುದು, ರಾಜಕಾರಣ ಇರಬಹುದು, ಆರ್ಥಿಕ ಒತ್ತಡ ಇರಬಹುದು ಹೀಗೆ ಹಲವಾರು ಒತ್ತಡಗಳಲ್ಲಿ ಮಾನಸಿಕ ಕ್ರಿಯೆಗಳಲ್ಲಿ ಏರುಪೇರು ಆಗುವುದನ್ನು ಎಲ್ಲಾ ಕಡೆಗಳಲ್ಲೂ ಕಾಣುತ್ತೇವೆ.

ಇದಕ್ಕಾಗಿ ವೈಜ್ಞಾನಿಕ ತಿಳುವಳಿಕೆಯನ್ನು ನಮ್ಮ ಸಮಾಜದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಇರತಕ್ಕ ಜನಗಳಿಗೆ ತಿಳಿಸತಕ್ಕ ಕೆಲಸವನ್ನು ಮಾಡಬೇಕಾಗುತ್ತದೆ. ಈ ಕೆಲಸವನ್ನು ಸಾಹಿತ್ಯದ ಮುಖಾಂತರ ಪ್ರಚಾರ ಮಾಧ್ಯಮದ ಮುಖಾಂತರ, ಚಲನಚಿತ್ರ ಮಾಧ್ಯಮದ ಮುಖಾಂತರ ಮಾಡಬೇಕು. ಹಾಗೂ ಈ ಬಗ್ಗೆ ತರಬೇತಿ ಶಿಬಿರಗಳನ್ನು ಮಾಡಿ, ಸ್ಪಷ್ಟವಾದ ಕಲ್ಪನೆ ನಮ್ಮ ಜನಗಳಿಗೆ ಕೊಡಬೇಕಾಗುತ್ತದೆ. ಏಕೆಂದರೆ, ನಮ್ಮ ಹಳ್ಳಿಗಳಲ್ಲಿ ಯಾವುದೋ ಒಂದು "ಮೇನಿಯಾ'' ಎಂಬ ಮಾನಸಿಕ ಖಾಯಿಲೆ ಬಂತು ಎಂದರೆ. ಅದು ದೈವ. ಭೂತ ಎಂದು, ಅದಕ್ಕೆ ಮಾಟ, ಮಂತ್ರ ಮಂತಾದವುಗಳನ್ನು ಮಾಡಿಸುವುದು, ಪುರೋಹಿತರುಗಳ ಹತ್ತಿರ ಹೋಗುವುದು, ಈ ಕೆಲಸ ಮಾಡಿಕೊಂಡು ನಮ್ಮ ಹಳ್ಳಿಗಳ ಜನ ಹಣ ಮತ್ತು ಸಮಯವನ್ನು ಕಳೆಯುತ್ತಾರೆ. ಇದು ಮಾನಸಿಕ ಖಾಯಿಲೆ ಮನಸ್ಸಿಗೆ ಸಂಬಂಧಪಟ್ಟ ಖಾಯಿಲೆ ಇದಕ್ಕೆ ಡಾಕ್ಟರುಗಳು ಇದ್ದಾರೆ, ಆಸ್ಪತ್ರೆಗಳು ಇವೆ, ಅವುಗಳ ಸಂಪರ್ಕ ಮಾಡಿದರೆ ಈ ಖಾಯಿಲೆ ಗುಣವಾಗುತ್ತದೆ ಎಂಬ ಕಲ್ಪನೆ ನಮ್ಮ ಜನಗಳಿಗೆ ಇಲ್ಲ. ಈನಿಟ್ಟಿನಲ್ಲಿ ವಿಚಾರ ಮಾಡಬೇಕಾಗುತ್ತದೆ ಮತ್ತು ಕೆಲಸ ಮಾಡಬೇಕಾಗುತ್ತದೆ. ಇವತ್ತು ಅನೇಕ ಖಾಸಗಿ ನರ್ಸಿಂಗ್ ಹೋಂಗಳನ್ನು ನೋಡಿದ್ದೇವೆ, ಇಂತಹ ರೋಗಿಗಳು ಅಲ್ಲಿ ಹೋದರೆ, ಸಂಪೂರ್ಣವಾಗಿ ಶೋಷಣೆ ಮಾಡುತ್ತಿದ್ದಾರೆ, ಆದ್ದರಿಂದ ಜಿಲ್ಲಾ ಮಟ್ಟದಲ್ಲಿ ಮಾನಸಿಕ ನರರೋಗ ನಿವಾರಣೆ ಮಾಡುವಂಥ ಒಂದು ಕೇಂದ್ರವನ್ನು ಪ್ರತಿ ಜಿಲ್ಲೆಯಲ್ಲೂ ಕೂಡ ತಾವು ಸ್ಥಾಪನೆ ಮಾಡಬೇಕು ಇಲ್ಲದೇ ಹೋದರೆ ಪ್ರತಿ ಜಿಲ್ಲೆಯಲ್ಲೂ ಕೂಡ ಒಬ್ಬ ವೈದ್ಯರನ್ನು ನೇಮಕ ಮಾಡಬೇಕೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಮಾನಸಿಕ ಅನಾರೋಗ್ಯದ ವಿಚಾರಗಳ ಬಗ್ಗೆ ಕಲ್ಪನೆಯನ್ನು ತಿಳುವಳಿಕೆಯನ್ನು ಕೊಡಬೇಕಾಗುತ್ತದೆ. ಜೊತೆಗೆ ದೈಹಿಕ ಆರೋಗ್ಯಕ್ಕೆ ಎಷ್ಟು ಖರ್ಚು ಮಾಡುತ್ತೀರೋ ಅಷ್ಟೇ ಈ ಮಾನಸಿಕ ಆರೋಗ್ಯದ ಬಗ್ಗೆ ಕೂಡಾ ಹಣವನ್ನು ಖರ್ಚು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಧ್ಯಕ್ಷರೇ, ನಾನು ಆಗಲೇ ಹೇಳಿದ್ದೇನೆ, ನಾವು ರಾಚಯ್ಯನವರಿಂದ ಹಿಂದೆಲ್ಲಾ ಬಹಳಷ್ಟು ನಿರೀಕ್ಷೆ ಮಾಡಿದ್ದೆವು. ಆದರೆ ಇವತ್ತು ಪ್ರಾರಂಭದಲ್ಲೇ ನಾನೇ ಹೇಳಿದ್ದೇನೆ. ದೈಹಿಕವಾಗಿ ಮತ್ತು ಮಾನಸಿಕವಾಗಿ, ಅವರು ತಮ್ಮ ಭಾವನೆಗಳನ್ನು ತೀವ್ರತೆಯನ್ನು ಅನುಷ್ಠಾನ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ.

ಶ್ರೀ ಬಿ. ರಾಚಯ್ಯ.— ನಾನು ಮಾನಸಿಕವಾಗಿ ಸರಿಯಾಗಿ ಇದ್ದೇನೆ. ಅವರಿಗೆ ಇನ್ನೂ ಮುದುವೆಯಾಗಿಲ್ಲ, ಮಾನಸಿಕವಾಗಿ ಅವರಿಗೆ ಏನಾದರೂ ಹೆಚ್ಚು ಕಡಿಮೆ ಆಗುತ್ತಿದೆಯೋ ಎಂದು ಯೋಚನೆ ಮಾಡುತ್ತಿದ್ದೇನೆ.

ಶ್ರೀ ಪಟವಾಕ್ಕಿ ರತ್ನಾಕರ್.— ತಾವು ಹಿರಿಯರಿದ್ದೀರಿ, ತಾವು ಆ ರೀತಿ ತಿಳಿದುಕೊಳ್ಳಬೇಡಿ. ಮಾನಸಿಕ ವಿಶ್ರಾಂತಿ ಎಂದು ಇರುತ್ತದೆ. ಸಾಕಷ್ಟು ಸಾಕು, ಈ ರಾಜಕೀಯ ಸಾಕಾಗಿ ಹೋಗಿದೆ, ಇಷ್ಟು ವರ್ಷದಿಂದ ರಾಜಕೀಯ ಮಾಡಿದ್ದೀರಿ, ನನಗೆ ಸಾಕಾಗಿ ಹೋಗಿದೆ ಎಂದು, ಮನೆಗೆ ಹೋದ ತಕ್ಷಣ ಆಫೀಸ್‌ಗೆ ಬನ್ನಿ ಎನ್ನುವುದು, ಆಫೀಸ್‌ಗೆ ಹೋದ ತಕ್ಷಣ ಮನೆಗೆ ಬನ್ನಿರಿ ಎನ್ನುವುದು. ಏನಾದರೂ ಸಮಸ್ಯೆಗಳು ಇವೆ ಎಂದು ಹೇಳಿದರೆ, ಸಮಸ್ಯೆಗಳು ಇದ್ದೇ ಇರುತ್ತವೆ, ಇವೆಲ್ಲಾ ಇರುವುದೇ, ಇದನ್ನು ಯಾರು ಪರಿಹಾರ ಮಾಡುತ್ತಾರೆ ಎಂದು ಹೇಳಿಕೊಂಡು ಹೆಗಲಮೇಲೆ ಟವೆಲ್ ಹಾಕಿಕೊಂಡು ಹೋಗಿಬಿಟ್ಟರೆ ಹೇಗೆ ಎಂದು...

ಉಪಾಧ್ಯಕ್ಷರು.— ಮುಗಿಸಿಬಿಡಿ.

ಶ್ರೀ ಪಟವಾಕ್ಕಿ ರತ್ನಾಕರ್.— ಹೆಗಲಮೇಲೆ ಟವೆಲ್ ಹಾಕಿಕೊಂಡು ಹೊರಟು ಹೋದರೆ ಹೇಗೆ ? ನಮ್ಮ ಸ್ನೇಹಿತರುಗಳೆಲ್ಲಾ ಮಾತನಾಡುತ್ತಿದ್ದೆವು. ರಾಚಯ್ಯನವರಿಗೆ ಭಾವನೆಗಳು ಇವೆ, ಆದರೆ ಅವರಿಗೆ ಶಾರೀರಕವಾಗಿ ಶಕ್ತಿ ಇಲ್ಲ ಎಂದು ಹೇಳುತ್ತಿದ್ದೆವು, ದೇವರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ ಅವರಿಗೆ ಆರೋಗ್ಯ ಕೊಡಲಿ, ಮಾನಸಿಕ ಶಕ್ತಿ ಕೊಡಲಿ...

ಶ್ರೀ ಪಿ.ಜಿ.ಆರ್. ಸಿಂಧ್ಯ.— ಅವರು ಮಾನಸಿಕವಾಗಿ, ಶಾರೀರಕವಾಗಿ ಬಲವಾಗಿದ್ದಾರೆ.

ಉಪಾಧ್ಯಕ್ಷರು.— ರತ್ನಾಕರ್‌ರವರೇ ಮುಗಿಸಿಬಿಡಿ.

ಶ್ರೀ ಪಟಪಂಕ್ಕಿ ರತ್ನಾಕರ್.— ನೀವು ಬಹಳಷ್ಟು ಹಿರಿಯರಿದ್ದೀರಿ, ಅನುಭವಿಗಳಿದ್ದೀರಿ ಸಾಮಾಜಿಕ ಕಳಕಳಿಯನ್ನು ಹೊಂದಿದವರಾಗಿದ್ದೀರಿ, ಅವರಿಂದ ಹೆಚ್ಚಿನ ನಿರೀಕ್ಷಣೆಯನ್ನು ನಾವು ಮಾಡಿರುತ್ತೇವೆ. ದಯಮಾಡಿ ಅವರು ಉತ್ತರ ಹೇಳತಕ್ಕ ಕಾಲದಲ್ಲಿ ಹಲವಾರು ಕ್ರಾಂತಿಕಾರಕ ಸಾಮಾಜಿಕ ಬದಲಾವಣೆಯ ನಿಟ್ಟಿನಲ್ಲಿ ಅವರ ಮಾತುಗಳು ಹೊರಹೊಮ್ಮಲಿ ಎಂಬ ಮಾತನ್ನು ಹೇಳಿ ದೇವರು ಅವರಿಗೆ ಆರೋಗ್ಯ ಆಯುಸ್ಸು ಎಲ್ಲವನ್ನೂ ಕೊಟ್ಟು ಕಾಪಾಡಲಿ ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಅಧ್ಯಕ್ಷರೇ, ಈ ದಿವಸ ೩೧, ೬೨, ೧೪, ೨೯ ಮತ್ತು ೪ನೇ ಬೇಡಿಕೆಗಳ ಮೇಲೆ ನಾನು ಚರ್ಚೆಯನ್ನು ಪ್ರಾರಂಭ ಮಾಡುತ್ತಾ ಕಾರ್ಮಿಕ ಇಲಾಖೆಯ ಮೇಲೆ ನಾನು ಸ್ವಲ್ಪ ಮಾತನಾಡಬೇಕಾಗಿದ್ದರೂ ಕೂಡಾ ಅದಕ್ಕೆ ಮೊದಲು ನಮ್ಮ ಆರೋಗ್ಯ ಇಲಾಖೆಯನ್ನು ಪ್ರಸ್ತಾಪ ಮಾಡುತ್ತೇನೆ. ಅದೂ ನನ್ನ ನಗರದ ಬಗ್ಗೆ ಮಾತ್ರ ಹೇಳುತ್ತೇನೆ.

ಉಪಾಧ್ಯಕ್ಷರು.— ತಮ್ಮ ಅವಧಿ ಅಷ್ಟೇ ಇರುತ್ತದೆ, ಅದರಿಂದಾಗಿ ಅಷ್ಟರೊಳಗೇ ಮುಗಿಸಬೇಕು.

ಶ್ರೀ ಪಂಪಾಪತಿ.— ನಮಗ ಅವಧಿ ಜಾಸ್ತಿ ಬೇಕು ಅವರಿಗೆ ಒಂದೂವರೆ ಘಂಟೆ ಕೊಟ್ಟಿದ್ದೀರಿ.

ಉಪಾಧ್ಯಕ್ಷರು,— ಅವರು ೪೫ ನಿಮಿಷ ಮಾತನಾಡಿದರು.

ಶ್ರೀ ಪಂಪಾಪತಿ.— ನಾನು ಒಂದು ಘಂಟೆ ಮಾತನಾಡುತ್ತೇನೆ.

ಉಪಾಧ್ಯಕ್ಷರು.— ಇಲ್ಲ ಬೇಡ, ೩೦ ನಿಮಿಷ ಗಡುವು ಇಟ್ಟುಕೊಳ್ಳಿ ೪೫ ನಿಮಿಷ ಮಾತನಾಡಿ.

ಶ್ರೀ ಪಂಪಾಪತಿ.— ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಾವಣಗೆರೆಯ ಸಿ. ಜೆ. ಆಸ್ಪತ್ರೆ ಇದೆ. ಅದು ದೊಡ್ಡದಾಗೇ ಇದೆ. ಆದರೆ ಅಲ್ಲಿಗೆ ೪-೫ ಜಿಲ್ಲೆಗಳಿಂದ ರೋಗಿಗಳು ಬರುತ್ತಾರೆ. ಮತ್ತು ಹೆದ್ದಾರಿಯಲ್ಲಿ ಆಗತಕ್ಕಂಥ ಅಪಘಾತಗಳಿಗೆ ಒಳಗಾದ ಜನರೂ ಅಲ್ಲಿಗೆ ಬರುತ್ತಾರೆ. ಅವರೂ ಈ ಆಸ್ಪತ್ರೆಯನ್ನು ಅವಲಂಬಿಸಿರುತ್ತಾರೆ. ಆದುದರಿಂದ ಇಲ್ಲಿಗೆ ಕಳುಹಿಸತಕ್ಕಂಥ ಔಷಧ ಏನಿದೆ ಅದು ಬಹಳ ಕಡಿಮೆಯಾಗುತ್ತದೆ. ಅಲ್ಲಿ ಒಳ್ಳೆಯ ವೈದ್ಯರು ಇದ್ದಾರೆ, ಇದರ ಬಗ್ಗೆ ನಮ್ಮದೇನೂ ಕೊರತೆ ಇಲ್ಲ. ಕಾಲೇಜು ಇರುವುದರಿಂದ ಅಲ್ಲಿ ಒಳ್ಳೆಯ ವೈದ್ಯರಿದ್ದಾರೆ. ಆದರೆ ಸರಿಯಾಗಿ ಔಷಧ ಸರಬರಾಜು ಆಗದೇ ಇದ್ದರೆ ಅವರೂ ಕೂಡಾ ಒಂದೊಂದು ಸಂದರ್ಭದಲ್ಲಿ ನಿಸ್ಸಹಾಯಕರಾಗುತ್ತಾರೆ. ದಾವಣಗೆರೆ ಆಸ್ಪತ್ರೆಯ ಈ ಒಂದು ಪರಿಸ್ಥಿತಿಯನ್ನು ತಾವು ಗಮನಕ್ಕೆ ತೆಗೆದುಕೊಂಡು ಅಲ್ಲಿಗೆ ಹೆಚ್ಚು ಔಷಧಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಪಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಕಿದ್ವಾಯಿ ಅಂತಹ ದೊಡ್ಡ ಆಸ್ಪತ್ರೆ ಏನಿದೆ ಅಲ್ಲಿ ರೋಗಿಗಳನ್ನು ನೋಡಿಕೊಳ್ಳುವುದಕ್ಕೆ ಬರತಕ್ಕಂಥವರಿಗೆ ಛತ್ರದ ಮಾದರಿಯಲ್ಲಿ ವಸತಿ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದಾರೆ. ಅದೇ ರೀತಿ ಎಲ್ಲಾ ಆಸ್ಪತ್ರೆಗಳಲ್ಲಿ ಇದ್ದರೆ ಒಳ್ಳೆಯದೆಂದು ನನ್ನ ಭಾವನೆ. ದಾವಣಗೆರೆ ಆಸ್ಪತ್ರೆಯಲ್ಲಿ ಆ ರೀತಿಯ ಒಂದು ಸೌಲಭ್ಯವನ್ನು ಮಾನ್ಯ ಮಂತ್ರಿಗಳು ಮಾಡಿಕೊಡಬೇಕೆಂದು ಅಲ್ಲಿನ ಶಾಂತಿ ಸಮಿತಿಯವರು ತೀರ್ಮಾನ ಮಾಡಿ ಒಂದು ಪತ್ರವನ್ನು ಬರೆದಿದ್ದಾರೆ...

ಶ್ರೀ ಬಿ. ರಾಚಯ್ಯ.— ಇಲ್ಲಿ ಸಾರ್ವಜನಿಕರಿಂದ ವಂತಿಗೆ ಹೆಚ್ಚು ಬಂದಿದ್ದರಿಂದ ರೋಗಿಗಳನ್ನು ನೋಡಿಕೊಳ್ಳಲು ಬರುವಂತಹವರಿಗೆ ಅನುಕೂಲವಾಗುವ ಸಲುವಾಗಿ ವಸತಿ ಸೌಲಭ್ಯವನ್ನು ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ದಾವಣಗೆರೆಯಲ್ಲಿಯೂ ಮಾಡಬೇಕಾದರೆ ಅಲ್ಲಿ ವ್ಯಾಪಾರಸ್ಥರು ಹೆಚ್ಚು ಇರುವುದರಿಂದ ದಾನಿಗಳು ಇರುವುದರಿಂದ, ವಂತಿಗೆ ಹೆಚ್ಚು ಕಲೆಕ್ಟ್ ಮಾಡಿದರೆ ಅಲ್ಲೂ ವಸತಿ ಸೌಲಭ್ಯವನ್ನು ಕಲ್ಪಿಸಿ ಕೊಡುವುದಕ್ಕೆ ಕೊಂದರೆ ಏನೂ ಆಗುವುದಿಲ್ಲ. ತಾವು ವಂತಿಗೆ ಕಲೆಕ್ಟ್ ಮಾಡಿ ಕೊಟ್ಟರೆ ಅಲ್ಲಿ ಕಟ್ಟಿಸೋಣ.

ಶ್ರೀ ಪಂಪಾಪತಿ.— ಸಂತೋಷ. ಮಾನ್ಯ ಸಚಿವರು ಮೊದಲು ಒಪ್ಪಿಗೆ ಕೊಡಲಿ ಆಮೇಲೆ ನಾವು ಸಾರ್ವಜನಿಕರಿಂದ ವಂತಿಗೆಯನ್ನು ಕಲೆಕ್ಟ್ ಮಾಡಿ ಕೊಡುತ್ತೇವೆ. ಅವರಿಗೆ ಈ ವಿಷಯವನ್ನು ತಿಳಿಸಿ ತಾವು ಇದಕ್ಕೆ ಹಣ ಕೊಡಬೇಕೆಂದು ಒತ್ತಾಯ ಮಾಡಬಹುದು. ಆಗ ಅವರೆಲ್ಲಾ ಸಹಾಯ ಮಾಡುತ್ತಾರೆ. ತಾವು ಒಪ್ಪಿಗೆ ಕೊಟ್ಟಮೇಲೆ ನಾವು ಹಣ ವಸೂಲಿ ಮಾಡುತ್ತೇವೆ. ಆಗ ನಮ್ಮ ಬಗ್ಗೆ

ದಾನಿಗಳಿಗೆ ಒಂದು ನಂಬಿಕೆ ಬರುತ್ತದೆ. ಇನ್ನು ನಮ್ಮಲ್ಲಿರತಕ್ಕಂಥ ಆಸ್ಪತ್ರೆ ಬಹಳ ಸುಸಜ್ಜಿತವಾಗಿದೆ. ಒಳ್ಳೆಯ ಡಾಕ್ಟರುಗಳೂ ಇದ್ದಾರೆ. ಬರತಕ್ಕಂಥ ರೋಗಿಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಜನರಿಗೆ ಸಹಾಯ ಮಾಡುವ ಸಲುವಾಗಿ ಕಿದ್ವಾಯ್ ಆಸ್ಪತ್ರೆಯಲ್ಲಿರುವಂತೆ ನಮ್ಮಲ್ಲಿಯೂ ಅನುಕೂಲ ಮಾಡಿಕೊಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ನಾವು ಅರ್ಧ ಹಣ ಕೊಡುತ್ತೇವೆ ನೀವು ಸರ್ಕಾರದಿಂದ ಅರ್ಧ ಹಣ ಕೊಟ್ಟರೆ ಅನುಕೂಲವಾಗುತ್ತದೆ. ಆದ್ದರಿಂದ ತಾವು ನಾಳೆಯೇ ಒಂದು ಅನುಮತಿ ಪತ್ರ ಕೊಡುವಂತೆ ಆಜ್ಞೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲದೆ ನಾನು ಮೊದಲೇ ಹೇಳಿದಹಾಗೆ ನಮ್ಮ ನಗರದಲ್ಲಿ ಒಳ್ಳೆಯ ಆಸ್ಪತ್ರೆ ಇದೆ. ಅಲ್ಲಿನ ಕೆಲಸಕಾರ್ಯಗಳ ಬಗ್ಗೆ ನನ್ನ ತೃಪ್ತಿ ಇದೆ. ಇನ್ನು ನಮ್ಮ ವಾರ್ತಾ ಮತ್ತು ಪ್ರಚಾರ ಇಲಾಖೆ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ನಮ್ಮ ದಾವಣಗೆರೆ ನಗರ ಎಲ್ಲರಿಗೂ ಗೊತ್ತಿರುವ ಹಾಗೆ ಜಿಲ್ಲೆಯಾಗಬೇಕಿತ್ತು. ಆಗ ನಮ್ಮ ವಾರ್ತಾ ಮಂತ್ರಿಗಳು ಕೂಡ ನಮ್ಮ ಜಿಲ್ಲೆಯವರೇ ಆಗುತ್ತಿದ್ದರು. ದಾವಣಗೆರೆ ನಗರ ಒಂದು ದೊಡ್ಡ ಪಟ್ಟಣ. ಅಲ್ಲಿ ಸುಮಾರು ೩ ಲಕ್ಷ ಜನಸಂಖ್ಯೆ ಇರತಕ್ಕಂಥ ಒಂದು ಪಟ್ಟಣ ಅಲ್ಲಿ ದಿನ ಪತ್ರಿಕೆಗಳು ಬಹಳ ಹೆಚ್ಚು ಇವೆ. ಅಲ್ಲಿಗೆ ಒಂದು ಟೆಲಿಪ್ರಿಂಟರ್ ಬೇಕು, ಕಾರಣ ಅಲ್ಲಿ ಸುದ್ದಿ ಸಂಗ್ರಹ ಸಾಧನೆ ಬೇರೆ ಯಾವುದು ಇಲ್ಲ, ಆದ್ದರಿಂದ ಇದು ಅಗತ್ಯವಾಗಿ ಬೇಕಾಗಿದೆ. ಹಿಂದೆ ಮಾನ್ಯ ವಾರ್ತಾ ಸಚಿವರಾಗಿದ್ದ ರಘುಪತಿಯವರಿಗೂ ಮತ್ತು ನಮ್ಮ ಮಾನ್ಯ ಮಾಜಿ ವಾರ್ತಾ ಮತ್ತು ಪ್ರಚಾರ ಇಲಾಖಾ ಸಚಿವರಾಗಿದ್ದ ಜೀವರಾಜ ಆಳ್ವರವರನ್ನು ಸಹ ಕೇಳಿ ಕೊಂಡಿದ್ದೆವು. ಆದರೂ ಕೂಡ ಇವರ್ಯಾರು ಗಮನಹರಿಸಲಿಲ್ಲ. ಇಲ್ಲಿ ಏನಾಗುತ್ತದೆ ಎಂದರೆ ಸುಮಾರು ೨೫ ಸಾವಿರ ಜನಸಂಖ್ಯೆ ಇದ್ದರೆ ಅದನ್ನು ಒಂದು ಜಿಲ್ಲೆ ಎಂದು ಮಾಡಿ ಅಲ್ಲಿಗೆ ಏನೇನು ಸೌಕರ್ಯಗಳು ಬೇಕೋ ಆ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುತ್ತಾರೆ. ಆದರೆ ಸುಮಾರು ೩ ಲಕ್ಷ ಜನಸಂಖ್ಯೆ ಇರತಕ್ಕಂಥ ಒಂದು ದೊಡ್ಡ ಪಟ್ಟಣಕ್ಕೆ ಈ ಸೌಲಭ್ಯಗಳು ಯಾವುವು ಇಲ್ಲ. ಇದು ಸರಿಯಲ್ಲ ತಾವು ಜನಸಂಖ್ಯೆಗೆ ಅನುಗುಣವಾಗಿ ನಗರಗಳಿಗೆ ಬೇಕಾದಂತಹ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಡುವುದು ಸರ್ಕಾರದ ಕರ್ತವ್ಯ. ಮತ್ತು ಇಲ್ಲಿ ಯಾವುದೇ ಒಂದು ರಂಗಮಂದಿರ ಇಲ್ಲ. ಯಾವುದೇ ಒಂದು ಕ್ರೀಡಾಂಗಣ ಇಲ್ಲ. ಅದೇ ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು ೮೦ ಸಾವಿರ ಜನಸಂಖ್ಯೆ ಇರುವಂತಹ ಕಡೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೀರಿ. ಒದಗಿಸಿಕೊಡಬೇಡಿ ಎಂದು ನಾನು ಹೇಳುತ್ತಿಲ್ಲ. ಆದರೆ ತಾವು ಜನಸಂಖ್ಯೆಗೆ ಅನುಗುಣವಾಗಿ ಪಟ್ಟಣ ಪ್ರದೇಶಗಳಾಗಲಿ ಅಥವಾ ನಗರಗಳೇ ಆಗಲಿ ಒದಗಿಸಿಕೊಡಬೇಕು: ದಾವಣಗೆರೆ ಒಂದು ದೊಡ್ಡ ಪಟ್ಟಣ. ಆ ಪಟ್ಟಣಕ್ಕೆ ಬೇಕಾದಂತಹ ಸೌಲಭ್ಯಗಳನ್ನು ತಾವು ಒದಗಿಸಿಕೊಡಬೇಕು. ನಾನು ಮೊದಲೇ ಹೇಳಿದಹಾಗೆ ನಮ್ಮ ದಾವಣಗೆರೆ ನಗರಕ್ಕೆ ಒಂದು ಕ್ರೀಡಾಂಗಣ ಒಂದು ರಂಗಮಂದಿರ. ಒಂದು ಟೆಲಿಪ್ರಿಂಟರ್ ಕೊಡುವ ವ್ಯವಸ್ಥೆ ತಾವು ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

೩-೦೦ ಪಿ.ಯಂ.

ಇನ್ನು ಕನ್ನಡದ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ವಿಧಾನ ಸೌಧದಲ್ಲಿ ಇನ್ನೂ ಹೆಚ್ಚು ಹೆಚ್ಚು ಕನ್ನಡದ ಬಳಕೆಯಾಗಬೇಕಾಗಿದೆ. ವಿಧಾನ ಸೌಧದಲ್ಲಿ ಅನೇಕ ಪತ್ರಗಳು ಇನ್ನೂ ಇಂಗ್ಲೀಷ್‌ನಲ್ಲೇ ಬರುತ್ತಿವೆ. ಆದಷ್ಟು ಇಂಗ್ಲೀಷ್ ಪತ್ರಗಳನ್ನು ಕಡಿಮೆ ಮಾಡಬೇಕು. ಇನ್ನು ಮುಂದೆ ಹೆಚ್ಚು ಹೆಚ್ಚು ಕನ್ನಡದಲ್ಲಿ ಪತ್ರವ್ಯವಹಾರಗಳನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ತಾವೂ ಸಹ ಕನ್ನಡದಲ್ಲಿ ಪತ್ರ ವ್ಯವಹಾರಗಳು ಹೆಚ್ಚು ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ನಾನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನೂ ಒಂದು ನಮ್ಮ ಬಿ. ಡಿ. ಎ. ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ನಂದಿನಿ ಲೇಔಟ್‌ನಲ್ಲಿ ತಮಗೆ ಗೊತ್ತಿದ್ದ ಹಾಗೆ ಅಲ್ಲಿ ಅನೇಕ ಮನೆಗಳನ್ನು ಹೊಡೆದುಹಾಕಿದರು. ಅಲ್ಲಿ ದೊಡ್ಡ ದೊಡ್ಡ ಮನೆಗಳು ಇದ್ದವು. ಸಣ್ಣ ಮನೆಗಳೂ ಇದ್ದವು. ಅವು ಅಕ್ರಮವಾಗಿ ಕಟ್ಟಿರಬಹುದು, ಸಕ್ರಮವಾಗಿ ಕಟ್ಟಿರಬಹುದು. ಆ ಮನೆಗಳನ್ನು ಒಡೆಯುವಾಗ ತಾವು ಯೋಚನೆ ಮಾಡಬೇಕಾಗಿತ್ತು. ಸಾವಿರಾರು ಮನೆಗಳನ್ನು ಬುಲ್ಡೋಜರ್ ಮೂಲಕ ಒಡೆದು ಹಾಕಿದ್ದೀರಿ. ಡೆಲ್ಲಿಯಲ್ಲಿ ಸಂಜಯಗಾಂಧಿಯವರು ಬುಲ್ಡೋಜರ್‌ಗಳನ್ನು ಬಿಟ್ಟು ಮನೆಗಳನ್ನು ಒಡೆದು ಹಾಕಿದ್ದಾಗ ಇದೇ ಜನತಾ ಪಕ್ಷದವರು ಟೀಕೆ ಮಾಡಿದ್ದು ಇನ್ನೂ ತಮಗೆ ಜ್ಞಾಪಕ ಇರಬಹುದು. ಆದರೆ, ಇವರು ಇಲ್ಲಿ ಮನೆಗಳನ್ನು ಒಡೆದು

ಹಾಕಿಸಿದರು. ವಾಸ ಮಾಡತಕ್ಕ ಮನೆಗಳನ್ನು ಒಡೆದು ಹಾಕಿಸುವುದು ಸರಿಯಾದ ಕ್ರಮ ಅಲ್ಲ. ವಾಸ ಮಾಡತಕ್ಕ ಮನೆಗಳನ್ನು ಎಲ್ಲರಿಗೂ ಕಟ್ಟಿಸಿಕೊಡಬೇಕೆಂದು ಸರ್ಕಾರ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಮನೆಗಳನ್ನು ಸಕ್ರಮವಾಗಿ ಕಟ್ಟಿಲ್ಲ ಎನ್ನುವ ಒಂದೇ ಉದ್ದೇಶಕ್ಕೆ ಮನೆಗಳನ್ನು ಒಡೆದು ಹಾಕಿಸಿದ್ದೀರಿ. ಅಕ್ರಮವಾಗಿ ಮನೆಗಳನ್ನು ಕಟ್ಟುವುದಕ್ಕಿಂತ ಮುಂಚಿತವಾಗಿ ತಾವು ಏಕೆ ತಡೆಯಲಿಲ್ಲ ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು? ಅಕ್ರಮವಾಗಿ ಮನೆಗಳನ್ನು ಕಟ್ಟುವಾಗ ನಿಮ್ಮ ಅಧಿಕಾರಿಗಳು ಏಕೆ ತಡೆಯಲಿಲ್ಲ ? ಅಧಿಕಾರಿಗಳಿಗೆ ಆಗ ಜವಾಬ್ದಾರಿ ಇರಲಿಲ್ಲವೆ ? ಈ ಕೆಲಸವನ್ನು ಸರಿಯಾಗಿ ನಿರ್ವಹಿಸದೇ ಇದ್ದ ಆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನತಕ್ಕಂತದ್ದೇ ನಮ್ಮ ಪ್ರಶ್ನೆ. ಈ ಮನೆಗಳನ್ನು ಒಡೆಯುವಾಗ ಮಾನ್ಯ ಎಂ. ಎಸ್. ಕೃಷ್ಣನ್‌ನವರು ಊರಿನಲ್ಲಿ ಇರಲಿಲ್ಲ. ಅವರು ಊರಿಗೆ ಬಂದ ಮೇಲೆ ನಂದಿನಿ ಲೇ–ಔಟ್‌ಗೆ ಹೋಗಿ ನೋಡಿಕೊಂಡು ಬರುವಾಗ ಅವರ ಮೇಲೆ ಅಲ್ಲಿರತಕ್ಕ ಕೆಲವು ಪುಂಡರು ಅವರ ಮೇಲೆ ದಾಳಿ ಮಾಡಿದರು. ದಾಳಿ ಮಾಡಿ ಶಾಸಕರನ್ನು ಹೊಡೆದರು. ಅವರ ಕಾರನ್ನು ಜಖಮ್ ಗೊಳಿಸಿದರು. ಇಷ್ಟೆಲ್ಲಾ ಮಾಡಿದ ಆ ಪುಂಡರ ಮೇಲೆ ಏನು ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ ಎಂಬುದನ್ನು ನಾನು ಕೇಳುತ್ತೇನೆ. ಒಬ್ಬ ಶಾಸಕರ ಮೇಲೆ ಹಲ್ಲೆ ಮಾಡಿದಾಗಲೂ ಸರ್ಕಾರ ಕ್ರಮ ತೆಗೆದುಕೊಳ್ಳದಿದ್ದರೆ, ಇನ್ನು ಸಾಮಾನ್ಯ ಜನರ ಗತಿ ಏನು ? ಎಲ್ಲಾದರು ಬೆಂಕಿ ಅನಾಹುತ ಆದರೆ ಅದನ್ನು ನೋಡುವುದಕ್ಕೆ ನಾವುಗಳು ಹೋಗಬೇಕಾಗುತ್ತದೆ. ಯಾರಾದರು ಸತ್ತು ಹೋದರೆ ಅವರುಗಳನ್ನು ನೋಡುವುದಕ್ಕೆ ನಾವು ಹೋಗಬೇಕಾಗುತ್ತದೆ. ಮತ್ತೆ ಬೇರೆ ಯಾವುದಾದರು ಅನಾಹುತಗಳಾದರೆ ನಾವು ಹೋಗಿ ನೋಡಬೇಕಾಗುತ್ತದೆ. ಹಾಗೆ ನೋಡುವುದಕ್ಕೆ ಹೋದ ನಮ್ಮ ಮೇಲೆ ಪುಂಡರು ಹೊಡೆಯುವುದಕ್ಕೆ ಬಂದರೆ ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇಡವೇ ? ಕೆಲವು ದಿನಗಳ ಹಿಂದೆ ಶಿಡ್ಲಘಟ್ಟದಲ್ಲಿ ಆದ ಹಿಂಸಾಚಾರವನ್ನು ನೋಡುವುದಕ್ಕೆ ಹೋಗುತ್ತಿದ್ದ ರಮೇಶ್ ಕುಮಾರ್ ಮತ್ತು ಇನ್ನು ಕೆಲವರ ಮೇಲೆ ಹಲ್ಲೆ ಮಾಡಿದ್ದಾರೆ. ಶಾಸಕರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಕೆಲಸ ಮಾಡುವಾಗ ಅವರ ಮೇಲೆ ದಾಳಿ ನಡೆದರೆ ಸರ್ಕಾರವು ಏನೂ ಗೊತ್ತಿಲ್ಲ ಎನ್ನುವ ರೀತಿಯಲ್ಲಿ ಕುಳಿತುಕೊಳ್ಳುವುದು ಸರಿಯಲ್ಲ. ಆ ಪುಂಡರುಗಳನ್ನು ಅರೆಸ್ಟ್ ಮಾಡಿದ್ದೇವು, ಜಾಮೀನಿನ ಮೇಲೆ ಈಗ ಬಿಡುಗಡೆಯಾಗಿದ್ದಾರೆಂದು ತಾವು ಹೇಳಬಹುದು. ಇದಕ್ಕಿಂತ ಹೆಚ್ಚಿಗೆ ನೀವು ಏನೂ ಮಾಡುವುದಿಲ್ಲ.

ಶ್ರೀ ಬಿ. ರಾಚಯ್ಯ.— ಜಾಮೀನಿನ ಮೇಲೆ ನಾವಲ್ಲ ಬಿಡುಗಡೆ ಮಾಡುವುದು. ಕೋರ್ಟ್‌ನವರು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುತ್ತಾರೆ.

ಶ್ರೀ ಪಂಪಾಪತಿ.— ಜಾಮೀನಿನ ಮೇಲೆ ಬಿಡುಗಡೆ ಮಾಡುವಂಥ ಸೆಕ್ಷನ್ ಇಟ್ಟರೆ ಇನ್ನೇನು ಮಾಡುವುದಕ್ಕಾಗುತ್ತದೆ ? ಆ ಸೆಕ್ಷನ್ ಪ್ರಕಾರ ಅವರು ಜಾಮೀನಿನ ಮೇಲೆ ಬಿಡುಗಡೆ ಮಾಡುತ್ತಾರೆ

ಶ್ರೀ ಕೆ. ಬಿ. ಶಾಣಪ್ಪ.— ೧೯೮೨ ಟಿಕಿ ರಲ್ಲಿ ಗುಂಡೂರಾವ್ ಸರ್ಕಾರದ ಅವಧಿಯಲ್ಲಿ ಸುಮಾರು ೯೦ ಜನರ ಮೇಲೆ ಸೆಕ್ಷನ್ ೩೦೭ರ ಪ್ರಕಾರ ಕೇಸ್ ಹಾಕಲಾಗಿತ್ತು. ಈ ೩೦೭ನೇ ಸೆಕ್ಷನ್ ಏನೆಂದರೆ attempt to murder wse ಈ ಸೆಕ್ಷನ್ ಪ್ರಕಾರ ಕೇಸ್ ಹಾಕಿದ್ದರೂ ಸಹ ಸರ್ಕಾರವು ಕೇಸ್‌ನ್ನು ವಿತ್‌ಡ್ರಾ ಮಾಡಿಗೊಂಡಿತು. ಅದೇ ಪಂಪಾಪತಿಯವರು ಜನರ ಸಮಸ್ಯೆಗಳಿಗೋಸ್ಕರ ಹಂಗರ್ ಸ್ಟ್ರೈಕ್ ಮಾಡುತ್ತಿದ್ದಾಗ ಸ್ವಲ್ಪ ಮಟ್ಟಿಗೆ ಗಲಾಟೆ ಆದಾಗ ಕೆಲವರನ್ನು ಎರಡು ತಿಂಗಳ ಕಾಲ ಜೈಲಿಗೆ ಕಳುಹಿಸಿದಿರಿ. ಈ ರೀತಿ ಜೈಲಿಗೆ ಕಳುಹಿಸಬೇಡಿ. ಆ ತೀರ್ಮಾನವನ್ನು ವಾಪಸ್ ತೆಗೆದುಕೊಳ್ಳಿ ಎಂದರೆ. ಸರ್ಕಾರ ಅದನ್ನು ಗಮನಕ್ಕೇ ತೆಗೆದುಕೊಳ್ಳಲಿಲ್ಲ.

ಶ್ರೀ ಪಂಪಾಪತಿ .— ಅಧ್ಯಕ್ಷರೆ...

ಶ್ರೀ ಎಂ. ಪಿ. ಪ್ರಕಾಶ್.— ಅಧ್ಯಕ್ಷರೆ, ಈ ಬೇಲ್ ಪ್ರಶ್ನೆ ಏನು ಬರುತ್ತದೆ bail is a rule. Refusal is an exception. ಎಲ್ಲಾ ವಿಷಯಗಳಲ್ಲಿಯೂ ಕೂಡ ಅವರ ಸ್ವಂತಕ್ಕೆ ಚರ್ಚೆ ಬಹಳ ಮುಖ್ಯ ಎಂದು ಹೇಳುತ್ತಿದ್ದಾರೆ ಆ ಬಗ್ಗೆ ಶ್ರೇಷ್ಠ ನ್ಯಾಯಾಲಯದ ಒಂದು ನಿರ್ಣಯ ಆಗಿರುತ್ತದೆ. ಬೇಲ್ ಸಂದರ್ಭದಲ್ಲಿ ಜಾಮೀನು ಸಿಕ್ಕುತ್ತದೆ. ಸೆಕ್ಷನ್ ೩೦೨ರ ಪ್ರಕಾರ ಕೊಲೆ ಮೊಕದ್ದಮೆಯಲ್ಲಿಯೂ ಈ ತರಹದ ಜಾಮೀನು ಸಿಕ್ಕುತ್ತದೆ. ಇನ್ನು ಜಾಮೀನು ವಾಪಸನ್ನು ತೆಗೆದುಕೊಳ್ಳ ಬೇಕೆಂದು ಏನಿದೆ, ಆ ಬಗ್ಗೆ ನಿಯಮಾನುಸಾರ ಗೃಹಖಾತೆಗೆ ಅದು ಬರತಕ್ಕಂಥಾದ್ದು ಇದೆ, ಬಂದಾಗ ಅವನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಪಂಪಾಪತಿ.— ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿ ಲಾಲ್‌ಭಾಗ್‌ತೋಟ ಬೆಳೆಗಾರರ ಸಹಕಾರಿ ಮಾರಾಟ ಸಂಘ ಎಂದು ಒಂದು ಸಂಘಟನೆ ಇದೆ. ಈಗಾಗಲೇ ಎಲ್ಲರಿಗೂ ಗೊತ್ತಿರುವ ಹಾಗೆ ಇದು ತುಂಬಾ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಿದೆ. ಇದು ಸುಮಾರು ಒಂದು ದಿವಸಕ್ಕೆ ೮೦ ಟನ್‌ಗಳಷ್ಟು ಹಣ್ಣು ಮತ್ತು ತರಕಾರಿಗಳನ್ನು ನ್ಯಾಯಬೆಲೆಯಲ್ಲಿ ಕೊಂಡು ಗ್ರಾಹಕರಿಗೆ ಮಾರಾಟ ಮಾಡುತ್ತಾ ಇದೆ. ಇದರಲ್ಲಿ ಮಧ್ಯವರ್ತಿಗಳ ಕಾಟ ಇಲ್ಲ.

ಉಪಾಧ್ಯಕ್ಷರು.— ತಾವು ಹೇಳುತ್ತಾ ಇರುವ ವಿಷಯವು ಈ ಇಲಾಖೆಯಲ್ಲಿ ಬರುವುದಿಲ್ಲ

ಶ್ರೀ ಪಂಪಾಪತಿ.— ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತಿದ್ದೇನೆ. ಬೆಂಗಳೂರು ಮಹಾನಗರಪಾಲಿಕೆಯವರು ಈ ಸಂಘಕ್ಕೆ ಬೆಂಗಳೂರಿನಲ್ಲಿ ೮೨ ಸ್ಥಳಗಳನ್ನು ಕೊಟ್ಟಿದ್ದಾರೆ. ಮೈಸೂರಿನಲ್ಲಿ ೧೭ ಸ್ಥಳಗಳನ್ನು ಕೊಟ್ಟಿದ್ದಾರೆ. ಮಂಗಳೂರಿನಲ್ಲಿ ೮ ಸ್ಥಳಗಳನ್ನು ಕೊಟ್ಟಿದ್ದಾರೆ. ಈ ರೀತಿಯಾಗಿ ರಾಜ್ಯದಲ್ಲಿ ಅನೇಕ ನಗರಸಭೆಯವರು ಇವರಿಗೆ ಬಹಳ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಇಂತಹ ಸಂದರ್ಭದಲ್ಲಿ ತಾವುಗಳು ಕೂಡ ಅಂತಹ ಒಳ್ಳೆಯ ಒಂದು ಸಂಘಟನೆಗೆ ಸಹಾಯ ಮಾಡುವುದಕ್ಕೆ ಮುಂದೆ ಬರಬೇಕು. ಮಡಿವಾಳದ ಬಳಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ೨೫ ಎಕರೆಗಳಷ್ಟು ಜಾಗವನ್ನು ಸಂಘಕ್ಕೆ ಮಂಜೂರು ಮಾಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಅವರ ಮನವಿಗೆ ಮನ್ನಣೆ ಕೊಟ್ಟು ತಾವುಗಳು ಅವರಿಗೆ ಜಾಗವನ್ನು ಕೊಟ್ಟಲ್ಲಿ ಒಂದು ಒಳ್ಳೆಯ ಕೆಲಸವನ್ನು ಮಾಡುವ ಸಂಘಟನೆಗೆ ಪ್ರೋತ್ಸಾಹವನ್ನು ಕೊಟ್ಟಂತಾಗುತ್ತದೆ ನೀವು ಯಾರ್ಯಾರಿಗೋ ಜಾಗವನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದ್ದೀರಿ, ಇಂತಹ ಸಂಘಕ್ಕೆ ಒಂದು ಜಾಗವನ್ನು ಕೊಟ್ಟಲ್ಲಿ ಅದರಿಂದ ಗ್ರಾಹಕರ ಮತ್ತು ಬೆಳೆಗಾರರ ಹಿತರಕ್ಷಣೆ ಮಾಡಿದ ಹಾಗೆ ಆಗುತ್ತದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಹೀಗೆ ಬೆಳೆದವರಿಗೆ ನ್ಯಾಯಬೆಲೆ ಮತ್ತು ಕೊಳ್ಳುವವರಿಗೆ ಯೋಗ್ಯಬೆಲೆ ಈ ಒಂದೆ ಉದ್ದೇಶವನ್ನು ಇಟ್ಟುಕೊಂಡು ಲಾಭವೂ ಇಲ್ಲ ನಷ್ಟವೂ ಇಲ್ಲ ಎಂಬ ತತ್ವದನುಸಾರವಾಗಿ ಕೆಲಸವನ್ನು ಮಾಡುತ್ತಿರುವ ಈ ಸಂಘಟನೆಗೆ ಅವರು ಕೇಳಿದ ೨೫ ಎಕರೆ ಜಾಗವನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಹಣ್ಣು ಮತ್ತು ಹೂವಿನ ಗಿಡಗಳನ್ನು ಬೆಳೆಸಿ ಮಾರುವ ನರ್ಸರಿಯವರಿಗೆ ವಿನಾಯಿತಿಯನ್ನು ಈಗಾಗಲೇ ನೀಡಿದ್ದೀರಿ. ಅವರಿಗೆ ಜಮೀನು ಪಡೆಯುವುದಕ್ಕೆ ವಿನಾಯತಿಯನ್ನು ಕೊಟ್ಟಿದ್ದೀರಿ. ಆದರೆ ಅದೇ ವಿನಾಯತಿಯನ್ನು ದ್ರಾಕ್ಷಿ ತೋಟದವರಿಗೆ ಕೊಟ್ಟಿಲ್ಲ. ಇಂತಹ ತೋಟಗಳು ನಗರದ ಪಕ್ಕದಲ್ಲಿ ಇದ್ದರೆ ಬಹಳ ಒಳ್ಳೆಯದು. ಆದುದರಿಂದ ಇಂತಹ ತೋಟಗಳು ಇರತಕ್ಕಂಥ ಕಡೆಗಳಲ್ಲಿ ಅಕ್ವಿಸಿಶನ್ ಮಾಡಿಕೊಳ್ಳುವುದನ್ನು ತಡೆದು ತೋಟದವರಿಗೆ ಅದನ್ನು ಬಿಟ್ಟು ಕೊಟ್ಟರೆ ಬಹಳ ಒಳ್ಳೆಯದು. ಅವರಿಗೂ ಹಣ್ಣುಹಂಪಲುಗಳನ್ನು ಬೆಳೆದುಕೊಳ್ಳುವುದಕ್ಕೆ ಅದರಿಂದ ಸಾಧ್ಯವಾಗುತ್ತದೆ. ಮತ್ತು ಆ ಜನರಿಗೆ ಸಹಾಯವನ್ನು ಮಾಡಿದ ಹಾಗೆ ಆಗುತ್ತದೆ. ಅದನ್ನು ಮಾಡಬೇಕೆಂದು ತಮ್ಮಲ್ಲಿ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಕಾರ್ಮಿಕ ಇಲಾಖೆಯ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಕಾರ್ಮಿಕ ಇಲಾಖೆಯಲ್ಲಿ ಯಾವುದೇ ರೀತಿಯಾದಂಥ ಅಧಿಕಾರ ಇಲ್ಲ. ಆ ಇಲಾಖೆಯಲ್ಲಿ ಮಂತ್ರಿಗಳು ಇದ್ದಾರೆ ಕಮಿಷನ್‌ರವರು ಇದ್ದಾರೆ ಮತ್ತು ಕಾರ್ಯದರ್ಶಿಗಳೂ ಇದ್ದಾರೆ. ಆದರೆ ಅಧಿಕಾರಿಗಳಿಗೆ ಇರುವ ಅಧಿಕಾರ ಮಾತ್ರ ಕಡಿಮೆ ಮತ್ತು ಇಲಾಖೆಗೆ ಇರುವ ಅಧಿಕಾರವೂ ಕಡಿಮೆ ಎಂದು ಹೇಳಬೇಕಾಗುತ್ತದೆ. ಮತ್ತು ಇರತಕ್ಕಂಥ ಅಧಿಕಾರಿಗಳಿಗೆ ಇರುವಂಥ ಅಧಿಕಾರ ಎಷ್ಟು ಎನ್ನುವುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಏಕೆಂದರೆ ಈ ಅಧಿಕಾರಿಗಳು ಕೇವಲ ಪಂಚಾಯತಿ ಅಧಿಕಾರಿಗಳಾಗಿದ್ದಾರೆಯೋ ವಿನಹ ಬೇರೆ ಯಾವುದೇ ತರಹದ ಅಧಿಕಾರವು ಇವರಿಗೆ ಇಲ್ಲ. ಇದನ್ನು ನಾವು ಈಗ ನೋಡುತ್ತಾ ಇದ್ದೇವೆ. ಬೇರೆ ಉದಾಹರಣೆಗಳನ್ನು ಈ ಬಗ್ಗೆ ಕೊಡುವುದಕ್ಕಿಂತಲೂ ನನ್ನದೆ ಒಂದು ಉದಾಹರಣೆಯನ್ನು ಹೇಳುತ್ತೇನೆ ದಾವಣಗೆರೆಯಲ್ಲಿ ಮಿಲ್‌ಗಳು ಮುಚ್ಚಿವೆ. ಅವುಗಳನ್ನು ತಪ್ಪಿಸಬೇಕು. ಅದಕ್ಕಾಗಿ ನಾವು ಯಾರ ಮೊರೆ ಹೋಗಬೇಕು ? ಕಾರ್ಮಿಕ ಇಲಾಖೆಯ ಮೊರೆ ಹೋಗಬೇಕಾಗುತ್ತದೆ. ಕಾರ್ಮಿಕ ಆಯುಕ್ತರ ಬಳಿಗೆ ಹೋಗಬೇಕಾಗುತ್ತದೆ. ಅವರು ಯಾವುದೇ ಮೀಟಿಂಗ್‌ಗೆ, ಯಾವುದೇ ಒಂದು ಮಾತುಕತೆಗೆ ಕರೆದರೆ ಬರುವುದಿಲ್ಲ. ಹೀಗೆ ಏಕೆ ?

ಏಕೆ ಎಂದರೆ ಅವರು ಏನೂ ಮಾಡುವುದಿಲ್ಲ ಅವರಿಗೆ ಗೊತ್ತು ಇವರ ಕೈಯಲ್ಲಿ ಅಧಿಕಾರವಿಲ್ಲ ಎಂದು. ಒಬ್ಬ ಪೋಲೀಸಿನವನು ಕರೆದರೆ ಸುಮ್ಮನೆ ಬರುತ್ತಾರೆ ಅದೇ ಒಬ್ಬ ಕಾರ್ಮಿಕ ಆಯುಕ್ತರು ಪತ್ರ ಬರೆದು ಇಂತಹ ದಿವಸ ಮೀಟಿಂಗ್ ಇದೆ ಅಥವಾ ಈ ಸಭೆಯಲ್ಲಿ ತಾವು ಭಾಗವಹಿಸಬೇಕೆಂದು ಹೇಳಿದರೆ ಅವರು ಖಂಡಿತ ಬರುವುದಿಲ್ಲ ಮಾತ್ರವಲ್ಲ ಬರುವುದಕ್ಕಾಗುವುದಿಲ್ಲವೆಂದು ಪತ್ರ ಕೂಡ ಬರೆಯುವುದಿಲ್ಲ. ಆ ಮಟ್ಟದಲ್ಲಿ ಇವತ್ತು ಕಾರ್ಮಿಕ ಇಲಾಖೆಯ ಅಧಿಕಾರ ಇದೆ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೂ, ಮಂತ್ರಿಗಳಿಗೂ ಅಧಿಕಾರವಿಲ್ಲ.

ಶ್ರೀ ಎಂ. ಎಸ್, ಕೃಷ್ಣನ್.—ಇವತ್ತು ಮಂತ್ರಿಗಳಿಗೂ ಕೂಡ ಅಧಿಕಾರ ವಿಲ್ಲದಂತಾಗಿದೆ ನಮ್ಮ ಕಾರ್ಮಿಕ ಮಂತ್ರಿಗಳೇನೋ ಸಭೆಗೆ ಅವರನ್ನು ಕರೆಯುತ್ತಾರೆ ಆದರೆ ಅವರು ಬರುವುದಿಲ್ಲ ಅದೇ ಪಟೇಲ್‌ರವರು ಕರೆದರೆ ಬರುತ್ತಾರೆ ಮಾಲೀಕರುಗಳೆಲ್ಲಾ ಅವರನ್ನು ಒಳ್ಳೆಯವರೆಂದು ತಿಳಿದುಕೊಂಡಿದ್ದಾರೆ. ನಿಮ್ಮ ಬಗ್ಗೆ ಕೆಟ್ಟ ಅಭಿಪ್ರಾಯವಿರುವ ಹಾಗೆ ಇದೆ.

ಶ್ರೀ ಪಂಪಾಪತಿ.—ಆದ್ದರಿಂದ ಇವರಿಗೆ ಸ್ವಲ್ಪ ಹೆಚ್ಚು ಅಧಿಕಾರ ಬೇಕು ಮಂತ್ರಿಗಳು ಕರೆದರೆ ನಾವು ಹೋಗದಿದ್ದರೆ ನಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನತಕ್ಕಂತಹ ಭಾವನೆ ಅವರಿಗೆ ಬರಬೇಕು. ಇವರು ಏನು ಮಾಡುತ್ತಾರೋ ಮಾಡಲಿ ನೋಡೋಣ ಎನ್ನುವ ಭಾವನೆ ಅವರಿಗೆ ಇದೆ. ಆದ್ದರಿಂದ ಹೆಚ್ಚಿನ ಅಧಿಕಾರವನ್ನು ಕಾರ್ಮಿಕ ಇಲಾಖೆಗೆ ಕೊಡಬೇಕು ಈಗಿರುವ ಕಾರ್ಮಿಕ ಮಂತ್ರಿಗಳು ಕಾರ್ಮಿಕರಾಗಿದ್ದಂತಹವರು ಅವರು ಇನ್ನೂ ಚೆನ್ನಾಗಿ ಕೆಲಸ ಮಾಡಬೇಕು ಅವರು ಕಾರ್ಮಿಕ ಸಮಸ್ಯೆಗಳನ್ನು ತಿಳಿದುಕೊಂಡಂತಹವರು ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಪ್ರಯತ್ನ ಪಡುತ್ತಾರೆ. ಆದರೆ ಅದಕ್ಕೆ ಸರಿಯಾದಂಥ ಪ್ರೋತ್ಸಾಹ ಸಿಗುತ್ತಿಲ್ಲ ಸ್ವಲ್ಪ ಅಧಿಕಾರ ವ್ಯಾಪ್ತಿ ಹೆಚ್ಚಾದರೆ ಖಂಡಿತವಾಗಲೂ ಕೂಡ ಕಾರ್ಮಿಕಮಂತ್ರಿಗಳ ಬಗ್ಗೆ ಅಥವಾ ಅವರು ಕರೆದಂತಹ ಸಭೆಗಳಿಗೆ ಆಡಳಿತ ಮಂಡಲಿಯವರು ಹೋಗುತ್ತಾರೆ. ದಾವಣಗೆರೆಯವರು ಮಾತ್ರವಲ್ಲ ಯಾವುದೇ ಕೈಗಾರಿಕಾ ಆಡಳಿತ ಮಂಡಲಿಯವರೂ ಕೂಡ ಇವರ ಮಾತಿಗೆ ಬೆಲೆ ಕೊಡುತ್ತಾರೆ. ಕೈಗಾರಿಕಾ ಮಂಡಲಿಯವರು ಕಾರ್ಮಿಕ ಇಲಾಖೆಯನ್ನು ಬಹಳ ನಿರ್ಲಕ್ಷ್ಯತನದಿಂದ ನೋಡುತ್ತಾರೆಂದು ಹೇಳಿದರೆ ತಪ್ಪೇನೂ ಅಲ್ಲ ಬೇರೆ ಯಾವುದೇ ಇಲಾಖೆಗೆ ಇಂತಹ ಒಂದು ಪರಿಸ್ಥಿತಿ ಇಲ್ಲ. ಇಂತಹ ಹೀನ ಸ್ಥಿತಿಯಲ್ಲಿ ಕಾರ್ಮಿಕ ಇಲಾಖೆ ನಡೆಯುತ್ತಿದೆ ಎಂದು ಹೇಳಿದರೆ ಅತಿಶಯೋಕ್ತಿಯೇನೂ ಅಲ್ಲ. ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೇ. ಕಾರ್ಮಿಕ ಇಲಾಖೆಯ ಆಡಳಿತ ವರ್ಗದವರ ಮೇಲಾಗಲೀ ಅಥವಾ ಕಾರ್ಮಿಕರ ಮೇಲಾಗಲೀ ಯಾರು ತಪ್ಪು ಮಾಡಿರುತ್ತಾರೆ ಅವರ ಮೇಲೆ ಏನಾದರೂ ಕ್ರಮ ಕೈಗೊಳ್ಳತಕ್ಕಂತಹ ಅಥವಾ ಅವರನ್ನು ಹದ್ದುಬಸ್ತಿಗೆ ಇಡತಕ್ಕಂತಹ ಒಂದು ಕಾಯಿದೆಯನ್ನು ತಿದ್ದುಪಡಿ ಮಾಡಿ ತರಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ,

ಶ್ರೀ ಎಂ. ಎಸ್. ಕೃಷ್ಣನ್.—ತಿದ್ದುಪಡಿ ಮಸೂದೆ ಮಾಡಿದ್ದಾರೆ ಆ ಮಸೂದೆಗೆ ಅಸೆಂಟ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಸ್. ಕೆ. ಕಾಂತ.—ಗೆಜೆಟ್ಟನಲ್ಲಿ ಬಂದಿದೆ.

ಶ್ರೀ ಪಂಪಾಪತಿ.—ಪಾಸ್ ಆಗಿದ್ದರೆ ತಕ್ಷಣ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ನಮ್ಮ ರಾಜ್ಯದಲ್ಲಿ ಸುಮಾರು ಹತ್ತು ನೂಲಿನ ಗಿರಣಿಗಳು ಮುಚ್ಚಿವೆ ದಾವಣಗೆರೆಯಲ್ಲಿ-೪, ಬಿಜಾಪುರದಲ್ಲಿ ಒಂದು ರಾಯಚೂರಿನಲ್ಲಿ ಒಂದು, ಬಾಗಲಕೋಟೆಯಲ್ಲಿ ಒಂದು, ಬೆಳಗಾಂನಲ್ಲಿ ಒಂದು, ಮತ್ತು ಇಲ್ಲಿನ ರಾಮ್‌ಕುಮಾರ್ ಮಿಲ್ ಒಂದು ಹೀಗೆ ಎಲ್ಲಾ ಸೇರಿ ಹತ್ತು ಗಿರಣಿಗಳು ಮುಚ್ಚಿದೆ ಇರತಕ್ಕಂಥಾದ್ದು ೩೦ ಅದರಲ್ಲಿ ೧೦ ಗಿರಣಿಗಳು ಮುಚ್ಚಿ ಹೋಗಿದೆ ಇದರಿಂದಾಗಿ ಕನಿಷ್ಟ ಪಕ್ಷ ೧೦ ಸಾವಿರ ಜನರಿಗೆ ಕೆಲಸ ವಿಲ್ಲ ಹತ್ತು ಸಾವಿರ ಜನರಿಗೆ ಕೆಲಸವಿಲ್ಲವೆಂದರೆ ಹತ್ತು ಸಾವಿರ ಕುಟುಂಬಗಳು ಇವತ್ತು ನಿರುದ್ಯೋಗದಲ್ಲಿದೆ ಎಂದು ಅರ್ಥ ಹತ್ತು ಸಾವಿರ ಕುಟುಂಬಗಳು ನಿರುದ್ಯೋಗದಲ್ಲಿದ್ದರೆ ಏನು ಗತಿಯಾಗಬಹುದು ಅದನ್ನು ವಿಚಾರ ಮಾಡಬೇಕು. ಒಂದು ಕಡೆ ಕೈಮಗ್ಗದವರಿಗೆ ನೂಲು ಇಲ್ಲ ಎನ್ನತಕ್ಕಂತಹ ಕೂಗು ಇದೆ ಇನ್ನೊಂದು ಕಡೆ ನೂಲು ತಯಾರು ಮಾಡತಕ್ಕಂತಹ ಮಿಲ್‌ಗಳು ಏನು ಇವೆ ಅವು ಮುಚ್ಚಿ ಹೋಗಿದೆ ಅದಕ್ಕೆ ಹಲವಾರು ಕಾರಣಗಳು ಇರಬಹುದು. ರಾಮ್‌ಕುಮಾರ್ ಮಿಲ್ ಮುಚ್ಚಿರುವುದು ಆ ಮಾಲೀಕನ ಹಠಮಾರೀತನದಿಂದ. ದಾವಣಗೆರೆ ಮಿಲ್ಲನ್ನು ಮುಚ್ಚಿರುವುದು ಇವತ್ತು ಹಣ ಇಲ್ಲ ಎನ್ನುವುದರಿಂದ ಇವತ್ತು ಕೋ-ಆಪರೇಟಿವ್ ಮಿಲ್‌ಗಳನ್ನು ಮುಚ್ಚಿರುವುದು ದುರ್ವ್ಯವಹಾರ ಮಾಡಿ

ಹಣವನ್ನು ತಂದು ಹಾಕಿ ಮಿಲ್ಲನ್ನು ಮುಚ್ಚಿಹಾಕಿದ್ದಾರೆ, ಒಂದೊಂದು ಕಡೆ ಒಂದೊಂದು ರೀತಿಯಾಗಿ ಈ ಕೈಗಾರಿಕೆಗಳು ಮುಚ್ಚಿಹೋಗಿವೆ. ಇಂಥ ಒಂದು ಕೈಗಾರಿಕೆಗಳನ್ನು ಪ್ರಾರಂಭಮಾಡಬೇಕು. ಇವತ್ತು ಕಾರ್ಮಿಕ ಇಲಾಖೆ ಇದರ ಬಗ್ಗೆ ಪ್ರಯತ್ನ ಪಡಬೇಕಾಗುತ್ತದೆ. ಆದರೆ ಅವರ ಪ್ರಯತ್ನ ಇಲ್ಲಿಯವರೆಗೆ ಫಲಕಾರಿಯಾಗಿಲ್ಲ. ಫಲಕಾರಿಯಾಗುವ ರೀತಿಯಲ್ಲಿ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಈ ಕಾರ್ಮಿಕರ ಕಾಯ್ದೆ ಬಂದದ್ದು ೧೯೨೬ ರಲ್ಲಿ.

ಶ್ರೀ ಎಂ. ಎಸ್. ಕೃಷ್ಣನ್. —ಶಿಸ್ತಿನ ಕ್ರಮ ಏನು ಕೈಗೊಳ್ಳುತ್ತಾರೋ ನನಗಂತೂ ಗೊತ್ತಿಲ್ಲ. ಪ್ರತಿಯೊಂದು ಸಾರಿ ನಾವು ಹೇಳಿ ಹೇಳಿ ಸಾಕಾಗಿ ಹೋಗಿದೆ. ನಾವು ಇಲ್ಲಿ ಹೇಳಿ ಹೇಳಿ ಒಂದು ರೀತಿ ಅರಣ್ಯ ರೋಧನ ಕಂಠಶೋಷಣೆ ಆದ ಹಾಗೆ ಆಗಿದೆ. ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಿ, ಅಲ್ಲಿ ಕೆಲಸಗಾರರಿಗೆ ಅನ್ಯಾಯವಾಗುತ್ತದೆ ಎಂದು ಹೇಳಿ ಹೇಳಿ ಸಾಕಾಗಿ ಹೋಗಿದೆ. ಅವರನ್ನು ಇವರು ಕರೆಸುತ್ತಾರೆ, ಅವರು ಬರುವುದಿಲ್ಲ. ಇವರ ಮಾತನ್ನೇ ಕೇಳುವುದಿಲ್ಲ ಈ ಸರ್ಕಾರಕ್ಕೆ ತಾಕತ್ತು ಇಲ್ಲ ಎನ್ನುವ ಹಾಗೆ ಆಗಿದೆ. ಮಂತ್ರಿಗಳ ಬಗ್ಗೆ ನಾನು ವೈಯುಕ್ತಿಕವಾಗಿ ಹೇಳುತ್ತಿಲ್ಲ ಸರ್ಕಾರಕ್ಕೆ ಒಂದು ಗತ್ತು, ಶಿಮ್ಮತ್ತು ಇರಬೇಕು. ಮಾಲೀಕರು ಈ ಸರ್ಕಾರಕ್ಕೆ ಹೆದರಿಕೊಳ್ಳಬೇಕು ಆದರೆ ಅವರು ಹೆದರಿಕೊಳ್ಳುವುದೇ ಇಲ್ಲ ಅವರು ಹೆದರುವಂಥ ಪರಿಸ್ಥಿತಿಯಲ್ಲಿ ಇಲ್ಲ. ಅವರು ಅಂದರೆ ಮಾಲೀಕರು ಸರ್ಕಾರದವರು ನಮ್ಮ ಜೊತೆಯಲ್ಲಿದ್ದಾರೆ ಎಂದು ಅವರು ತಿಳಿದುಕೊಂಡಿದ್ದಾರೆ.

ಶ್ರೀ ಧರ್ಮಸಿಂಗ್. —ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕಾರ್ಮಿಕ ಮಂತ್ರಿಗಳು ಇಷ್ಟಪಟ್ಟರೂ ಬೇರೆ ಶಕ್ತಿಗಳು ಇವೆ, ಇವರನ್ನು ಕ್ರಮ ತೆಗೆದುಕೊಳ್ಳುವುದಕ್ಕೆ ಬಿಡೋದಿಲ್ಲ.

ಶ್ರೀ ಪಂಪಾಪತಿ. —ಈ ಕಾಯ್ದೆ ಬಂದದ್ದು ೧೯೨೬ರಲ್ಲಿ ಅಂದರೆ ಈಗಾಗಲೇ ೬೨ ವರ್ಷ ಆಯಿತು ಈ ಕಾಯ್ದೆ ಇವತ್ತಿನವರೆಗೂ ಕೂಡಾ ಅಸಂಘಟಿತ ಆದಂಥವರನ್ನು ಸಂಘಟನೆ ಮಾಡಬೇಕು ಎಂದು ಪ್ರಯತ್ನ ಎಲ್ಲಿಯಾದರೂ ನಡೆದಿದೆಯೇ ? ಮೊದಲು ಬರಬೇಕಾದವರು ಯಾರು ಅಂದರೆ ಕಾರ್ಮಿಕ ಇಲಾಖೆಯವರು ಆದರೆ ಅವರು ಬರುವುದಿಲ್ಲ. ಪೋಲೀಸ್ ಇಲಾಖೆಯವರು ಬರುತ್ತಾರೆ ಯಾವುದೇ ಒಂದು ಕೈಗಾರಿಕೆಯಲ್ಲಿ ಕಾರ್ಮಿಕರು ತಮ್ಮ ಸಂಘಟನೆಯನ್ನು ರಚನೆ ಮಾಡಿಕೊಂಡು ಹಕ್ಕನ್ನು ಪಡೆಯುವುದಕ್ಕೆ ಪ್ರಯತ್ನಪಟ್ಟಾಗ ಕಾರ್ಮಿಕ ಇಲಾಖೆಯವರು ತಕ್ಷಣ ಬಂದು ಏನಾಗಿದೆ ಎಂದು ಕೇಳುವುದಿಲ್ಲ ಮೊದಲು ಬರತಕ್ಕಂಥವರು ಪೋಲೀಸರು ಲಾಠಿ ಹಿಡಿದುಕೊಂಡು ಇಲ್ಲಿ ಏತಕ್ಕೆ ನಿಂತಿದ್ದೀರಿ ಎಲ್ಲಾ ಹೋಗಿ ಎಂದು ಹೇಳುತ್ತಾರೆ. ಕೈಗಾರಿಕೆಯಲ್ಲಿ ಅಸಂಘಟನೆ ಆದರೆ ಕಾರ್ಮಿಕ ಇಲಾಖೆ ಮಧ್ಯೆ ಪ್ರವೇಶ ಮಾಡಿ ಕಾರ್ಮಿಕರು ಆಡಳಿತ ವರ್ಗದವರಿಗೂ ಒಂದು ಸರಿಯಾದಂಥ ಸಂಬಂಧವನ್ನು ಬೆಳೆಸಿ ಒಂದು ಉತ್ತಮವಾದಂಥ ವಾತಾವರಣವನ್ನು ನಿರ್ಮಾಣ ಮಾಡಿ ಉತ್ಪಾದನೆಯನ್ನು ಹೆಚ್ಚಳ ಮಾಡುವುದಕ್ಕೆ ಸಹಾಯಮಾಡಬೇಕು. ಆ ಒಂದು ಪರಿಸ್ಥಿತಿ ಈಗಂತೂ ಸಧ್ಯಕ್ಕೆ ಇಲ್ಲ ಮುಂದಾದರೂ ಇಂಥ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದಕ್ಕೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಆಶಿಸುತ್ತೇನೆ ಇನ್ನು ಬಾಲ ಕಾರ್ಮಿಕರ ಬಗ್ಗೆ ಹೇಳುವುದಾದರೆ ಈ ಕಾಯ್ದೆಯಂತೂ ದೇವರಿಗೆ ಗೊತ್ತು ಸುಮಾರು ಮೂವತ್ತು ವರ್ಷಗಳ ಹಿಂದೆಯೇ ಇದಕ್ಕೆ ತಿದ್ದುಪಡಿಯನ್ನು ತಂದೆವು. ನಾವು ಎಲ್ಲಾ ಕಡೆ ನೋಡುತ್ತಿದ್ದೇವೆ ಈ ಬಾಲಕಾರ್ಮಿಕರನ್ನು ಕಾರ್ಮಿಕರು ಕೆಲಸವನ್ನು ಮಾಡುತ್ತಾರೆ ಹತ್ತು ವರ್ಷದ ಹುಡುಗ ಹನ್ನೆರಡು ವರ್ಷದ ಹುಡುಗ ಕೆಲಸ ಮಾಡುವುದನ್ನು ನೋಡುತ್ತಿದ್ದೇವೆ. ಅಲ್ಲಿ ಇಲ್ಲಿ ಹೋಗುವುದು ಬೇಡ. ಇಲ್ಲೇ ನಮ್ಮ ಪಕ್ಕದಲ್ಲಿಯೇ ತೆಗೆದುಕೊಳ್ಳೋಣ ಶಾಸಕರ ಭವನದಲ್ಲಿ ಒಂದು ಹೋಟೆಲ್‌ನಲ್ಲಿ ಹತ್ತು ವರ್ಷದ ಹುಡುಗ ಲೋಟ ತೊಳೆಯುತ್ತಾನೆ. ಬೇರೆ ಎಲ್ಲಿ ನಾವು ಹುಡುಕುವುದು ಬೇಡ ವಿಧಾನ ಸೌಧದಲ್ಲಿ ಕಾಯ್ದೆಗಳನ್ನು ಮಾಡತಕ್ಕಂಥ ಸ್ಥಳದಲ್ಲಿ ಹತ್ತು ವರ್ಷದ ಹುಡುಗ ಇವತ್ತು ಕೆಲಸ ಮಾಡುತ್ತಾನೆ. ನಾವು ರಾಜ್ಯದ ತುಂಬಾ ಕಾಯ್ದೆಯನ್ನು ಮಾಡಿ ಬಾಲ ಕಾರ್ಮಿಕರಿಗೆ ನೀವು ಕೆಲಸ ಮಾಡಬಾರದು, ಕೆಲಸವನ್ನು ಕೊಡಬಾರದು. ಅವರನ್ನು ದುಡಿಸ ಬಾರದು ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಬುದ್ಧಿವಂತರನ್ನಾಗಿ ಮಾಡಬೇಕು ಎಂದು ಹೇಳಿ ಏನೆಲ್ಲಾ ಹೇಳುತ್ತೇವೆ. ಇಲ್ಲಿಯೇ ಹೀಗಿರುವಾಗ ಇದನ್ನು ಇಲ್ಲಿ ತಡೆಹಿಡಿಯುವುದಕ್ಕೆ ಆಗದಿದ್ದರೆ ಇದನ್ನು ಎಲ್ಲಿ ತಡೆಹಿಡಿಯುವುದಕ್ಕೆ ಸಾಧ್ಯ ? ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳಬೇಕಾದರೆ ಅಧಿಕಾರಿಗಳು ಚುರುಕಾಗಿರ ಬೇಕು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಕನ್ನಡದಲ್ಲಿ ಒಂದು ಗಾದೆ ಇದೆ ಆಚಾರ ಹೇಳುವುದಕ್ಕೆ ಬದನೆಕಾಯಿ ತಿನ್ನುವುದಕ್ಕೆ ಎಂದು ಹಾಗೆ ಆಗಿದೆ ಇದು.

ಶ್ರೀ ಪಂಪಾಪತಿ.— ಬಾಲಕಾರ್ಮಿಕರ ಕಾಯ್ದೆ ಏನು ಇದೆ, ಈ ಕಾಯ್ದೆ ಇದ್ದೂ ಪ್ರಯೋಜನ ಇಲ್ಲ. ಕಾಯ್ದೆಗೆ ಅರ್ಥ ಬರಬೇಕಾದರೆ ಇದರ ಬಗ್ಗೆ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು ಅಂಥ ಒಂದು ಬಾಲಕಾರ್ಮಿಕರಿಗೆ ಈ ಕಾಯ್ದೆ ಪ್ರಕಾರ ಏನು ಸವಲತ್ತನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ, ಅವರಿಗೆ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಇತ್ತೀಚಿನ ದಿನಗಳಲ್ಲಿ ಮುಷ್ಕರದ ಸಂಖ್ಯೆ ೫೨, ಬೀಗಮುದ್ರೆ ೧೬, ಒಟ್ಟು ೬೮ ಆಗಿದೆ, ಮುಷ್ಕರಕ್ಕೆ ಒಳಪಟ್ಟ ಕಾರ್ಮಿಕರ ಸಂಖ್ಯೆ ೩೫,೧೩೮. ಮಾನವ ದಿನಗಳ ನಷ್ಟದ ಸಂಖ್ಯೆ ೧೦,೪೯,೭೧೧ ಉತ್ಪಾದನೆಯಲ್ಲಿ ಉಂಟಾದ ನಷ್ಟ ರೂ. ೧,೨೪,೭೦,೮೮,೩೮೫-೪೧ ಪೈಸೆಗಳು. ಇಷ್ಟು ಉತ್ಪಾದನೆ ಕುಂಠಿತವಾಗಿದೆ. ೧೨೪ ಕೋಟಿ ಲುಕ್ಸಾನು ಅಲ್ಲದೆ ಸರ್ಕಾರಕ್ಕೆ ಬರಬೇಕಾಗಿದ್ದಂತಹ ಟ್ಯಾಕ್ಸ್ ಎಷ್ಟು, ಒಂದು ಕಡೆ ಹೇಳುತ್ತಾರೆ, ಸಂಬಳ ಕೊಡುವುದಕ್ಕೂ ದುಡ್ಡು ಇಲ್ಲ ಎಂದು ಇವೊತ್ತು ಈ ಕೈಗಾರಿಕೆಗಳು ನಡೆದಿದ್ದರೆ ಖಂಡಿತವಾಗಿಯೂ ಕೂಡ ಸರ್ಕಾರಕ್ಕೆ ಬಹಳಷ್ಟು ಹಣ ಬರುತ್ತಾ ಇತ್ತು. ಏನೂ ಇಲ್ಲ ಅಂದರೂ ಕನಿಷ್ಟ ಪಕ್ಷ ೩೦-೪೦ ಲಕ್ಷ ಒಳಗೆ ಬರಬಹುದಾಗಿತ್ತು. ಇವೊತ್ತು ರಾಮ್‌ಕುಮಾರ್ ಮಿಲ್ ಮುಚ್ಚಿ ಮೂರು ತಿಂಗಳು

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಕಳೆಯಿತು. ಅವರೆಲ್ಲಾ ಬೀದಿಯಲ್ಲಿದ್ದಾರೆ. ಅವರ ಬೇಡಿಕೆಗಳು ಏನು? ಅವರ ಬೇಡಿಕೆಗಳು ಭಾರಿ ಏನೂ ಇಲ್ಲ. ನಮಗೆ ಕೆಲಸ ಕೊಡಿ ಎಂದು ಕೇಳಿದ್ದಾರೆ. ಮಾಲೀಕರು ಹೇಳುತ್ತಾರೆ ಒಬ್ಬೊಬ್ಬರೂ ಸಹಿ ಮಾಡಿ ಬರಬೇಕು ಎಂದು. ಒಬ್ಬೊಬ್ಬರೂ ಸಹಿ ಮಾಡಿ ಯಾಕೆ ಬರಬೇಕು? ಒಬ್ಬೊಬ್ಬರೂ ಬರುವ ಅಗತ್ಯ ಇಲ್ಲ. ಕಾರ್ಮಿಕ ಸಂಘಟನೆ ಇದೆ, ಅವರುಗಳ ಜೊತೆ ಚರ್ಚಿಸಬಹುದು. ಕಾರ್ಮಿಕ ಸಚಿವರು, ಅವರ ಇಲಾಖೆಗಳ ಅಧಿಕಾರಿಗಳು ಆ ಮಾಲೀಕರ ಜೊತೆ ಚರ್ಚೆ ನಡೆಸಿ ಆದಷ್ಟು ಬೇಗ ಈ ಕಾರ್ಖಾನೆಯನ್ನು ಪ್ರಾರಂಭಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಅರ್ಧ ಗಂಟೆ ಆಯಿತು ಮುಗಿಸಿ.

ಶ್ರೀ ಪಂಪಾಪತಿ.— ನನಗೆ ಒಂದು ಗಂಟೆ ಕಾಲಾವಕಾಶ ಕೊಡಿ ಎಂದು ನಾನು ಮಾನ್ಯ ಉಪಾಧ್ಯಕ್ಷರನ್ನು ಕೇಳಿದ್ದೆ.

ಅಧ್ಯಕ್ಷರು.— ಹತ್ತು ಮಿನಿಟ್ ಹೆಚ್ಚು ತೆಗೆದುಕೊಂಡಿದ್ದೀರಿ. ಇನ್ನೂ ಬಹಳ ಜನ ಮಾತನಾಡಲು ಇದ್ದಾರೆ. ೫ ಗಂಟೆಯೊಳಗೆ ಎಲ್ಲರದ್ದೂ ಮುಗಿಯಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ತಾವು ಹೊಸ ರೆಕಾರ್ಡ್ ಅನ್ನು ಸ್ಥಾಪನೆ ಮಾಡಿದ್ದೀರಿ. ತಮಗೆ ಒಂದು ಡಿಮ್ಯಾಂಡ್ ಪಾಸ್ ಮಾಡುವುದು.

ಅಧ್ಯಕ್ಷರು.— ನಿನ್ನೆ ಮಾನ್ಯ ಮಂತ್ರಿಗಳು ಅರ್ಧ ತಾಸಿನಲ್ಲಿ ಉತ್ತರ ಹೇಳಿದ್ದಾರೆ. ಲಾಸ್ಟ್ ಹೇಳಿಬಿಡಿ.

ಶ್ರೀ ಪಂಪಾಪತಿ.— ೧೯೭೩ರ ಕಾರ್ಮಿಕ ಪರಿಹಾರ ಕಾಯಿದೆ ಪ್ರಕಾರ ೧,೩೭.೫೬,೧೩೩-೩೨ ರೂಪಾಯಿಗಳನ್ನು ಪರಿಹಾರ ರೂಪದಲ್ಲಿ ವಿತರಣೆ ಮಾಡಲಾಗಿದೆ ಎಂದು ಹೇಳಿದ್ದೀರಿ. ಯಾವ ರೀತಿ ವಿತರಣೆ ಆಗಿದೆ ಎಂಬುದರ ಬಗ್ಗೆ ತಿಳಿಸಬೇಕು. ಇನ್ನು ಬೀಡಿ ಕಾರ್ಮಿಕರ ಬಗ್ಗೆ ಹೇಳುವುದಾದರೆ ಬೀಡಿ ಕಾರ್ಮಿಕರ ಕಲ್ಯಾಣ ಯೋಜನೆ ಇದೆ. ದಯವಿಟ್ಟು ಬೀಡಿ ಕಾರ್ಮಿಕರಿಗೆ ತಾವು ಕೊಡತಕ್ಕ ಸವಲತ್ತುಗಳನ್ನು ಆದಷ್ಟು ಹೆಚ್ಚು ತೀವ್ರ ಗತಿಯಲ್ಲಿ ಚುರುಕುಗೊಳಿಸಿ ಕೊಡಿ, ದಾವಣಗೆರೆಯಲ್ಲಿ ಬೀಡಿ ಕಾರ್ಮಿಕರಿಗೆ ನಿವೇಶನಗಳನ್ನು ಹಂಚುವುದಕ್ಕೆ ನಿಮ್ಮ ಇಲಾಖೆಯ ವತಿಯಿಂದ ಮನೆಗಳನ್ನು ಕೊಡಿಸತಕ್ಕಂಥ ಮತ್ತು ಇತರ ಸವಲತ್ತುಗಳನ್ನು ಒದಗಿಸಿಕೊಡಲು ಹೆಚ್ಚು ಗಮನ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಮುಕ್ತಾಯ ಮಾಡಿ ಸಾಗಾವರೆ,

ಶ್ರೀ ಪಂಪಾಪತಿ.— ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ದಾಖಲು ಆಗಿರತಕ್ಕ ಜೀವಂತ ದಾಖಲೆಯಲ್ಲಿ ಅಭ್ಯರ್ಥಿಗಳ ವಿಂಗಡಣೆ ಎಲ್ಲಾ ಒಟ್ಟು ಸೇರಿಸಿದರೆ ೧೦ ಲಕ್ಷ ೬ ಸಾವಿರ ೭೫೮ ಜನ

ಇದ್ದಾರೆ. ಇದು ಬಹಳ ದೊಡ್ಡ ಸಂಖ್ಯೆ ಆಗಿದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ನೋಂದಣಿ ಮಾಡಿಸಿದ್ದರೆ ಯಾವ ರೀತಿ ಅವರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡುತ್ತೀರಿ?

ಶ್ರೀ ಎಸ್. ಕೆ. ಕಾಂತ.— ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ನೋಂದಣಿ ಮಾಡತಕ್ಕ ಕೆಲಸ ಮಾತ್ರ ಇದೆ, ಕೆಲಸ ಕೊಡತಕ್ಕದ್ದು ಅಲ್ಲ.

ಶ್ರೀ ಪಂಪಾಪತಿ.— ಯಾಕೆಂದರೆ ನಮ್ಮಲ್ಲಿ ನಿರುದ್ಯೋಗ ಎಷ್ಟು ಇದೆ ಎಂದು ಒಂದು ಸಂಖ್ಯೆಯನ್ನು ನೋಡಿದರೆ ಗೊತ್ತಾಗುತ್ತದೆ. ಅಕ್ಷರಸ್ಥರು ಮತ್ತು ಅನಕ್ಷರಸ್ತರು ಎರಡೂ ಸೇರಿಸಿದರೆ ಒಟ್ಟು ೧೧,೦೬,೭೫೮ ಆಗುತ್ತದೆ.ನಮ್ಮ ರಾಜ್ಯದಲ್ಲಿ ನಿರುದ್ಯೋಗಿಗಳ ಸಂಖ್ಯೆ ಬಹಳ ಜಾಸ್ತಿಯಾಗುತ್ತಿದೆ. ಈ ನಿರುದ್ಯೋಗಿಗಳ ಸಂಖ್ಯೆ ಇದೇ ರೀತಿ ಜಾಸ್ತಿಯಾಗುತ್ತಾ ಹೋದರೆ ನಮ್ಮ ಈ ಬಂಡವಾಳಶಾಹಿ ಸಮಾಜದಲ್ಲಿ ಜನರು ರೊಚ್ಚಿಗೇಳುವ ಪರಿಸ್ಥಿತಿ ಬರಬಹುದು, ಅನೇಕ ಅನಾಹುತಗಳಾಗಬಹುದು. ಆದ್ದರಿಂದ ಇದನ್ನು ತಡೆಗಟ್ಟುವಂತಹ ಒಂದು ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕು. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಕಛೇರಿ ಇದೆ. ಅಲ್ಲಿ ತಮ್ಮ ಹೆಸರುಗಳನ್ನು ಬರೆಸಿ ಎಂದು ಹೇಳಿಬಿಟ್ಟರೆ ಆಗುವುದಿಲ್ಲ. ಅಲ್ಲಿ ಹೆಸರು ಬರೆಸಿದರೆ ನಾಳೆ ಕೆಲಸ ಸಿಗುತ್ತದೆ ಎಂಬ ನಂಬಿಕೆ ಜನರಲ್ಲಿ ಬರಬೇಕು ಇಂದಲ್ಲ ನಾಳೆ ಕೆಲಸ ಸಿಗುತ್ತದೆ ಎಂಬ ಭರವಸೆ ಬೇಕು. ಇಲ್ಲದಿದ್ದರೆ ಪ್ರತಿ ವರ್ಷವೂ ನಿರುದ್ಯೋಗಿಗಳಾದವರು ತಮ್ಮ ಹೆಸರನ್ನು ನೋಂದಣಿ ಮಾಡುತ್ತಿರಬೇಕೆಂದರೆ ಬಹಳ ಬೇಸರ ಬರುತ್ತದೆ. ಇದರ ಕಡೆಗೆ ಕಾರ್ಮಿಕ ಇಲಾಖೆ ಗಮನ ಕೊಡುವುದಕ್ಕಾಗದಿದ್ದರೆ ಸರ್ಕಾರವಾದರೂ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ತಾವು ಮುಕ್ತಾಯ ಮಾಡಿ. ಇನ್ನೂ ೧೯ ಜನ ಮಾತನಾಡುವವರಿದ್ದಾರೆ. ಒಬ್ಬೊಬ್ಬರಿಗೆ ಹತ್ತತ್ತು ನಿಮಿಷಗಳ ಕಾಲ ಅವಕಾಶ ಕೊಟ್ಟರೂ ಸಹ ಚರ್ಚೆ ಮುಗಿಯಲು ಆರೂವರೆ ಗಂಟೆ ಆಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.— ನನಗೆ ಮಾತನಾಡಲು ಅವಕಾಶ ಕೊಡದಿದ್ದರೂ ಪರವಾಗಿಲ್ಲ, ಅವರಿಗೆ ಹೆಚ್ಚಿನ ಸಮಯ ಕೊಡಿ.

ಅಧ್ಯಕ್ಷರು.— ನಿಮ್ಮ ಪಕ್ಷದಲ್ಲಿ ನಾಲ್ಕು ಮಂದಿ ಸದಸ್ಯರಿದ್ದಾರೆಂದು ಅವರಿಗೆ ಮಾತನಾಡಲು ಅರ್ಧ ಗಂಟೆ ಅವಕಾಶ ಕೊಟ್ಟಿದ್ದೇನೆ,

ಶ್ರೀ ಕೆ. ಬಿ. ಶಾಣಪ್ಪ.— ಇಲ್ಲಿ ನಮ್ಮದು ಮೂರನೇ ದೊಡ್ಡ ವಿರೋಧ ಪಕ್ಷವಾಗಿದೆ.

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.— ಕಾರ್ಮಿಕ ಇಲಾಖೆಯ ಮೇಲೆ ಮಾತನಾಡುವವರು ಬಹಳ ಕಡಿಮೆ ಇದ್ದಾರೆ, ಆದ್ದರಿಂದ ಅವರಿಗೆ ಹೆಚ್ಚು ಸಮಯ ಕೊಡಿ.

ಶ್ರೀ ಕೆ. ಬಿ. ಶಾಣಪ್ಪ.— ನಮ್ಮದು ಕಡಿಮೆ ಸದಸ್ಯರು ಇರುವ ಪಕ್ಷ ಎಂದು ತಾವು ಹೇಳಿದಿರಿ.

ಅಧ್ಯಕ್ಷರು.— ನಿಮ್ಮ ಪಕ್ಷದಲ್ಲಿ ನಾಲ್ಕು ಮಂದಿ ಸದಸ್ಯರಿದ್ದಾರೆ, ಸಿ.ಪಿ.ಐ.(ಎಂ)ನಲ್ಲಿ ಇಬ್ಬರು ಸದಸ್ಯರಿದ್ದಾರೆ, ಬಿ.ಜೆ.ಪಿ.ಯಲ್ಲಿ ಒಬ್ಬರು ಸದಸ್ಯರಿದ್ದಾರೆ, ಎಂ.ಇ.ಎಸ್.ನವರು ೩ ಮಂದಿ ಸದಸ್ಯರು ಇದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ.—೧೯೬೯ರಲ್ಲಿ ಕಾಂಗ್ರೆಸ್ ಪಕ್ಷ ಒಡೆದು ಇಬ್ಭಾಗವಾದಾಗ ಶ್ರೀಮತಿ ಇಂದಿರಾಗಾಂಧಿ ಅವರ ಪಕ್ಷದಲ್ಲಿ ಕಡಿಮೆ ಸದಸ್ಯರಿದ್ದರು, ಆಗ ನಮ್ಮ ಪಕ್ಷ ಅವರಿಗೆ ಸಪೋರ್ಟ್ ಮಾಡಿತು. ಅವರ ಒಳ್ಳೆಯ ಕಾರ್ಯಕ್ರಮಗಳಿಗೆ ನಮ್ಮ ಪಕ್ಷ ಸಪೋರ್ಟ್ ಮಾಡಿತು. ಆದ್ದರಿಂದ ನಮ್ಮದು ಸಣ್ಣ ಪಕ್ಷವಲ್ಲ, ನಾವೂ ಸಹ ಒಳ್ಳೊಳ್ಳೆಯ ಕೆಲಸ ಮಾಡಿದ್ದೇವೆ.

ಶ್ರೀ ಪಂಪಾಪತಿ.—ಇನ್ನು ಪುಟ ೨೩ ರಲ್ಲಿ ತರಬೇತಿ ಕೊಡುವ ಬಗ್ಗೆ ಏನು ಹೇಳಿದ್ದಾರೆಂದರೆ.—

> "ತರಬೇತಿಯಲ್ಲಿ ನಿಪುಣತೆ ಹೆಚ್ಚಿಸಲು ಭಾರತ ಸರ್ಕಾರವು ವಿಶ್ವ ಬ್ಯಾಂಕಿನ ನೆರವು ಕಲ್ಪಿಸಿಕೊಡುವ ಆಲೋಚನೆಯು ಚರ್ಚೆಯ ಹಂತದಲ್ಲಿದೆ"

ಎಂದು ಹೇಳಿದ್ದಾರೆ. ಮತ್ತೆ ಪ್ಲಾಸ್ಟಿಕ್ ಮತ್ತು ಎಲೆಕ್ಟ್ರಾನಿಕ್ ವೃತ್ತಿಯಲ್ಲಿ ತರಬೇತಿ ನೀಡುವ ವಿಚಾರವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಈ ಕೆಲಸವನ್ನು ಜಾಗ್ರತೆ ಮಾಡಬೇಕು ಮತ್ತು ಇದನ್ನು ದಾವಣಗೆರೆಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ರಾಜ್ಯದ ಬಗ್ಗೆ ಮಾತನಾಡಲಿ ಎಂದು ಹೆಚ್ಚು ಸಮಯ ಕೊಡಿಸಿದರೆ ಕೇವಲ ದಾವಣಗೆರೆಯ ಬಗ್ಗೆ ಮಾತ್ರ ಮಾತನಾಡುತ್ತಿದ್ದೀರಲ್ಲ !

ಶ್ರೀ ಪಂಪಾಪತಿ.—ಬೇರೆ ಕಡೆಯಲ್ಲಿಯೂ ಮಾಡಲಿ. ಆದರೆ ನಮ್ಮ ದಾವಣಗೆರೆಯನ್ನು ಮರೆಯಬೇಡಿ ಎಂದು ಹೇಳುತ್ತಿದ್ದೇನೆ. ನಮ್ಮ ದಾವಣಗೆರೆಯಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ೧೪೪ ಹಿರಿಯ ಅಭ್ಯರ್ಥಿಗಳು ಮತ್ತು ೨೧೬ ಕಿರಿಯ ಅಭ್ಯರ್ಥಿಗಳು ತರಬೇತಿ ಪಡೆಯುತ್ತಿದ್ದಾರೆಂದು ಇಲ್ಲಿ ಹೇಳಿದ್ದಾರೆ. ನಮ್ಮ ಐ.ಟಿ.ಐ. ಕೇಂದ್ರದಲ್ಲಿ ವಿಶಾಲವಾದ ಸ್ಥಳ ಇದೆ. ಆದ್ದರಿಂದ ಇದನ್ನು ಇನ್ನೂ ಅಭಿವೃದ್ಧಿ ಪಡಿಸಲು ಅವಕಾಶ ಇದೆ. ಮಾನ್ಯ ಮಂತ್ರಿಗಳು ಒಂದು ಸಲ ಅಲ್ಲಿಗೆ ಬಂದು ಸ್ಥಳ ಪರಿಶೀಲನೆ ಮಾಡಬಹುದು. ಅಲ್ಲಿಗೆ ತರಬೇತಿ ಪಡೆಯಲು ಹುಬ್ಬಳ್ಳಿ, ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ ಮುಂತಾದ ಕಡೆಗಳಿಂದ ಅಭ್ಯರ್ಥಿಗಳು ಬರುತ್ತಾರೆ. ದಾವಣಗೆರೆ ಎಲ್ಲ ಸ್ಥಳಗಳಿಗೂ ಮಧ್ಯದಲ್ಲಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಆದ್ದರಿಂದ ಅದನ್ನು ಅಭಿವೃದ್ಧಿ ಪಡಿಸಲು ಮಾನ್ಯ ಮಂತ್ರಿಗಳು ಹೆಚ್ಚಿನ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾಡಿಯಲ್ಲೂ ಕೂಡ ತಾವು ಐ.ಟಿ.ಸಿ. ಯನ್ನು ಪ್ರಾರಂಭಿಸಬೇಕು ಎಂದು ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ.

೩-೩೦ ಪಿ.ಎಂ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಮಂತ್ರಿಗಳು ಅವಕ್ಕೆ ಒಪ್ಪಿದ್ದಾರೆ. ಹಣದ ಕೊರತೆ ಇದೆ ಅದನ್ನು ಈ ವರ್ಷ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಪಂಪಾಪತಿ.—ಈಗ ಎನ್.ಟಿ.ಸಿ. ಬಗ್ಗೆ ನಾನು ಏನೂ ಹೇಳಬೇಕಾಗಿಲ್ಲ. ಎನ್.ಟಿ.ಸಿ. ಮಿಲ್‌ನಿಂದಲೇ ಮಾನ್ಯ ಮಂತ್ರಿಗಳು ಬಂದವರು. ಎನ್.ಟಿ.ಸಿ. ಮಿಲ್ ಈಗಾಗಲೇ ಗುಲ್ಬರ್ಗಾನಲ್ಲಿ ಮುಚ್ಚಿ ಹೋಗಿದೆ. ಇನ್ನು ಮಿನರ್ವ ಮಿಲ್, ರಾಜಾ ಮಿಲ್ ಸ್ಥಿತಿ ಅಷ್ಟೊಂದು ಸರಿಯಿಲ್ಲ. ಆದ್ದರಿಂದ ತಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಸಮಾಲೋಚಿಸಿ, ಎನ್.ಟಿ.ಸಿ. ಅಧ್ಯಕ್ಷರ ಜೊತೆಯಲ್ಲಿ ಸಮಾಲೋಚನೆಮಾಡಿ ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಎಲ್ಲರೀತಿಯಿಂದಲೂ ಅವರಿಗೆ ಸರ್ಕಾರ ಸಹಾಯ ಮಾಡುತ್ತದೆ. ಸರ್ಕಾರದ ಸಹಾಯವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಜನರಿಗೆ ಉದ್ಯೋಗವನ್ನು ಒದಗಿಸಿಕೊಡುವುದು ಬಿಟ್ಟು ಖಾಸಗಿ ಮಾಲೀಕರು ಮಾಡುವಂಥ ರೀತಿಯಲ್ಲಿ ಮಾಡುವುದು ಸರಿಯಲ್ಲ. ಕಾರ್ಮಿಕರಿಗೆ ಅನ್ಯಾಯವಾಗದ ರೀತಿಯಲ್ಲಿ ಅವರಿಗೆ ಉದ್ಯೋಗ ಒದಗಿಸುವಂಥ ವ್ಯವಸ್ಥೆ ಮಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಇ.ಎಸ್.ಐ ಇದೆ. ೬-೧೧-೧೯೮೮ರ ಪತ್ರದ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ೩ ಲಕ್ಷ ೯೧ ಸಾವಿರ ವಿಮಾದಾರರಾಗಿದ್ದಾರೆ. ಅವರ ಕುಟುಂಬ ವರ್ಗದವರು ೧೫.೬೦ ಲಕ್ಷ ಎಂದು ಅಂದಾಜು ಮಾಡಿದ್ದಾರೆ. ಅವರಿಗೆಲ್ಲರಿಗೂ ಔಷಧೋಪಚಾರಗಳನ್ನು ಒದಗಿಸಿದೆ, ಈಗ ಚೆನ್ನಾಗಿದೆ. ಆದಷ್ಟು ಇ.ಎಸ್.ಐ. ನಲ್ಲಿ ಒಳ್ಳೆಯ ವ್ಯವಸ್ಥೆ ಇದೆ. ದಾವಣಗೆರೆಯಲ್ಲಿ ಒಂದು ಆಸ್ಪತ್ರೆ ಕಟ್ಟಿಸಿದ್ದೀರಿ. ಅದರಲ್ಲಿ ೫೦ ಬೆಡ್ ಇವೆ. ಈ ೫೦ ಬೆಡ್ ಆಸ್ಪತ್ರೆಯಲ್ಲಿ ಎಲ್ಲ ತಜ್ಞರು ಇರುವುದಕ್ಕೆ ಸಾಧ್ಯವಿಲ್ಲ. ಎಲ್ಲ ತಜ್ಞರು ಇಲ್ಲದೇ ಇರುವುದರಿಂದ ಚಿಗಟೇರಿ ಜನರಲ್ ಆಸ್ಪತ್ರೆಗೆ ರೋಗಿಗಳು ಹೋಗಬೇಕಾಗುತ್ತದೆ. ಆದುದರಿಂದ ಈ ಆಸ್ಪತ್ರೆಯಲ್ಲಿ ೧೦೦ ಬೆಡ್‌ಮಾಡಿ ಎಲ್ಲ ತಜ್ಞರನ್ನೊಳಗೊಂಡ ಆಸ್ಪತ್ರೆಯನ್ನಾಗಿ ಮಾಡಿ. ಇಲ್ಲದೇ ಹೋದರೆ ಈಗ ಚಿಗಟೇರಿ ಜನರಲ್ ಆಸ್ಪತ್ರೆಯಲ್ಲಿ ೨೪ ಬೆಡ್ಡನ್ನು ಇ.ಎಸ್.ಐ.ಗೆ ಒದಗಿಸಿದ್ದೀರಿ, ಅದು ಸಾಕಾಗುವುದಿಲ್ಲ. ಅಲ್ಲಿ ೫೦ ಬೆಡ್ ಒದಗಿಸುವುದಕ್ಕೆ ವ್ಯವಸ್ಥೆ ಮಾಡಿ. ಇಲ್ಲದೇಹೋದರೆ ಕಾರ್ಮಿಕರಿಗೆ ತೊಂದರೆಯಾಗುತ್ತದೆ, ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಮುಂದಾಗಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಮಂತ್ರಿಗಳು ಇದರ ಬಗ್ಗೆ ಲೆಟರ್ ಕಳಿಸಿದ್ದಾರೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ನಾನು ಇಷ್ಟನ್ನು ಹೇಳಿದ್ದೇನೆ. ನಾನು ಇನ್ನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ತಾವು ಅವಸರ ಮಾಡುತ್ತೀರಿ, ನಾನು ನಿಧಾನ ಮಾಡುತ್ತೇನೆ. ನಿಮ್ಮ ಅವಸರಕ್ಕೂ ನಮ್ಮ ನಿಧಾನಕ್ಕೂ ಸರಿ ಬರುತ್ತಾ ಇಲ್ಲ. ಆದುದರಿಂದ ಒಟ್ಟಾರೆ ಕರ್ನಾಟಕ ರಾಜ್ಯದಲ್ಲಿರತಕ್ಕ ಕೈಗಾರಿಕೆಗಳಲ್ಲಿ ತಾವು ತಿಳಿದುಕೊಂಡಿರುವಮಟ್ಟಿಗೆ ಇವತ್ತು ಯಾವ ಮುಷ್ಕರ ಇಲ್ಲ, ಯಾವ ಬೀಗಮುದ್ರೆ ಇಲ್ಲ, ಯಾವ ಚಳುವಳಿ ಇಲ್ಲ ಎಂದು ತಿಳಿದುಕೊಂಡಿರ

ತಕ್ಕದು ಸರಿಯಾದುದಲ್ಲ. ಅನೇಕ ಕೈಗಾರಿಕೆಗಳು ಮುಚ್ಚಿ ಹೋಗಿವೆ, ಕಾರ್ಮಿಕರು ನೊಂದಿದ್ದಾರೆ, ಬೆಂದಿದ್ದಾರೆ, ಹಸಿವೆಯಿಂದ ಬಳಲುತ್ತಾ ಇದ್ದಾರೆ. ಹಿಂದೆಂದೂ ಇಷ್ಟೊಂದು ರೀತಿಯಲ್ಲಿ ಕೈಗಾರಿಕೆಗಳು ಮುಚ್ಚಿ ಹೋಗಿರಲಿಲ್ಲ. ಆದರೆ ಈಗ ಕೈಗಾರಿಕೆಗಳು ಮುಚ್ಚಿ ಹೋಗಿವೆ. ಆದುದರಿಂದ ದಯವಿಟ್ಟು ಆ ಕೈಗಾರಿಕೆಗಳನ್ನು ಪ್ರಾರಂಭಿಸತಕ್ಕಂಥ ದಿಕ್ಕಿನಲ್ಲಿ ತಾವು ಪ್ರಯತ್ನ ಮಾಡಬೇಕು, ಪ್ರಯತ್ನ ಮಾಡುತ್ತಾ ಇದ್ದೀರಿ, ಇಲ್ಲ ಎಂದು ಹೇಳುವುದಿಲ್ಲ. ಇವತ್ತೂ ಕೂಡ ನಮ್ಮ ಜೆ. ಹೆಚ್. ಪಟೇಲರು ಅವರ ಕಛೇರಿಯಲ್ಲಿ ಮೀಟಿಂಗ್ ಕರೆದಿದ್ದರು. ಆಡಳಿತ ಮಂಡಲಿಯವರು ಬಂದಿಲ್ಲ. ಇಬ್ಬರಿದ್ದಾರೆ, ಆ ಇಬ್ಬರು ಅಣ್ಣತಮ್ಮಂದಿರಿಗೆ ಕಾಯಿಲೆ ಎಂದು ಟೆಲಿಗ್ರಾಂ ಬಂದಿದೆ. ಈ ರೀತಿ ಯಾದಂಥ ವ್ಯವಸ್ಥೆ ಇದೆ. ಆದುದರಿಂದ ದಯವಿಟ್ಟು ಅವರನ್ನು ಕರೆಸಿ ಕೂಡಲೇ ಆ ಕೈಗಾರಿಕೆಗಳನ್ನು ಪ್ರಾರಂಭಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಚಿಕ್ಕ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕಂಥ ಜನರಿಗೆ ಬಹಳ ತೊಂದರೆ ಇದೆ. ಅವರಿಗೆ ಕನಿಷ್ಟ ಕೂಲಿ ಸಿಕ್ಕುತ್ತಾ ಇಲ್ಲ. ಆದುದರಿಂದ ಆ ಕಡೆ ಹೆಚ್ಚು ಗಮನಹರಿಸಬೇಕು.

ತಾವು ಅನೇಕ ಉದ್ಯೋಗಳಿಗೆ ಸಂಬಂಧಪಟ್ಟಂತೆ ಕನಿಷ್ಟ ಕೂಲಿಯನ್ನು ನಿಗಧಿ ಮಾಡಬೇಕು. ಕೆಲವು ಉದ್ಯೋಗಗಳಿಗೆ ಕನಿಷ್ಟ ಕೂಲಿಯನ್ನು ನಿಗಧಿ ಮಾಡಿದ್ದೀರಿ, ಆದರೆ ಕನಿಷ್ಟ ಕೂಲಿಯನ್ನು ಕೊಡುತ್ತಾರೋ ಇಲ್ಲವೋ ಎನ್ನುವುದನ್ನು ನೋಡತಕ್ಕವರು ಯಾರು ? ಅದಕ್ಕೆ ಸರಿಯಾದಂತೆ ಸಿಬ್ಬಂದಿ ಇದೆಯೇ ? ಸಿಬ್ಬಂದಿ ಇದ್ದರೂ ಕೂಡ ಯಾವ ರೀತಿ ಹೋಗಿ ನೋಡುತ್ತಾರೆಂಬುದು ಮುಖ್ಯ. ಇವತ್ತು ಒಂದು ಕಡೆ ೨೦ ಜನ ಕೆಲಸಗಾರರು ಇದ್ದರೆ, ಕಾಯಿದೆಗೆ ಅನ್ವಯವಾಗುತ್ತದೆ, ೧೫ ಜನ ಇಟ್ಟುಕೊಳ್ಳಬೇಕೆಂದು ಮಾಲೀಕರುಗಳಿಗೆ ತಿಳಿಸಿ, ಕಾರ್ಮಿಕರಿಗೆ ಅನ್ಯಾಯ ಮಾಡತಕ್ಕ ಅಧಿಕಾರಿಗಳೂ ಇದ್ದಾರೆ. ಇಂತಹವರನ್ನು ನೀವು ಮೊದಲು ಬಲಿಹಾಕಬೇಕು. ರೈತ ಕಾರ್ಮಿಕರಿಗೂ ಕೂಡ ಕನಿಷ್ಟ ಕೂಲಿಯನ್ನು ನಿಗದಿ ಮಾಡಬೇಕು. ನಿಗದಿ ಮಾಡಿದಂಥ ಕನಿಷ್ಟ ಕೂಲಿಯನ್ನು ಸಿಗುವಂತ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದೀರಿ, ಆ ಸಮಿತಿಯವರು ಅನೇಕ ತಿಂಗಳು, ವರ್ಷಾನುಗಟ್ಟಲೆ ಚರ್ಚೆಮಾಡಿ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಆ ನಿರ್ಧಾರವನ್ನು ಜಾರಿಗೆ ತರಬೇಕು, ಅದನ್ನು ಜಾರಿಗೆ ತರಬೇಕಾದರೆ ಸರಿಯಾದಂತಹ ಸಿಬ್ಬಂದಿ ಇರಬೇಕು. ಆ ರೀತಿಯ ವ್ಯವಸ್ಥೆಯನ್ನು ಮಾಡಬೇಕು. ಸರ್ಕಾರದಲ್ಲಿ ಕೂಡ ಕನಿಷ್ಟ ಕೂಲಿಯನ್ನು ಕೊಡುತ್ತಿಲ್ಲ. ೨೦ ವರ್ಷಗಳು ಕೆಲಸ ಮಾಡಿದವರಿಗೆ ೩೦೦ ರೂಪಾಯಿಗಳನ್ನು ಕೊಡುತ್ತಿದ್ದೀರಿ, ೨೪೦ ದಿವಸಗಳ ಕಾಲ ಕೆಲಸ ಮಾಡಿದರೆ ಅಂತಹವರನ್ನು ಖಾಯಂ ಮಾಡಬೇಕು. ಆದರೆ ೨೦ ವರ್ಷಕಾಲ ಕೆಲಸ ಮಾಡಿದರೂ ಅವರನ್ನು ದಿನಗೂಲಿ ಮೇಲೆ ಇಟ್ಟುಕೊಂಡಿದ್ದೀರಿ, ಈ ರೀತಿ ಏಕೆ ಮಾಡುತ್ತಿದ್ದೀರೋ ಗೊತ್ತಿಲ್ಲ.

ಅಧ್ಯಕ್ಷರು.—ನೇರವಾಗಿ ಕೇಳಿ.

ಶ್ರೀ ಪಂಪಾಪತಿ.—ಸರ್ಕಾರದಲ್ಲಿ ನಾಲ್ಕನೆಯ ದರ್ಜೆ ನೌಕರರಿಗೆ ಕೊಡತಕ್ಕ ವೇತನವನ್ನಾದರೂ ದಿನಗೂಲಿಯಾಗಿ ನಿಗಧಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ದೇವೇಗೌಡರು ಇದ್ದಾಗ ೩೦೦ ರೂಪಾಯಿಗಳನ್ನು ಮಾಡಿದ್ದರು.

ಶ್ರೀ ಪಂಪಾಪತಿ.—ಬರಗಾಲದಲ್ಲಿ ಎನ್. ಆರ್. ಇ. ಪಿ. ಯೋಜನೆಯಲ್ಲಿ ಕೆಲಸ ಮಾಡತಕ್ಕವರಿಗೆ ಏನು ಕೂಲಿ ಕೊಡುತ್ತೀರಿ, ಅವರಿಗೆ ಕನಿಷ್ಟ ಕೂಲಿಯನ್ನು ಕೊಡಬೇಕು. ಯಾವುದೇ ವರ್ಗದ ಕೆಲಸಗಾರರು ಇರಲಿ ಅವರಿಗೆ ಕನಿಷ್ಟ ಕೂಲಿಯನ್ನು ನಿರ್ಧಾರ ಮಾಡಿ ಕೊಡಿಸತಕ್ಕ ಜವಾಬ್ದಾರಿ ಕಾರ್ಮಿಕ ಇಲಾಖೆಯ ಮೇಲಿದೆ. ಈ ಜವಾಬ್ದಾರಿಯನ್ನು ಕಂದಾಯ ಇಲಾಖೆಗೆ ವಹಿಸಬೇಕು. ಕಾರ್ಮಿಕ ಇಲಾಖೆಗೆ ವಹಿಸಬೇಕೇ ಎನ್ನುವ ಪ್ರಶ್ನೆ ಇದೆ. ನನ್ನ ದೃಷ್ಟಿಯಲ್ಲಿ ಈ ಒಂದು ಜವಾಬ್ದಾರಿಯನ್ನು ಕಾರ್ಮಿಕ ಇಲಾಖೆ ವಹಿಸಿಕೊಳ್ಳಬೇಕು.

ಶ್ರೀ ಎಸ್. ಕೆ. ಕಾಂತ.—ಅಧ್ಯಕ್ಷರೆ ಹೋದವರ್ಷ ಎನ್. ಆರ್. ಇ. ಪಿ. ಯೋಜನೆಯಲ್ಲಿ ಕೆಲಸ ಮಾಡತಕ್ಕವರಿಗೆ ರೂ. ೭-೮೦ ಪೈಸೆ ಕೊಡುತ್ತಿದ್ದರು. ಇವತ್ತು ಅದನ್ನು ರೂ. ೯-೨೦ ಪೈಸೆಗೆ ಏರಿಸಿದ್ದೇವೆ.

ಶ್ರೀ ಪಂಪಾಪತಿ.—ಕೆಲವು ಕಡೆ ಇನ್ನೂ ಕೊಡುತ್ತಿಲ್ಲ. ಅದನ್ನು ಕೊಡಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು. ರಾಜ್ಯದಲ್ಲಿರತಕ್ಕ ಅನೇಕ ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಕನಿಷ್ಟ ಕೂಲಿಯನ್ನು ನಿಗದಿ ಮಾಡಿದ್ದರೂ ಕೊಡುತ್ತಿಲ್ಲ. ಅದನ್ನು ಕೊಡಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು. ಕಾರ್ಮಿಕ ಇಲಾಖೆಗೆ ಹೆಚ್ಚು ಹಣ ಹೆಚ್ಚು ಸಿಬ್ಬಂದಿಯನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಪ್ರಮುಖವಾಗಿ ಕಾರ್ಮಿಕ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಕಾರ್ಮಿಕರ ಹಿತರಕ್ಷಣೆಗಾಗಿ ಹೆಚ್ಚು ಅಧಿಕಾರವನ್ನು ಪಡೆದು ಅವರಿಗೆ ಆಗತಕ್ಕ ಅನ್ಯಾಯಗಳನ್ನು ತಡೆಯುವ ದಿಕ್ಕಿನಲ್ಲಿ ಕಾರ್ಮಿಕ ಇಲಾಖೆ ಪ್ರಾಮಾಣಿಕ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ	
ಶ್ರೀ ಬಿ. ಎಸ್. ಯಡಿಯೂರಪ್ಪ	
ಶ್ರೀ ಬಿ. ಬಿ. ನಿಂಗಯ್ಯ	ಸದಸ್ಯರು ಗೈರುಹಾಜರು
ಶ್ರೀ ಜ್ಞಾನದೇವ ದೊಡ್ಡಮೇಟಿ	
ಶ್ರೀ ಎನ್. ಹೆಚ್. ಗೌಡ	

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ (ಧಾರವಾಡ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಆರೋಗ್ಯ ಕುಟುಂಬ ಕಲ್ಯಾಣ, ಪ್ರವಾಸ ಮತ್ತು ವಾರ್ತಾ ಇಲಾಖೆಗಳ ಬಗ್ಗೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೆ, ನನಗೂ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ನಿಮ್ಮ ಹೆಸರು ಇದೆ, ದಯಮಾಡಿ ಕುಳಿತುಕೊಳ್ಳಿ. ತಮಗೂ ಮಾತನಾಡಲಿಕ್ಕೆ ಚಾನ್ಸ್ ಸಿಕ್ಕುತ್ತದೆ ಕುಳಿತುಕೊಳ್ಳಬೇಕು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಸನ್ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಈ ಎಲ್ಲಾ ಬೇಡಿಕೆಗಳನ್ನು ಸ್ವಾಗತಿಸುತ್ತಾ ಎಲ್ಲಾ ಇಲಾಖೆಗಳ ಮೇಲೆ ಮಾತನಾಡಲಿಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ ಎನ್ನುವ ಅಂಶವನ್ನು ಮನಗೊಂಡು ಸಂಕ್ಷಿಪ್ತವಾಗಿ ಹೇಳಲು ಪ್ರಯತ್ನಿಸುತ್ತೇನೆ. ಅಧ್ಯಕ್ಷರು, ಈ ಬೇಡಿಕೆಗಳ ಮೇಲೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವೊತ್ತಿನ ದಿವಸ ಈ ಐದು ಇಲಾಖೆಗಳ ಮೇಲೆ ಮಾತನಾಡಬೇಕಾದಂಥ ವಿಷಯ ಇದೆ. ನಾನು ಮುಖ್ಯವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬಗ್ಗೆ ನಾಲ್ಕು ವಿಚಾರಗಳನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅನೇಕ ಇಲಾಖೆಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದಂಥ ಇಲಾಖೆ. ರಾಜ್ಯದ ಇಡೀ ಸಮಗ್ರ ನಾಲ್ಕು ಕೋಟಿ ಜನತೆಯ ಆರೋಗ್ಯ ಸಂರಕ್ಷಣೆಯನ್ನು ಮಾಡತಕ್ಕ ಜವಾಬ್ದಾರಿ ಈ ಇಲಾಖೆಗೆ ಇದೆ. ಈ ಇಲಾಖೆಗೆ ಆರೋಗ್ಯವನ್ನು ಸಂರಕ್ಷಣೆ ಮಾಡುವ ಮುಖ್ಯ ಜವಾಬ್ದಾರಿ ಜೊತೆಗೆ ಇವೊತ್ತು ಬೆಳೆಯುತ್ತಿರುವ ಜನಸಂಖ್ಯಾ ಸ್ಫೋಟನೆ ನಿಯಂತ್ರಣ ಮಾಡತಕ್ಕ ಜವಾಬ್ದಾರಿ ಬಹಳ ಮುಖ್ಯವಾದುದು. ಜಗತ್ತಿನಲ್ಲಿ ಜನಸಂಖ್ಯೆ ಪ್ರಮಾಣ ಬೆಳೆಯುತ್ತಿರುವುದನ್ನು ನೋಡಿದರೆ ಆದರಲ್ಲಿ ಮುಖ್ಯವಾಗಿ ಚೈನಾ ದೇಶವನ್ನು ಬಿಟ್ಟರೆ ನಮ್ಮ ಭಾರತ ಎರಡನೆಯ ಸ್ಥಾನದಲ್ಲಿ ಬರುತ್ತದೆ, ಜನಸಂಖ್ಯಾ ನಿಯಂತ್ರಣ ಮಾಡುವುದು ಬಹಳ ಮುಖ್ಯವಾದ ಕಾರ್ಯಕ್ರಮ ಎಂಬ ತಿಳಿವನ್ನು ಕೇಂದ್ರಸರ್ಕಾರ ಹಮ್ಮಿಕೊಂಡಿದೆ ಅದೇ ಪ್ರಕಾರ ರಾಜ್ಯಸರ್ಕಾರ ಕೂಡಿ ಸತತ ಪ್ರಯತ್ನವನ್ನು ಮಾಡಿ ಕೇಂದ್ರಸರ್ಕಾರದ ಮನ್ನಣೆಯನ್ನು ಪಡೆದು ಬಹುಮಾನ ಪಡೆದಿದೆ. ಇವೊತ್ತಿನ ದಿವಸ ನಮ್ಮ ರಾಜ್ಯ ಸರ್ಕಾರ ಕೂಡ ಮಹತ್ವವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಕುಟುಂಬ ಕಲ್ಯಾಣ ಅಂದರೆ ಮಕ್ಕಳ ಜನನ ನಿಯಂತ್ರಣ ಮಾಡತಕ್ಕದ್ದು ಕಾರ್ಯರೂಪದಲ್ಲಿ ತರಲಿಕ್ಕೆ ಪ್ರಯತ್ನ ಮಾಡುತ್ತಿದೆ, ಸರ್ಕಾರ ಎಷ್ಟೇ ಯೋಜನೆಗಳನ್ನು ಮಾಡಿದಾಗ್ಯೂ ಸಹಿತ ಜನಸಂಖ್ಯೆಯ ನಿಯಂತ್ರಣ ಮಾಡದೇ ಇದ್ದರೆ, ರಾಷ್ಟ್ರದ, ಪ್ರಗತಿ ರಾಜ್ಯದ ಪ್ರಗತಿ ಆಗಲಿಕ್ಕೆ ಸಾಧ್ಯವಿಲ್ಲ. ಇವೊತ್ತು ಸರ್ಕಾರ ಒಂದು ಮಗು ಬೇಕು, ಎರಡು ಮಕ್ಕಳು ಸಾಕು ಎನ್ನುವ ವಿಚಾರವನ್ನು ಘೋಷಣೆ ಮಾಡುತ್ತಿದೆ. ಇವೊತ್ತು ನಾವು ಚೈನಾ ದೇಶವನ್ನು ನೋಡಿದರೆ ಅಲ್ಲಿಯೂ ಸಹ ಅನೇಕ ಸ್ವಯಂಸೇವಾ ಸಂಸ್ಥೆಗಳು ಜನಸಂಖ್ಯಾ ನಿಯಂತ್ರಣದ ಬಗ್ಗೆ ಸೇವೆಯನ್ನು

ಸಲ್ಲಿಸುತ್ತಿವೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಸಹ ಅನೇಕ ಸ್ವಯಂಸೇವಾ ಸಂಸ್ಥೆಗಳು ಜನಸಂಖ್ಯಾ ನಿಯಂತ್ರಣದ ಬಗ್ಗೆ ಸಾಕಷ್ಟು ಕೆಲಸಗಳನ್ನು ಮಾಡುತ್ತಿವೆ. ಸರ್ಕಾರದ ಜೊತೆಗೆ ತಮ್ಮ ಸಹಾಯವನ್ನು ಸಹ ಮಾಡುತ್ತಿವೆ. ಕೇಂದ್ರಸರ್ಕಾರ ಸಹಿತ ಅದರ ಬಗ್ಗೆ ಸಾಕಷ್ಟು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇವೊತ್ತಿನ ದಿವಸ ಈ ದಿಸೆಯಲ್ಲಿ ನಮ್ಮ ರಾಜ್ಯ ಈ ವಿಚಾರದಲ್ಲಿ ಇನ್ನೂ ಹೆಚ್ಚು ಪ್ರಯೋಜನಕಾರಿಯಾಗಿ ಕೆಲಸವನ್ನು ಮಾಡಬೇಕಾಗಿದೆ. ಈಗಾಗಲೇ ಅನೇಕ ಬಹುಮಾನಗಳನ್ನು ಕೊಡುವ ಮೂಲಕ ಆಕರ್ಷಣೆ ಮಾಡಿ ಜನಸಂಖ್ಯಾ ನಿಯಂತ್ರಣ ಮಾಡುವ ಬಗ್ಗೆ ಯೋಜನೆಗಳನ್ನು ನಮ್ಮ ಸರ್ಕಾರ ಮಾಡಿದೆ. ಗುಳಿಗೆ ರೂಪದಲ್ಲಿ ಮಕ್ಕಳ ನಿಯಂತ್ರಣ ಮಾಡುವುದು ಆಗುತ್ತಿದೆ. ಇವೊತ್ತಿನ ದಿವಸ ಜನಸಂಖ್ಯೆಯನ್ನು ನಿಯಂತ್ರಣ ಮಾಡುವುದು ಬಹಳ ಮುಖ್ಯವಾದುದು. ಈ ದಿಸೆಯಲ್ಲಿ ನಮ್ಮ ರಾಜ್ಯ ಸರ್ಕಾರ ಹೆಮ್ಮೆಪಡುವಂಥ ಕಾರ್ಯವನ್ನು ಮಾಡಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಈಗ ಮಕ್ಕಳಿಗೆ ಚುಚ್ಚು ಮದ್ದನ್ನು ತಯಾರಿಸುವ ಕಾರ್ಯವನ್ನೂ ಕೂಡ ನಮ್ಮ ಇಲಾಖೆಯ ಮೂಲಕ ಮಾಡುತ್ತಿದೆ. ಇವತ್ತಿನ ಪರಿಸ್ಥಿತಿಗೆ ಚುಚ್ಚುಮದ್ದಿನ ಔಷಧೋಪಚಾರ ಬಹಳ ಮುಖ್ಯವಾದುದು. ಏಕೆಂದರೆ ಹುಟ್ಟಿದ ಮಕ್ಕಳಿಗೆ ಬರತಕ್ಕಂಥ ಅನೇಕ ರೀತಿಯ ರೋಗರುಜಿನಗಳನ್ನು ತಡೆಗಟ್ಟುವುದು ನಮ್ಮ ಕರ್ತವ್ಯವಾದ್ದರಿಂದ ಇದಕ್ಕೆ ಬೇಕಾದ ಚುಚ್ಚುಮದ್ದು ಮತ್ತಿತರ ಔಷಧಿಗಳನ್ನು ಸರ್ಕಾರ ತಯಾರು ಮಾಡುತ್ತಿದೆ. ಇದು ನಿಜವಾಗಿಯೂ ಪ್ರಶಂಸನೀಯವಾದುದು. ಆರೋಗ್ಯ ಇಲಾಖೆಯಲ್ಲಿ ಇವತ್ತಿನ ದಿವಸ ಅನೇಕ ರೀತಿಯ ಔಷಧಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪುರವಟೆ ಮಾಡಲಾಗುತ್ತಿದೆ. ಸಾಕಷ್ಟು ದವಾಖಾನೆಗಳನ್ನು ತೆರೆಯುತ್ತಿದ್ದೇವೆ. ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಂಡು ಜನರಿಗೆ ವೈದ್ಯಕೀಯ ನೆರವನ್ನೂ ನೀಡಲಾಗುತ್ತಿದೆ. ಆದರೂ ಕೂಡ ಒಂದು ಕೂಗು ಏನು ಕೇಳಿಬರುತ್ತಿದೆ ಎಂದರೆ, ಈ ವೈದ್ಯರುಗಳು ಗ್ರಾಮೀಣ ಪ್ರದೇಶಗಳಿಗೆ ಹೋಗಿ ಸೇವೆಯನ್ನು ಮಾಡುವುದಕ್ಕೆ ಮುಂದೆ ಬರುತ್ತಿಲ್ಲ ಎಂದು. ಸರ್ಕಾರ ಇದರ ಬಗ್ಗೆ ಒಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಏಕೆಂದರೆ, ನಮ್ಮ ರಾಷ್ಟ್ರವನ್ನೇ ತೆಗೆದುಕೊಳ್ಳಲಿ, ರಾಜ್ಯವನ್ನೇ ತೆಗೆದುಕೊಳ್ಳಲಿ ಗ್ರಾಮಾಂತರ ಪ್ರದೇಶಗಳಿಂದ ಕೂಡದಂಥ ಪ್ರದೇಶ. ಎಷ್ಟೋ ಬಡ ಜನರು ತಮ್ಮ ಆರೋಗ್ಯ ತಪಾಸಣೆಗೆ ಪಟ್ಟಣಗಳಿಗೆ ಬರಬೇಕಾಗಿದೆ. ಸುತ್ತಮುತ್ತಲಿನ ಪರಿಸರದಲ್ಲಿ ಯಾವ ಉತ್ತಮ ವೈದ್ಯರೂ ಇರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಅಲ್ಲಿರತಕ್ಕ ರೋಗಿಗಳು ತಮ್ಮ ರೋಗ ನಿವಾರಣೆಗಾಗಿ ವೈದ್ಯಕೀಯ ನೆರವನ್ನು ಪಡೆಯಲು ಪಟ್ಟಣಗಳಿಗೆ ಬರಬೇಕಾಗಿದೆ. ಇಂಥ ಒಂದು ಪರಿಸ್ಥಿತಿ ಗ್ರಾಮೀಣ ಪ್ರದೇಶದಲ್ಲಿದೆ. ಆದ್ದರಿಂದ ಇನ್ನು ಮುಂದೆ ಪ್ರತಿಯೊಬ್ಬ ವೈದ್ಯರೂ ಕೂಡ ಕನಿಷ್ಠಪಕ್ಷ ೧೦ ವರ್ಷಗಳಕಾಲ ಗ್ರಾಮೀಣ ಪ್ರದೇಶಕ್ಕೆ ಹೋಗಿ ಸೇವೆ ಸಲ್ಲಿಸಲೇಬೇಕೆಂದು ಕಡ್ಡಾಯ ಮಾಡಬೇಕು ಹಾಗೂ ಕಾನೂನು ಮಾಡಬೇಕು. ನೂರಕ್ಕೆ ೮೦ ಭಾಗ ಜನರು ಗ್ರಾಮೀಣ ಪ್ರದೇಶದಲ್ಲಿರುವಾಗ ಅವರ ಕಾರ್ಯಕ್ಷೇತ್ರ ಗ್ರಾಮೀಣ ಪ್ರದೇಶವೇ ಆಗಿರುವುದರಿಂದ ಆ ಕೂಲಿ ಕಾರ್ಮಿಕರಿಗೆ ರೋಗಗಳು ತಗುಲಿದಾಗ ಅವರಿಗೆ ಸರಿಯಾದ ವೈದ್ಯಕೀಯ ಸೇವೆ ಮಾಡತಕ್ಕದ್ದು ನಮ್ಮ ಮುಖ್ಯ ಕರ್ತವ್ಯ. ಏಕೆಂದರೆ ಆ ಜನರು ಪಟ್ಟಣ ಪ್ರದೇಶಗಳಿಗೆ ಬರುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಮಂತ್ರಿಗಳು ಹೆಚ್ಚಿನ ಗಮನ ಹರಿಸಬೇಕು.

ಇನ್ನೊಂದು ವಿಚಾರವನ್ನು ಹೇಳುವುದಾದರೆ, ಅನೇಕ ಜಿಲ್ಲಾ ಕೇಂದ್ರಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಹಲವಾರು ರೀತಿಯ ಯಂತ್ರೋಪಕರಣಗಳು ಇಲ್ಲವೆಂದು ದೂರು ಕೇಳಿಬರುತ್ತಿದೆ. ಅದರಲ್ಲೂ ಮುಖ್ಯವಾಗಿ ಧಾರವಾಡದಲ್ಲಿರುವ ಮುಖ್ಯ ಜಿಲ್ಲಾ ಆಸ್ಪತ್ರೆಯು ಪ್ರಾರಂಭವಾಗಿ ೧೦೫ ವರ್ಷಗಳಾಗಿ ಈಗ ಶತಮಾನೋತ್ಸವವನ್ನು ಆಚರಿಸಬೇಕಾಗಿದೆ. ಇಂಥ ಮುಖ್ಯ ಆಸ್ಪತ್ರೆಯಲ್ಲಿ ಬಹಳ ಮುಖ್ಯವಾದ ಯಂತ್ರೋಪಕರಣಗಳೇ ಇಲ್ಲ. ವೈದ್ಯಕೀಯ ಕ್ಷೇತ್ರದಲ್ಲಿ ವೈಜ್ಞಾನಿಕ ರೀತಿಯ ಹೊಸ ಹೊಸ ಯಂತ್ರೋಪಕರಣಗಳು ಬಂದಿವೆ. ಡಯಾಲಿಸಿಸ್, ಸ್ಕ್ಯಾನಿಂಗ್, ಮುಂತಾದವುಗಳಿಗೆ ಸಂಬಂಧಪಟ್ಟ ಯಂತ್ರೋಪಕರಣಗಳನ್ನು ಅಲ್ಲಿ ಇಡಬೇಕು. ವೈದ್ಯಕೀಯ ಸೇವೆಗೆ ಬಹಳ ಹಿಂದಿನಿಂದಲೂ ಹೆಸರುವಾಸಿಯಾದುದು ಎಂದರೆ ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆ. ಉತ್ತರ ಕರ್ನಾಟಕದಲ್ಲಿರುವ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಪ್ರೊಫೆಸರ್‌ಗಳು, ವೈದ್ಯರುಗಳು ಯಾರೂ ಇಲ್ಲವೆಂದು ಕೇಳಿಬರುತ್ತಿದೆ. ಒಂದಾನೊಂದು ಕಾಲದಲ್ಲಿ ವೈದ್ಯಕೀಯ ಸೌಲಭ್ಯಕ್ಕೆ ಅತ್ಯಂತ ಹೆಸರುವಾಸಿಯಾದ ಈ ಹುಬ್ಬಳಿಯ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ವೈದ್ಯರುಗಳು ಇಲ್ಲವೆಂದರೆ ಇದು ಎಂದು ವಿಷಾದನೀಯ

ಸಂಗತಿ. ಅಲ್ಲಿ ಉಪಕರಣಗಳ ಕೊರತೆ ವೈದ್ಯರ ಕೊರತ ಇದೆ ಎಂಬುದನ್ನು ಮಾನ್ಯ ಮಂತ್ರಿಗಳೂ ಕೂಡ ಒಪ್ಪಿಕೊಂಡು ಆದಕ್ಕೆ ಈಗಾಗಲೇ ಅವರು ಉತ್ತರವನ್ನೂ ಕೊಟ್ಟಿದ್ದಾರೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಕರ್ನಾಟಕ ಮೆಡಿಕಲ್ ಕಾಲೇಜಿಗೆ ಎಲ್ಲ ರೀತಿಯ ಸೌಲಭ್ಯಗಳನ್ನೂ ಒದಗಿಸಿ ಆ ಭಾಗದ ಜನರಿಗೆ ವೈದ್ಯಕೀಯ ನೆರವು ಸಿಕ್ಕುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇವತ್ತು ಎಲ್ಲಿ ನೋಡಿದರೂ ವಾಹನಗಳ ದಟ್ಟಣೆ ಬಹಳ ಜಾಸ್ತಿಯಾಗುತ್ತಿದೆ. ರಸ್ತೆಗಳ ಅಪಘಾತಗಳ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಅಪಘಾತಗಳಿಗೆ ಒಳಗಾದವರಲ್ಲಿ ಅನೇಕರು ಇವತ್ತು ಮಾನಸಿಕ ರೋಗಿಗಳಾಗಿದ್ದಾರೆ. ಅಂಥವರಿಗೆ ಹೆಚ್ಚಿನ ಚಿಕಿತ್ಸೆಯನ್ನು ಕೊಡಿಸಬೇಕೆಂದರೆ ಅವರನ್ನು ಬೆಂಗಳೂರಿನಲ್ಲಿರುವ ನಿಮ್ಹಾನ್ಸ್ ಆಸ್ಪತ್ರೆಗೇ ತೆಗೆದುಕೊಂಡು ಬರಬೇಕು. ಏಕೆಂದರೆ ಧಾರವಾಡದಲ್ಲಿರುವ ಮುಖ್ಯ ಅಸ್ಪತ್ರೆಯಲ್ಲಿ ಹೆಚ್ಚಿನ ವೈದ್ಯಕೀಯ ಸೌಕರ್ಯಗಳಿಲ್ಲ. ಇಂಥ ಮಾನಸಿಕ ಅಸ್ವಸ್ಥತೆಯ ರೋಗಿಗಳನ್ನು ಬೆಂಗಳೂರಿಗೆ ತರಬೇಕಾದರೆ ವಿಮಾನದಲ್ಲೂ ಕೂಡ ಸಾಧ್ಯವಾಗುವುದಿಲ್ಲ. ಅಂಥ ವಿಚಿತ್ರ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಮಾನಸಿಕ ರೋಗಿಗಳನ್ನು ಧಾರವಾಡದಿಂದ ಬೆಂಗಳೂರಿಗೆ ತರುವುದಕ್ಕೆ ಬದಲಾಗಿ ಧಾರವಾಡದಲ್ಲಿರತಕ್ಕ ಬಹಳ ಹಳೆಯ ಆಸ್ಪತ್ರೆ ೧೪೫ ವರ್ಷಗಳ ಹಳೆಯ ಆಸ್ಪತ್ರೆ ಇಡೀ ಉತ್ತರ ಕರ್ನಾಟಕದಲ್ಲಿ ಇದು ಮೊಟ್ಟ ಮೊದಲು ಸ್ಥಾಪನೆಯಾದಂಥ ಆಸ್ಪತ್ರೆ ಈ ಆಸ್ಪತ್ರೆಗೆ, ಹೊಸ ಕಟ್ಟಡ ಜೊತೆ ಅನೇಕ ಹೊಸ ಯಂತ್ರೋಪಕರಣಗಳನ್ನು ಒದಗಿಸುವ ಅವಶ್ಯಕತೆ ಇದೆ. ಈ ಆಸ್ಪತ್ರೆಗೆ ಅಥವಾ ಕೆ.ಎಂ.ಸಿ. ಆಸ್ಪತ್ರೆಗೆ ಎಲ್ಲ ರೀತಿಯ ನೂತನ ವೈಜ್ಞಾನಿಕ ಯಂತ್ರೋಪಕರಣಗಳನ್ನು ಒದಗಿಸಬೇಕು. ಅದರಲ್ಲೂ ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿರತಕ್ಕ ಮಾನಸಿಕ ರೋಗಿಗಳಿಗೆ ಅನುಕೂಲವಾಗುವಂತೆ ಅಲ್ಲಿನ ಆಸ್ಪತ್ರೆಯಲ್ಲಿ ನೂತನ ಯಂತ್ರೋಪಕರಣಗಳು, ಕಟ್ಟಡಗಳು ಇನ್ನೂ ಮುಂತಾದವನ್ನು ಮಾನ್ಯ ಮಂತ್ರಿಗಳು ಒದಗಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇತ್ತೀಚೆಗೆ ಮೆಡಿಕಲ್ ಕಾಲೇಜುಗಳಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ಅವಕಾಶ ಕೊಡುತ್ತಿಲ್ಲ ಎನ್ನುವ ಮಾತನ್ನು ಅನೇಕ ನಮ್ಮ ಮಾನ್ಯ ಸ್ನೇಹಿತರು ಹೇಳಿದ್ದಾರೆ. ಬಡಜನರಿಗೆ ಅದರಲ್ಲೂ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಬಡ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶಾವಕಾಶವನ್ನು ಮಾಡಬೇಕಾದ್ದು ಬಹಳ ಮುಖ್ಯವಾದ ವಿಷಯ. ಸರ್ಕಾರಿ ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ಸೇವೆ ಮಾಡುತ್ತಿರುವ ಸಹಾಯಕಿಯರು, ಹೆಲ್ತ್ ಅಸಿಸ್ಟೆಂಟ್ಸ್‌ಗಳು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಉತ್ತಮವಾದ ಸೇವೆಯನ್ನು ಮಾಡಿ ಜನರಿಗೆ ಕುಟುಂಬ ಕಲ್ಯಾಣ, ಆರೋಗ್ಯವನ್ನು ಕಾಪಾಡಿಕೊಳ್ಳುವ ವಿಷಯಗಳಲ್ಲಿ ಸರಿಯಾಗಿ ಮನವರಿಕೆ ಮಾಡಿ ಉಪಚಾರ ಮಾಡುವ ತರಬೇತಿ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಬೇಕು. ಆಯುರ್ವೇದ, ಹೋಮಿಯೋಪತಿ, ಮತ್ತು ಯುನಾನಿ ನಮ್ಮ ಭಾರತದ ದೇಶದ ಔಷಧಿಗಳಾಗಿವೆ. ಆಯುರ್ವೇದ ಪದ್ಧತಿಯಲ್ಲಿ ಪರಿಣಿತರಾದ ಅನೇಕ ವೈದ್ಯರುಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಇದ್ದಾರೆ. ಆಯುರ್ವೇದದಲ್ಲಿ ಹೆಚ್ಚಿನ ಪರಿಣಿತಿಯನ್ನು ಪಡೆದಿದ್ದ ಎಂಥ ಕಾಯಿಲೆ ಇದ್ದರೂ ಗುಣಪಡಿಸುವಂಥ ವೈದ್ಯರುಗಳು ನಮ್ಮಲ್ಲಿ ಇದ್ದಾರೆ. ಆದ್ದರಿಂದ ಈ ಆಯುರ್ವೇದ ಔಷಧಿಗಳ ಬಗ್ಗೆ ಹೆಚ್ಚಿನ ಕಾಳಜಿಯನ್ನು ಸರ್ಕಾರ ವಹಿಸಬೇಕಾಗಿದೆ. ನಮ್ಮ ರಾಜ್ಯದಲ್ಲಿ ದೊರೆಯುವ ಗಿಡಮೂಲಿಕೆಗಳಿಂದ ಎಂಥ ವಾಸಿಯಾಗದ ಕಾಯಿಲೆಗಳನ್ನು ಕೂಡ ವಾಸಿ ಮಾಡ ಬಹುದಾಗಿದೆ. ಆದ್ದರಿಂದ ಈ ದಿಸೆಯಲ್ಲಿ ಮಾನ್ಯ ಸಚಿವರು ಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಈವತ್ತಿನ ದಿವಸ ಸರ್ಕಾರಿ ವೈದ್ಯರು, ತಜ್ಞರು ಏನಿದ್ದಾರೆ ಅವರಲ್ಲಿ ಅನೇಕ ಜನ ವೈದ್ಯರು ಖಾಸಗಿ ಸೇವೆಯಲ್ಲಿ ಬಹಳ ಆಸಕ್ತಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಈವತ್ತು ಸರ್ಕಾರಿ ಸೇವೆಯಲ್ಲಿದ್ದರೂ ಸಹಿತ ಪ್ರೈವೇಟ್‌ನಲ್ಲಿ ಹೋಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿರುತ್ತಾರೆ. ಅವರಿಗೆ ಖಾಸಗಿಯಾಗಿ ಸಂಪಾದನೆ ಮಾಡುವುದಕ್ಕೆ ಇರುವಷ್ಟು ಆಸಕ್ತಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಲು ಆಸಕ್ತಿ ಇರುವುದಿಲ್ಲ. ಪ್ರೈವೇಟ್ ನಡೆಸುತ್ತಿರುವಂಥ ನರ್ಸಿಂಗ್ ಹೋಮ್‌ಗಳಲ್ಲಿ ರೋಗಿಗಳಿಗೆ ತೋರಿಸುವಷ್ಟು ಮುತವರ್ಜಿ ಸರ್ಕಾರಿ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಮುತವರ್ಜಿಯನ್ನೇ ವಹಿಸುವುದಿಲ್ಲ. ಈವತ್ತಿನ ದಿವಸ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಡಾಕ್ಟರುಗಳು ಬೆಳಿಗ್ಗೆ ೧೦ ಗಂಟೆಯಿಂದ ೧೨, ೧೨½ ಗಂಟೆ ತನಕ ಇದ್ದು ಅನಂತರ ತಮ್ಮದೇ ಆದ ನರ್ಸಿಂಗ್ ಹೋಮ್‌ಗಳಿಗೆ

ಹೋಗಿ ೨-೧೦ ಗಂಟೆಯವರೆಗೆ ಕೆಲಸ ಮಾಡಿ ಊಟ ಉಪಚಾರ, ರೆಸ್ಟ್ ತೆಗೆದುಕೊಂಡು ಮತ್ತೆ ಮೂರು ಗಂಟೆಗೆ ಸರ್ಕಾರಿ ಆಸ್ಪತ್ರೆಗೆ ಬರುತ್ತಾರೆ. ಮತ್ತೆ ೬ ಗಂಟೆಯವರೆಗೆ ಇದ್ದು, ೬ ಗಂಟೆಯ ನಂತರ ಪ್ರೈವೇಟ್ ನರ್ಸಿಂಗ್ ಹೋಮ್‌ಗಳಿಗೆ ಹೋಗಿ ರಾತ್ರಿ ೧೦-೧೨ ಗಂಟೆಗಳ ತನಕ ಕೆಲಸ ಮಾಡುತ್ತಾರೆ. ಈರೀತಿ ದಿವಸಕ್ಕೆ ೧೬ ತಾಸು ಕೆಲಸ ಮಾಡಿ ಪ್ರಶಿಸಿತ್ಯ ಹಣವನ್ನು ಸಂಪಾದನೆ ಮಾಡುತ್ತಿರುತ್ತಾರೆ ಈರೀತಿಯಾದ ಮನೋಭಾವವನ್ನು ಹೊಂದಿರುವವರು ಸೇವಾ ಮನೋಭಾವದಿಂದ ಹೇಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ? ಆದ್ದರಿಂದ ಮಾನ್ಯ ಮಂತ್ರಿಗಳು ಸರ್ಕಾರಿ ವೈದ್ಯರು ಖಾಸಗಿಯಾಗಿ ಸೇವೆಯನ್ನು ಮಾಡಲಿಕ್ಕೆ ಅವಕಾಶವನ್ನೇ ಕೊಡಬಾರದು. ಅವರಿಗೆ ಇದರಲ್ಲಿ ಆಸಕ್ತಿ ಇಲ್ಲದೆ ಇದ್ದರೆ. ಹಣ ಸಂಪಾದನೆ ಮಾಡುವ ಆಸಕ್ತಿ ಇದ್ದರೆ ಅವರು ರಾಜೀನಾಮೆಯನ್ನು ಕೊಟ್ಟು ಪ್ರೈವೇಟ್ ನರ್ಸಿಂಗ್ ಹೋಮ್‌ನ್ನು ಸಂಪಾದನೆ ಮಾಡಿಕೊಳ್ಳಲಿ. ಅವರಿಗೆ ಬ್ಯಾಂಕ್‌ಗಳು ಕೂಡ ಸಹಾಯ ಮಾಡುತ್ತವೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಹರಗಳಲ್ಲಿ ಹೋಗಿ ತಮ್ಮದೇ ಆದ ನರ್ಸಿಂಗ್ ಹೋಮ್‌ಗಳನ್ನು ತೆಗೆದು ಸೇವೆಯನ್ನು ಮಾಡಲಿ. ಅದರೆ ಸರ್ಕಾರಿ ಆಸ್ಪತ್ರೆಗಳಲ್ಲಿದ್ದು ಜನತೆಗೆ ಮೋಸ ಮಾಡತಕ್ಕಂಥ ದೃಷ್ಟಿಯಲ್ಲಿ ವೈದ್ಯರುಗಳು ಕೆಲಸ ಮಾಡುವುದನ್ನು ಖಂಡತವಾಗಿಯೂ ಖಂಡಿಸಬೇಕಾಗುತ್ತದೆ. ಎಲ್ಲ ವೈದ್ಯರೂ ಇದೇರೀತಿ ಮಾಡುತ್ತಾರೆಂದು ಹೇಳುತ್ತಿಲ್ಲ. ಇದರಲ್ಲೂ ಸೇವಾ ದೃಷ್ಟಿಯಿಂದ ಕೆಲಸ ಮಾಡುವ ವೈದ್ಯರೂ ಇದ್ದಾರೆ, ಅವರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಈವತ್ತಿನ ದಿವಸ ನಮ್ಮ ಸ್ನೇಹಿತರಾದಂಥ ಪಟಪಕ್ಕಿ ರತ್ನಾಕರರವರು ಮಾತನಾಡುತ್ತಾ ಡ್ರಗ್ ಅಡಿಕ್ಷನ್ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಬಹಳ ಮುಖ್ಯವಾಗಿ ಕಾಲೇಜುಗಳಲ್ಲಿ, ಅದರಲ್ಲೂ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರು. ವಿಶಾರ ಪಾನೀಯಗಳನ್ನು ಉಪಯೋಗ ಮಾಡುತ್ತಿರುವುದು ಕಂಡು ಬರುತ್ತಿದೆ. ಇದರ ಬಗ್ಗೆಯೂ ಕೂಡ ಯೋಗ್ಯವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇದರ ಜೊತೆಗೆ ಇವತ್ತಿನ ದಿವಸ ಅನೇಕ ದೋಷಪೂರಿತ ಔಷಧಿಗಳು ಮಾರ್ಕೆಟಿನಲ್ಲಿ ಲಭ್ಯವಿದೆ ಎಂದು ಕಂಡುಬರುತ್ತದೆ. ಅದಕ್ಕೆ ಮುಖ್ಯವಾಗಿ ವೈದ್ಯಕೀಯ ಇಲಾಖೆಯು ಗುಣಮಟ್ಟವನ್ನು ತಪಾಸಣೆ ಮಾಡಬೇಕು. ದೋಷಪೂರಿತ ಔಷಧಿಗಳನ್ನು ಮಾರಾಟ ಮಾಡುವವರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು ಅಂತಹ ಲ್ಯಾಬೋರೇಟರಿಗಳ ಮೇಲೆ ತಪಾಸಣೆ ಮಾಡಿ ಅಂತಹ ಔಷಧಿಗಳು ಮಾರ್ಕೆಟಿಗೆ ಬರದಂತೆ ನೋಡಿಕೊಳ್ಳುವುದು ಬಹು ಮುಖವಾದ ಕಾರ್ಯ. ಏಕೆಂದರೆ ಇಂತಹ ಅನೇಕ ಕಲುಷಿತವಾದ ಔಷಧಿಗಳಿಂದ ಅನೇಕ ಬಡಪಾಯಿಗಳ ಜೀವನವನ್ನು ಕಳೆದುಕೊಳ್ಳುವಂತಹ ಒಂದು ಪ್ರಸಂಗವನ್ನು ನಾವು ಇಂದು ಕಾಣುತ್ತಿದ್ದೇವೆ. ಇದರ ಜೊತೆಗೆ ಅನೇಕ ವೈದ್ಯರು ಇಂತಹ ಔಷಧಿಗಳನ್ನು ಉಪಯೋಗಿಸಿ ಎಂದು ಹೇಳಿದ್ದರಿಂದ ಎಷ್ಟು ಜನರ ಮೇಲೆ ದುಷ್ಪರಿಣಾಮವಾಗಿ ಅವರು ತಮ್ಮ ಜೀವನವನ್ನು ಕಳೆದುಕೊಂಡಿದ್ದಾರೆ. ಅದಕ್ಕೆ ಹೆಚ್ಚಿನ ಕಾಳಜಿಯನ್ನು ತಾವು ವಹಿಸಬೇಕು. ಈ ದಿಸೆಯಲ್ಲಿ ವೈದ್ಯಕೀಯ ಸೇವೆ ಬಡಜನತೆಗೆ, ಸಾಮಾನ್ಯ ಜನತೆಗೆ, ಗ್ರಾಮೀಣ ಜನತೆಗೆ ದೊರಕುವಂತೆ ಸರ್ಕಾರ ಹೆಚ್ಚಿನ ಕಾಳಜಿಯನ್ನು ವಹಿಸಬೇಕೆಂದು ಹೇಳುತ್ತೇನೆ

ಅಧ್ಯಕ್ಷರು.— ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ, ಬೇಗ ಮುಗಿಸಿ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಇನ್ನು ಪಶುಸಂಗೋಪನೆಯ ಬಗ್ಗೆ ಹೇಳುತ್ತೇನೆ, ಕರ್ನಾಟಕ ಬಹಳ ಉತ್ತಮವಾದ ಪರಿಸರವನ್ನು, ಹವಮಾನವನ್ನು ಪಡೆದಂತಹ ಪ್ರದೇಶ. ಇಲ್ಲಿ ಸಾಕಷ್ಟು ಹೈನೋದ್ಯಮವನ್ನು ಉತ್ಪಾದನೆ ಮಾಡುವದಕ್ಕೆ ಅವಕಾಶ ಇದೆ. ದನಕರುಗಳನ್ನು ಸಾಕಿ ಜೀವನವನ್ನು ಮಾಡುವುದಕ್ಕೆ ಒಳ್ಳೆಯ ಅವಕಾಶವಿರುತ್ತದೆ. ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರತಿ ಗ್ರಾಮದಲ್ಲಿ ಸ್ಥಾಪಿಸಿ ಎಲ್ಲಾ ಕಡೆಯೂ ಹೈನು ಉದ್ಯಮವನ್ನು ಬೆಳೆಸಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಬ್ಯಾಂಕ್ ಮತ್ತು ಸರ್ಕಾರ ಅವರಿಗೆ ಸಹಾಯವನ್ನು ಮಾಡಿ, ಸ್ವಯಂ ಉದ್ಯೋಗದಲ್ಲಿ ತೊಡಗಲು ಜನತೆಗೆ ಅವಕಾಶ ಮಾಡಿಕೊಡಬೇಕು. ಇಲ್ಲಿ ಬೇಕಾದಷ್ಟು ನಮ್ಮದೇ ಆದಂತಹ ಪಶುತಳಿಗಳು ಇದ್ದವು. ಈ ತಳಿಗಳು ಈಗ ಮಾಯವಾಗುತ್ತಿವೆ. ಅಂತಹ ತಳಿಗಳನ್ನು ಇಲ್ಲಿ ಸಂಶೋಧನೆ ಮಾಡಿ ಅನೇಕ ರಾಜ್ಯಗಳಿಗೆ ಕಳುಹಿಸಿ ಕೊಡಬಹುದು. ಇಂತಹ ಉತ್ತಮವಾದ ಪರಿಸರವಿರುವ ಈ ಕರ್ನಾಟಕದಲ್ಲಿ ಪಶುಸಂಗೋಪನೆ ಅತಿ ಉತ್ತಮವಾಗಿ ಬೆಳೆದು ಬರಬೇಕೆಂದು ಹೇಳಿ ತಮ

ಮೂಲಕ ಸರ್ಕಾರವನ್ನು ಕೇಳುತ್ತೇನೆ. ಇದರ ಜೊತೆಗೆ ಮಾನ್ಯ ಪ್ರವಾಸೋದ್ಯಮ ಮಂತ್ರಿಗಳಾದ ಪ್ರಕಾಶ್ ಅವರಿಗೆ ನನ್ನ ಮನವಿ ಏನೆಂದರೆ, ಈ ರಾಜ್ಯಗಳಲ್ಲಿ ಪ್ರವಾಸಿ ತಾಣಗಳನ್ನು ಮಾಡುವ ಅವಕಾಶವಿದೆ. ಅನೇಕ ಕಡಲ ತೀರದಲ್ಲಿ ಪಟ್ಟಣ ಪ್ರದೇಶದಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಇಂತಹ ಉತ್ತಮವಾದ ಸ್ಥಳಗಳಲ್ಲಿ ಪ್ರವಾಸೋದ್ಯಮ ತಾಣಗಳನ್ನು ಮಾಡಲಿಕ್ಕೆ ಸಾಕಷ್ಟು ಅವಕಾಶವಿದೆ ಪ್ರತಿ ಜಿಲ್ಲೆಯಲ್ಲಿ ಕನಿಷ್ಟ ಒಂದೊಂದು ತಾಣಗಳನ್ನು ಗುರ್ತಿಸಿ ಪ್ರವಾಸಿ ಕೇಂದ್ರಗಳನ್ನಾಗಿ ಮಾಡಬೇಕು. ಬೆಳಗಾಂ ಜಿಲ್ಲೆಯಲ್ಲಿ ಯಾತ್ರಾಸ್ಥಳವಿದೆ. ಈ ಯಾತ್ರಾಸ್ಥಳದಲ್ಲಿ ಒಂದು ಕಲ್ಯಾಣ ಮಂಟಪವನ್ನು ಮಾಡಬೇಕೆಂದು ಮಾನ್ಯ ಕೌಜಲಗಿಯವರ ಕಾಲದಿಂದಲೂ ನಮ್ಮ ಬೇಡಿಕೆ ಇದೆ ದಯಾವಿಟ್ಟು ಮಾನ್ಯ ಮಂತ್ರಿಗಳು ಅದನ್ನು ಪೂರೈಸಿ ಕೊಡಬೇಕು. ನಮ್ಮ ಕರ್ನಾಟಕವನ್ನು ಒಂದು ಉತ್ತಮವಾದ ಪ್ರವಾಸಿ ಯಾತ್ರಾಸ್ಥಳವಾಗಿ ಮತ್ತು ಸುಂದರ ರಾಜ್ಯವಾಗಿ ಬೆಳೆಸಲಿಕ್ಕೆ ನಮ್ಮ ಪ್ರವಾಸೋದ್ಯಮ ಮಂತ್ರಿಗಳು ಹೆಚ್ಚಿನ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಮಾತನಾಡಲು ಅವಕಾಶ ಕಡಿಮೆ ಇದ್ದರೂ ಅವಕಾಶ ಕೊಟ್ಟಿದ್ದಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ಎಲ್ಲಾ ಮಂತ್ರಿಗಳು ಸರಿಯಾದಂತಹ ಕಾರ್ಯವನ್ನು ಮಾಡಿ ರಾಜ್ಯಕ್ಕೆ ಸೇವೆ ಮಾಡುತ್ತಾರೆಂದು ನಾನು ಬಯಸುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ರಾಮನಾಥ್ ರೈ (ಬಂಟವಾಳ್).— ಮಾನ್ಯ ಅಧ್ಯಕ್ಷರೆ, ಇವತ್ತು ಪ್ರಮುಖ ಬೇಡಿಕೆಯಾದ ಆರೋಗ್ಯ ಕಾರ್ಮಿಕ ಹಾಗೂ ವಾರ್ತಾ ಪ್ರಚಾರ, ಪ್ರವಾಸೋದ್ಯಮ, ಕನ್ನಡ ಸಂಸ್ಕೃತಿ, ವಸತಿ, ಪಶುಸಂಗೋಪನೆ ಈ ವಿಚಾರ ಬೇಡಿಕೆಗಳನ್ನು ಮಂಡಿಸಿ ಚರ್ಚೆ ಆಗುತ್ತಿದೆ. ಇದರಲ್ಲಿ ನಾನು ವಿಶೇಷವಾಗಿ ನಮ್ಮ ಪ್ರಕಾಶ್ ಅವರ ಇಲಾಖೆಯಾದ ವಾರ್ತಾ ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿಗಳ ವಿಚಾರದಲ್ಲಿ ಮಾತನಾಡುವುದಕ್ಕೆ ಸೀಮಿತಗೊಳಿಸಿ, ಈ ಬೇಡಿಕೆಗಳನ್ನು ವಿರೋಧಿಸಿ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಪ್ರವಾಸೋದ್ಯಮವು

೪–೦೧ ಪಿ. ಯಂ.

ಒಂದು ಉದ್ದಿಮೆ ಎಂಬುದನ್ನು ಸರ್ಕಾರ ಈಗಾಗಲೇ ಘೋಷಣೆ ಮಾಡಿದೆ. ಇದನ್ನು ಕೈಗಾರಿಕ ರೂಪದಲ್ಲಿ ಮತ್ತು ವ್ಯಾಪಾರ ದೃಷ್ಟಿಯಲ್ಲಿ ವಿಕಸನಗೊಳಿಸಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಆದರೂ ಕೂಡ ಲಾಭ ಬರತಕ್ಕ ಪ್ರವಾಸೋದ್ಯಮ ಏನಿದೆ ಇದಕ್ಕೆ ೧೯೮೭–೮೮ನೇ ಸಾಲಿಗೆ ಆಯವ್ಯಯದಲ್ಲಿ ೧.೪೦ ಲಕ್ಷ ರೂಪಾಯಿಗಳನ್ನು ಪ್ರಾರಂಭದಲ್ಲಿ ಇಟ್ಟಿದ್ದಾರೆ. ಈ ಒಂದು ವರದಿಯಲ್ಲಿ ಕಡೆಯದಾಗಿ ಏನು ಬರೆದಿದ್ದಾರೆ ಎಂದರೆ ೨೯–೧–೧೯೮೭ ರಲ್ಲಿ, ಸರ್ಕಾರದಲ್ಲಿ ಆರ್ಥಿಕ ಮುಗ್ಗಟ್ಟು ಇರುವುದರಿಂದ ಇಲಾಖೆಗೆ ನೀಡಿದ ೧.೪೦ ಲಕ್ಷ ರೂಪಾಯಿಗಳಲ್ಲಿ ೪೦ ಲಕ್ಷ ರೂಪಾಯಿಗಳನ್ನು ಕಡಿತಗೊಳಿಸಿ ನೂರು ಲಕ್ಷ ರೂಪಾಯಿಗಳಿಗೆ ಸೀಮಿತಗೊಳಿಸಲಾಗಿದೆ. ಇದರ ಪರಿಣಾಮವಾಗಿ ಎಲ್ಲಾ ಯೋಜನೆಗಳ ಅಭಿವೃದ್ಧಿ ಕಾರ್ಯವನ್ನು ಕೈಬಿಡಲಾಗಿದೆ. ಎಂದಿದೆ ಇದಕ್ಕೆ ಇಟ್ಟಿರತಕ್ಕ ೧.೪೦ ಲಕ್ಷ ರೂಪಾಯಿ ಬಹಳ ಕಡಿಮೆ ಎಂಬುದು ನಾವೆಲ್ಲರೂ ಒಪ್ಪತಕ್ಕ ವಿಚಾರ. ಅದರಲ್ಲೂ ೪೦ ಲಕ್ಷ ರೂಪಾಯಿಗಳನ್ನು ಕಡಿತ ಮಾಡಿದ್ದೇವೆಂದರೆ, ಇವತ್ತು ಈ ಒಂದು ಪ್ರವಾಸೋದ್ಯಮ ಇಲಾಖೆಯ ಅಭಿವೃದ್ಧಿ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿಲ್ಲ ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ ಎಂಬುದು ಗೊತ್ತಾಗುತ್ತದೆ. ಈ ವಿಚಾರದಲ್ಲಿ ನೋಡಿದಾಗ ಪ್ರವಾಸಿ ಕೇಂದ್ರಗಳು ಖಂಡಿತವಾಗಿಯೂ ಕರ್ನಾಟಕ ರಾಜ್ಯದ ಒಂದು ಉದ್ದಿಮೆಯಾಗಿದೆ. ಇವತ್ತು ಹರಿಯಾಣ, ಹಿಮಾಚಲ ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರದ ಭಾಗಗಳಲ್ಲಿ ಸ್ವಾಭಾವಿಕ ಕೇಂದ್ರಗಳು ಏನಿವೆ ಅವಕ್ಕಿಂತ ಉತ್ತಮ ರೀತಿಯ ಪ್ರವಾಸಿ ಧಾಮಗಳು ನಮ್ಮ ಕರ್ನಾಟಕ ರಾಜ್ಯದಲ್ಲಿವೆ. ಆ ಒಂದು ರಾಜ್ಯಗಳಲ್ಲಿ ಪ್ರವಾಸೋದ್ಯಮ ಇಲಾಖೆಯನ್ನು ಬಹಳಷ್ಟು ಮಹತ್ವವಾದ ಇಲಾಖೆಯೆಂದು ಪರಿಗಣಿಸಿ ಅದನ್ನು ಲಾಭ ದಾಯಕವಾಗಿ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡಿ ಅದರಲ್ಲಿ ಯಶಸ್ವಿಯಾಗಿದ್ದಾರೆ ಹಿಮಾಚಲ ಪ್ರದೇಶದ ಕೇಂದ್ರ ಭಾಗವಾದ ಸಿಮ್ಲಾಕ್ಕೆ ಅನೇಕ ಮಾನ್ಯ ಸದಸ್ಯರು ಹೋಗಿರಬಹುದು. ಆ ಪ್ರದೇಶದ ಒಂದು ಭಾಗದಲ್ಲಿ ಪ್ರವಾಸೋದ್ಯಮ ಇಲಾಖೆ ಯಾವ ರೀತಿ ವಿಕಾಸವಾಗಿದೆ, ಅದನ್ನು ಯಾವ ರೀತಿ ಸರ್ಕಾರ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ ಅಭಿವೃದ್ಧಿಪಡಿಸುತ್ತಿದೆ ಎಂಬುದನ್ನು ಕಂಡಾಗ ಅದೇ ರೀತಿಯಾದ ಒಂದು ಅಭಿವೃದ್ಧಿಯನ್ನು ನಮ್ಮ ರಾಜ್ಯದಲ್ಲಿ ಮಾಡಲಿಕ್ಕೆ ಸಾಧ್ಯವಿದೆ ಎಂಬುದನ್ನು ಮನಗಾಣಬಹುದು

ಸಿವ್ಲಾದ ಕೇಂದ್ರ ಭಾಗದಲ್ಲಿ ಇನ್‌ಫಾರ್ಮೇಷನ್ ಕೌಂಟರ್ ಇದೆ. ಅಲ್ಲಿಗೆ ಹೋದಾಗ ಆ ಒಂದು ಪ್ರದೇಶದಲ್ಲಿ ಯಾವ ಯಾವ ಪ್ರವಾಸಿ ಪಾಯಿಂಟ್ಸ್ ಇವೆ. ಯಾವ ಯಾವ ಭಾಗದಲ್ಲಿ ಯಾವ ರೀತಿ ಪ್ರವಾಸಿ ಮಂದಿರಗಳಿವೆ ಯಾವ ರೀತಿ ರೆಸ್ಟೋರೆಂಟ್‌ಗಳಿವೆ, ಮತ್ತು ಅಲ್ಲಿಗೆ ಹೋಗುವುದಕ್ಕೆ ಯಾವ ರೀತಿ ವ್ಯವಸ್ಥೆ ಇದೆ, ಎಷ್ಟು ಖರ್ಚು ಬೀಳುತ್ತದೆ ಮತ್ತು ಅದಕ್ಕೆ ಬೇಕಾದ ವಾಹನಗಳ ಸೌಕರ್ಯಗಳು ಕಾರು ಬೇಕಾದರೆ ಕಾರಿನ ವ್ಯವಸ್ಥೆ ಅಥವಾ ಲಕ್ಸರಿ ಕೋಚಗಳ ವ್ಯವಸ್ಥೆ ಇರುವುದನ್ನು ತಿಳಿಯಪಡಿಸತಕ್ಕ ಇನಫಾರ್ಮೇಷನ್ ಕೌಂಟರ್ ಅನ್ನು ನಾನು ಅಲ್ಲಿಗೆ ಹೋದಾಗ ನೋಡಿದ್ದೇನೆ, ಆ ಕೌಂಟರ್ ಮೂಲಕ ಯಾವುದೇ ತೊಂದರೆ ಇಲ್ಲದೆ ಎಲ್ಲಾ ಭಾಗವನ್ನು ವೀಕ್ಷಣೆ ಮಾಡುವುದಕ್ಕೆ ಅವಕಾಶವಿದೆ ಅದೇರೀತಿ ಇವತ್ತು ನಮ್ಮ ಭಾಗದಲ್ಲಿ ಅಗತ್ಯವಾಗಿ ಮಾಡಬೇಕು, ಬೆಂಗಳೂರು ನಗರ ಬಿಟ್ಟರೆ ಇದು ಸ್ವಾಭಾವಿಕವಾಗಿ ಸೌಂದರ್ಯ ಇರತಕ್ಕ ಜಾಗ ಇದನ್ನು ಬಿಟ್ಟರೆ ಮೈಸೂರು ನಗರ. ಮೈಸೂರು ನಗರದಲ್ಲಿ ಇಂಥದ್ದೇ ಒಂದು ಪ್ರವಾಸಿ ಕೇಂದ್ರವನ್ನಾಗಿ ಮಾಡಿ ಆ ಪ್ರವಾಸಿ ಕೇಂದ್ರದಲ್ಲಿ ಪ್ರವಾಸಿಗರಿಗೆ ಅನುಕೂಲವಾಗುವ ರೀತಿಯಲ್ಲಿ ಪ್ರದೇಶವನ್ನು ಅಭಿವೃದ್ಧಿಪಡಿಸಲಿಕ್ಕೆ ನಮಗೆ ಸಾಧ್ಯತೆ ಇದೆ.

ಏಕೆಂದರೆ ಅಲ್ಲಿ ಸುತ್ತಮುತ್ತಲೂ ನಾಗರಹೊಳೆ, ಬಂಡೀಪುರ ಅಥವಾ ನೆರೆರಾಜ್ಯಗಳ ಕೆಲವು ಪ್ರವಾಸಿ ಧಾಮಗಳಿವೆ. ಊಟಿ ಇನ್ನಿತರ ಭಾಗಗಳಿಗೆ ಹೋಗಲಿಕ್ಕೆ ಅನುಕೂಲ ಅಲ್ಲಿಂದ ಇದೆ. ಆದ್ದರಿಂದ ಆ ಭಾಗದಲ್ಲಿ ಒಂದು ಪ್ರವಾಸಿ ಕೇಂದ್ರವನ್ನು ಮಾಡಿ ಅಲ್ಲಿಂದ ಜನರಿಗೆ ಹೋಗುವುದಕ್ಕೆ ಅನುಕೂಲವಾಗುವಂತೆ ಬಸ್ಸಿನ ವ್ಯವಸ್ಥೆ ಅಥವಾ ಪ್ರವಾಸಿ ಮಂದಿರಗಳ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಹೆಚ್ಚು ಅಭಿವೃದ್ಧಿ ಪಡಿಸತಕ್ಕ ಕೆಲಸಕಾರ್ಯಗಳನ್ನು ಸರ್ಕಾರ ಮಾಡಿದರೆ ನಮಗೆ ಲಾಭದಾಯಕವಾದ ಉದ್ದಿಮೆಯನ್ನಾಗಿ ಮಾಡಲಿಕ್ಕೆ ಸಾಧ್ಯತೆ ಇದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಐತಿಹಾಸಿಕ ಹಿನ್ನಲೆ ಇರತಕ್ಕ ಅನೇಕ ಭಾಗಗಳಿವೆ. ಬೇಲೂರು, ಹಳೇಬಿಡು, ಶ್ರವಣಬೆಳಗೊಳ, ಹಂಪೆ, ಸೋಮನಾಥಪುರ, ಐಹೊಳೆ, ಪಟ್ಟದಕಲ್ಲು, ಬಾದಾಮಿ, ಗೋಲ್‌ಗುಂಬಜ್ ಮತ್ತು ಶ್ರೀರಂಗಪಟ್ಟಣ ಇಂಥ ಐತಿಹಾಸಿಕವಾದಂಥ ಸೌಂದರ್ಯ ಇರತಕ್ಕಂಥ ಭಾಗಗಳಿವೆ. ಈ ಜಾಗಗಳು ನಮ್ಮ ರಾಷ್ಟ್ರದಲ್ಲಿ ಮಾತ್ರವಲ್ಲ, ವಿದೇಶೀಯರನ್ನೂ ಆಕರ್ಷಣೆ ಮಾಡತಕ್ಕ, ಇತಿಹಾಸ ಇರತಕ್ಕ ಭಾಗಗಳು. ಇದನ್ನು ಅಭಿವೃದ್ಧಿ ಪಡಿಸಬೇಕು. ಈಗ ಇಲಾಖೆ ವತಿಯಿಂದ ಪ್ರವಾಸಿ ಮಂದಿರಗಳಿರಬಹುದು. ಟೂರಿಸಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನ ವಾಹನಗಳು ಇರಬಹುದು. ಆದರೆ ಇದು ಸಮರ್ಪಕವಾಗಿಲ್ಲ. ಪ್ರವಾಸಿ ಮಂದಿರಗಳಿದ್ದರೂ ಜನರು ಉಳಿದುಕೊಳ್ಳುವುದಕ್ಕೆ ಅಸಾಧ್ಯವಾದ ರೀತಿಯಲ್ಲಿ ಅದರ ವ್ಯವಸ್ಥೆ ಇದೆ. ಇದರಿಂದಾಗಿ ಖಾಸಗಿ ಹೋಟೆಲ್‌ನವರ ಜೊತೆಯಲ್ಲಿ ಪೈಪೋಟಿ ಮಾಡುವುದಕ್ಕೆ ಅಸಾಧ್ಯವಾಗಿದೆ. ಇವತ್ತು ಪ್ರವಾಸ ಮಾಡುವವರಿಗೆ ಪ್ರಯಾಸ ಆಗದ ರೀತಿಯಲ್ಲಿ, ಪ್ರವಾಸ ಮಾಡುವುದಕ್ಕೆ ಅನುಕೂಲವಾಗುವಂಥ ದೃಷ್ಟಿಯಲ್ಲಿ ಈ ಇಲಾಖೆ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೆಲವು ಭಾಗಗಳಲ್ಲಿ ಅಂದರೆ ನಾಗರಹೊಳೆ, ಬಂಡೀಪುರ, ಬಾಬಾ ಬುಡನ್‌ಗಿರಿ, ಮೇಕೆದಾಟು ಈ ಪ್ರದೇಶಗಳಲ್ಲಿ ಸ್ವಾಭಾವಿಕವಾದ ಸೌಂದರ್ಯ ಇದೆ. ಈ ಭಾಗಗಳಲ್ಲಿ ಪ್ರವಾಸಿ ಮಂದಿರಗಳೇನಿದೆ ಅವನ್ನು ಉತ್ತಮ ರೀತಿಯಲ್ಲಿ ಅಭಿವೃದ್ಧಿ ಪಡಿಸಿ ದೇಶದ ಮತ್ತು ವಿದೇಶದ ಜನರನ್ನು ಹೆಚ್ಚಿನ ರೀತಿಯಲ್ಲಿ ಆಕರ್ಷಣೆ ಮಾಡತಕ್ಕ ಕೆಲಸ ಮಾಡಬೇಕು. ಅದೇ ರೀತಿ ಕರಾವಳಿ ಪ್ರದೇಶವಾದ ಮಂಗಳೂರು ಸಮೀಪ ಮುರುಡೇಶ್ವರ, ಮರವಂತಿ, ಸೈಂಟ್ ಮೇರಿ ಸೈಲೇಟ್ ಅಥವಾ ಮಲ್ಪೆಯ ಸಮೀಪ ಸಮುದ್ರ ತೀರ ಭಾಗದಲ್ಲಿ ಕೂಡ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸಿ ಪ್ರವಾಸಿಗರನ್ನು ಆಕರ್ಷಣೆ ಮಾಡುವುದಕ್ಕೆ ಹೆಚ್ಚಿನ ಕೆಲಸವನ್ನು ಮಾಡಬೇಕು. ಮಾನ್ಯ ಅಧ್ಯಕ್ಷರೇ, ಕೇರಳದಲ್ಲಿ ಕೋವಲಂ ಬೀಚ್ ಇದೆ. ಆ ಬೀಚ್‌ಗಿಂತ ವಿಶಿಷ್ಟವಾದ ಬೀಚ್ ಮರವಂತಿ. ಮಲ್ಪೆಯ ಕಡಲು ತೀರದಲ್ಲಿ ಅದಿದೆ. ಕೇರಳದಲ್ಲಿ ಅವರು ಕಡಲತೀರವನ್ನು ಅಭಿವೃದ್ಧಿ ಗೊಳಿಸಿರುವುದರ ಜೊತೆಗೆ ಅದಕ್ಕೆ ಹೆಚ್ಚಿನ ಪ್ರಚಾರವನ್ನು ಅಲ್ಲಿ ಕೊಟ್ಟಿದ್ದಾರೆ, ನಮ್ಮಲ್ಲಿ ಇವತ್ತು ವಿಶೇಷವಾಗಿ ಪ್ರಚಾರದ ಕೊರತೆ ಇದೆ, ಇಂಥ ಪ್ರವಾಸಿ ಕೇಂದ್ರಗಳು ಈ ಭಾಗದಲ್ಲಿದೆ ಎಂದು ನಮ್ಮ ರಾಷ್ಟ್ರದಲ್ಲಿ ಮಾತ್ರವಲ್ಲದೆ ವಿದೇಶದಲ್ಲೂ ಗೊತ್ತಾಗಬೇಕಾದರೆ ಪ್ರವಾಸೋದ್ಯಮ ಇಲಾಖೆಯು ಬೆನ್ನೆಲುಬಾಗಿ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕಾಗಿದೆ, ನಮ್ಮಲ್ಲಿ ನಡೆಯುತ್ತಿರುವ ಪ್ರಚಾರ ಸಾಮಾನ್ಯವಾಗಿದೆ. ಹೆಚ್ಚಿನ ರೀತಿಯಲ್ಲಿ ಪ್ರಚಾರವನ್ನು ವೃತ್ತ ಪತ್ರಿಕೆಗಳಲ್ಲಿ ಅಥವಾ ಹೊತ್ತಿಗೆಗಳನ್ನು ಬಿಡುಗಡೆ ಮಾಡಿ, ಕರಪತ್ರಗಳನ್ನು ಅಚ್ಚು ಮಾಡಿ, ಸಣ್ಣಸಣ್ಣ ಚಲನಚಿತ್ರಗಳ ಮೂಲಕ ಹಾಗೂ ಟಿ.ವಿ. ಮೂಲಕ ನಮ್ಮಲ್ಲಿ ಒಳ್ಳೆಯ ಸೌಂದರ್ಯ ಇದೆ, ನಮ್ಮ ರಾಜ್ಯ ದೇಶದಲ್ಲೇ ಉತ್ತಮವಾದ ಪ್ರದೇಶ ಎಂದು ಪ್ರಚಾರ ಮಾಡಬೇಕಾದುದು

ಇಲಾಖೆಯ ಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆದರೆ ಲಾಭದಾಯಕವಾಗಿ ನಡೆಸಬಹುದಾದ ಈ ಪ್ರವಾಸೋದ್ಯಮ ಇಲಾಖೆಯ ಪ್ರಮುಖ ಸಂಸ್ಥೆಯಾದ ಪ್ರವಾಸೋದ್ಯಮ ನಿಗಮ ವರ್ಷೇವರ್ಷೇ ನಷ್ಟದಲ್ಲಿ ನಡೆಯುತ್ತಾ ಇರುವುದನ್ನು ನಾವು ಗಮನಿಸಬಹುದು. ಅದಕ್ಕೆ ಕಾರಣ ಏನೇನೋ ಕೊಡಬಹುದು. ಆದರೆ ಅಲ್ಲಿ ಇವತ್ತು ವ್ಯವಹಾರ ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಖಂಡಿತವಾಗಿ ಗೊತ್ತಿದೆ. ನಾವು ಇದನ್ನು ಪತ್ರಿಕೆಗಳಲ್ಲಿ ನೋಡಿದ್ದೇವೆ. ಅಲ್ಲಿ ಕೆಲವು ಜನ ಅಧಿಕಾರಿಗಳನ್ನು ಅವ್ಯವಹಾರ ಮಾಡಿದ್ದಾರೆ ಎನ್ನುವ ಹಿನ್ನಲೆಯಲ್ಲಿ ಅಮಾನತ್ತಿನಲ್ಲಿ ಇಟ್ಟಿರುವುದನ್ನು ನಾವು ನೋಡಿದ್ದೇವೆ. ೬ ತಿಂಗಳಿನಿಂದ ಅಮಾನತ್ತಿನಲ್ಲಿ ಇಟ್ಟಿರತಕ್ಕ ಅಧಿಕಾರಿಗಳ ಮೇಲೆ ಇನ್ನೂ ಯಾವ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ. ಇವತ್ತು ಇವರು ಮಾಡಿರುವ ಅವ್ಯವಹಾರ ನಿಜವೇದರೆ ಅವರನ್ನು ಏಕೆ ಅಧಿಕಾರದಲ್ಲಿ ಮುಂದುವರಿಸುತ್ತೀರಿ ? ಆದಷ್ಟು ಶೀಘ್ರವಾಗಿ ತಪಾಸಣೆ ಮಾಡಿ ಆ ಅಧಿಕಾರಿಗಳು ತಪ್ಪಿತಸ್ಥರು ಅಲ್ಲ ಎಂದು ಕಂಡುಬಂದರೆ ಅವರನ್ನು ಮತ್ತೆ ತೆಗೆದುಕೊಳ್ಳಬಹುದು. ಅವರು ತಪ್ಪಿತಸ್ಥರು ಅಲ್ಲಿ ಎಂದು ಕಂಡುಬಂದರೆ ಅವರ ಮೇಲೆ ಸರಿಯಾದ ಕ್ರಮ ಕೈಗೊಳ್ಳಬಹುದಲ್ಲವೇ ? ಇನ್ನು ಈ ಬಗ್ಗೆ ಇಷ್ಟು ಹೇಳಿ ಕನ್ನಡ ಸಂಸ್ಕೃತಿ ಬಗ್ಗೆ ಒಂದೆರಡು ಮಾತಗಳನ್ನಾಡುತ್ತೇನೆ. ಇವತ್ತು ಎಲ್ಲಾ ಹಂತಗಳಲ್ಲೂ ಕನ್ನಡವನ್ನು ತರಬೇಕೆನ್ನುವ ಪ್ರಯತ್ನ ಖಂಡಿತವಾಗಿ ಸರ್ಕಾರದ ಮೂಲಕ ಆಗುತ್ತಾ ಇದೆ. ಇವತ್ತು ಕನ್ನಡವನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಲ್ಲಿ ಕೆಲಸ ಕಾರ್ಯಗಳು ಆಗುತ್ತಿವೆ. ಇವತ್ತು ಅಕೆಡಮಿಗಳನ್ನು ಸ್ಥಾಪನೆ ಮಾಡಿದ್ದೀರಿ. ನಾಟಕ ಅಕೆಡಮಿ, ಸಾಹಿತ್ಯ ಅಕಡಮಿ, ಲಲಿತಕಲಾ ಅಕೆಡಮಿ, ಸಂಗೀತ ನೃತ್ಯ ಅಕೆಡಮಿ, ಅದೇರೀತಿ ಜಾನಪದ ಕಲೆ ಹಾಗೂ ಯಕ್ಷಗಾನ ಅಕೆಡಮಿ ಸ್ಥಾಪನೆಯಾಗಿವೆ. ಯಕ್ಷಗಾನ ಕಲೆ ಏನಿದೆ ಇದು ಇವತ್ತು ಕರಾವಳಿ ಪ್ರದೇಶದ ಶ್ರೀಮಂತ ಕಲೆ. ಇದನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇವತ್ತು ಯಕ್ಷಗಾನ ತರಬೇತಿ ಕೇಂದ್ರವನ್ನು ಮಾಡಿ ಅಲ್ಲಿ ವಿದ್ಯಾರ್ಥಿಗಳನ್ನು ಸೇರ್ಪಡೆ ಮಾಡಿ ಯಕ್ಷಗಾನ ಕಲೆಯ ನೃತ್ಯವನ್ನು ಕಲಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಇವತ್ತು ವಿದ್ಯಾರ್ಥಿವೇತನವನ್ನು ಕೊಟ್ಟು ಆ ಯಕ್ಷಗಾನ ಕಲೆಯನ್ನು ಬೆಳೆಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕಾದ್ದು ಮಾತ್ರವಲ್ಲ, ಇವತ್ತು ಜಾನಪದ ಹಾಗೂ ಯಕ್ಷಗಾನ ಎರಡಕ್ಕೂ ಸೇರಿ ಒಂದೇ ಅಕಡಮಿ ಇದೆ. ನನ್ನ ದೃಷ್ಟಿಯಲ್ಲಿ ಇವನ್ನು ನೋಡುವುದಾದರೆ, ಇದರಿಂದ ಜಾನಪದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಿ ಯಕ್ಷಗಾನಕ್ಕೆ ಹೆಚ್ಚು ಪ್ರಾಶಸ್ತ್ಯ ದೊರಕುತ್ತಾ ಇಲ್ಲ. ಆದ್ದರಿಂದ ಇವತ್ತು ಯಕ್ಷಗಾನಕ್ಕೇ ಪ್ರತ್ಯೇಕವಾದ ಅಕೆಡಮಿಯನ್ನು ಮಾಡಬೇಕು. ಯಕ್ಷಗಾನವನ್ನು ಈ ರಾಜ್ಯದಲ್ಲಿ ಉತ್ತಮ ರೀತಿಯ ಕಲೆಯಾಗಿ ಪರಿವರ್ತನೆ ಮಾಡುವುದಕ್ಕೆ ಸರ್ಕಾರ ಸಹಕಾರ ಮಾಡಬೇಕು. ಇಷ್ಟು ಮಾತ್ರವಲ್ಲ, ಮಾಸಾಶನ ಕೊಡುವ ಸಂದರ್ಭದಲ್ಲಿ ಯಕ್ಷಗಾನ ಕಲಾವಿದರಿಗೆ ಇದುವರೆವಿಗೂ ಸಿಕ್ಕಿರುವುದು ಬಹಳ ಕಡಿಮೆ. ಇವತ್ತು ಯಾರು ಅರ್ಹ ಹಿರಿಯ ಕಲಾವಿದರು ಯಕ್ಷಗಾನ ಕಲಾ ಜಗತ್ತಿನಲ್ಲಿ ಮೆರೆಯುತ್ತಿದ್ದಾರೆ. ಅಂತಹವರನ್ನು ಗುರ್ತಿಸಿ ಅವರಿಗೆ ಮಾಸಾಶನವನ್ನು ಕೊಡುವ ಕೆಲಸವನ್ನು ಸರ್ಕಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಈ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೆ, ಈ ದಿವಸ ಕಾರ್ಮಿಕ ಇಲಾಖೆ, ವೈದ್ಯಕೀಯ, ಪಶುಸಂಗೋಪನೆ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಹಾಗೂ ಕನ್ನಡ ಸಂಸ್ಕೃತಿ ಇಲಾಖೆಗಳ ಬೇಡಿಕೆಗಳ ಮೇಲೆ ಮಾತನಾಡಲು ಅಪ್ಪಿತಪ್ಪಿ ಅವಕಾಶಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ನಾನು ಚಿರಋಣಿಯಾಗಿದ್ದೇನೆ. ನಾನು ಕಲೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಲೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಇಲಾಖೆಯ ಆಡಳಿತವನ್ನು ಹಾಗೂ ಅಲ್ಲಿ ನಡೆಯುತ್ತಿರುವಂತಹ ಆಡಳಿತದ ಬಗ್ಗೆ ನಿರ್ದಿಷ್ಟವಾಗಿ ಹೇಳುವುದಾದರೆ, "ಹೊಟ್ಟೆಗೆ ಹಿಟ್ಟಿಲ್ಲ—ಜುಟ್ಟಿಗೆ ಮಲ್ಲಿಗೆ ಹೂವು" ಎಂಬುದಾಗಿ ಹಳ್ಳಿಕಡೆ ಗಾದೆಯನ್ನು ಹೇಳುತ್ತಾರೆ. ಆ ರೀತಿಯಾಗಿದೆ ಈ ಇಲಾಖೆಗಳ ಆಡಳಿತದ ವೈಖರಿ. ಈ ನಾಲ್ಕು ಇಲಾಖೆಗಳು ಜನಸಾಮಾನ್ಯರ ಹಿತವನ್ನು ಎಳ್ಳಷ್ಟು ಕಾಪಾಡಿಲ್ಲ. ಆ ಇಲಾಖೆ ಇರುವಂತಹದ್ದು ಹಾಗೂ ಅಲ್ಲಿನ ಆಡಳಿತದ ವೈಖರಿಯ ಬಗ್ಗೆ ಹೇಳುವುದಾದರೆ, ಒಬ್ಬೊಬ್ಬರಿಗೆ ಒಂದೊಂದು ಗೂಟದ ಕಾರು. ಎಸ್ಟಾಬ್ಲಿಷ್‌ಮೆಂಟ್ ಇದಕ್ಕಾಗಿ ಹಣ ಖರ್ಚಾಗುತ್ತಿದೆಯೇ ಹೊರತು, ಈ ಇಲಾಖೆಗಳಿಂದ ಜನಸಾಮಾನ್ಯರಿಗೆ ಯಾವುದೇ ರೀತಿಯ ಉಪಯೋಗ ಇಲ್ಲದಂತಾಗಿದೆ.

ಪ್ರವಾಸೋದ್ಯಮ ಇಲಾಖೆಯನ್ನು ಸಾರಿಗೆ ಇಲಾಖೆಯ ಜೊತೆಗೆ ಸೇರಿಸಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ವಿದ್ಯಾ ಇಲಾಖೆಯ ಜೊತೆಗೆ ಸೇರಿಸಿದ್ದೇ ಆದರೆ ಸರ್ಕಾರದ ದುಡ್ಡು ಬಹಳಷ್ಟು ಉಳಿತಾಯವಾಗುತ್ತದೆ. ಅದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಇಟ್ಟಿದ್ದೀರಿ. ಈ ಹಣವನ್ನು ಉಳಿತಾಯ ಮಾಡಿ ಆ ಹಣವನ್ನು ಬೇರೆ ಇಲಾಖೆಗೆ ಕೊಟ್ಟು ಆ ಇಲಾಖೆಗಳಿಂದ ಜನಸಾಮಾನ್ಯರಿಗೆ ಅನುಕೂಲವನ್ನು ಮಾಡಿಕೊಡಬಹುದು. ಈ ಇಲಾಖೆಗಳಿಂದ ಜನಸಾಮಾನ್ಯರಿಗೆ ಯಾವುದೇ ರೀತಿಯ ಅನುಕೂಲವಾಗುತ್ತಿಲ್ಲ. ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಚನ್ನಗಿರಿ ತಾಲ್ಲೂಕಿನಲ್ಲಿ ಸೂಳೆಕೆರೆ ಎಂಬ ಒಂದು ಸ್ಥಳವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಿದ್ದೀರಿ. ಅಲ್ಲಿ ದಿವಸಕ್ಕೆ ಒಬ್ಬ ಪ್ರವಾಸಿಗನೂ ಬರುವುದಿಲ್ಲ. ಅಂತಹ ಕಡೆ ನಮ್ಮ ಇಲಾಖೆಯವರು ಪ್ರವಾಸೋದ್ಯಮ ಕೇಂದ್ರವನ್ನು ಮಾಡಿದ್ದಾರೆ. ಆದರೆ ಕೆಮ್ಮಣ್ಣುಗುಂಡಿ ಪ್ರವಾಸೋದ್ಯಮ ಕೇಂದ್ರವಾಗಿದ್ದರೂ ಅದನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಿಲ್ಲ. ಅಲ್ಲಿ ಯಾವುದೇ ಅನುಕೂಲವನ್ನು ಮಾಡಿಕೊಟ್ಟಿಲ್ಲ. ಎಲ್ಲಿ ಸರ್ಕಾರಕ್ಕೆ ಆದಾಯ ಬರುವುದಿಲ್ಲವೋ ಅಂತಹ ಕಡೆ ಪ್ರವಾಸೋದ್ಯಮ ಕೇಂದ್ರಗಳನ್ನು ಕಟ್ಟಿಸಿದ್ದಾರೆ. ಇದರಿಂದ ಸರ್ಕಾರಕ್ಕೆ ಯಾವ ಆಧಾಯವೂ ಬರುತ್ತಿಲ್ಲ. ಆದ್ದರಿಂದ ಇಂತಹ ಇಲಾಖೆಯನ್ನು ಮೊದಲು ಮುಚ್ಚಿರೆಂದು ನೇರವಾಗಿ ಸರ್ಕಾರಕ್ಕೆ ಹೇಳಬಯಸುತ್ತೇನೆ. ಜೊತೆಗೆ ಈಗ ನಮ್ಮಲ್ಲಿ ಇರುವಂತಹ ಹಣಕಾಸಿನ ಪರಿಸ್ಥಿತಿಯಲ್ಲಿ ಇಂತಹ ಇಲಾಖೆಗಳನ್ನು ಮುಚ್ಚುವುದರಿಂದ ಸರ್ಕಾರಕ್ಕೆ ಹಣ ಕೂಡ ಉಳಿಯುತ್ತದೆ.

ಶ್ರೀ ಕೆ. ಜೆ. ಜಾರ್ಜ್.—ಇಲಾಖೆಯನ್ನು ಮುಚ್ಚುವುದಕ್ಕೆ ಬದಲಾಗಿ ಸರ್ಕಾರವನ್ನೇ ಮುಚ್ಚಿ ಎಂಬುದಾಗಿ ಹೇಳಿ. ಆಗ ಸರಿಹೋಗುತ್ತದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಎಲ್ಲ ಕಡೆ ಲಾಸ್ ಮಾಡಿಕೊಂಡಿರುವವರು ನೀವು. ನಮಗೆ ೫ ಪೈಸೆ ದುಡ್ಡನ್ನು ಕೊಡುವುದಕ್ಕಾಗುತ್ತಿಲ್ಲ. ಆ ರೀತಿಯ ಯೋಗ್ಯತೆಯೂ ಇಲ್ಲ ಇಂತಹವರು ನಮಗೆ ಹೇಳುವುದಕ್ಕೆ ಬರುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್.—ಇಲಾಖೆಯನ್ನು ಮುಚ್ಚಿ ಅಂತ ಹೇಳಿದರು. ಅದಕ್ಕೆ ಸರ್ಕಾರವನ್ನೇ ಮುಚ್ಚಿ ಅಂತ ಹೇಳಿ ಅಂತ ಹೇಳಿದೆ ಅಷ್ಟೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಶಿಶುವಿಹಾರವನ್ನು ತೆಗೆಯುವುದಕ್ಕೆ ದುಡ್ಡು ಕೊಡುವುದಿಲ್ಲ. ದುಡ್ಡು ಇಲ್ಲ ಅಂತ ಹೇಳಿದ್ದೀರಿ. ೧೦ ಕೋಟಿ ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಕೊಟ್ಟರೂ ೧೦ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ ಕೊನೆಗಾಲದಲ್ಲಿ, ಯಾವುದನ್ನು ಹೇಳಬೇಕು ಎಂಬುದು ನನಗೆ ಗೊತ್ತಿದೆ. ನಮ್ಮ ಸರ್ಕಾರದ ಬಗ್ಗೆ ನಾವು ಹೇಳುವುದಕ್ಕೆ ನಾವು ನಿಂತಿರುವುದು. ಸರ್ಕಾರವನ್ನು ಸುಧಾರಣೆ ಮಾಡುವುದಕ್ಕೆ ಕೆಲವು ಸೂಚನೆಗಳನ್ನು ಕೊಡುವುದಕ್ಕಾಗಿಯೇ ನಾನು ನಿಂತಿರುವುದು. ನಿಮಗಿಂತ ಉತ್ತಮವಾದ ಆಡಳಿತವನ್ನು ಮಾಡಿದ್ದೇವೆ.

ಶ್ರೀ ಕೆ. ಜೆ. ಜಾರ್ಜ್.—ಏನು ಸುಧಾರಣೆ ಮಾಡಿದ್ದೀರಿ ? ಇದು ಮಾಡಿದ್ದೀರಾ ;

(ನಗು)

ಶ್ರೀ ಬಿ. ಆರ್. ನೀಲಕಂಠಪ್ಪ.—ನಮ್ಮ ಪ್ರವಾಸೋದ್ಯಮ ಸಚಿವರು ಬಹಳ ಸೂಕ್ಷ್ಮಮತಿಗಳು. ವಿಚಾರವಂತರು ಇನ್ನೂ ಅನೇಕ ಆಸೆಗಳನ್ನು ಇಟ್ಟುಕೊಂಡಿರತಕ್ಕಂತಹವರು. ಆಡಳಿತವನ್ನು ಸುಧಾರಣೆ ಮಾಡುವ ವಿಷಯದಲ್ಲಿ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಒಂದು ಮಾತನ್ನು ಹೇಳುತ್ತಿದ್ದರು. ಆಡಳಿತ ಸುಧಾರಣೆಯನ್ನು ಎಲ್ಲಿಯ ತನಕ ಮಾಡುವುದಿಲ್ಲವೋ ಅಲ್ಲಿಯ ತನಕ ಈ ರಾಜ್ಯ ಅಥವಾ ರಾಷ್ಟ್ರ ಮುಂದೆ ಬರುವುದಕ್ಕಾಗುವುದಿಲ್ಲ ಅಂತ ಹೇಳುತ್ತಿದ್ದರು. ಆದ್ದರಿಂದ ನಾವು ಈ ಆಡಳಿತದ ಸುಧಾರಣೆಯ ಬಗ್ಗೆ "ಹೇಳಿದ್ದನ್ನೇ ಹೇಳೋ ಕಿಸಬಾಯಿ ದಾಸ" ಅಂತ ಹೇಳಬೇಕಾಗಿದೆ. ಈ ೪ ಇಲಾಖೆಗಳನ್ನು ಸೇರಿಸಿ ಒಂದೇ ಇಲಾಖೆಯನ್ನಾಗಿ ಮಾಡಿ. ಇಲ್ಲ ಪ್ರವಾಸೋದ್ಯಮ ಇಲಾಖೆಯನ್ನು ಮಾನ್ಯ ಸಿಂಧ್ಯಾರವರಿಗೆ ಕೊಟ್ಟುಬಿಡಿ. ಅವರು ಇನ್ನೂ ಚೆನ್ನಾಗಿ ಮಾಡುತ್ತಾರೆ. ಅದೇ ರೀತಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ವಿದ್ಯಾ ಇಲಾಖೆಯ ಜೊತೆಗೆ ಸೇರಿಸಿಬಿಡಿ. ಇನ್ನು ಕೆಮ್ಮಣ್ಣುಗುಂಡಿ ಬಹಳ ಅತ್ಯುತ್ತಮವಾಗಿರತಕ್ಕ ಕೇಂದ್ರ ಅಲ್ಲಿ ಕಬ್ಬಿಣದ ಅದಿರು ಸಹ ದೊರೆಯುತ್ತದೆ. ನಾನು ಕೆಮ್ಮಣ್ಣುಗುಂಡಿಯ ಬಗ್ಗೆ ಪ್ರತಿವರ್ಷ ಕೇಳುತ್ತಿದ್ದೇನೆ ಅದನ್ನು ಅಭಿವೃದ್ಧಿ

ಮಾಡಲಿಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿ ಎಂದು, ಆ ಬಗ್ಗೆ ಯಾವುದೇ ಯೋಜನೆಯನ್ನು ತಯಾರು ಮಾಡಿಲ್ಲ. ಆ ಬಗ್ಗೆ ಯಾವುದೇ ಯೋಜನೆಯಿಲ್ಲ. ನಮಗೆ ಒದಗಿಸಿರುವ ಪುಸ್ತಕದ ಬಗ್ಗೆ ಹೇಳಬೇಕಾದರೆ ಅವುಗಳಲ್ಲಿ ಯಾವುದೇ ಹೊಸ ಯೋಜನೆಗಳು ಇಲ್ಲ. ಏತಕ್ಕೆ ಈ ರೀತಿ ಸರ್ಕಾರ ನಿಷ್ಕ್ರಿಯವಾಗಿದೆ? ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಸಹ ಯಾವುದೇ ಯೋಜನೆಯನ್ನು ಮಾಡಿಲ್ಲ ಮಕ್ಕಳ ಬಗ್ಗೆ ಯಾವುದೇ ಯೋಜನೆಯಿಲ್ಲ, ಈಗಿರುವ ಸಂಸ್ಕೃತಿಯನ್ನು ಉಳಿಸಿಕೊಂಡು ಮಕ್ಕಳಲ್ಲಿ ಪ್ರತಿಭೆಯನ್ನು ಹೆಚ್ಚಿಸಲಿಕ್ಕೆ ಯಾವುದೇ ಯೋಜನೆಯನ್ನು ರೂಪಿಸಿಲ್ಲ. ಮಾನ್ಯ ಸಿಂಧ್ಯಾರವರು ಬಸ್ಸನ್ನಾದರೂ ಬಿಡುತ್ತೇನೆಂದು ಹೇಳುತ್ತಾರೆ. ನೀವು ಏನೂ ಹೇಳಿಲ್ಲ. ವೈದ್ಯಕೀಯ ಇಲಾಖೆಯಲ್ಲಿ ಯಾವುದೇ ಆಶ್ವಾಸನೆಯಿಲ್ಲ. ಪಶುವೈದ್ಯ ಇಲಾಖೆಯಲ್ಲಿ ಹೊಸ ಹೊಸ ಯೋಜನೆಗಳು ಇಲ್ಲ. ಕಾರ್ಮಿಕ ಇಲಾಖೆಯಲ್ಲಿ ಒಳ್ಳೆಯ ಮಂತ್ರಿಗಳು ಇದ್ದಾರೆ ಅವರು ನಾವು ಹೇಳಿದ್ದನ್ನಾದರೂ ಕೇಳುತ್ತಾರೆ ಸಿಟ್ಟು ಮಾಡಿಕೊಳ್ಳುವುದಿಲ್ಲ. ನಿಮ್ಮಲ್ಲಿ ಹೊಸ ಯೋಜನೆಗಳು ಯಾವುದೂ ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಹೊಸ ಯೋಜನೆಗಳು ಯಾವುದೂ ಇಲ್ಲದೇ ಇರುವುದರಿಂದ ದಯಮಾಡಿ ಹೊಸ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಕುಟುಂಬ ಕಲ್ಯಾಣ ಇಲಾಖೆಯ ಬಗ್ಗೆ ಹೇಳಬೇಕಾದರೆ ಈಗಿರತಕ್ಕ ಪಬ್ಲಿಕ್ ಹೆಲ್ತ್ ಸೆಂಟರ್‌ಗಳನ್ನು ತೆಗೆದು ಪಬ್ಲಿಕ್ ಹೆಲ್ತ್ ಯೂನಿಟ್‌ಗಳೆಂದು ಮಾಡಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆ ಕಾರಣ ಕೇಂದ್ರ ಸರ್ಕಾರದ ಹಣ ಬರುತ್ತಿದೆ ಅದಕ್ಕೋಸ್ಕರ ಆ ರೀತಿ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟರೆ ಈಗಿರತಕ್ಕ ಸೆಂಟರ್‌ಗಳ ಹೆಸರುಗಳನ್ನು ಏತಕ್ಕೆ ಬದಲಾವಣೆ ಮಾಡಬೇಕು ? ಏನಾದರೂ ಸುಧಾರಣೆ ಮಾಡುವುದು ಇದ್ದರೆ ಹಾಗೆಯೇ ಮಾಡುವುದಕ್ಕೆ ಆಗುವುದಿಲ್ಲವೇ ? ಪಬ್ಲಿಕ್ ಹೆಲ್ತ್ ಯೂನಿಟ್‌ನ್ನು ಮಾಡುವುದಕ್ಕೆ ಬದಲಾಗಿ ಪಬ್ಲಿಕ್ ಹೆಲ್ತ್ ಸೆಂಟರ್ ಎಂದೇ ಮಾಡಿ. ಬೇಕಾದರೆ ಹೊಸ ಆಸ್ಪತ್ರೆಗಳನ್ನು ಮಾಡಿ. ಆಯುರ್ವೇದಿಕ್ ಆಸ್ಪತ್ರೆಗಳನ್ನು ತೆರೆಯಲಿಕ್ಕೆ ಹೊಸ ಯೋಜನೆಗಳನ್ನು ತಯಾರು ಮಾಡಿಯೆಂದರೆ ಮಾಡುತ್ತಿಲ್ಲ. ಈಗ ಕೇಳಿದರೆ ಎಲ್ಲಾ ಅಧಿಕಾರವನ್ನು ಜಿಲ್ಲಾಪರಿಷತ್‌ನವರಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಜಿಲ್ಲಾಪರಿಷತ್‌ನವರಿಗೆ ಈ ಕೆಲಸವನ್ನು ಬಿಟ್ಟಮೇಲೆ ಅವರು ಈ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಜಿಲ್ಲಾ ಪರಿಷತ್‌ನಲ್ಲಿ ಆಸ್ಪತ್ರೆಗಳನ್ನು ಮಂಜೂರು ಮಾಡತಕ್ಕ ಕೆಲಸ ಸ್ಥಗಿತವಾಗಿದೆ. ಕೊನೆಯ ಪಕ್ಷ ಪಬ್ಲಿಕ್ ಹೆಲ್ತ್ ಸೆಂಟರ್‌ಗಳಾದರೂ ಇರಲಿಕ್ಕೆ ತೊಂದರೆಯೇನು ? ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಿಕ್ಕೆ ಸರ್ಕಾರ ಮುಂದಾಗಬೇಕು. ಆಯುರ್ವೇದಿಕ್ ಆಸ್ಪತ್ರೆಗಳನ್ನು ಪಂಚಾಯಿತಿಗೆ ಒಂದರತೆ ಕೊಡಬೇಕಾಗುತ್ತದೆ. ನಮ್ಮಲ್ಲಿ ೨೪ ಪಂಚಾಯಿತಿಗಳು ಇವೆ. ೧೨ ಆಸ್ಪತ್ರೆಗಳಿವೆ ಎರಡು ಪಂಚಾಯಿತಿಗೆ ಒಂದು ಆಸ್ಪತ್ರೆ ಇರುವುದರಿಂದ ನಿಖರವಾಗಿ ಪಂಚಾಯತಿಗೊಂದು ಆಯುರ್ವೇದಿಕ್ ಆಸ್ಪತ್ರೆ ಇರಬೇಕೆಂದು ಒಂದು ಸುತ್ತೋಲೆಯನ್ನು ಕಳುಹಿಸಿ. ಅದೇರೀತಿ ಒಂದು ಪಂಚಾಯಿತಿಗೊಂದು ಪಶುವೈದ್ಯಶಾಲೆ ಇರಬೇಕೆಂದು ಯೋಜನೆಯನ್ನು ತಯಾರು ಮಾಡಬೇಕು. ಅಧಿಕಾರ ವಿಕೇಂದ್ರೀಕರಣವಾಗಿದೆಯೆಂದು ಹೇಳುವುದಕ್ಕೆ ಬದಲಾಗಿ ನೇರವಾಗಿ ಆರ್ಡರ್ ಮಾಡಬೇಕು. ಒಂದು ಪಂಚಾಯಿತಿಗೆ ಇಷ್ಟು ಸವಲತ್ತುಗಳು ಇರಬೇಕು ? ಪಶುವೈದ್ಯಶಾಲೆಗಳು ಇರಬೇಕು, ಎಷ್ಟು ಹೈಸ್ಕೂಲುಗಳು ಇರಬೇಕು ? ಈ ರೀತಿಯಾಗಿ ಇಷ್ಟಿಷ್ಟು ಅನುಕೂಲತೆಗಳಿರಬೇಕೆಂದು ಆದೇಶ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ಜಿಲ್ಲಾಪರಿಷತ್‌ನವರು ಏನೂ ಮಾಡುವುದಕ್ಕೆ ಆಗುವುದಿಲ್ಲ, ಸರ್ಕಾರದವರೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಪಂಚಾಯಿತಿ ಹೆಡ್‌ಕ್ವಾರ್ಟರ್ಸ್ ಆಗಬೇಕಾದರೆ ಎಲ್ಲ ಸೌಲಭ್ಯಗಳನ್ನು ಕೂಡಲೇ ಒದಗಿಸಬೇಕು. ಇದರಲ್ಲಿ ಯಾವುದೇ ರಾಜಕೀಯ ಬೇಡ. ಅಧಿಕಾರದಲ್ಲಿ ಕಾಂಗ್ರೆಸ್ ಪಕ್ಷ ಇರಲಿ, ಯಾವುದೇ ಪಕ್ಷ ಅಧಿಕಾರದಲ್ಲಿರಲಿ ಪಂಚಾಯಿತಿಗಳಿಗೆ ಎಷ್ಟು ಸೌಲಭ್ಯ, ಸವಲತ್ತುಗಳು ಇರಬೇಕೋ ಅಷ್ಟನ್ನು ಕೊಡಲೇಬೇಕು. ಇದರಲ್ಲಿ ಯಾವುದೇ ರೀತಿಯ ಹಸ್ತಕ್ಷೇಪ ಬೇಡ. ಆ ರೀತಿ ಮಾಡಿದರೆ ಒಳ್ಳೆಯದಾಗುತ್ತದೆಂದೂ, ಆ ರೀತಿ ಮಾಡಬೇಕೆಂದು ಹೇಳುತ್ತೇನೆ. ಪಶುವೈದ್ಯಶಾಲೆಗಳ ಬಗ್ಗೆ ಹೇಳುವುದಾದರೆ ೧೯೮೨ನೇ ಇಸವಿಯಲ್ಲಿ ಸುಮಾರು ೨೮೨ ಆಸ್ಪತ್ರೆಗಳನ್ನು ಸರ್ಕಾರದವರು ಕೊಟ್ಟರು. ಇವತ್ತು ೨೦೨ ಆಸ್ಪತ್ರೆಗಳನ್ನು ಮುಚ್ಚಿದ್ದಾರೆ. ಅನೇಕ ಕಡೆಗಳಲ್ಲಿ ಆಸ್ಪತ್ರೆ ಕಟ್ಟಡ ಕಟ್ಟಿಸಿದ್ದಾರೆ, ಅನೇಕ ಸವಲತ್ತುಗಳನ್ನು ಕೊಟ್ಟಿದ್ದಾರೆ ಅಂತಹ ಆಸ್ಪತ್ರೆಗಳನ್ನು ಸಹ ಮುಚ್ಚಿದ್ದಾರೆ. ಅವುಗಳನ್ನು ಪುನಃ ತೆಗೆಯಬೇಕೆಂದು ಹೇಳುತ್ತೇನೆ, ಈ ಇಲಾಖೆಗೆ ನಾಲ್ಕೈದು ಮಂತ್ರಿಗಳು ಆಗಿ ಹೋದರು. ಕೊಟ್ಟಿರುವ ಆಸ್ಪತ್ರೆಗಳನ್ನು ಪುನರ್ ಪ್ರಾರಂಭ ಮಾಡಲಿಕ್ಕೆ ಇವರ ಕೈಯಲ್ಲಿ ಆಗುತ್ತಿಲ್ಲ. ಮಂತ್ರಿಗಳು ಬರುತ್ತಾರೆ ಹೋಗುತ್ತಾರೆ, ಇದರ ಬಗ್ಗೆ ನಿಖರವಾದ ಉತ್ತರ ಕೊಡಿ ಅಂದರೆ ಯಾರೂ ಕೊಡಲಿಲ್ಲ. ೧೯೮೨ನೇ

ಇಸವಿಯಲ್ಲಿ ಕೊಟ್ಟಂತಹ ಆಸ್ಪತ್ರೆಗಳನ್ನು ಕೊಡುತ್ತೀರೋ ಅಥವಾ ಇಲ್ಲವೋ? ಕೊಟ್ಟಂತಹ ಪಶುವೈದ. ಆಸ್ಪತ್ರೆಗಳಿಗೆ ಕಟ್ಟಡ ಹೇಗೆ ಒದಗಿಸುತ್ತೀರಿ ? ಈಗ ಜಿಲ್ಲಾ ಪರಿಷತ್‌ನವರಿಗೆ ಅಧಿಕಾರ ಕೊಟ್ಟಿದ್ದೀರಿ, ಅವರು ಕಳುಹಿಸಿದಂತಹ ಯೋಜನೆಯನ್ನು ಏತಕ್ಕೆ ಮಂಜೂರು ಮಾಡುತ್ತಿಲ್ಲ ? ನಿಮಗೆ ತೊಂದರೆಯೇನು ? 'ಕಾಡು ಉಳಿಸಿ ನಾಡು ಬೆಳಸಿ' ಎನ್ನುವ ಹಾಗೆ ಇವತ್ತು ನಾವು ಪಶುಗಳನ್ನು ಉಳಿಸಿಕೊಳ್ಳಬೇಕಾಗಿದೆ. ಪಶುಗಳಿಲ್ಲದೇ ಯಾರು ಬದುಕುವುದಕ್ಕೆ ಆಗುವುದಿಲ್ಲ. ನಮಗೆ ಕೊಟ್ಟಿರತಕ್ಕ ವರದಿಯಲ್ಲಿ ಆಸ್ಪತ್ರೆ ಮತ್ತು ಪಶುವೈದ್ಯ ಆಸ್ಪತ್ರೆಗಳು ಬಹಳ ಕಡಿಮೆ ಇವೆ. ಅವರೇ ಹೇಳಿದಂತೆ ೧೩೭೩ ವಿವಿಧ ಆಸ್ಪತ್ರೆಗಳಿವೆ. ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಒಂದೊಂದು ತಾಲ್ಲೂಕಿಗೆ ಇಷ್ಟಿಷ್ಟು ಎಂದು ಆಸ್ಪತ್ರೆಗಳಿವೆ. ಅದರಲ್ಲಿ ಅರ್ಧದಷ್ಟಾದರೂ ಪಶುವೈದ್ಯಶಾಲೆಗಳು ಇದ್ದರೆ ಅನುಕೂಲವಾಗುತ್ತದೆ. ಆ ಒಂದು ಯೋಜನೆಯನ್ನು ರೂಪಿಸಬೇಕೆಂದು ಹೇಳುತ್ತೇನೆ. ಆರೋಗ್ಯ ಇಲಾಖೆ ಎಲ್ಲಾ ಇಲಾಖೆಗಳಿಗಿಂತ ಅತ್ಯುತ್ತಮವಾದ ಕೆಲಸವನ್ನು ಮಾಡಿದೆ ಅದಕ್ಕಾಗಿ ನಾನು ಶ್ಲಾಘನೆ ಮಾಡುತ್ತೇನೆ. ಕೇಂದ್ರ ಸರ್ಕಾರದಿಂದ ಬರಬೇಕಾದ ಹೆಚ್ಚಿನ ಹಣ ಆರೋಗ್ಯ ಇಲಾಖೆಗೆ ಹಾಗೂ ಪಶುವೈದ್ಯ ಇಲಾಖೆಗೆ ಬರುತ್ತಿಲ್ಲ. ಅವನ್ನು ಕಾಂಗ್ರೆಸ್ ಪಕ್ಷದವರು ಕೊಡಿಸಲಿಕ್ಕೆ ಪ್ರಯತ್ನ ಮಾಡಲಿ ಎಂದು ಹೇಳುತ್ತೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ). — ಮಾನ್ಯ ಅಧ್ಯಕ್ಷರೇ, ಇಂದಿನ ಬೇಡಿಕೆಗಳಲ್ಲಿ ಪ್ರಮುಖವಾಗಿ ಆರೋಗ್ಯ ಇಲಾಖೆ, ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಬಗ್ಗೆ ನನ್ನ ಕೆಲವು ಸಲಹೆಗಳನ್ನು ಹೇಳಬಯಸುತ್ತೇನೆ. ಈ ಆರೋಗ್ಯ ಇಲಾಖೆಯ ಬಗ್ಗೆ ಶ್ರೀ ಪಟವಾರ್ಕ ರತ್ನಾಕರ್ ಅವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಆದರೂ ಅವರು ಹೇಳದೇ ಇರತಕ್ಕಂಥ ಕೆಲವು ಪ್ರಮುಖ ವಿಷಯಗಳನ್ನು ಮಾತ್ರ ಹೇಳಬಯಸುತ್ತೇನೆ. ಈ ಆರೋಗ್ಯ ಇಲಾಖೆ ಮಾಡುತ್ತಿರುವ ಕೆಲಸಗಳ ಬಗ್ಗೆ ಹಾಗೂ ಅಲ್ಲಿ ನಡೆಯುತ್ತಿರುವ ಈ ವ್ಯವಹಾರಗಳ ಬಗ್ಗೆ ನಮ್ಮ ಎಸ್ಟಿಮೇಟ್ ಕಮಿಟಿಯವರು ಏಪ್ರಿಲ್ ೧೫ರಂದು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಈ ರಿಪೋರ್ಟ್‌ನಲ್ಲಿ ಸಾಕಷ್ಟು ವಿವರವಾಗಿ ಈ ಬಗ್ಗೆ ಹೇಳಿದ್ದಾರೆ. ನಿಜವಾಗಿಯೂ ಈ ರಿಪೋರ್ಟನ್ನು ನೋಡಿದರೆ ಬಹಳ ಆಶ್ಚರ್ಯಕರವಾದ ರೀತಿಯಲ್ಲಿ ಇದು ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದು ತಿಳಿದುಬರುತ್ತದೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಈ ಆರೋಗ್ಯ ಇಲಾಖೆ ಒಂದು ಅನಾರೋಗ್ಯ ಇಲಾಖೆಯಾಗಿ ಪರಿವರ್ತನೆಯಾಗಿದೆ. ೧೯೮೩–೮೪ರಿಂದ ಪ್ರತಿವರ್ಷ ಈ ಶೀರ್ಷಿಕೆಗಳಲ್ಲಿ ಇಟ್ಟಂಥ ಹಣದಲ್ಲಿ ಬಹಳಷ್ಟು ಪ್ರಮಾಣವನ್ನು ಉಪಯೋಗಿಸಿಲ್ಲ. ಈ ಪ್ರಮುಖವಾದಂಥ ಆರೋಗ್ಯ ಇಲಾಖೆಯಲ್ಲಿ ಇರುವ ಅನೇಕ ಸ್ಕೀಮ್‌ಗಳಲ್ಲಿ ಕೇಂದ್ರಸರ್ಕಾರ ನೂರಕ್ಕೆ ನೂರರಷ್ಟು ಹಣ ಒದಗಿಸುತ್ತದೆ ಇಂತಹ ಶೀರ್ಷಿಕೆಗಳಲ್ಲಿ ಸಹ ಆರೋಗ್ಯ ಇಲಾಖೆಯ ಅಧಿಕಾರಿಗಳು ಈ ಹಣವನ್ನು ಉಪಯೋಗ ಮಾಡಿಕೊಂಡಿಲ್ಲ. ಇದರಲ್ಲಿ ಮುಖ್ಯವಾಗಿ ಹೇಳಬೇಕೆಂದರೆ ಈ ರಿಪೋರ್ಟ್‌ನಲ್ಲಿ ಹೀಗೆ ಹೇಳಿದ್ದಾರೆ

> "ಕೇಂದ್ರ ಪುರಸ್ಕೃತ ಶೇಕಡಾ ನೂರರಷ್ಟು ಅನುದಾನ ಪಡೆಯುವ ಶೀರ್ಷಿಕೆಗಳಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಹಣವನ್ನು ಲ್ಯಾಪ್ಸ್ ಮಾಡಿರುವುದನ್ನು ಗಮನಿಸಿದಾಗ ಇಲಾಖೆಯಲ್ಲಿ ಹಣಕಾಸಿನ ಮೇಲೆ ಹತೋಟಿ ಇಡಲು ಸಾಕಷ್ಟು ನುರಿತ ಅನುಭವಿ ಅಧಿಕಾರಿಗಳು ಇಲ್ಲ ಎನ್ನುವ ಭಾವನೆ ಅಥವಾ ನುರಿತ ಅನುಭವಿಗಳು ಇದ್ದರೂ ಅವರು ಸಾಕಷ್ಟು ಶ್ರದ್ಧೆಯಿಂದ ಹಣಕಾಸಿನ ಸ್ಥಿತಿಯನ್ನು ಗಮನಿಸದೆ ನಿರ್ಲಕ್ಷತೆಯಿಂದ ವರ್ತಿಸುತ್ತಿದ್ದಾರೆ ಎಂಬ ಭಾವನೆ ಬರುವಂತಾಗಿದೆ. ಮುಖ್ಯವಾಗಿ ನೂರಕ್ಕೆ ನೂರರಷ್ಟು ಅನುದಾನ ದೊರೆಯುತ್ತಿರುವ ಯೋಜನೆಗಳಲ್ಲಿ ಒಂಧೇದ ದೃಷ್ಟಿ ಮಾಂದ್ಯತೆಯನ್ನು ತಡೆಗಟ್ಟುವ ಹಾಗೂ ನಿಯಂತ್ರಣ ಬಗ್ಗೆ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಕೇಂದ್ರದ ೫೩.೭೦ ಲಕ್ಷ ರೂಪಾಯಿಗಳ ಅನುದಾನದಲ್ಲಿ ಕೇವಲ ೩೧ ಲಕ್ಷ ರೂಪಾಯಿಗಳನ್ನು ೧೯೮೪ರಲ್ಲಿ ಖರ್ಚುಮಾಡಿದೆ. ೧೯೮೪–೮೫ರಲ್ಲಿ ಒಟ್ಟು ೮೦ ಲಕ್ಷ ರೂಪಾಯಿಗಳಲ್ಲಿ ಕೇವಲ ೪೧ ಲಕ್ಷ ರೂಪಾಯಿಗಳನ್ನು ಮಾತ್ರ ಈ ಇಲಾಖೆ ಖರ್ಚು ಮಾಡಿದೆ ೧೯೮೫–೮೬ ರಲ್ಲಿ ಕೇವಲ ೪೯ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಉಳಿದ ೩೧ ಲಕ್ಷ ರೂಪಾಯಿಗಳನ್ನು ಉಪಯೋಗ ಮಾಡಿಕೊಂಡಿಲ್ಲ. ಅದರಂತೆ ೧೯೮೭ನೇ ಇಸವಿಯಲ್ಲಿ ೬೯ ಲಕ್ಷ

ರೂಪಾಯಿಗಳನ್ನು ಅನುದಾನ ಕೊಟ್ಟಿರುವರು. ಆದರೆ ಹಿಂದಿನ ವರ್ಷಕ್ಕಿಂತ ಸುಮಾರು ೧೫ ಲಕ್ಷ ರೂಪಾಯಿಗಳಷ್ಟು ಕಡಿಮೆ ಹಣವನ್ನು ಬಿಡುಗಡೆ ಮಾಡಿದ್ದಾರೆ......''

ಇದಕ್ಕೆ ಮುಖ್ಯ ಕಾರಣ ಎಂದರೆ ಕೇಂದ್ರ ಸರ್ಕಾರ ಕೊಟ್ಟಂಥ ದುಡ್ಡು ಉಪಯೋಗ ಮಾಡಿಕೊಳ್ಳದೇ ಇದ್ದುದರಿಂದ ಕೇಂದ್ರ ಸರ್ಕಾರ ೧೯೮೬–೮೭ಕ್ಕೆ ಕಡಿಮೆ ಮಾಡಿತು.

ಅದರಂತೆ ವಿವಿಧ ಕಾರ್ಯಕರ್ತರ ತರಬೇತಿ ಸಲುವಾಗಿ ಕೊಟ್ಟಿರುವ ೮ ಲಕ್ಷ ರೂಪಾಯಿಗಳಲ್ಲಿ ೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಇನ್ನೊಂದು, ೧೯೮೫-೮೬ರಲ್ಲಿ ೧೫ ಲಕ್ಷ ರೂಪಾಯಿಗಳ ಕೇಂದ್ರ ಸರ್ಕಾರದ ಅನುದಾನ ಇದ್ದರೆ ಕೇವಲ ೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ

ಇನ್ನು ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ನೂರಕ್ಕೆ ನೂರರಷ್ಟು ಕೇಂದ್ರ ಸರ್ಕಾರ ಕೊಟ್ಟರೂ ಕೂಡ ನೀವು ಅದರಲ್ಲಿ ಸಹ ಬಹಳ ಕಡಿಮೆ ಹಣವನ್ನು ಉಪಯೋಗಿಸಿದ್ದೀರಿ. ಈ ಬಗ್ಗೆ ಕೆಲವು ಮಾನ್ಯ ಸದಸ್ಯರು ಕೇಂದ್ರ ಸರ್ಕಾರವನ್ನು ದೂರುತ್ತಿರುವುದು ದುರಾದೃಷ್ಟಕರ. ನಿಜವಾಗಿಯೂ ಈ ಇಲಾಖೆ ಪೂರ್ತಿಯಾಗಿ ಹಣ ಉಪಯೋಗಿಸಿಲ್ಲ.

೪–೩೦ ಪಿ. ಎಂ.

ಇನ್ನು ಐ.ಪಿ.ಪಿ. ಯೋಜನೆಯಡಿಯಲ್ಲಿ ಇರತಕ್ಕ ಹಣದಲ್ಲಿ ೧೯೮೮ರೊಳಗೆ ನಾವು ಎಲ್ಲಾ ಬಿಲ್ಡಿಂಗ್‌ಗಳನ್ನು ಕಟ್ಟಬೇಕಾಗಿತ್ತು, ಆದರೆ ಇದರಲ್ಲಿ ಇದುವರೆಗೆ ಖರ್ಚಾಗಿರುವ ಹಣ ಕೇವಲ ನಾಲ್ಕನೇ ಒಂದು ಭಾಗ ಮಾತ್ರ. ನಮ್ಮ ಬಿಲ್ಡಿಂಗ್‌ಗಳು ಮುಗಿದಿಲ್ಲ. ಮಾನ್ಯ ಮಂತ್ರಿಗಳು ಪೂರ್ತಿಯಾಗಿ ಕಟ್ಟಿಸಿಕೊಡುತ್ತೇವೆಂದು ಈ ಮನೆಯಲ್ಲಿ ಹೇಳಿದ್ದರು. ಈ ದುಡ್ಡು ಕೇಂದ್ರ ಸರ್ಕಾರದಿಂದ ಬಂದರೂ ಸಹ, ಈ ಹಣವನ್ನು ಬೇರೆ ಯೋಜನೆಗಳಿಗೆ ಉಪಯೋಗ ಮಾಡಿಕೊಂಡಿದ್ದಾರೆ. ಈ ಕಟ್ಟಡಗಳು ಈ ರೀತಿಯಲ್ಲಿ ಹೋದರೆ ಇನ್ನು ೧೦ ವರ್ಷವಾದರೂ ಈ ಬಿಲ್ಡಿಂಗ್‌ಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಐ. ಪಿ.ಪಿ. ಯೋಜನೆಯಡಿಯಲ್ಲಿ ಕೇವಲ ೧೦ ಪರ್ಸೆಂಟ್ ಮಾತ್ರ ನಮ್ಮ ಸರ್ಕಾರ ಕೊಡುತ್ತದೆ. ಉಳಿದ ೯೦ ಪರ್ಸೆಂಟ್ ಹಣವನ್ನು ಕೇಂದ್ರ ಸರ್ಕಾರ ಮತ್ತು ವರ್ಲ್ಡ್ ಬ್ಯಾಂಕ್ ಕೊಡುತ್ತದೆ. ಇಂತಹ ಹಣವನ್ನು ರಾಜ್ಯಸರ್ಕಾರ ಸರಿಯಾಗಿ ಬಳಸಿಕೊಳ್ಳುತ್ತಿಲ್ಲ. ಇದರಿಂದ, ಈ ಬಗ್ಗೆ ಎಷ್ಟೊಂದು ಅಲಕ್ಷ್ಯ ಇದೆ, ಅಧಿಕಾರಿಗಳು ಯಾವ ರೀತಿಯಾಗಿ ಕೆಲಸ ಮಾಡದೇ ಇದ್ದಾರೆ ಎಂಬುದು ಗೊತ್ತಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುತ್ತೇನೆ. ಇನ್ನು ಈ ಇಲಾಖೆ ವತಿಯಿಂದ ಬೆಡ್‌ಷೀಟುಗಳು, ಜಮಖಾನಗಳು ಮತ್ತು ಸೀರೆಗಳನ್ನು ಖರೀದಿ ಮಾಡಿದ್ದಾರೆ. ಈ ದರಗಳನ್ನು ನೋಡಿದರೆ ಈ ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. ಮಾರ್ಕೆಟ್‌ನಲ್ಲಿ ೨೫ ರೂಪಾಯಿಗೆ ಸಿಗತಕ್ಕ ಬೆಡ ಷೀಟ್ ಇವರು ೫೮ ರೂಪಾಯಿಗೆ ಖರೀದಿ ಮಾಡಿದ್ದಾರೆ, ಒಟ್ಟು ೧೩.೫೦೦ ಬೆಡ್‌ಷೀಟುಗಳ ಖರೀದಿಯಲ್ಲಿ ೪,೪೫,೫೦೦ ರೂಪಾಯಿಗಳ ಲಂಚ ಹೊಡೆದಿದ್ದಾರೆ. ಜಮಖಾನ ಬಜಾರಿನಲ್ಲಿ ೨೮ ರೂಪಾಯಿ ಇದ್ದರೆ, ಇವರು ೮೫ ರೂಪಾಯಿಗೆ ಒಂದು ಜಮಖಾನದಂತೆ ಖರೀದಿ ಮಾಡಿದ್ದಾರೆ. ಸೀರೆಗಳು ಆಂಧ್ರಪ್ರದೇಶದಿಂದ ೧೨ ರೂಪಾಯಿಗೆ ಸಿಗತಕ್ಕ ಸೀರೆ, ಬೆಳಗಾಂ ರೀಜನಲ್ ಡೆಪ್ಯೂಟಿ ಡೈರೆಕ್ಟರ್ ಮತ್ತು ಇನ್ನಿತರ ಅಧಿಕಾರಿಗಳು ಕಳ್ಳತನದಿಂದ ಖರೀದಿ ಮಾಡಿ, ನಮ್ಮ ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಸೀರೆಗೆ ೪೨ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಂತಹ ಅಧಿಕಾರಿಗಳ ಬಗ್ಗೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು, ಮಾನ್ಯ ಕಡಪಟ್ಟಿ ಅವರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ಕಮಿಟಿಯವರು ರಿಪೋರ್ಟ್ ಕೊಟ್ಟಿದ್ದಾರೆ. ಇದರ ಬಗ್ಗೆ ಇನ್ನುವರೆಗೂ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ಬಿ. ರಾಚಯ್ಯ.—ಎಸ್ಟಿಮೇಟ್ ಕಮಿಟಿಯವರು ಯಾವಾಗ ವರದಿಯನ್ನು ಕೊಟ್ಟರೋ ತತ್‌ಕ್ಷಣ ಉಪ ಲೋಕಾಯುಕ್ತಕ್ಕೆ ಪೂರ್ತಿ ಎನ್‌ಕ್ವೈರಿ ಮಾಡಬೇಕೆಂದು ಕಳುಹಿಸಿಕೊಟ್ಟಿದ್ದೇನೆ. ಅವರು ಎನ್‌ಕ್ವೈರಿ ಮಾಡುತ್ತಿದ್ದಾರೆ.

ಶ್ರೀ ವೀರಯ್ಯಸ್ವಾಮಿ.—ಅಧ್ಯಕ್ಷರೇ, ಇದಿಷ್ಟೇ ಅಲ್ಲದೆ, ಆಸ್ಪತ್ರೆಗಳಲ್ಲಿ ಸಲೈನ್ ಬಾಟ್‌ಗಳನ್ನು ಖರೀದಿ ಮಾಡುತ್ತಾರೆ. ಇದು ಮಾರ್ಕೆಟ್‌ನಲ್ಲಿ ಕೇವಲ ೩ ರೂಪಾಯಿ ಆಗುತ್ತದೆ. ಇದಕ್ಕೆ ೯–೯೦ ಪೈಸೆಯಿಂದ ೧೨ ರೂಪಾಯಿವರೆಗೆ ಖರೀದಿ ಮಾಡಿದ್ದಾರೆ. ಈ ರೀತಿ ೧೦ ಸಾವಿರ ಬಾಟಲು

ಗಳನ್ನು ವಿರೀದಿ ಮಾಡಿದ್ದಾರೆ. ಈ ಆರೋಗ್ಯ ಇಲಾಖೆ ವತಿಯಿಂದ ಇದರ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ಈ ರಿಪೋರ್ಟ್‌ನಲ್ಲಿ ಹೇಳಿದ್ದಾರೆ ಈ ರಿಪೋರ್ಟ್‌ನಲ್ಲಿ ಹೇಳಿರುವುದನ್ನು ಒಂದು ವೇಳೆ ನೂರಕ್ಕೆ ನೂರು ಪರ್ಸೆಂಟ್ ಸರ್ಕಾರ ಒಪ್ಪಿ ಪ್ರತಿಯೊಂದು ಶಿಫಾರಸ್ಸುಗಳನ್ನೂ ಜಾರಿಗೆ ತಂದಿದ್ದೇ ಆದರೆ ಈ ಇಲಾಖೆಯನ್ನು ೧೦ ಪ್ರತಿಶತ ಆದರೂ ಸುಧಾರಿಸಬಹುದು. ನಾನು ಈ ರಿಪೋರ್ಟ್‌ನಲ್ಲಿರತಕ್ಕ ಕೆಲವು ಅಂಶಗಳನ್ನು ಮಾತ್ರ ಹೇಳಿದ್ದೇನೆ. ಈ ಎಸ್ಟಿಮೇಟ್ ಕಮಿಟಿಯವರು ಇನ್ನೊಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಈ ಸಮಿತಿಯ ಸದಸ್ಯರು ಕೆಲವು ಆಸ್ಪತ್ರೆಗಳಿಗೆ ಅಕಸ್ಮಾತ್ತಾಗಿ ಭೇಟಿ ಕೊಟ್ಟಿದ್ದಾರೆ. ಅದರಲ್ಲಿ ಮುಖ್ಯವಾಗಿ ಬೆಂಗಳೂರು ಮಲ್ಲೇಶ್ವರಂನಲ್ಲಿರತಕ್ಕ ಆಸ್ಪತ್ರೆಗೆ ಭೇಟಿ ಕೊಟ್ಟಾಗ ಕಂಡ ಕೆಲವು ವಿಷಯಗಳನ್ನು ಇಲ್ಲಿ ಹೇಳಿದ್ದಾರೆ. ಇಲ್ಲಿನ ಆಸ್ಪತ್ರೆಯಲ್ಲಿ ಎಷ್ಟೋ ರೋಗಿಗಳನ್ನು ನೆಲದ ಮೇಲೆ ಮಲಗಿಸಿದ್ದನ್ನು ಸದಸ್ಯರು ಸ್ವತಃ ಕಣ್ಣಿಂದ ಕಂಡಿದ್ದಾರೆ, ಅನಂತರ ಆಪರೇಷನ್ ಥಿಯೇಟರಿನಲ್ಲಿ, ಆಪರೇಷನ್ ಮಾಡುವುದಕ್ಕೆ ಇರತಕ್ಕ ಚಿಕ್ಕ ಜಾಗವನ್ನೂ ನೋಟ್ ಮಾಡಿದ್ದಾರೆ, ಮತ್ತೆ ಎರಡು ಮೂರು ಆಸ್ಪತ್ರೆಗಳಲ್ಲಿ ಇದ್ದಂಥ ಔಷಧಿಗಳನ್ನು ನೋಡಿದಾಗ, ೫ ವರ್ಷಕ್ಕಿಂತ ಮೊದಲು ತಯಾರು ಮಾಡಿದಂಥ ಔಷಧಿ ಇಟ್ಟಿರುವುದನ್ನು ನೋಡಿದ್ದೇವೆ. ಯಾವ ಆಸ್ಪತ್ರೆಗಳಲ್ಲಿ ಯಾವ ಔಷಧಿ ಇಟ್ಟಿದ್ದಾರೆಂದು ಈ ರಿಪೋರ್ಟ್‌ನಲ್ಲಿ ಇದೆ. ಈ ಸಮಿತಿಯವರು ಕೇವಲ ಎರಡು ಮೂರು ಆಸ್ಪತ್ರೆಗಳನ್ನು ನೋಡಿರಬಹುದು. ಆದರೆ ಇಡೀ ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿಯೂ ಈ ಸ್ಥಿತಿ ಇದೆ. ಇದಲ್ಲದೆ ಬಹಳ ಕಡೆ ಆಸ್ಪತ್ರೆಗಳಲ್ಲಿ ನೋಡಿದಾಗ, ಕಿನೇ ದರ್ಜೆ ನೌಕರರು ಇದ್ದಾರೆ, ಇವರು ಯಾವಾಗಲೂ ಆಸ್ಪತ್ರೆಗಳಲ್ಲಿ ಇರುವುದಿಲ್ಲ. ಅಲ್ಲಿರುವ ಆಸ್ಪತ್ರೆಯ ರೂಮುಗಳಲ್ಲಿ ಕಸಕಡ್ಡಿ ಹೊಡೆದಿರುವುದಿಲ್ಲ. ನಾನು ಈ ಆರೋಗ್ಯ ಇಲಾಖೆಯ ಬಗ್ಗೆ ಮೊದಲೇ ಹೇಳಿದೆ. ಎಷ್ಟೋ ಆಸ್ಪತ್ರೆಗಳಲ್ಲಿ ನಾವು ಮೂಗು ಹಿಡಿದುಕೊಂಡು ಹೋಗಬೇಕಾಗುತ್ತದೆ. ನಾಲ್ಕನೇ ದರ್ಜೆ ನೌಕರರು ಪ್ಯೂನ್ಸ್, ವಾರ್ಡ್‌ಬಾಯ್ಸ್ ಇವರನ್ನು ನೇಮಕಾತಿ ಮಾಡುವ ಒಂದು ರೂಲ್ಸ್‌ನಲ್ಲಿ ಇವರಿಗೆ ಟ್ರಾನ್ಸ್‌ಫರ್ ಮಾಡಬಾರದು ಎಂಬ ರೂಲ್ಸ್ ಇದೆ, ಅದನ್ನು ತೆಗೆದು ಅವರನ್ನು ಬೇರೆ ಕಡೆಗೆ ಚೇಂಜ್ ಮಾಡಿದರೆ ಸ್ವಲ್ಪ ಮಟ್ಟಿಗೆ ಅವರನ್ನು ಕಂಟ್ರೋಲ್ ಮಾಡಬಹುದು. ಇದರ ಜೊತೆಗೆ ಆಸ್ಪತ್ರೆಗಳಲ್ಲಿರತಕ್ಕಂಥ ಅಂಬ್ಯುಲೆನ್ಸ್ ವ್ಯಾನ್‌ಗಳು ಬಹಳಷ್ಟು ಕಡೆ ಕೆಟ್ಟು ಹೋಗಿವೆ. ಯಾರಾದರೊಬ್ಬ ಸೀರಿಯಸ್ ಪೇಷಂಟ್ ಇದ್ದರೆ, ಬಹುಶಃ ಅವರು ಸತ್ತುಹೋದಮೇಲೆ ಅವರನ್ನು ಈ ಅಂಬ್ಯುಲೆನ್ಸ್‌ನಲ್ಲಿ ಒಯ್ಯಬಹುದೇ ವಿನಹ ಅವರು ಸಾಯುವುದಕ್ಕಿಂತ ಮೊದಲು ಅವರನ್ನು ಈ ಅಂಬ್ಯುಲೆನ್ಸ್‌ಗಳಲ್ಲಿ ಒಯ್ಯುವುದಕ್ಕೆ ಆಗುವುದಿಲ್ಲ. ಟೀಚಿಂಗ್ ಹಾಸ್ಪಿಟಲ್ಸ್‌ನ ಸ್ಥಿತಿ ಬಹಳ ವಿಶೇಷವಾಗಿದೆ. ಅಲ್ಲಿರತಕ್ಕಂಥ ಸರಕಾರಿ ಡಾಕ್ಟರ್ಸ್ ಟೀಚಿಂಗ್ ಹಾಸ್ಪಿಟಲ್‌ನ ಡಾಕ್ಟರ್ಸ್ ಬರುತ್ತಾರೆ ಎಂದು ಪೇಷಂಟ್ಸ್‌ನ್ನು ನೋಡುವುದಿಲ್ಲ. ವಿದ್ಯಾರ್ಥಿಗಳೂ ಸಹ ಟೀಚಿಂಗ್ ಹಾಸ್ಪಿಟಲ್ಸ್‌ನ ಶಿಕ್ಷಕರ ಜೊತೆ ಬರುತ್ತಾರೆ. ಪೇಷಂಟ್‌ಗಳ ಸೀರಿಯಸ್‌ನೆಸ್ ಬಗ್ಗೆ ಅವರೇನೂ ವಿಚಾರ ಮಾಡುವುದಿಲ್ಲ ಅವರ ಪಾಠಕ್ಕೆ ಬೇಕಾದಂಥ ಪೇಷಂಟ್ಸ್‌ಗಳ ಬಗ್ಗೆ ಮಾತ್ರ ಹಾಗೂ ಅವರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಮಾತ್ರ ಅವರು ನೋಡುತ್ತಾರೆಯೇ ವಿನಃ ಅವರು ಪೇಷಂಟ್ಸ್‌ಗಳ ನಿಜವಾದ ಸ್ಥಿತಿಯನ್ನು ನೋಡುವುದಿಲ್ಲ. ಪೇಷಂಟ್ಸ್‌ನ ಸ್ಥಿತಿ ದನಗಳಿಗಿಂತ ಕಡೆಯಾಗಿದೆ. ಇದರ ಬಗ್ಗೆ ರೆಗ್ಯುಲೇಟ್ ಮಾಡಬೇಕಾದರೆ ಹಾಸ್ಪಿಟಲ್ ಸೂಪರಿಂಟೆಂಡೆಂಟ್ಸ್‌ಗೆ ದವಾಖಾನೆಯನ್ನು ಕಂಟ್ರೋಲ್ ಮಾಡತಕ್ಕ ಕೆಲವು ಪವರ್ಸ್ ಕೊಡಬೇಕು. ಅಂದಾಗ ಮಾತ್ರ ಒಂದು ಶಿಸ್ತು ಬಂದು ಪೇಷಂಟ್ಸ್‌ಗೆ ಅನುಕೂಲತೆಗಳನ್ನು ಮಾಡಿ ಕೊಡಬಹುದು. ಇನ್ನೊಂದು ವಿಷಯ ಎಂದರೆ ಸರಕಾರಿ ಆಸ್ಪತ್ರೆಗಳಲ್ಲಿ ಪ್ರತಿಶತ ೫೦ ಭಾಗ ಡಾಕ್ಟರ್‌ಗಳು ಡ್ಯೂಟಿ ಟೈಮ್‌ನಲ್ಲಿ ಹಾಜರಿರುವುದಿಲ್ಲ. ಅದೂ ಸಹ ಸಮಿತಿ ವರದಿಯಲ್ಲಿ ಇದೆ. ಪ್ರಾಕ್ಟಿಕಲ್ ಆಗಿ ನನ್ನ ಅನುಭವಕ್ಕೂ ಸಹ ಬಂದಿದೆ. ನಮ್ಮ ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿ ಇದನ್ನು ಕಂಡಿದ್ದೇನೆ. ಡಿಸ್ಟ್ರಿಕ್ಟ್ ಹಾಸ್ಪಿಟಲ್‌ಗಳಲ್ಲಿ ಮತ್ತು ಸ್ಪೆಷಲ್ ಟೀಚಿಂಗ್ ಹಾಸ್ಪಿಟಲ್‌ಗಳಲ್ಲಿ ಇರತಕ್ಕ ಸೂಪರಿಂಟೆಂಡೆಂಟ್ಸ್ ಕೆಲಸ ಏನು ಎಂದರೆ ದುಡ್ಡು ತೆಗೆದುಕೊಂಡು ಮೆಡಿಕಲ್ ಸರ್ಟಿಫಿಕೇಟ್ ಕೊಡುವುದಾಗಿದೆ. ಅವರ ಪ್ಯೂನ್ಸ್ ಕೇವಲ ದುಡ್ಡು ಕಲೆಕ್ಟ್ ಮಾಡುವ ಸಲುವಾಗಿ ಸರ್ಟಿಫಿಕೇಟ್ ಗಿರಾಕಿಗಳನ್ನು ಕರೆದುಕೊಂಡು ಬರುವುದಕ್ಕೆ ಮಾತ್ರ ಇದ್ದಾರೆ. ಆದರಲ್ಲಿ ಪ್ಯೂನ್ಸ್‌ಗೂ ಕಮಿಷನ್, ನಂತರ ಅವರಿಗೆ ಫೀಸ್ ಇದೆ. ಬರೀ ಸರ್ಟಿಫಿಕೇಟ್‌ಗಳನ್ನು ಕೊಡುವುದಕ್ಕೆ ಈ ಹುದ್ದೆಯನ್ನು ಕ್ರಿಯೇಟ್ ಮಾಡಿದಹಾಗೆ ಆಗಿದೆ. ಎಲ್ಲಾ ಕಡೆಯೂ ಇದು ಇದೆ, ಗುಲ್ಬರ್ಗಾ ಹಾಸ್ಪಿಟಲ್‌ನಲ್ಲಿ ಇರುವ ಸೂಪರಿಂಟೆಂಡೆಂಟ್‌ರವರ ಕೆಲಸ ಸಹ ಇದೇ ಎಂದು ಗೊತ್ತಾಗಿದೆ. ಸರ್ವೇಸಾಮಾನ್ಯವಾಗಿ ನೋಡತಕ್ಕ ಸೀನ್ ಎಂದರೆ, ಜನರಲ್ ಹಾಸ್ಪಿಟಲ್ಸ್ ಮತ್ತು ಡಿಸ್ಟ್ರಿಕ್ಸ್ ಹಾಸ್ಪಿಟಲ್ಸ್ ಸುತ್ತಮುತ್ತ ಕೇವಲ

ಯಾರಿನಲ್ಸ್ ಮಾಡತಕ್ಕ, ಹೊಲಸು ಮಾಡತಕ್ಕಂಥ ಪ್ರದೇಶ ಮಾತ್ರ ಇರುತ್ತದೆ. ಉದಾಹರಣೆಗೆ ವಿಕ್ಟೋರಿಯಾ ಹಾಸ್ಪಿಟಲ್ ಸುತ್ತಮುತ್ತ ಇದನ್ನು ನೋಡಬಹುದು. ನಮ್ಮ ಗುಲ್ಬರ್ಗಾ ಹಾಸ್ಪಿಟಲ್ ಎದುರುಗಡೆ ಇದನ್ನು ನೋಡಬಹುದು. ನಾವು ಇಂತಹ ಜಾಗದಲ್ಲಿ ಹಾಸ್ಪಿಟಲ್ ಇಟ್ಟುಕೊಂಡಿದ್ದೇವೆ. ಹಾಸ್ಪಿಟಲ್ಸ್ ಸುತ್ತಮುತ್ತ ಈ ಒಂದು ಹೊಲಸು ಏರಿಯಾ ಇರಲಾರದಂಥ ವ್ಯವಸ್ಥೆ ಮಾಡಬೇಕು. ಇದು ಎಲ್ಲಾಕಡೆ ಸರ್ವೇಸಾಮಾನ್ಯವಾಗಿ ಇದೆ ಎಂದು ನನಗನ್ನಿಸುತ್ತದೆ. ಈ ರೀತಿ ಹೇಳುತ್ತಾ ಹೋದರೆ ಆರೋಗ್ಯ ಇಲಾಖೆಯ ಬಗ್ಗೆ ಇನ್ನೂ ಬೇಕಾದಷ್ಟನ್ನು ಹೇಳಬಹುದು.

ಇನ್ನು ಕನ್ನಡ ಸಂಸ್ಕೃತಿ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಇದರ ಬಗ್ಗೆ ನಾನು ಮುಂಚೆ ಕೆಲವು ಪ್ರಶ್ನೆಗಳನ್ನೂ ಸಹ ಕಳುಹಿಸಿದ್ದೆ. ಕನ್ನಡ ಸಂಸ್ಕೃತಿ ಇಲಾಖೆ ಮತ್ತು ಪ್ರಚಾರ ಇಲಾಖೆಗಳು ಚೀಫ್ ಮಿನಿಸ್ಟರ್‌ರವರ ಫಂಡ್ ಹೇಗಿರುತ್ತದೆಯೋ ಹಾಗೆ ಇದೆ. ಸಂಬಂಧಪಟ್ಟ ಮಂತ್ರಿಗಳ ಫಂಡ್ ಇದ್ದಹಾಗೆ ಇವೆ. ಅದರಲ್ಲಿರತಕ್ಕಂಥ ನಾಲ್ಕೈದು ಕೋಟಿ ರೂಪಾಯಿಗಳು ಅವರ ಪಾಕೆಟ್ ಮನಿ ಇದ್ದ ಹಾಗೆ, ಅವರು ಏತಕ್ಕೆ ಬೇಕಾದರೂ ಇದನ್ನು ಖರ್ಚು ಮಾಡಬಹುದು. ಸಾಕಷ್ಟು ಅಕಾಡೆಮಿಗಳೂ ಸಹ ಇವೆ. ನಾಟಕ ಅಕಾಡೆಮಿ ಇದೆ, ಸಾಹಿತ್ಯ ಅಕಾಡೆಮಿ ಇದೆ. ಇತರ ಎಲ್ಲಾ ಅಕಾಡೆಮಿಗಳೂ ಇದ್ದಾಗ್ಯೂ ಸಹ, ಕನ್ನಡ ಕಾವಲು ಸಮಿತಿ ಇದ್ದಾಗ್ಯೂ ಸಹ ಈ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೆಲಸ ಏನು? ಅದನ್ನು ಬಿಟ್ಟು ಬೇರೆ ಯಾವ ಕೆಲಸವೂ ಇಲ್ಲ, ಎಲ್ಲಾ ಡೂಪ್ಲಿಕೇಟ್ ವರ್ಕ್ ಆಗುತ್ತಿದೆ. ಅವರಿಗೆ ಬೇಕಾದವರಿಂದ ಭಾಷಣ ಮಾಡಿಸಿ ರೊಕ್ಕ ಕೊಡಬಹುದು. ಅವರಿಗೆ ಬೇಕಾದಂಥ ನಾಟಕ ತಂಡಕ್ಕೆ ದುಡ್ಡು ಕೊಟ್ಟು ಕಳುಹಿಸ ಬಹುದು, ತಮಗೆ ಬೇಕಾದಂಥ ಗಣ್ಯ ವ್ಯಕ್ತಿಯನ್ನು ಕರೆಸಿ ಸಭೆಗಳನ್ನು ವ್ಯವಸ್ಥೆ ಮಾಡಬಹುದು ಇದು. ನಮ್ಮ ರಾಜ್ಯದಲ್ಲಿ ಆಗುತ್ತಿದೆ. ಇನ್ನೊಂದು ಎಂದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಟ್ರೈನಿಂಗ್ ಕೊಡುವುದಾಗಲೀ, ಅಥವಾ ಯಾವುದೇ ಕಾರ್ಯಕ್ರಮ ಮಾಡುವು ದಾಗಲೀ ಇದ್ದರೆ ಅದು ಕೇವಲ ಬೆಂಗಳೂರಿನಲ್ಲಿ ಮಾತ್ರ ಕೇಂದ್ರೀಕೃತವಾಗಿದೆ.

ರಾಜ್ಯ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಕನ್ನಡ ಮತ್ತು ಸಂಸ್ಕೃತಿ ಕಾರ್ಯಕ್ರಮಗಳು ಯಾವ ರೀತಿ ನಡೆಯುತ್ತಿವೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಈ ಮನೆಯಲ್ಲಿ ಒಂದು ಸಾರಿ ಅಂಕಿಅಂಶಗಳನ್ನು ಕೊಟ್ಟಾಗ ರಾಯಚೂರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಯಾವುದೇ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮ ಆಗಿಲ್ಲ. ಇದೇ ರೀತಿ ಎಲ್ಲಾ ತಾಲ್ಲೂಕುಗಳಲ್ಲಿ ಆಗಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ...

ಅಧ್ಯಕ್ಷರು.— ಸಾಕು ಮುಕ್ತಾಯ ಮಾಡಿ ತಾವು ಚೆನ್ನಾಗಿ ಮಾತನಾಡಿದ್ದಿರೆಂದು ನಾನು ೫ ನಿಮಿಷ ಸ್ಪೆಷಲ್ ಆಗಿ ಹೆಚ್ಚು ಟೈಮ್ ಕೊಟ್ಟಿದ್ದೇನೆ.

ಶ್ರೀ ವೀರಯ್ಯಸ್ವಾಮಿ.— ಇಂತಹ ಅನೇಕ ಉದಾಹರಣೆಗಳು ಇವೆ. ಈ ಇಲಾಖೆಯಲ್ಲಿರ ತಕ್ಕಂಥ ಹಣವನ್ನು ಸದುಪಯೋಗ ಮಾಡಿಕೊಳ್ಳುವಂತಾಗಬೇಕು ಆ ಹಣ ಡೂಪ್ಲಿಕೇಟ್ ಆಗ ಬಾರದು. ನಮ್ಮ ರಾಜ್ಯದಲ್ಲಿ ಕನ್ನಡ ಕಾವಲು ಸಮಿತಿ ಇವೆ, ಅಕಾಡೆಮಿ ಇದೆ, ಕನ್ನಡ ಸಾಹಿತ್ಯ ಪರಿಷತ್ತು ಇದೆ ಆದ್ದರಿಂದ ಸಾಹಿತ್ಯದ ಅಭಿವೃದ್ಧಿ ಸಲುವಾಗಿ ಈ ಸಂಸ್ಥೆಗಳೇ ಸಾಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರತ್ಯೇಕವಾಗಿ ಬೇಕಾಗಿಲ್ಲ ಅದರ ಅವಶ್ಯಕತೆ ಇಲ್ಲ...

ಅಧ್ಯಕ್ಷರು.— ಮುಕ್ತಾಯ ಮಾಡಿ. ತಾವು ಚೆನ್ನಾಗಿ ಮಾತನಾಡಿದ್ದೀರಿ.

ಶ್ರೀ ವೀರಯ್ಯಸ್ವಾಮಿ.— ಇನ್ನು ಮಾನ್ಯ ಅಧ್ಯಕ್ಷರೇ ಈ ಇಲಾಖೆಯಲ್ಲಿ ಇಬ್ಬರು ನಿರ್ದೇಶಕರುಗಳು ಇದ್ದಾರೆ. ಏತಕ್ಕೆ ? ಒಬ್ಬ ನಿರ್ದೇಶಕರು ಸಾಕು. ಈ ಅಧಿಕಾರಿಗಳು ತಮಗೆ ಬೇಕು ಬೇಕಾದವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಇರುತ್ತಾರೆ ಆದ್ದರಿಂದ ಒಬ್ಬರೇ ನಿರ್ದೇಶಕರು ಸಾಕು ಇಬ್ಬರು ಬೇಡ ಮತ್ತು ಈ ಇಲಾಖೆಯಲ್ಲಿ ನಡೆಯುತ್ತಿರುವಂತಹ ದುಂದು ವೆಚ್ಚವನ್ನು ಕಡಿಮೆ ಮಾಡಬೇಕು ಈ ಇಲಾಖೆಗೆ ಕೊಡತಕ್ಕಂಥ ಹಣ ಎಲ್ಲಾ ತಾಲ್ಲೂಕುಗಳಿಗೆ ಸರಿಸಮಾನವಾಗಿ ಹಂಚಿಕೆಯಾಗಬೇಕು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ನಾನು ಸಲಹೆ ಕೊಡುತ್ತೇನೆ, ಇನ್ನು...

ಅಧ್ಯಕ್ಷರು.— ಸಾಕು ಮುಕ್ತಾಯ ಮಾಡಿ ತಮಗೆ ೧೫ ನಿಮಿಷ ಅವಕಾಶ ಕೊಟ್ಟಿದ್ದೇನೆ. ಮೊದಲ ಹತ್ತು ನಿಮಿಷ ತಾವು ವಾಸ್ತವಿಕ ಸಂಗತಿಗಳು ಹೇಳಿದ್ದೀರಿ ಸಾಕು.

ಶ್ರೀ ವೀರಯ್ಯಸ್ವಾಮಿ.— ಇನ್ನು ನಮ್ಮ ರಾಜ್ಯದಲ್ಲಿ ಕನ್ನಡ ಕಾವಲು ಸಮಿತಿ ಸಾಕಷ್ಟು ಕನ್ನಡದ ಅಭಿವೃದ್ಧಿ ಮಾಡಿದೆ ಈಗಿನ ಪರಿಸ್ಥಿತಿಯಲ್ಲಿ ನಮಗೆ ಒಂದು ವರದಿ ಕೊಡಿಸಿ ಕೊಡಬೇಕೆಂದು ಹೇಳಿ ಇದುವರೆವಿಗೂ ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾವು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಮಾನ್ಯ ವೀರಯ್ಯಸ್ವಾಮಿಯವರು ವಾಸ್ತವಿಕ ವಿಚಾರಗಳನ್ನು ಹೇಳಿದ್ದಾರೆ. ಅವರು ಹೇಳಿದ್ದರಲ್ಲಿ ಸೆಂಟ್ ಪರ್ಸೆಂಟ್ ಸರಿಯಾಗಿದೆ.

† ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ದಿವಸ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಬಹಳ ಮುಖ್ಯವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತುಂಬಾ ಪ್ರಾಮುಖ್ಯವಾದ ಮುಖ್ಯವಾದ ಇಲಾಖೆ. ಈ ಇಲಾಖೆಯ ಮುಖಾಂತರ ಇವತ್ತು ಮನುಷ್ಯರಿಗೆ ನೀರು ಗಾಳಿ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಆರೋಗ್ಯ ಕೂಡ. ಇವತ್ತು ಈ ಆರೋಗ್ಯವನ್ನು ಉಳಿಸಿಕೊಳ್ಳುವುದಕ್ಕೆ ಪಾಲನೆ ಮಾಡಿಕೊಂಡು ಬರುವುದಕ್ಕೆ ನಮ್ಮ ಸಮಾಜದಲ್ಲಿರತಕ್ಕ ಹಲವಾರು ಮುಗ್ಗಟ್ಟುಗಳೇ ಕಾರಣವೆಂದು ಹೇಳಿದರೆ ಅದು ತಪ್ಪಾಗಲಾರದು. ಇವತ್ತು ವಿದ್ಯಾಭ್ಯಾಸ ಇಲ್ಲದೆ ಇರುವುದು ಕೂಡ ಒಂದು ಕಾರಣ ಇರಬಹುದು ಅಥವಾ ಬೇರೆ ಬೇರೆ ಕಾರಣಗಳು ಹೊಂದಿಕೊಂಡು ಗ್ರಾಮಾಂತರ ಪ್ರದೇಶಗಳಿಂದ ಹಿಡಿದು ಪಟ್ಟಣ ಪ್ರದೇಶಗಳವರೆವಿಗೂ ಕೂಡ ಆರೋಗ್ಯ ಪಾಲನೆ ಮಾಡಿಕೊಂಡು ಬರುವುದಕ್ಕೆ ಸಾಧ್ಯವಾಗಿದೆಯೋ? ಯಾವ ಹಂತದಲ್ಲಿ ನಾವು ಈ ಆರೋಗ್ಯ ಇಲಾಖೆಯನ್ನು ನಡೆಸುತ್ತಿದ್ದೇವೆ. ಮಾನ್ಯ ಆರೋಗ್ಯ ಮಂತ್ರಿಗಳು ತಮ್ಮ ಇಲಾಖೆಗೆ ಸಂಬಂಧಪಟ್ಟಂತಹ ಬೇಡಿಕೆಗಳನ್ನು ಇವತ್ತು ಮಂಡನೆ ಮಾಡಿದ್ದಾರೆ. ಈ ಒಂದು ಇಲಾಖೆಯ ಬಗ್ಗೆ ಸರ್ಕಾರಕ್ಕೆ ಇರತಕ್ಕಂಥ ಕಳಕಳಿ ಬಗ್ಗೆ ಹಾಗೂ ಯಾವ ರೀತಿಯಾಗಿ ಈ ಇಲಾಖೆ ಕಾರ್ಯ ನಿರ್ವಹಿಸುತ್ತಿದೆ ಯಾವ ವಿಧದಲ್ಲಿ ತಮ್ಮ ಕರ್ತವ್ಯ ನೆರವೇರಿಸುತ್ತಿದ್ದಾರೆ ಎಂಬುದರ ಬಗ್ಗೆ ನಾವು ನೋಡಿದರೆ ಸನ್ಮಾನ್ಯ ಮಂತ್ರಿಗಳಿಗೆ ಈ ಒಂದು ಇಲಾಖೆಯಲ್ಲಿರತಕ್ಕಂಥ ಸಂದಿಗ್ಧ ಮಾಹಿತಿ ಸಿಗಲಿಲ್ಲವೆಂದರೆ ಅದು ತಪ್ಪಾಗಲಾರದು. ಇವತ್ತು ಪ್ರಾಥಮಿಕ ಹಂತದಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳು ಇವೆ. ಆರೋಗ್ಯ ಕೇಂದ್ರಗಳು ಇವೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳು ಇವೆ. ಜಿಲ್ಲಾ ಮಟ್ಟದ ಆಸ್ಪತ್ರೆಗಳು ಇವೆ ಯಾವ ರೀತಿಯಾಗಿ ಈ ಒಂದು ವ್ಯವಸ್ಥೆಯಲ್ಲಿ ಜನರಿಗೆ ಸಿಗಬೇಕಾದಂತಹ ಸೌಲಭ್ಯಗಳನ್ನು ನಾವು ಗಣನೆಗೆ ತೆಗೆದುಕೊಂಡರೆ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಆರೋಗ್ಯ ಘಟಕ ಮತ್ತು ಆರೋಗ್ಯ ಕೇಂದ್ರಗಳಿಗೆ ಬೇಕಾದಂಥ ಸರಿಯಾದ ಸವಲತ್ತುಗಳನ್ನು ಇನ್ನೂ ಕೂಡ ಒದಗಿಸಿಕೊಟ್ಟಿಲ್ಲ. ಇವತ್ತು ಇರುವ ಆರೋಗ್ಯ ಘಟಕ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಕೆಲವೊಂದು ಕಡೆ ವೈದ್ಯಾಧಿಕಾರಿಗಳೇ ಇಲ್ಲ. ಆಸ್ಪತ್ರೆಗಳಲ್ಲಿ ಮದ್ದು ಕೂಡ ಸರಿಯಾಗಿ ಸಿಕ್ಕುತ್ತಿಲ್ಲ. ಆಸ್ಪತ್ರೆಗಳಿಗೆ ಬೇಕಾದ ಸಿಬ್ಬಂದಿ ವರ್ಗದವರು ಇಲ್ಲ, ಎ.ಎನ್.ಎಂ.ಗಳ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಆಸ್ಪತ್ರೆಗಳಲ್ಲಿ ಎ.ಎನ್.ಎಂ.ಗಳ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದರಿಂದ ರೋಗಿಗಳಿಗೆ ಸರಿಯಾದ ಚಿಕಿತ್ಸೆಯನ್ನು ನೀಡುವುದಕ್ಕಾಗುತ್ತಿಲ್ಲ. ಹಲವಾರು ವರ್ಷಗಳಿಂದಲೂ ನಾವು ಆಸ ತ್ರೆಗಳ ಕಾರ್ಯ ವೈಖರಿ ಬಗ್ಗೆ ಬೆಳಕನ್ನು ಚೆಲ್ಲುತ್ತಲೇ ಇದ್ದೇವೆ. ಆದರೂ ಕೂಡ ಹೆಚ್ಚಿನ ರೀತಿಯಲ್ಲಿ ಆಸ್ಪತ್ರೆಗಳ ಬಗ್ಗೆ ಸರ್ಕಾರ ಗಮನ ಕೊಡುತ್ತಿಲ್ಲ. ಮಾನ್ಯ ಸಚಿವರು ಒಂದು ಸಾರಿ ದಿಢೀರಾಗಿ ಇನ್ನು ಮುಂದೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ, ಆಸ್ಪತ್ರೆಗಳನ್ನು ಸಂದರ್ಶಿಸುವುದಕ್ಕೋಸ್ಕರ ಒಂದು ಸಂದರ್ಶಕ ಸಮಿತಿಯನ್ನು ಮಾಡಲಾಗುತ್ತದೆ. ಆ ಸಂದರ್ಶಕ ಕಮಿಟಿಯಲ್ಲಿ ಆಯಾ ತಾಲ್ಲೂಕಿನ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಲಾಗುತ್ತದೆಂದು ಘೋಷಣೆ ಮಾಡಲಾಗಿತ್ತು. ಆದರೆ, ಇಲ್ಲಿಯವರೆಗೂ ಆ ಸಂದರ್ಶಕ ಕಮಿಟಿಯನ್ನು ಸರ್ಕಾರವು ಮಾಡಲೇ ಇಲ್ಲ. ಇವತ್ತು ತಾಲ್ಲೂಕು ಮಟ್ಟದಲ್ಲಿರುವ ಆಸ್ಪತ್ರೆಗಳಲ್ಲೂ ಕೂಡ ವೈದ್ಯಾಧಿಕಾರಿಗಳ ಕೊರತೆ ಇದೆ. ವೈದ್ಯಾಧಿಕಾರಿಗಳ ಕೊರತೆ ಇದ್ದರೆ ರೋಗಿಗಳಿಗೆ ಯಾವ ರೀತಿ ಸರಿಯಾದ ಚಿಕಿತ್ಸೆಯನ್ನು ಕೊಡಲಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ವೈದ್ಯಾಧಿಕಾರಿಗಳ ಅವಶ್ಯಕತೆ ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲಾ ಭರ್ತಿ ಮಾಡಬೇಕೆಂದು ನಾವು ಹಲವಾರು ಸಾರಿ ಸರ್ಕಾರದ ಗಮನಕ್ಕೆ ತಂದಿದ್ದರೂ ಕೂಡ ವೈದ್ಯಾಧಿಕಾರಿಗಳನ್ನು ಇನ್ನೂ ನೇಮಕ ಮಾಡಿಲ್ಲ. ಈಗಿರುವ ಆರೋಗ್ಯ ಘಟಕಗಳನ್ನು, ಆರೋಗ್ಯ ಕೇಂದ್ರಗಳಾಗಿ ಪರಿವರ್ತನೆ ಮಾಡಿ, ಈ ಆರೋಗ್ಯ ಕೇಂದ್ರಗಳ

ಮೇಲ್ವಿಚಾರಣೆಯನ್ನು ಆಯಾ ಮಂಡಲ ಪಂಚಾಯಿತಿಯವರಿಗೆ ವಹಿಸಿಕೊಡುವ ಒಂದು ಕಾರ್ಯಕ್ರಮವನ್ನು ಸರ್ಕಾರ ಮಾಡಬೇಕು. ಎರಡು ಸಾವಿರದ ಇಸವಿಯೊಳಗೆ ನಮ್ಮ ರಾಷ್ಟ್ರದಲ್ಲಿರುವ ಪ್ರತಿಯೊಬ್ಬರಿಗೂ ಸೂಕ್ತ ರೀತಿಯಲ್ಲಿ ವೈದ್ಯಕೀಯ ಸೌಲಭ್ಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆಯೆಂದು ಸರ್ಕಾರ ಹೇಳುತ್ತಲೇ ಬಂದಿದೆ. ಆಗಲೇ ಮಾನ್ಯ ಸದಸ್ಯರು ಒಬ್ಬರು ಹೇಳಿದ ಹಾಗೆ ಎರಡು ಸಾವಿರದ ಐದುನೂರು ಇಸವಿ ಆದರೂ ಪೂರ್ಣ ಪ್ರಮಾಣದಲ್ಲಿ ಜನರಿಗೆ ಆರೋಗ್ಯ ಸೌಲಭ್ಯವನ್ನು ಒದಗಿಸುವುದಕ್ಕಾಗುವುದಿಲ್ಲ ಎನ್ನುವುದು ನಿಜ ಇರಬಹುದೆಂದು. ಈಗ ಸರ್ಕಾರ ಆರೋಗ್ಯದ ಬಗ್ಗೆ ಕೊಡುತ್ತಿರುವ ಗಮನವನ್ನು ನೋಡಿದರೆ ಗೊತ್ತಾಗುತ್ತದೆ. ಇವತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ವೀಕ್ಷಣೆ ಮಾಡಿದರೆ ಮೇಲೆ ಹೇಳಿರುವ ವಿಷಯು ನಿಜ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ನನ್ನ ಕ್ಷೇತ್ರದ ಮಟ್ಟಿಗೆ ನಾನು ಹೇಳುವುದಾದರೆ, ನಮ್ಮ ತಾಲ್ಲೂಕಿನಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಪ್ರಾರಂಭವಾದ ಒಂದು ಆಸ್ಪತ್ರೆ ಇದೆ. ಈ ಆಸ್ಪತ್ರೆಯಲ್ಲಿ ೬೪ ಬೆಡ್‌ಗಳು ಇವೆ. ಈ ಆಸ್ಪತ್ರೆಯಲ್ಲಿ ಆಪರೇಷನ್ ಮಾಡಬೇಕಾದರೆ ರೋಗಿಗಳಿಗೆ ಸ್ಮೃತಿ ತಪ್ಪಿಸುವುದಕ್ಕೆ ಬೇಕಾಗುವ ವೈದ್ಯಾಧಿಕಾರಿಗಳು ಇಲ್ಲ. ಸ್ಮೃತಿ ತಪ್ಪಿಸುವ ವೈದ್ಯಾಧಿಕಾರಿ ಇಲ್ಲದೇ ಹೋದರೆ ಆಪರೇಷನ್ ಮಾಡುವುದಕ್ಕಾಗುವುದಿಲ್ಲ. ಈ ವಿಚಾರದ ಬಗ್ಗೆ ನಾನು ಅನೇಕ ಸಂದರ್ಭಗಳಲ್ಲಿ ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತಂದರೂ ಕೂಡ ಇದುವರೆಗೆ ನಮ್ಮ ತಾಲ್ಲೂಕಿನ ಆಸ್ಪತ್ರೆಗೆ ಒಬ್ಬ ಸ್ಮೃತಿ ತಪ್ಪಿಸುವ ವೈದ್ಯಾಧಿಕಾರಿಯನ್ನು ಹಾಕಿ ಕೊಡಲಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಜನರಿಗೆ ಯಾವ ರೀತಿ ಚಿಕಿತ್ಸಾ ಸೌಲಭ್ಯ ಸಿಗಬೇಕೋ ಆ ರೀತಿ ಸಿಗುತ್ತಿಲ್ಲ, ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಅತಿ ಮುಖ್ಯವಾಗಿ ಬೇಕಾದ ಔಷಧಿಗಳು ಇರುವುದಿಲ್ಲ, ಗ್ಲೂಕೋಸ್ ಬಾಟ್ಲಗಳು ಇರುವುದಿಲ್ಲ, ಯಾವುದೇ ರೀತಿಯ ಸೌಲಭ್ಯಗಳೂ ಇರುವುದಿಲ್ಲ. ಇನ್ನು ಮುಂದೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಮೇಲಿನ ಅಧಿಕಾರವನ್ನು ಜಿಲ್ಲಾಪರಿಷತ್ತುಗಳಿಗೆ ವರ್ಗಾವಣೆ ಮಾಡಲಾಗುತ್ತದೆಂದು ಹೇಳಲಾಗಿತ್ತು. ಆದರೆ, ಆಸ್ಪತ್ರೆಗಳಿಗೆ ಸೌಲಭ್ಯಗಳನ್ನು ಒದಗಿಸುವುದಕ್ಕೆ ಬೇಕಾಗುವ ಹಣವನ್ನು ಜಿಲ್ಲಾಪರಿಷತ್ತುಗಳಿಗೆ ಬಿಡುಗಡೆ ಮಾಡಿಲ್ಲ. ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯಕ್ಕೆ ತಕ್ಕಂತೆ ಔಷಧಿಗಳನ್ನು ಸರ್ಕಾರ ಒದಗಿಸುತ್ತಿಲ್ಲ, ರೋಗಿಗಳು ತಮಗೆ ಬೇಕಾದ ಔಷಧಗಳನ್ನು ಹೊರಗಡೆಯಿಂದ ಕೊಂಡು ಕೊಂಡು ಬರಬೇಕಾದ ಪರಿಸ್ಥಿತಿ ಇವತ್ತು ಉಂಟಾಗಿದೆ. ಆಮೇಲೆ, ರಾಷ್ಟ್ರೀಯ ಕಾರ್ಯಕ್ರಮವಾದ ಕುಟುಂಬ ಯೋಜನೆಗೆ ಸರ್ಕಾರ ಇನ್ನೂ ಹೆಚ್ಚಿನ ಗಮನ ಕೊಡಬೇಕು. ಪ್ರತಿಯೊಂದು ಸಂದರ್ಭಗಳಲ್ಲೂ ಶಾಸಕರಾದ ನಾವು ಕುಟುಂಬ ಯೋಜನೆ ಕಾರ್ಯಕ್ರಮದ ಮಟ್ಟಿಗೆ ಪ್ರತಿಯೊಂದು ತಿಂಗಳೂ ರಿವ್ಯೂ ಮಾಡುತ್ತಿದ್ದೇವೆ,

ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ಕುಟುಂಬ ಕಲ್ಯಾಣ ಕಾರ್ಯಕ್ರಮದ ಮಟ್ಟಿಗೆ ಪ್ರತಿ ತಿಂಗಳೂ ಕೂಡ ಅದರ ಫಲಿತಾಂಶದ ರಿವ್ಯೂ ಮಾಡುತ್ತಾರೆ. ಆ ಮಟ್ಟಿಗೆ ಸರಿಯಾದ ರೀತಿಯಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಅವರಿಗೆ ತಿಳುವಳಿಕೆಯನ್ನು, ಅದರ ಅಗತ್ಯತೆಯನ್ನು ತಿಳಿಸಿಕೊಡುವ ಮತ್ತು ಆ ದಿಶೆಯಲ್ಲಿ ತಿಳುವಳಿಕೆ ಕೊಡುವ ಕಾರ್ಯಕ್ರಮವು ಇನ್ನೂ ಆಗಲಿಲ್ಲ, ಯಾಕೆಂದರೆ ಆ ಬಗ್ಗೆ ತಿಳುವಳಿಕೆ ಇಲ್ಲದ ಜನರು ಆ ವಿಷಯದಲ್ಲಿ ಹೆದರಿಕೊಳ್ಳುವ ಅವಕಾಶಗಳು ಇರುತ್ತದೆ. ಹೀಗೆ ಕುಟುಂಬ ಯೋಜನೆಯ ಶಸ್ತ್ರಚಿಕಿತ್ಸೆಯ ನಂತರ ತಮ್ಮ ಜೀವನಕ್ಕೆ ಏನಾದರೂ ಅಪಾಯ ಬರಬಹುದು, ನಾವು ಕೂಲಿ ಕೆಲಸ ಇತ್ಯಾದಿ ಮಾಡುವಲ್ಲಿ ನಮಗೆ ತೊಂದರೆ ಬರಬಹುದು ಎಂದು ಜನಸಾಮಾನ್ಯರು ಈ ದಿಸೆಯಲ್ಲಿ ಹೆದರುತ್ತಿದ್ದಾರೆ. ಇಂತಹ ಚಿಕಿತ್ಸೆಯು ಆದ ನಂತರ ಬೇರೆ ಬೇರೆ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗುವವರಿಗೆ ತೊಂದರೆಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಲಾರದ ಪರಿಸ್ಥಿತಿಯು ಬರಬಹುದು ಎನ್ನುವ ಒಂದು ಮನೋಭಾವನೆಯು ಹೆಚ್ಚಾಗಿ ಹಳ್ಳಿಯ ಜನರಲ್ಲಿ ಇದೆ. ಈ ಒಂದು ಒಳ್ಳೆಯ ವಿಚಾರವನ್ನು ಅವರಿಗೆ ಮನವರಿಕೆಯಾಗುವ ರೀತಿಯಲ್ಲಿ ತಿಳಿಸಿ ಹೇಳಿ, ಆ ಒಂದು ತಿಳಿವಳಿಕೆಯನ್ನು ನಾವು ಮಾಡಿಕೊಟ್ಟರೆ ಮಾತ್ರ ಅದರಿಂದ ಪ್ರಯೋಜನವಾಗಬಹುದಾಗಿದೆ.

ಇವೊತ್ತು ನಾವು ಬೇರೆ ಬೇರೆ ಮಂತದಲ್ಲಿ ನೋಡಿದರೆ ತಮ್ಮ ಇಲಾಖೆಯಲ್ಲಿ ಕೆಲಸ ಮಾಡುವ ವೈದ್ಯಾಧಿಕಾರಿಗಳಿಗೆ ಯಾವುದೇ ತರಹದ ಹತೋಟಿಯು ಇಲ್ಲ ಎಂದು ಕಾಣುತ್ತದೆ. ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕೆಲಸ ಮಾಡುವ ವೈದ್ಯಾಧಿಕಾರಿಗಳು ಬೆಳಿಗ್ಗೆ ಅಲ್ಲಿದ್ದು ಮಧ್ಯಾಹ್ನ ಪುತ್ತೂರಿನಲ್ಲಿ ಬಂದು ಪ್ರಾಕ್ಟೀಸ್ ಮಾಡುವುದನ್ನು ಕೂಡ ನಾವು ಕಾಣುತ್ತಿದ್ದೇವೆ. ಸರಕಾರಿ

ಆಸ್ಪತ್ರೆಗಳಿಗೆ ರೋಗಿಗಳು ಬಂದರೆ, ಅವರಿಗೆ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸಿ ಅಲ್ಲಿ ಶುಶ್ರೂಷೆಯನ್ನು ಕೊಡುತ್ತಿರುವುದನ್ನು ಕೂಡ ನಾವು ಕಂಡಿದ್ದೇವೆ. ಸರಕಾರಿ ಆಸ್ಪತ್ರೆಗಳಲ್ಲಿ ಮದ್ದುಗಳನ್ನು ತರುವುದಕ್ಕೆ ಕೊಡುವ ಸ್ಲಿಪ್‌ಗಳಲ್ಲಿ ಬೇರೆ ಬೇರೆ ಖಾಸಗಿ ಫಾರ್ಮ್‌ಗಳ ಹೆಸರನ್ನು ನಾವು ನೋಡುತ್ತಿದ್ದೇವೆ. ಈ ಅವ್ಯವಸ್ಥೆಗಳಿಗೆ ಯಾವುದೇ ರೀತಿಯಲ್ಲಿ ಸಂಪಡಿಸುವ ಬಗ್ಗೆ ಮುತುವರ್ಜಿಯನ್ನು ವಹಿಸುತ್ತಿರುವುದನ್ನು ನಾವು ಕಾಣುತ್ತಾ ಇಲ್ಲ. ಈ ಅವ್ಯವಸ್ಥೆಗೆ ಒಂದು ರೀತಿಯ ಹತೋಟಿಯನ್ನು ತರಬೇಕೆಂಬ ವಿಚಾರವೂ ಕೂಡ ಸರಕಾರಕ್ಕೆ ಇದ್ದ ಹಾಗೆ ಕಾಣುತ್ತಾ ಇಲ್ಲ. ಅದೇ ರೀತಿಯಲ್ಲಿ ಆಸ್ಪತ್ರೆಗಳಿಗೆ ವಿಸಿಟರ್ಸ್ ಕಮಿಟಿ ಎಂದು ಇದೆ. ಈ ಜಿಲ್ಲಾ ಪರಿಷತ್ತಿನ ವ್ಯವಸ್ಥೆಯು ಬಂದ ನಂತರ ಆ ಸಮಿತಿಯನ್ನು ಕೆಲವೊಂದು ಜಿಲ್ಲಾಪರಿಷತ್ತಿನವರ ಮೂಲಕ ರಚಿಸಿ ವಿಜಿಟ್ ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಎಂದು ನಾನು ಕೇಳಿದ್ದೇನೆ. ಆದರೆ ನಮ್ಮ ಜಿಲ್ಲೆಯ ಮಟ್ಟಿಗೆ ಈ ಕಾರ್ಯಕ್ರಮದ ವಿಚಾರದಲ್ಲಿ ಹಿಂದಿನ ಕಮಿಟಿಯನ್ನು ಮುಂದುವರಿಸಿಕೊಂಡು ಹೋಗಬೇಕೋ ಅಥವಾ ಪರಿಷತ್ತಿನ ವತಿಯಿಂದ ಮಾಡಬೇಕೋ ಎಂಬ ಬಗ್ಗೆ ತಮ್ಮಿಂದ ತಿಳುವಳಿಕೆ ಇನ್ನೂ ಬಂದಿಲ್ಲ ಎಂದು ಕಾಣುತ್ತದೆ.

ಇನ್ನು ಕೆಳದರ್ಜೆ ನೌಕರರನ್ನು ತಾವು ಆಯ್ಕೆ ಮಾಡುವ ಸಂದರ್ಭದಲ್ಲಿ ಬೇರೆ ಬೇರೆ ಜಿಲ್ಲೆಗೆ ಹೊಂದಿಕೆ ಆಗುವ ಹಾಗೆ ತಾವು ಆಯ್ಕೆ ಮಾಡುತ್ತಾ ಇದ್ದೀರಿ. ತಮ್ಮ ಈ ಒಂದು ನೌಕರರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಜಿಲ್ಲೆಗೆ ಸೀಮಿತವಾಗಿಟ್ಟುಕೊಂಡು ಇವರನ್ನು ಆಯ್ಕೆ ಮಾಡಿದರೆ ವರ್ಗಾವಣೆ ಮಟ್ಟಿಗೆ ಇರಬಹುದು, ಅಥವಾ ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಇವೊತ್ತು ತಾವುಗಳು ಪಶುಸಂಗೋಪನ ಇಲಾಖೆಯ ಬೇಡಿಕೆಯನ್ನು ಕೂಡ ಸದನದಲ್ಲಿ ಇಟ್ಟಿದ್ದೀರಿ. ಆ ಇಲಾಖೆಯಲ್ಲಿ ಇವೊತ್ತು ಸುಮಾರು ೬೩೧ ಹುದ್ದೆಗಳು ಖಾಲಿ ಇವೆ ಎಂದು ತಿಳಿದು ಬರುತ್ತದೆ. ಅವುಗಳು ಇನ್ನೂ ಭರ್ತಿಯಾಗಿಲ್ಲ. ಅದೇ ರೀತಿಯಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪಶುವೈದ್ಯ ಶಾಲೆಯನ್ನು ಮಾಡಬೇಕೆನ್ನುವ ತತ್ವವನ್ನು ತೆಗೆದುಕೊಂಡಿದ್ದೀರಿ. ಈಗ ಮಂಡಲ್ ಪ್ರದೇಶಕ್ಕೆ ಒಂದು ಪಶುವೈದ್ಯಶಾಲೆಯನ್ನು ತೆಗೆಯುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ತಾಲ್ಲೂಕು ಮಟ್ಟಿಗೆ ಸಂಚಾರಿ ಆಸ್ಪತ್ರೆಗಳನ್ನು ತಂದಿದ್ದೀರಿ. ಅವರ ಮೂಲಕ ಕೂಡ ಹೆಚ್ಚಿಗೆ ಉಪಯೋಗ ಸಿಕ್ಕುತ್ತಾ ಇದೆ. ಈಗ ಅವುಗಳು ಕೇವಲ ೧೫೭ ಇದ್ದ ಹಾಗೆ ಕಾಣುತ್ತದೆ. ಅದನ್ನು ಪ್ರತಿಯೊಂದು ತಾಲ್ಲೂಕಿಗೂ ವಿಸ್ತರಿಸಬೇಕಾಗಿದೆ. ಪಶುಸಂಗೋಪನ ಕಾರ್ಯದಲ್ಲಿ ತಮ್ಮ ಸುಧಾರಣೆಗಳನ್ನು ನೋಡಿದರೆ, ಕೃತಕಗರ್ಭಧಾರಣೆ ವಿಚಾರದಲ್ಲಿ ನಿಮ್ಮ ಸಾಧನೆಯು ೧೦.೯೮ ಆಗಿದ್ದರೆ ಜನಿಸಿದ ಕರುಗಳ ಸಂಖ್ಯೆಯು ೧.೯೯೩ ಆಗಿದೆ. ಹೀಗಿರುವಾಗ ಇದರ ವೈಫಲ್ಯತೆಯ ಮಟ್ಟಿಗೆ ತಾವು ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಅದೇ ರೀತಿಯಲ್ಲಿ ನಮ್ಮ ಪುತ್ತೂರು ತಾಲ್ಲೂಕಿಗೆ ಹೊಂದಿಕೊಂಡಂತೆ ಕೊಯಿಲ ಜಾನುವಾರು ಸಾಕಣಿಕೆ ಕೇಂದ್ರ ಒಂದು ಇದೆ. ಅಲ್ಲಿಗೆ ಸಾಕಷ್ಟು ಹಣವನ್ನು ಒದಗಿಸಿದ್ದೀರಿ. ಆದರೂ ಅಲ್ಲಿ ಮಾಡುವ ಉತ್ಪನ್ನವು ಬಹಳ ಕಡಿಮೆಯಾಗಿದೆ. ಆದರೆ ಫಾರ್ಮನಲ್ಲಿ ಹುಲ್ಲು ಬೆಳೆಸುವ ಒಂದು ಕಾರ್ಯಕ್ರಮ ಇದೆ ಎಂದು ತಿಳಿಯುತ್ತದೆ. ಅಲ್ಲಿ ನೀರಿನ ಸೌಕರ್ಯ ಚೆನ್ನಾಗಿ ಇರುವುದರಿಂದ ಅಲ್ಲಿ ಹುಲ್ಲು ಮೇವನ್ನು ಬೆಳೆಯುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಾ ಇದರ ಜೊತೆಗೆ ಆ ಪ್ರದೇಶದಲ್ಲಿ ತೆಂಗು ಮತ್ತಿತರ ಬೆಳೆಗಳನ್ನು ಕೂಡ ಬೆಳೆಯುತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಸೂಚನೆ ಕೊಡುತ್ತೇನೆ. ತಮ್ಮ ಕೋಳಿ ಸಾಕಾಣಿಕೆ ಕೇಂದ್ರವಾದ ಹೆಸರಘಟ್ಟದಲ್ಲಿ ೯,೫೧೫ ಕೋಳಿಗಳನ್ನು ಪಾಲನೆ ಮಾಡಿದ್ದು ೭,೭೫,೬೦೦ ಮೊಟ್ಟೆಗಳನ್ನು ಉತ್ಪಾದನೆ ಮಾಡಿದ್ದೀರಿ. ಉತ್ಪಾದನೆ ಮಾಡಿದ ಕೋಳಿ ಮರಿಗಳ ಸಂಖ್ಯೆ ೨,೬೫,೩೭೨. ಅದೇರೀತಿ ಪ್ರಾದೇಶಿಕ ಕೋಳಿ ಸಾಕಾಣಿಕೆ ಕೇಂದ್ರಗಳು ೬೧,೯೪೧ ಆದರಲ್ಲಿ ಮೊಟ್ಟೆಗಳ ಉತ್ಪಾದನೆ ಆಗಿರತಕ್ಕದ್ದು ೧೧.೭೫,೦೦೦ ಆದರೆ ಕೋಳಿ ಮರಿಗಳು ಆಗಿದ್ದು ೧,೪೯,೯೬೭ ಅದೇರೀತಿ ಕೋಳಿ ಸಾಕಾಣಿ ವಿಸ್ತರಣಾ ಕೇಂದ್ರಗಳು ೩೧,೯೯೨ ಅದರಲ್ಲಿ ಮೊಟ್ಟೆಗಳ ಉತ್ಪಾದನೆ ಆಗಿರತಕ್ಕದ್ದು ೭೯,೬೭೯ ಮೊಟ್ಟೆಗಳು ಮಾತ್ರ ಆಗಿದೆ. ಕೋಳಿ ಮರಿಗಳ ಉತ್ಪಾದನೆ ಆಗಿಲ್ಲ. ಆದ್ದರಿಂದ ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ಕೊನೆಯದಾಗಿ ಬುಡಕಟ್ಟಿನ ಜನಾಂಗದವರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ವಿ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ಇವತ್ತಿನ ಎಲ್ಲಾ ಬೇಡಿಕೆಗಳನ್ನು ನಾನು ವಿರೋಧಿಸಿ ನಾಲ್ಕು ಮಾತನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಆದರೆ ಈ ನಾಲ್ಕು ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಸಾಧ್ಯವೇ ಇಲ್ಲ ಕಾರಣ ಸಮಯ ಬಹಳ ಕಡಿಮೆ ಇದೆ. ಆದ್ದರಿಂದ ಯಾವುದಾದರು ಒಂದು ಅಥವಾ ಎರಡರ ಬಗ್ಗೆ ಮಾತನಾಡುತ್ತೇನೆ; ನನ್ನ ಪ್ರೀತಿಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ, ಕನ್ನಡದ ಅಭಿವೃದ್ಧಿಯ ಬಗ್ಗೆ ಮತ್ತು ವಾರ್ತಾ, ಪ್ರವಾಸೋದ್ಯಮ ಇಲಾಖೆಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ವಾರ್ತಾ ಇಲಾಖೆಯ ವತಿಯಿಂದ ಪತ್ರಕರ್ತರಿಗೆ ಶೇ. ೫೦ರ ರಿಯಾಯಿತಿ ದರದಲ್ಲಿ ಪ್ರವಾಸಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇದು ಬಹಳ ಒಳ್ಳೆಯ ವಿಚಾರ ಆದರೆ ಅವರಿಗೆ ಸಂಪೂರ್ಣವಾಗಿ ರಿಯಾಯಿತಿಯನ್ನು ಕೊಟ್ಟರೆ ನಿಜವಾಗಿಯೂ ದೊಡ್ಡ ಕೆಲಸ ಮಾಡಬೇಕಾಗುತ್ತಿದೆ ಪತ್ರಕರ್ತರು ಜನರನ್ನು ತಿದ್ದತಕ್ಕಂತಹ, ಅವರಿಗೆ ವಿಷಯಗಳನ್ನು ಕೊಡತಕ್ಕಂತಹ ಒಂದು ದೊಡ್ಡ ಶಕ್ತಿ ಅವರು. ಅದೇ ರೀತಿ ಅವರಿಗೆ ವೈದ್ಯಕೀಯ ವೆಚ್ಚ ಕೊಡುವಂಥಾದ್ದು ಕೂಡ ಅಗತ್ಯ. ಪತ್ರಿಕರ್ತರಿಗೆ ಏನು ಅರ್ಧಾಂಶ ಪ್ರವಾಸ ರಿಯಾಯಿತಿ ಎಂದು ಕೊಡುತ್ತಿದ್ದೀರಿ ಅದನ್ನು ಸಂಪೂರ್ಣವಾಗಿ ಮಾಫಿ ಮಾಡಿ ಅವರು ಉಚಿತವಾಗಿ ಪ್ರಯಾಣ ಮಾಡತಕ್ಕಂತಹ ಅವಕಾಶ ಕಲ್ಪಿಸಿಕೊಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಇನ್ನು ವಾರ್ತಾ ಇಲಾಖೆಯ ಮುಖವಾಣಿಯಂತೆ ಜನ ಪದ ಎಂಬ ಕನ್ನಡ ಪತ್ರಿಕೆ ಮಾರ್ಚ್ ಆಫ್ ಕರ್ನಾಟಕ ಎಂಬ ಪತ್ರಿಕ ಇಂಗ್ಲೀಷಿನಲ್ಲಿ ಬರುತ್ತಿದೆ. ಆದರೆ ಜನಪದ ಪತ್ರಿಕೆ ವಾರ್ತಾ ಇಲಾಖೆಯ ಮುಖ ಪತ್ರಿಕೆಯಾಗಿ ಬರತಕ್ಕಂಥಾದ್ದು ಏನು ಇದೆ ಅದರ ಒಳಗಿನ ವಿಷಯಗಳನ್ನು ನೋಡಿದರೆ ಅದು ಸಾಲದು ಎಂದು ನನ್ನ ಅಭಿಪ್ರಾಯ. ಮಾನ್ಯ ಪ್ರಕಾಶ್‌ರವರಂತಹ ಮಂತ್ರಿಗಳು ಈ ಖಾತೆಯನ್ನು ವಹಿಸಿಕೊಂಡಿರುವಾಗ ಅದು ಒಂದು ಚಂದ ಮಾಮಂನಂತೆ ಕಾಣುತ್ತದೆ. ಆದ್ದರಿಂದ ವಾರ್ತಾ ಇಲಾಖೆಯ ಮುಖಪುಟವಾಗಿರುವ ಜನಪದ ಪತ್ರಿಕೆಯಲ್ಲಿ ಒಳ್ಳೆಯ ಜನಗಳನ್ನು ಹಾಕಿ ಅದನ್ನು ಒಳ್ಳೆಯ ರೀತಿಯಲ್ಲಿ ಇಡಿ. ಕರ್ನಾಟಕದ ವಾರ್ತಾ ಇಲಾಖೆಯ ಮುಖಪತ್ರ ಇದಾಗಿರುವಾಗ ಇದು ಚೆನ್ನಾಗಿ ಬರುವಂತೆ ಮಾಡಬೇಕು. ಇನ್ನು ಜಾಹೀರಾತುಗಳನ್ನು ಕೊಡುವಾಗ ಸಣ್ಣ ಸಣ್ಣ ಪತ್ರಿಕೆಗಳಿಗೆ ಜಾಹೀರಾತುಗಳನ್ನು ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿನ ಪತ್ರಿಕೆಗಳವರು ಬಹಳ ಕಷ್ಟದಿಂದ ನಡೆಸುತ್ತಿದ್ದಾರೆ ಅವರಿಗೆ ಒಳ್ಳೆಯ ರೀತಿಯಿಂದ ಪ್ರೀತಿಯಿಂದ ಅವರ ಬಗ್ಗೆ ಕನಿಕರದಿಂದ ಲಾದಲೂ ಹೆಚ್ಚಿಗೆ ಜಾಹೀರಾತು ಕೊಡಬೇಕು ದೊಡ್ಡ ದೊಡ್ಡ ಪತ್ರಿಕೆಗಳ ಬಗ್ಗೆ ಡೆಲ್ಲಿ, ಕಲ್ಕತ್ತಾ, ಈ ಕಡೆಯ ಇಂಗ್ಲೀಷ್ ಅಥವಾ ಹಿಂದಿ ಪತ್ರಿಕೆಗಳಿಗೆ ಕೊಡತಕ್ಕಂತಹ ಜಾಹೀರಾತನ್ನು ಕಡಿಮೆ ಮಾಡಬೇಕು. ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು ಎಂಬಂತೆ ಆಗಬಾರದು. ಕರ್ನಾಟಕದ ಒಳಗೆ ಇರತಕ್ಕಂತಹ ಕರ್ನಾಟಕದ ಕನ್ನಡ ಪತ್ರಿಕೆಗಳಿಗೆ ಕೊಡುವಷ್ಟು ಜಾಹೀರಾತುಗಳಲ್ಲಿ ಹೊರಕ್ಕೆ ಹೋಗಬಾರದು. ಇಲ್ಲಿಯವರಿಗೇ ಕೊಡಬೇಕು. ಇವತ್ತು ಚಲನಚಿತ್ರ ಮಟ್ಟ ಕೀಳಾಗುತ್ತಿದೆ ೫೦ ಪರ್ಸೆಂಟ್ ಮನರಂಜನಾ ತೆರಿಗೆ ವಿಚಾರ ಅಲ್ಲ. ಅತ್ಯುತ್ತಮ ಚಿತ್ರ ಯಾವುದು ಎಂದು ಲೆಕ್ಕ ಹಾಕಬೇಕು. ಈಗ ಬರತಕ್ಕಂತಹ ಎಲ್ಲ ಚಿತ್ರಗಳು ಕಳಪೆ ಚಿತ್ರಗಳು ಎಂಬ ಹಮಾರ್ಶೆ ಬರುತ್ತಿದೆ. ಈ ಕಡೆ ತಾವು ಗಮನ ಕೊಡಬೇಕು ಒಳ್ಳೆಯ ಚಿತ್ರಗಳು ಬರುವ ಹಾಗೆ ಮಾಡಬೇಕು. ಇನ್ನು ಪ್ರವಾಸೋದ್ಯಮ ವಿಷಯದಲ್ಲಿ ಹೆಚ್ಚು ಹೇಳುವುದಿಲ್ಲ; ಮಲ್ಪೆ ಬಗ್ಗೆ ಸ್ವಲ್ಪ ಹೇಳುತ್ತೇನೆ. ಅದಕ್ಕೆ ೬೦ ಲಕ್ಷ ರೂಪಾಯಿ ಕೇಂದ್ರದಿಂದ ಬಿಡುಗಡೆಯಾಗಿದ್ದು ಒಟ್ಟು ಎಲ್ಲಾ ಸೇರಿ ನೂರು ಲಕ್ಷವಾಗಿದೆ ಆದರೂ ಇದು ಸಂಪೂರ್ಣವಾಗಿಲ್ಲ ಇದನ್ನು ಮುಗಿಸಿದ ನಂತರವೇ ಬೇರೆ ಕಾರ್ಯಗಳನ್ನು ತೆಗೆದುಕೊಳ್ಳಬೇಕು, ಇದನ್ನು ಪ್ರವಾಸೋದ್ಯಮ ಇಲಾಖೆ ಖಾಸಗಿಯವರಿಗೆ ಮಾರಾಟ ಮಾಡತಕ್ಕಂತಹ ವಿಷಯ ಕೇಳಿ ಬರುತ್ತಿದೆ ಇದನ್ನು ಮಾಡಬಾರದು ಮಲ್ಪೆ ಬಹಳ ಒಳ್ಳೆಯ ಆಕರ್ಷಣೀಯವಾದ ಜಾಗ ಜನರು ಯಾವಾಗಲೂ ಇಲ್ಲಿ ಬಂದು ತಂಗಿ ನೋಡತಕ್ಕಂತಹ ಒಂದು ರಮಣೀಯವಾದ ಸುಂದರವಾದ ಜಾಗ ಇದನ್ನು ಬೇರೆ ಯವರಿಗೆ ಮಾರತಕ್ಕಂತಹ ವ್ಯವಸ್ಥೆ ಮಾಡಬಾರದು. ಮತ್ತು ನೂರು ಲಕ್ಷದಲ್ಲಿ ಕೆಲಸವಾಗಿ ಇನ್ನೂ ಸ್ವಲ್ಪ ಕೆಲಸ ಬಾಕಿ ಇದೆ ಇದನ್ನು ಗುತ್ತಿಗೆದಾರರಿಗೆ ಕೊಡತಕ್ಕಂತಹ ಹಣ ಇರಬಹುದು ಇಲ್ಲವೇ ಬೇರೆ ಇರಬಹುದು ಅದನ್ನು ಕೊಡದೇ ಹೋದರೆ ಬಡ್ಡಿ ಸಮೇತ ನಿಮ್ಮಿಂದ ಅದನ್ನು ತೆಗೆದುಕೊಳ್ಳತಕ್ಕಂತಹ ಪರಿಸ್ಥಿತಿ ಬರುತ್ತದೆ. ಇದನ್ನು ಆದಷ್ಟು ಬೇಗ ಮಾಡಿ ಮುಗಿಸಬೇಕು. ದಿನೇ ದಿನಕ್ಕೆ ಕ್ರಯ ಹೆಚ್ಚಾಗುತ್ತಿದೆ ಈ ರೀತಿ ಕ್ರಯ ಹೆಚ್ಚಾಗುತ್ತಾ ಹೋಗುತ್ತಿರುವಾಗ ಕಾಲಹರಣ ಮಾಡುವುದು ಸರಿಯಲ್ಲ. ಪ್ರತಿಯೊಂದಕ್ಕೆ ವಸ್ತುವಿನ ಕ್ರಯ ಹೆಚ್ಚಾಗುತ್ತಾ ಹೋಗುತ್ತಿದೆ. ಮಲ್ಪೆಯಲ್ಲಿ ಪ್ರತಿ ಆಗುತ್ತಿರುವಂತಹ ಕೆಲಸವನ್ನು ಪೂರ್ತಿ ಮಾಡಬೇಕು ಅದನ್ನು ಮಾಡಿದರೆ ನಮ್ಮ ಕರ್ನಾಟಕಕ್ಕೆ,

ನಮ್ಮ ಪ್ರವಾಸೋದ್ಯಮ ಇಲಾಖೆಗೆ ಕೀರ್ತಿ ತರತಕ್ಕಂತಹ ಒಂದು ಸ್ಥಳ ರಮಣೀಯವಾದ ಪ್ರವಾಸ ಸ್ಥಳವಾಗುತ್ತದೆ. ಇಲ್ಲದಿದ್ದರೆ ನಮ್ಮ ಪ್ರವಾಸೋದ್ಯಮ ಇಲಾಖೆಗೆ ಬರತಕ್ಕಂತಹ ಕೀರ್ತಿ ಕುಂಠಿತ ವಾಗುತ್ತದೆ.

೫-೦೦ ಪಿ.ಎಂ.

ಆದ್ದರಿಂದ ಇದರ ವೆಚ್ಚ ಜಾಸ್ತಿಯಾಗುತ್ತದೆ. ಆದ್ದರಿಂದ ಅದನ್ನು ಸಂಪೂರ್ಣವಾಗಿ ಈಗಲೇ ಮಾಡಿ ಮುಗಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಕಾಲಹರಣ ಮಾಡಬಾರದು, ಅದನ್ನು ಖಾಸಗಿ ಯವರಿಗೆ ಕೊಡತಕ್ಕಂಥ ಒಂದು ಮಾತನ್ನು ಕೇಳಿದೆ, ಅದು ಎಷ್ಟು ಮಾತ್ರಕ್ಕೂ ಕೊಡಬಾರದು. ಆ ರೀತಿ ಆದರೆ ಕರ್ನಾಟಕಕ್ಕೆ, ಕನ್ನಡಕ್ಕೆ ಸರ್ಕಾರಕ್ಕೆ ಅತ್ಯಂತ ಕೀಳರಿಮೆ ಎಂದು ಹೇಳಿ ನನ್ನ ಅಭಿಪ್ರಾಯ. ನಮ್ಮ ಉಳ್ಳಾಲದಲ್ಲಿ ಸುರಪತ್ತೆಯಲ್ಲಿ ಪ್ರವಾಸೋದ್ಯಮವನ್ನು ಮಾಡಬೇಕು ಎಂದು ಹೇಳಿ ನಾವು ಕೇಳುತ್ತಿದ್ದೇವೆ. ಉಳ್ಳಾಲದ ರಮಣೀಯ ಚಿತ್ರವನ್ನು ನಾನು ವರ್ಣಿಸುವುದಲ್ಲ. ನಮ್ಮ ಎಂ.ಪಿ. ಪ್ರಕಾಶ್‌ರವರು ಎಷ್ಟೋ ಸಾರಿ ಕಾಸರಗೋಡಿಗೆ ಹೋಗುವಾಗ ನೋಡಿದ್ದಾರೆ. ನಮ್ಮ ವೀರಪ್ಪ ಮೊಯಿಲಿಯವರು ಪ್ರವಾಸೋದ್ಯಮ ಮಂತ್ರಿಗಳು ಆಗಿದ್ದಾಗ ತಲಪಾಡಿ ಹತ್ತಿರ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕು ಎಂದು ಒಳ್ಳೆಯ ಅಭಿಪ್ರಾಯವನ್ನು ಮಾಡಿದ್ದರು. 'ರೂಪವೇ' ಪ್ರಾಜೆಕ್ಟ್ ಅದು ಹಾಗೆ ನಿಂತಿದೆ. ಇಂಥ ರಮಣೀಯ ಉಳ್ಳಾಲದಲ್ಲಿ ಸೋಮೇಶ್ವರ ದೇವಸ್ಥಾನ ಇವೆ, ಸೈಯದ್ ದರ್ಗಾ ಇದೆ, ಹತ್ತು ಲಕ್ಷ ಜನ ಐದು ವರ್ಷಕ್ಕೊಮ್ಮೆ ಅಲ್ಲಿಗೆ ಉಡಿಕೆಗೆ ಎಂದು ಬರುತ್ತಾರೆ. ಇಷ್ಟು ಪ್ರಾಮುಖ್ಯವಾದಂಥ ಸ್ಥಳದಲ್ಲಿ ಪ್ರವಾಸೋದ್ಯಮವನ್ನು ಮಾಡುತ್ತೇವೆ ಎಂದು ಹೇಳಿ ನನ್ನ ಪ್ರಶ್ನೆಗೆ ನಮ್ಮ ಕಾನೂನು ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದರು. ಅದನ್ನೂ ಕೂಡ ಕೈಗೆ ಎತ್ತಿಕೊಳ್ಳ ಬೇಕು. ಮರವಂತ್ತೆಯ ಬಗ್ಗೆಯೂ ಕೂಡಾ ಬೇಗ ಕೈಗೆ ಎತ್ತಿಕೊಳ್ಳಬೇಕು ಎಂದು ಹೇಳು ತ್ತೇನೆ. ನಾನು ಮುಖ್ಯವಾಗಿ ಮಾತನಾಡಬೇಕಾದಂಥ ಕನ್ನಡ ಸಂಸ್ಕೃತಿ ಇಲಾಖೆಯ ಬಗ್ಗೆ ಬರುತ್ತಿದ್ದೇವೆ. ಕನ್ನಡ ಸಂಸ್ಕೃತಿ ಎಂದು ಹೇಳತಕ್ಕಂಥ ಈ ಇಲಾಖೆ ಅದು ಒಂದು ಆನೆಯ ಹಾಗೆ ಇರಬೇಕು. ಅದು ಆನೆಯ ಹಾಗೆ ಇಲ್ಲದೇ ಒಂದು ಆಡಿನ ಮರಿ ಹಾಗೆ ಆಗಿದೆ. ಕಾರಣ ಇದಕ್ಕೆ ಕೊಟ್ಟಿರತಕ್ಕಂಥ ಹಣ ಬಹಳ ಕಡಿಮೆ. ನಾನು ಹೇಳುವಂಥದ್ದು ಈಗ ಕೊಟ್ಟಿರುವಂಥದ್ದಕ್ಕಿಂತ ಹತ್ತು ಪಾಲು ಹೆಚ್ಚು ಕೊಡಬೇಕು, ಕನ್ನಡ ಇದ್ದರೆ, ಕರ್ನಾಟಕ ಇದ್ದರೆ. ಕನ್ನಡದ ಬೀಜದಿಂದ ಹುಟ್ಟಿರ ತಕ್ಕಂಥ ಕರ್ನಾಟಕ ಇವತ್ತು ವಿಶಾಲವಾಗಿ ಬೆಳೆಯಬೇಕು, ವಿಶಾಲವಾದ ಮರ ಆಗಿರಬಹುದು, ರಂಬೆ ಗಳನ್ನು ಬಿಟ್ಟಿರಬಹುದು. ಆದರೆ ಕರ್ನಾಟಕ ಉಳಿಯಬೇಕು ಎಂದಾದರೆ ಕನ್ನಡ ಉಳಿಯಬೇಕು ಎಂದು ಆದರೆ, ಕನ್ನಡ ಸಾಹಿತ್ಯ ಉಳಿಯಬೇಕು ಎಂದು ಆದರೆ, ಕನ್ನಡ ಸಾಹಿತಿಗಳು ಉಳಿಯಬೇಕು ಎಂದಾದರೆ ಕನ್ನಡಿಗರಿಗೆ ಒಳ್ಳೆಯ ಬದುಕು ಎಂದು ಆದರೆ ಈ ಇಲಾಖೆಗೆ ಹೆಚ್ಚಿನ ಹಣವನ್ನು ತಾವು ತೆಗೆದು ಇಡಬೇಕು. ಇದರ ಬಗ್ಗೆ ಇನ್ನೂ ಅನೇಕ ಕೆಲಸಗಳನ್ನು ಮಾಡುವಂಥದ್ದು ಬಹಳ ಮುಖ್ಯವಿದೆ ನಮಗೆ ಕನ್ನಡದ ಬಗ್ಗೆ ಎಷ್ಟು ಅಭಿಮಾನ ಉಂಟು ? ತಾವು ನೋಡಿ ಯಾವ ಸರ್ಕಲ್‌ಗೆ ಹೋದರೂ ಅಲ್ಲಿ ಎರಡು ಪರ್ಸೆಂಟ್ ಕನ್ನಡ ಮಾತನಾಡತಕ್ಕಂಥವರು ನಮಗೆ ಸಿಗುವುದಿಲ್ಲ ಎಲ್ಲಾ ತೆಲಗು ಮತ್ತು ಮಲೆಯಾಳಿಯನ್ನು ಮಾತನಾಡತಕ್ಕಂಥವರೇ ಜಾಸ್ತಿ. ಅವರು ಹೇಳುತ್ತಾರೆ, ನಾವು ಅದನ್ನೆಲ್ಲಾ ಹಿಡಿಯುತ್ತೇವೆ ಎಂದು ಹೇಳುತ್ತಾರೆ. ನಾನು ಭಾವಿಸುತ್ತೇನೆ. ಇದನ್ನೆಲ್ಲಾ ನಾವು ಹಾಗೆಯೇ ಸಡಿಲ ಬಿಟ್ಟರೆ ನಮ್ಮ ಸೌಜನ್ಯವನ್ನು ನಾವು ಇದೇ ರೀತಿಯಲ್ಲಿ ಬಿಟ್ಟರೆ ಹತ್ತು ವರ್ಷದಲ್ಲಿ ತಮಿಳು ಪ್ರದೇಶವಾಗುತ್ತದೆ, ತೆಲಗು ಪ್ರದೇಶವಾಗುತ್ತದೆ. ಮಂಗಳೂರು ಮಲೆಯಾಳಿ ಪ್ರದೇಶ ವಾಗುತ್ತದೆ. ಇದರ ಬಗ್ಗೆ ಸಂಶಯವೇ ಬೇಡ. ನಾನು ಹೇಳುವಂಥದ್ದು ನಾವು ಎಷ್ಟು ಸೌಜನ್ಯ ವನ್ನು ಕೊಟ್ಟಿದ್ದೇವೆ. ನಮಗೆ ಕನ್ನಡದ ಬಗ್ಗೆ ಯಾವ ತರಹದ ಅಭಿಮಾನವೂ ಇಲ್ಲ. ಕವಿ ಪುಟ್ಟಪ್ಪ ನವರು ೬೦ ವರ್ಷಕ್ಕೂ ಮೊದಲೇ ಈ ರೀತಿ ಹೇಳಿದ್ದಾರೆ.

ಸಾಯುತ್ತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ
ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ
ನಿರಿನಿಟಿಲು ನಿಟಿರೆಂದು ಮುದಿಮೊಳೆ ಮುರಿಯುತಿದೆ
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ ;

ರಾಜನುಡಿಯೊಂದೊಂದು, ರಾಷ್ಟ್ರನುಡಿಯೊಂದೊಂದು
ದೇವ ನುಡಿಯೊಂದೊಂದು ಹತ್ತಿ ಜಗ್ಗಿ
ನಿರಿನಿರಿಲು ನಿಟಿರೆಂದು ಮುದಿಮೂಳೆ ಮುರಿಯುತ್ತಿದೆ
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ ;

ಮೊಲೆಹಾಲಿನೊಡಗೂಡಿ ಬಂದನುಡಿ ತಾಯಿನುಡಿ
ಕೊಲೆಗೈದವರಮ್ಮನನೆ ಕೊಲಿಸಿದಂತೆ
ತಾಯ್ ಮುತ್ತು ಕೊಡುವಂದು ಕನ್ನಡವೆ ಕಲಿಸುವುದು
ತುಟಿಗೆ ಬಂದು ;

ಉತ್ತರದ ಕಾಶಿಯಲ್ಲಿ ಕತ್ತೆ ಮಿಂದೈತರಲು
ದಕ್ಷಿಣ ದೇಶಕರು ಕುದುರೆಯಹುದೆ ?
ತಾಯಿತ್ತ ಮೊಲೆಹಾಲೆ ನಿಮ್ಮ ಮೈಗಾಗದಿರೆ
ಹೊತ್ತಹೊರೆ ಫಲಕಾರಿ ನೆತ್ತರಹುದ ;

ಇದನ್ನು ನಮ್ಮ ಕವಿ ಪುಟ್ಟಪ್ಪನವರು ಅರವತ್ತು ವರ್ಷದ ಹಿಂದೆ ಹೇಳಿದ್ದಾರೆ. ಇವತ್ತು ಅದು ಶಾಶ್ವತವಾಗಿ ಹಾಗೆಯೇ ಉಳಿದಿದೆ. ಬೇಂದ್ರೆಯವರು ಏನು ಹೇಳಿದರು ? "ಕರ್ನಾಟಕದ ಒಂದೇ, ಕರ್ನಾಟಕ ಒಂದೇ, ಕರ್ನಾಟಕ ಒಂದೇ, ಅದು ಹಳಿಯುವ ಜನರಿದ್ದರೂ ಒಂದೇ, ಇರದಿದ್ದರೂ ಒಂದೇ" ಈ ರೀತಿಯಲ್ಲಿ ಬೇಂದ್ರೆಯವರು ಹೇಳಿದ್ದಾರೆ. ಎಂ.ಪಿ. ಪ್ರಕಾಶ್‌ರವರು ನಾಟಕಕಾರರು, ಸಾಹಿತಿಗಳು, ಒಳ್ಳೆಯ ರೀತಿಯಲ್ಲಿ ಮಾತನಾಡತಕ್ಕಂಥವರು. ಅವರು ಕಾಸರಗೋಡಿಗೆ ಹೊರನಾಡಿನಲ್ಲಿರತಕ್ಕಂಥ ಪ್ರದೇಶಕ್ಕೆ ಎರಡು-ಮೂರು ಸಾರಿ ಬಂದಿದ್ದಾರೆ. ನಾನು ಹೇಳುವಂಥಾದ್ದು ನಿಮ್ಮ ಕಾಲದಲ್ಲಿ ಎಲ್ಲಾ ವಿಚಾರಗಳನ್ನು ಬದಿಗೆ ಇಟ್ಟು ಈ ಒಂದು ಕನ್ನಡ ಸಂಸ್ಕೃತಿಯನ್ನು ಈ ಕನ್ನಡದ ಅಭಿವೃದ್ಧಿಯನ್ನು, ಕನ್ನಡದ ಶಕ್ತಿಯನ್ನು ಮೇಲೆ ಎತ್ತತಕ್ಕಂಥ ಅದರ ಬಾವುಟವನ್ನು ಬಾನೆತ್ತರಕ್ಕೆ ಹಾರಿಸುವಂಥ ಒಂದು ಅದ್ಭುತವಾದಂಥ ಸಾಧನೆಯನ್ನು ಮಾಡಬೇಕು. ಈಗ ಕೊಟ್ಟಿರುವ ಹಣ ಬಹುಶಃ ಸಾಕಾಗಲಿಕ್ಕಿಲ್ಲ. ಇವತ್ತು ಕನ್ನಡ ಸಂಸ್ಕೃತಿಯಲ್ಲಿ ಅನೇಕ ಅಕಾಡೆಮಿಗಳನ್ನು ಮಾಡಿದ್ದೀರಿ. ಅದೇ ರೀತಿ ಸಾಹಿತ್ಯ ಅಕಾಡೆಮಿ, ಲಲಿತಕಲಾ ಅಕಾಡೆಮಿ, ಸಂಗೀತ ಅಕಾಡೆಮಿಗಳನ್ನು ಮಾಡಿದ್ದೀರಿ. ಅವರು ಏನು ಕೆಲಸ ಮಾಡುತ್ತಾರೆ ಎಂದರೆ ನಮ್ಮ ಮಿತ್ರರೊಬ್ಬರು ಹೇಳಿದ ಹಾಗೆ ಖುಷಿ ಬಂದಂಥವರನ್ನು ಭಾಷಣ ಮಾಡಲಿಕ್ಕೆ ಕರೆಯುತ್ತಾರೆ, ಸ್ವಲ್ಪ ಜನರಿಗೆ ಹಣವನ್ನು ಕೊಡುತ್ತಾರೆ. ಅಗತ್ಯವಾದ ಬೇಕಾದಂಥ ಟೀಯನ್ನು ಇವತ್ತು ಕರೆಯಿರಿ. ಈ ರೀತಿಯಲ್ಲೆಲ್ಲಾ ಮಾಡಬಾರದು ಎಂದು ನಾನು ಹೇಳುವುದು. ಮಂಗಳೂರಿನಲ್ಲಿ ಒಳ್ಳೆಯ ಟೀಮ್ ಇದೆ, ಅಲ್ಲಿ ಒಳ್ಳೆಯ ನಾಟಕಕಾರರು ಇದ್ದಾರೆ, ಅವರನ್ನು ಕರೆಯಿರಿ, ಅದೇ ರೀತಿಯಲ್ಲಿ ಬೆಂಗಳೂರು, ಧಾರವಾಡ ಅದೇ ರೀತಿಯಲ್ಲಿ ಬಳ್ಳಾರಿಯಲ್ಲಿ ಎಲ್ಲಾ ಕಡೆಗಳಲ್ಲಿ ಒಳ್ಳೆಯ ಕಲಾಕಾರರು ಇರತಕ್ಕಂಥ ಶಕ್ತಿ ಇರತಕ್ಕಂಥ ಜನರನ್ನು ಹುಡುಕಿ ಅಂಥವರಿಗೆ ನಾಟಕ ಆಡಲಿಕ್ಕಾಗಲೀ, ಸಂಗೀತ ಮಾಡುವುದಕ್ಕಾಗಲೀ, ನೃತ್ಯ ಮಾಡುವುದಕ್ಕಾಗಲೀ ಈ ರೀತಿಯಲ್ಲಿ ಮಾಡಬೇಕು.

ಅದೇ ರೀತಿಯಲ್ಲಿ ಸಾಹಿತ್ಯ ಅಕಾಡೆಮಿಗೆ ಏನಾದರೂ ಸದಸ್ಯರನ್ನು ಹಾಕುವಾಗ ಅಲ್ಪಸಂಖ್ಯಾತರನ್ನು ಹೆಚ್ಚು ಹಾಕಬೇಕು. ಅದೇ ರೀತಿಯಲ್ಲಿ ಪರಿಶಿಷ್ಟ ವರ್ಗದವರನ್ನು ಹೆಚ್ಚು ಹಾಕಬೇಕು. ಅಲ್ಪಸಂಖ್ಯಾತರ ಭಾಷೆ ಕನ್ನಡ ಅಲ್ಲ, ನನ್ನ ಮನೆ ಭಾಷೆ ಮಲೆಯಾಳ. ಆದರೂ ಕನ್ನಡ ಕೆಲಸ ಮಾಡತಕ್ಕ ಅಲ್ಪಸಂಖ್ಯಾತರು ಎಷ್ಟೋ ಜನ ಸಿಕ್ಕಬಹುದು, ಅಂಥವರಿಗೆ ಹೆಚ್ಚು ಸ್ಥಾನ ಕೊಡಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಲ್ಲೂ ಬಹಳ ಜನ ಇದ್ದಾರೆ. ಅನೇಕ ಕವಿಗಳೂ, ಸಾಹಿತಿಗಳೂ ಕಂಡು ಬರುತ್ತಿದ್ದಾರೆ. ಅಂಥವರಿಗೆ ಅವಕಾಶ ಕೊಡಬೇಕು. ಕೊಟ್ಟಿಲ್ಲ ಎಂದು ಹೇಳುವುದಿಲ್ಲ, ಇನ್ನೂ ಹೆಚ್ಚು ಕೊಡಬೇಕು. ಅದರಿಂದ ಫಾಯಿದೆ ಆಗುತ್ತದೆ. ಹೆಚ್ಚಿನ ಶಕ್ತಿ ಕನ್ನಡಕ್ಕೆ, ಕರ್ನಾಟಕ ಸರ್ಕಾರಕ್ಕೆ ಹೆಚ್ಚು ಶಕ್ತಿ ಬರುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಬಹು ಮುಖ್ಯವಾಗಿ ಹೇಳತಕ್ಕದ್ದು ಹಂಪೆ ಬಗ್ಗೆ. ಹಂಪೆಗೆ ಬಹಳ ಒಳ್ಳೆಯದು ಮಾಡುತ್ತೇವೆ ಎಂದು ಹೇಳಿದ್ದೀರಿ. ಏನು ಮಾಡಿದ್ದೀರಿ ? ಯಾವುದೂ ಮಾಡಲಿಲ್ಲ. ಹಣ ಬಿಡುಗಡೆ ಮಾಡಿಲ್ಲ, ರೂಪುರೇಷೆಗಳನ್ನು ಮಾಡಿಲ್ಲ. ಇವೊತ್ತು, ಜಗತ್ ಪ್ರಸಿದ್ಧವಾದ ಅದ್ಭುತವಾದ, ರಮಣೀಯವಾದ ಸ್ಥಳ ಹಂಪೆ' ಕನ್ನಡದ ಗಂಡು ಮೆಟ್ಟಿನ

ಜೋಗ ಹಂಪೆಗೆ ಹಂಪೆಗೆ ಒಳ್ಳೆಯದು ಮಾಡಿದರೆ ಇಡೀ ಕರ್ನಾಟಕಕ್ಕೆ ಒಳ್ಳೆಯದು ಮಾಡಿದ ಹಾಗೆ ಆಗುತ್ತದೆ, ಅದೇ ರೀತಿಯಲ್ಲಿ ಜಯಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಮೈಸೂರಿನಲ್ಲಿದೆ. ಹಿಂದೆ ನಮ್ಮ ಕಾಂಗ್ರೆಸ್ ಸರ್ಕಾರ ಇರುವಾಗ ಶ್ರೀಮಾನ್ ಮೊಯಿಲಿಯವರು ಪ್ರವಾಸೋದ್ಯಮ ಮಂತ್ರಿಗಳಾಗಿದ್ದರು, ಈ ಜೋಗ ಜಗತ್ ಪ್ರಸಿದ್ಧವಾದ ಶಕ್ತಿಯಾಗಿ ಬೆಳೆಯಬೇಕು ಎಂದು ಅಲ್ಲಿ ಕೆಲವು ವ್ಯವಸ್ಥೆಗಳನ್ನು ಮಾಡಿದರು, ಆದರೆ ಅದು ಇವೊತ್ತು ಹಾಗೇ ನಿಂತಿದೆ. ಐದು ವರ್ಷದಿಂದ ವಿಶ್ವವಿದ್ಯಾನಿಲಯಗಳ ಅಫಿಲಿಯೇಷನ್ ಕೂಡ ಅದಕ್ಕೆ ಸಿಕ್ಕಿಲ್ಲ. ಅದೇ ರೀತಿ ಅದು ಸ್ವಯಂ ಶಕ್ತಿಯಾಗಿ ವಿದ್ಯಾ ಸಂಸ್ಥೆಯಾಗಿ, ವಿದ್ಯಾಲಯ ಆಗಬೇಕು ಎಂದು ಹೇಳಿದರು ಅದು ಕೂಡ ಆಗಲಿಲ್ಲ, ಅದು ಮಾತ್ರ ಅಲ್ಲ, ಮೂರು ವರ್ಷದಿಂದ ಅಲ್ಲಿ ಗವರ್ನಿಂಗ್ ಬಾಡಿ ಮೀಟಿಂಗ್ ಆಗಲಿಲ್ಲ. ಆಗಿದ್ದರೆ ಜಗತ್ ಪ್ರಸಿದ್ಧವಾದ ಜಯಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಅನ್ನು ಜಗತ್ತಿನಲ್ಲಿ ನೀವು ಮಾದರಿಯಾಗಿ ತೋರಿಸಬೇಕಾದರೆ ನೀವು ಅದನ್ನು ಮಾಡದೇ ಹೋದರೆ ಮತ್ತೆ ಯಾವಾಗ ಮಾಡುತ್ತೀರಿ ? ಅದನ್ನು ನಾನು ಯಾಕೆ ಹೇಳುತ್ತಿದ್ದೇನೆ ಅಂದರೆ ಇವೊತ್ತು ಕರ್ನಾಟಕದ ಶಕ್ತಿ ಬೆಳೆಯಬೇಕಾದರೆ ನಾವು ಕರ್ನಾಟಕ ಎಂದು ಹೆಸರನ್ನು ಇಟ್ಟಿದ್ದೇವೆ ಕನ್ನಡ ಸಾಹಿತ್ಯಕ್ಕಾಗಿ ಹೆಣಗುತ್ತಿದ್ದೇವೆ ಇವೊತ್ತು ಸಾಹಿತಿಗಳು ಇದ್ದರೆ. ಕವಿಗಳು ಇದ್ದರೆ ಮಾತ್ರ ಕನ್ನಡ ಉಳಿಯುತ್ತವೆ, ಕನ್ನಡಿಗರು ಉಳಿಯುತ್ತಾರೆ. ಭಾಷೆ ಎಲ್ಲದಕ್ಕೂ ಮುಖ್ಯ. ನಾನು ದುರಭಿಮಾನಿಯಾಗಿ ಮಾತನಾಡುತ್ತಿದ್ದೇನೆಂದು ತಿಳಿಯಬಾರದು. ಭಾಷಾವಾರು ರಾಜ್ಯವಾದ ಮೇಲೆ ಭಾಷೆಗಾಗಿ ಹೋರಾಟ ಮಾಡಲೇಬೇಕು. ಈಗ ಕರ್ನಾಟಕ ಆಗಿದೆ, ಆಂಧ್ರ ಆಗಿದೆ ; ಅದೇ ರೀತಿಯಲ್ಲಿ ಕೇರಳ ಕೂಡ ಆಗಿದೆ. ಕೇರಳದಲ್ಲಿ ಒಬ್ಬನೇ ಒಬ್ಬ ಇಂಗ್ಲೀಷ್ ಪತ್ರಿಕೆಯನ್ನು ಓದುವುದಿಲ್ಲ ಎಲ್ಲರೂ ಮಲೆಯಾಳ ಪತ್ರಿಕೆಯನ್ನು ಓದುತ್ತಾರೆ. ೧೦೦ಕ್ಕೆ ೧೦೦ ಜನ ಮಲೆಯಾಳ ಪತ್ರಿಕೆಯನ್ನು ಓದುತ್ತಾರೆ. ೧೪೪–೧೪೫ ಜನ ಅಸೆಂಬ್ಲಿಯಲ್ಲಿ ಇರುವ ಎಲ್ಲಾ ಶಾಸಕರು ಇಂಗ್ಲೀಷ್ ಭಾಷೆಯಲ್ಲಿ ಪರಿಣತರು, ಆದರೆ ಮಲೆಯಾಳದಲ್ಲಿ ಮಾತನಾಡುವ ಜನ ಅವರು, ನಮ್ಮಲ್ಲಿ ಒಂದು ಪತ್ರಿಕೆಯನ್ನು ತೆಗೆದು ಹಿಂದೆ ಐದು ಜನ ಓದುವವರು ಇರುತ್ತಾರೆ, ಒಂದು ಶೀಟ್ ಕೊಡಿ, ಒಂದು ಶೀಟ್ ಇಲ್ಲಿ ಕೊಡು ಎಂದು ಕೇಳುತ್ತಾರೆ, ಪತ್ರಿಕೆಯನ್ನು ಕ್ರಯಕ್ಕೆ ತೆಗೆದುಕೊಳ್ಳುವುದಿಲ್ಲ ತೆಗೆದುಕೊಳ್ಳುವ ಮನಸ್ಸು ಸಹ ಮಾಡುವುದಿಲ್ಲ. ಕೈಯಲ್ಲಿ ಇಂಗ್ಲೀಷ್ ಪತ್ರಿಕೆ ಹಿಡಿದಿದ್ದರೆ ಆತ ಬಹಳ ಘಟ್ಟಿಗ ಕಂಕುಳಲ್ಲಿ ಪತ್ರಿಕೆಯನ್ನು ಇಟ್ಟುಕೊಂಡರೆ ಅವನಷ್ಟು ಗಟ್ಟಿಗ ಬೇರೆ ಯಾರೂ ಇಲ್ಲ, ಇಂಗ್ಲೀಷ್ ಪತ್ರಿಕೆ ಓದಿದರೆ ಮಾತ್ರ ಆತ ದೊಡ್ಡವ, ನಾನು ಬೇರೆ ಭಾಷೆ ಕಲಿಯಬಾರದು ಎಂದು ಹೇಳುವುದಿಲ್ಲ, ೧೦–೨೦ ಭಾಷೆ ಕಲಿಯೋಣ, ೬೦ ಭಾಷೆಯನ್ನು ಕಲಿಯೋಣ! ಆದರೆ ಪ್ರಾಮುಖ್ಯ ಕನ್ನಡಕ್ಕೆ ಕೊಡಬೇಕು. ಕನ್ನಡ ನಮ್ಮ ಅನ್ನ. ಬಾಕಿ ಎಲ್ಲಾ ಸಾರು ಹಪ್ಪಳ ತುಪ್ಪ ಇವೆಲ್ಲಾ ಬೇರೆಯೇ ಇಟ್ಟಿದ್ದೇವೆ ನಾವು ಇವೊತ್ತು ಕನ್ನಡ ಅನ್ನಕ್ಕಾಗಿ ಪ್ರಾಮುಖ್ಯವಾಗಿ ಹೆಣಗಬೇಕು, ಯಾವುದೇ ಭಾಷಾ ದುರಭಿಮಾನದಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ಹಾಗೆಂದು ಭಾವಿಸಕೂಡದು. ಇವೊತ್ತು ಕರ್ನಾಟಕವೆಂದು ಆದ ಮೇಲೆ ಕನ್ನಡ ಸಾಹಿತಿಗಳಿಗೆ ಕನ್ನಡ ಬರಹಗಾರರನ್ನು ಹೆಚ್ಚು ಹೆಚ್ಚು ಪ್ರೀತಿಸಬೇಕು. ಅವರಿಗೆ ಹೆಚ್ಚು ಹೆಚ್ಚು ಮಾಸಾಶನಗಳನ್ನು ಕೊಡಬೇಕು ಅವರನ್ನು ಜನ ಗೌರವಿಸಬೇಕು. ಈ ರೀತಿ ಮಾಡಿದರೆ ಮಾತ್ರ ಕನ್ನಡನಾಡಿನ ಶಕ್ತಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ನಾನೇ ಬರೆದಂತಹ ಕವನವನ್ನು ಓದಿ ನನ್ನ ಮಾತನ್ನು ಮುಗಿಸುತ್ತೇನೆ. ಯಾಕೆಂದರೆ ಅವರು ಬೆಲ್ ಮಾಡುತ್ತಿದ್ದಾರೆ. ಆದರಲ್ಲೂ ಕನ್ನಡ ಸಂಸ್ಕೃತಿ ಬಗ್ಗೆ ಹೇಳುತ್ತೇನೆ.

" ಕನ್ನಡ ಮೆರೆಯುವ ಕಾಲವು ಬಂದಿದೆ
ನೋಡಿರಿ ಭವಿಷತ್ತು,
ಕನ್ನಡ ಬಾಳುತ ನಿಲುವುದು ದಿಟವಿದೆ
ನಮಗದು ದೌಲತ್ತು.
ಗುಲಾಮಗಿರಿಯನು ವೃದ್ಧಿಸುತ್ತಿರುವುದು
ಹೊರಗಿನ ಕೆಲ ಭಾಷೆ
ಸಲಾಂ ಹೊಡೆಸುತ ಕಾಣಿಸುತಲಿರುವುದು
ನೀಗಿರಿ ಆದರಾಸೆ

ಚಿನ್ನದ ಕತ್ತಿಯು ಹೊರಗಿನ ಭಾಷೆ
ಕರುಣೆಯ ತೋರೀತೆ ?
ಚಿನ್ನದ ಕತ್ತಿಯು ಕನ್ನಡ ಶಕ್ತಿಗೆ
ಇರಿಯದೆ ಬಿಟ್ಟೀತೆ ?"

ಇನ್ನು ಒಂದು ಮಾತು ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಮೊನ್ನೆ ನಾನು ನಿಯಮವು ೩೩೪ರಲ್ಲಿ ಪದ್ಯ ರೂಪದಲ್ಲಿಯೇ ಕೇಳಿದ್ದೆ. ತಾವು ಇದ್ದಿದ್ದರೆ ಪದ್ಯದ ರೂಪದಲ್ಲಿಯೇ ಉತ್ತರ ಕೊಡಬಹುದಿತ್ತು, ಆದರೆ ಕೊಡಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಡಿ. ವಿ. ಜಿ, ಬೇಂದ್ರೆ, ಮಾಸ್ತಿ, ಬಿ. ಎಂ. ಶ್ರೀ ಇತ್ಯಾದಿ ಮಹಾನುಭಾವರುಗಳು ಪ್ರಾರಂಭಿಸಿದ್ದು, ಇವೊತ್ತು ಸರ್ಕಾರಿ ಅಧಿಕಾರಿಗಳು ಅಧೀನದಲ್ಲಿ ರುವುದು ಸರಿಯಲ್ಲ. ತಾವೂ ಸಹ ಆಲೋಚನೆ ಮಾಡಿ ಅಲ್ಲಿ ಭಾಗ ಆಗಿದೆ ಎರಡು ಪಾರ್ಟಿ ಇದೆ ಎಂದು ಇವೊತ್ತು ಸಾಹಿತಿಗಳಲ್ಲಿ ಎರಡು ಭಾಗ ಆಗಿದೆ, ಎರಡು ಹೋಳು ಆಗಿದೆ ಎಂದು ಹೇಳಿ ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರಕ್ಕೆ ಹೋಗುವುದು ಎಂದೆಂದಿಗೂ ಸರಿಯಲ್ಲ ಸದಸ್ಯರುಗಳನ್ನು ಆರಿಸಿದಂತೆ ಅಧ್ಯಕ್ಷರನ್ನು ಸಹ ಆರಿಸಬೇಕು. ಅಲ್ಲಿನ ಅಧಿಕಾರಿಗಳನ್ನು ತೆಗೆದು ನಿಮ್ಮ ಸರ್ಕಾರಿ ಅಧಿಕಾರಿಗಳನ್ನು ಹಾಕಿದ್ದೀರಿ. ಆದಷ್ಟು ಬೇಗ ಅಧಿಕಾರಿಗಳನ್ನು ವಾಪಸ್ ಕರೆದು ಚುನಾವಣೆಗಳನ್ನು ಮಾಡಿ ಒಳ್ಳೆಯ ಅಧ್ಯಕ್ಷರನ್ನು ಮಾಡಬೇಕು. ಹಣದ ಸಹಾಯವನ್ನು ಕೊಡುತ್ತಾ ಇದ್ದೀರಿ, ೩ ಲಕ್ಷ ೪ ಲಕ್ಷ, ಅನುದಾನವನ್ನು ಕೊಡುತ್ತಿದ್ದೀರಿ. ಕನ್ನಡ ಸಾಹಿತ್ಯ ಪರಿಷತ್ತಿನ, ಈ ವಿಷಯದಿಂದ ಇಡೀ ಕರ್ನಾಟಕಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ನಾಚಿಕೆ ಬಂದಿದೆ.

" ಕನ್ನಡಿಗರ ಕನ್ನಡ ಸಾಹಿತ್ಯ ಪರಿಷತ್ತು ॥
ಹಿಂದೆ ವಿಶೇಷ ಕೀರ್ತಿ ಪಡೆದಿತ್ತು ॥
ಈಗೀಗ ಅಲ್ಲಿ ನಡೆದಿದೆ ಕಸರತ್ತು ॥
ಜೊತೆಗೆ ಗುಂಪುಗಾರಿಕೆಯ ಮಸಲತ್ತು ॥

ಆದ್ದರಿಂದ ಇದನ್ನು ತಾವು ಕೂಡಲೇ ನಿಲ್ಲಿಸಬೇಕು ಮತ್ತು ಅಲ್ಲಿಗೆ ಚುನಾಯಿತ ಅಧ್ಯಕ್ಷರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಕನ್ನಡ ಸಂಸ್ಕೃತಿಯ ಉದ್ಧಾರಕ್ಕೆ ಹೆಚ್ಚು ದುಡ್ಡು ಕೊಡಬೇಕೆಂದು ಮುಖ್ಯಮಂತ್ರಿಗಳ ಹತ್ತಿರ ಕೇಳಬೇಕು. ಏಕೆಂದರೆ, ಮರವೊಂದು ಬೆಳೆಯಲು ಬೀಜ ಹೇಗೆ ಮುಖ್ಯವೋ ಅದೇ ರೀತಿ ಕರ್ನಾಟಕ ಅಭಿವೃದ್ಧಿಗೆ ಕನ್ನಡವೇ ಬೀಜ. ಆದ್ದರಿಂದ ಈ ಬೀಜ ಇಲ್ಲದಿದ್ದರೆ ಏನೂ ಆಗುವುದಿಲ್ಲ. ಆದ್ದರಿಂದ ಕನ್ನಡ ಸಂಸ್ಕೃತಿಯ ಬೆಳವಣಿಗೆಗೆ ಪ್ರವಾಸೋದ್ಯಮಕ್ಕೆ ಮತ್ತು ವಾರ್ತಾ ಇಲಾಖೆಗೆ ಹೆಚ್ಚು ಹಣವನ್ನು ನೀವು ಕೊಡಬೇಕು. ಇದು ಒಂದು ಸಣ್ಣ ಇಲಾಖೆ ಎಂಬ ಭಾವನೆ ಅನೇಕರಲ್ಲಿದೆ. ಆದರೆ ಇದು ಬಹಳ ಪ್ರಮುಖವಾದ ಇಲಾಖೆ ಎಂದು ನನ್ನ ಭಾವನೆ ಅಷ್ಟೆ ಅಲ್ಲ. ಇದು ಕರ್ನಾಟಕ ರಾಜ್ಯಕ್ಕೆ ಸರ್ವಶಕ್ತಿಯನ್ನು ಕೊಡುವಂತಹ ಬೀಜ ಆಗಿದೆ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ (ಜೇವರ್ಗಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಾದ ಶ್ರೀ ಪ್ರಕಾಶ್ ಅವರು ಈ ಸದನದ ಮುಂದೆ ಪ್ರವಾಸೋದ್ಯಮ, ವಾರ್ತಾ ಮತ್ತು ಬೆಂಗಳೂರು ಅಭಿವೃದ್ಧಿ ಬಗ್ಗೆ ೨೯ನೇ ಸಂಖ್ಯೆಯ ಬೇಡಿಕೆಯನ್ನು ಮಂಡಿಸಿದ್ದಾರೆ. ನಾನು ಬಿ.ಡಿ.ಎ. ಬಗ್ಗೆ ಕೆಲವು ಸಲಹೆ ಮತ್ತು ಸೂಚನೆಗಳನ್ನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಈಗ ಬೇಡಿಕೆಗಳ ತುರಾತುರಿಯಲ್ಲಿ ಪಾಸಾಗುತ್ತಿವೆ. ನೆನ್ನೆ ಕೂಡ ೬ ಬೇಡಿಕೆಗಳ ಮೇಲೆ ಚರ್ಚೆ ನಡೆದು ಉತ್ತರವನ್ನು ಸಹ ಕೊಡಲಾಯಿತು. ಇವೊತ್ತು ಸಹ ಅನೇಕ ಬೇಡಿಕೆಗಳು ನಮ್ಮ ಮುಂದಿವೆ. ಶ್ರೀಮಾನ್ ಪ್ರಕಾಶ್ ಅವರು ಬಿ.ಡಿ.ಎ. ಖಾತೆಯನ್ನು ವಹಿಸಿಕೊಂಡ ಮೇಲೆ ಪ್ರಪ್ರಥಮವಾಗಿ ಲಾಲ್‌ಬಾಗ್‌ಗೆ ಮುಖ್ಯ ಮಂತ್ರಿಗಳನ್ನು ಕರೆದುಕೊಂಡು ಹೋಗಿ ೧೬೪೮೫ ಸೈಟ್‌ಗಳನ್ನು ವಿತರಣೆ ಮಾಡಿಸಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ.—

"ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೮೭-೮೮ರಲ್ಲಿ ಮನೆ ನಿವೇಶನಗಳನ್ನು ಹಂಚುವುದಕ್ಕೆ ಒಂದು ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ನಾನು

ಕಳೆದ ವರ್ಷ ಹೇಳಿದ್ದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೮೭-೮೮ರಲ್ಲಿ ೧೬೪೮೫ ನಿವೇಶನಗಳನ್ನು ಹಂಚಿಕೆ ಮಾಡಿದೆಯೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಹರ್ಷಿಸುತ್ತೇನೆ. ಈ ಒಂದು ವರ್ಷದಲ್ಲಿ ಮಾಡಿದ ಹಂಚಿಕೆಯು ಪ್ರಮಾಣವು ೧೯೭೬ರಿಂದ ೧೯೮೭ರ ಅವಧಿಯಲ್ಲಿ ಮಾಡಿದ ನಿವೇಶನಗಳ ಹಂಚಿಕೆಯ ಪ್ರಮಾಣಕ್ಕಿಂತ ಬಹಳ ಹೆಚ್ಚು"

ಎಂದು ಹೇಳಿ ಮಾನ್ಯ ಮಂತ್ರಿಗಳಿಗೆ ಕಾಂಪ್ಲಿಮೆಂಟ್‌ನ್ನು ಕೊಟ್ಟಿದ್ದಾರೆ. ಈ ಬಜೆಟ್ ಭಾಷಣವನ್ನು ತಯಾರು ಮಾಡುವ ಸಮಯದಲ್ಲಿ ಅಧಿಕಾರಿಗಳು ಈ ಬಗ್ಗೆ ಸರಿಯಾದ ವಿವರ ಕೊಟ್ಟಿಲ್ಲವೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಬಿ.ಡಿ.ಎ. ೧೯೪೫ರಲ್ಲಿ ಪ್ರಾರಂಭವಾಯಿತು ಈ ಮೊದಲು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಂದು ಇತ್ತು. ಇದು ೧೯೭೬ರಲ್ಲಿ ಬಿ.ಡಿ.ಎ. ಎಂದು ಪರಿವರ್ತನೆ ಆಯಿತು. ಈಗ ಇದು ತನ್ನ ಕೆಲಸಕಾರ್ಯಗಳನ್ನು ನಿರ್ವಹಿಸಿಕೊಂಡು ಬರುತ್ತಿದೆ. ಬೆಂಗಳೂರು ನಗರದ ಜನಸಂಖ್ಯೆ ೧೯೪೩ರಲ್ಲಿ ೩ ಲಕ್ಷ ಇದ್ದರೆ ೧೯೮೮ರ ಹೊತ್ತಿಗೆ ೪೫ ಲಕ್ಷಕ್ಕೆ ಹೆಚ್ಚಿದೆ. ಇದರಲ್ಲಿ ಬೆಂಗಳೂರಿಗೆ ದಿನವೂ ಬಂದು ಹೋಗುವವರಲೆಕ್ಕ ಸೇರಿಲ್ಲ. ೨೦೦೦ ಎ.ಡಿ. ಹೊತ್ತಿಗೆ ಬೆಂಗಳೂರಿನ ಜನಸಂಖ್ಯೆ ೬೦-೬೫ ಲಕ್ಷಕ್ಕೂ ಹೆಚ್ಚಾಗಬಹುದೆಂಬ ಅಂದಾಜು ಇದೆ. ಇವತ್ತು ಇಡೀ ದೇಶದಲ್ಲಿ ಕಲ್ಕತ್ತ ಬಾಂಬೆ, ಡೆಲ್ಲಿ, ಮದ್ರಾಸ್ ಮುಂತಾದ ಪಟ್ಟಣಗಳು ಏನು ಬೆಳೆಯುತ್ತಾ ಇವೆ ಅದೇ ರೀತಿ ಬೆಂಗಳೂರು ಸಿಟಿ ಕೂಡ ಸಾಕಷ್ಟು Growing city in the Country. ೭೪ ಪರ್ಸೆಂಟ್ ಇದೆ. ಇಂತಹ ಒಂದು ಬೆಂಗಳೂರಿನಲ್ಲಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಏನಿದೆ ಇಲ್ಲಿ ಬರತಕ್ಕಂಥ ಪ್ಲಾನ್ ಕೂಡ ಬಹಳ ವ್ಯವಸ್ಥಿತವಾಗಿ ಆಗಬೇಕಾಗುತ್ತದೆ. ಮೊನ್ನೆ ನಾನು ಪ್ರಸ್ತಾಪ ಮಾಡಿದ ಹಾಗೆ ಈಗಾಗಲೇ ತಾವು ೧೬ ಸಾವಿರ ಸೈಟುಗಳನ್ನು ಕೊಟ್ಟಿದ್ದೀರಿ. ಪ್ರತಿ ವರ್ಷ ೭೫ ಸಾವಿರ ಸೈಟುಗಳನ್ನು ಕೊಡತಕ್ಕಂಥ ಕಾರ್ಯಕ್ರಮಗಳನ್ನು ತಾವು ಹಾಕಿಕೊಂಡಿದ್ದೀರಿ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ಬೆಂಗಳೂರು ನಗರದಲ್ಲಿ ಜನರಿಗೆ ಇರತಕ್ಕಂಥ ವಿಶೇಷವಾದಂಥ ಸಮಸ್ಯೆ ಅಂದರೆ ನೀರಿನ ಸಮಸ್ಯೆ. ಇವತ್ತು ನಾವು ಪ್ಲಾನ್ ಮಾಡುತ್ತಾ ಇರುವಾಗ (ಸೈಟುಗಳನ್ನು ಮಾಡುತ್ತಾ ಇರುವಾಗ) ಎಲ್ಲ ಜನರಿಗೆ ನೀರು ಕೊಡತಕ್ಕಂಥ ವ್ಯವಸ್ಥೆ ಮಾಡತಕ್ಕಂಥ ಜವಾಬ್ದಾರಿ ತಮ್ಮ ಮೇಲಿದೆ. ನಾನು ಮೊನ್ನೆ ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಡಿಮ್ಯಾಂಡ್ ಮೇಲೆ ಮಾತನಾಡತಕ್ಕಂಥ ಕಾಲದಲ್ಲಿ ಹೇಳಿದೆ ಕಾವೇರಿ ಫಸ್ಟ್ ಸ್ಟೇಜ್, ಸೆಕೆಂಡ್ ಸ್ಟೇಜ್ ಆಗಿದೆ. ೩ನೇ ಸ್ಟೇಜನ್ನು ನೀವು ಕಂಪ್ಲೀಟ್ ಮಾಡಬೇಕಾದರೆ ೨೧೦ ಕೋಟಿ ಬೇಕಾಗಿದೆ. ಅದು ೧೯೯೫ ಅಲ್ಲ ೨೦೦೦ ಎ.ಡಿ.ಗೂ ಕೂಡ ಬೆಂಗಳೂರು ವಾಟರ್ ಸಪ್ಲೈ ಈ ಸ್ಟೇಜ್ ಆಗತಕ್ಕಂಥ ಸ್ಥಿತಿಯಲ್ಲಿಲ್ಲ. Out of 210 crores you have Spent only 7 Crores. ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಏಕೆಂದರೆ, ಇದು ದೇಶದಲ್ಲಿ ೬ನೇ ಪಟ್ಟಣವಾಗಿದೆ. ಇಲ್ಲಿ ಲೋಯರ್ ಲೆವೆಲ್‌ನಿಂದ ಹೈಯರ್ ಲೆವೆಲ್‌ವರೆಗೆ ೧೫೦೦ ಅಡಿವರೆಗೆ ನೀವು ನೀರನ್ನು ಪಂಪ್ ಮಾಡಬೇಕಾಗುತ್ತದೆ, ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಇದು ಗೊತ್ತಿದೆ ಮತ್ತೆ ರಾಕ್ ಏರಿಯಾದಲ್ಲೂ ಕೂಡ ನೀರು ಬೀಳುತ್ತಾ ಇಲ್ಲ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಸೈಟ್ಸ್ ಮಾಡಿ ಹಂಚತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದೆ. ಈಗಲೂ ಕೂಡ you are coll cting the mony from them ನೀವು ಎಲ್ಲೆಲ್ಲಿ ಸೈಟ್ಸ್ ಕೊಡುತ್ತಿದ್ದೀರಿ ಅಲ್ಲಿ ೩ನೇ ಸ್ಟೇಜಿಗೂ ಕೂಡ ದುಡ್ಡು ಕಲೆಕ್ಟ್ ಮಾಡುತ್ತಿದ್ದೀರಿ. ಬೆಂಗಳೂರ ಡೆವಲಪ್‌ಮೆಂಟ್ ಅಥಾರಿಟಿಯಾಗಲಿ, ಕಾರ್ಪೊರೇಷನ್ ಆಗಲಿ, ಬೇರೆಯವರೂ ಕೂಡ ೩ನೇ ಸ್ಟೇಜ್‌ಗೆ ಹಣಬೇಕು ಎಂದು ವಸೂಲು ಮಾಡುತ್ತಾ ಇದ್ದಾರೆ. ಮತ್ತು ಸೈಟ್ಸ್ ಹಂಚತಕ್ಕಂಥ ಕಾಲದಲ್ಲಿ ಯಾರು ಸೈಟ್ಸ್ ತೆಗೆದುಕೊಳ್ಳತಕ್ಕ ಜನರು ಇದ್ದಾರೆ ಅ ಕಡೆಯಿಂದ ಕೂಡ ೩ನೇ ಸ್ಟೇಜಿಗೆ ತಾವು ಹಣ ತೆಗೆದುಕೊಳ್ಳುತ್ತಾ ಇದ್ದೀರಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಬಾಂಬೆಯಲ್ಲಿ ಏನು ಪರಿಸ್ಥಿತಿ ಇದೆಯೆಂದರೆ gravity is there ಅಲ್ಲಿ ಲೇಟೆಸ್ಟ್ ಆಗಿ ೫೭೦ ಕೋಟಿ ಬಲ್ಡಿಂಗ್ ವಾಟರ್ ಸಪ್ಲೈ ಸ್ಕೀಮನ್ನು ಅವರು ಮುಗಿಸಿದ್ದಾರೆ, ಇವತ್ತು ಮದ್ರಾಸಿನಲ್ಲಿ ತಾವು ನೋಡಿದ್ದೀರಿ. ಮದ್ರಾಸಿನಲ್ಲಿ ವಾಟರ್ ಸ್ಕೇರ್‌ಸಿಟಿ ಬಂದಾಗ ಅವರು ವಿಜಯವಾಡದಿಂದ ನೀರು ತರತಕ್ಕ ಯೋಜನೆ ಮಾಡಿದರು. ಬೇರೆ ಕಡೆಗೂ ಕೂಡ ಮಾಡುತ್ತಾ ಇದ್ದಾರೆ. ಮತ್ತೆ ಡೆಲ್ಲಿಗೆ, ಕಲ್ಕತ್ತಾಗೆ ಆ ಪ್ರಾಬ್ಲಂ ಇಲ್ಲ. ಇವತ್ತು ಇಂತಹ ಒಂದು ಪರಿಸ್ಥಿತಿಯಲ್ಲಿ ಅದಕ್ಕೋಸ್ಕರ ನಾವು ಹೇಳಿದೆವು. ಇದರ ಮೇಲೆ ನಿಯಂತ್ರಣ ಬೇಕು. ಮೆಟ್ರೋಪಾಲಿಟನ್ ಅಥಾರಿಟಿ ಬೇಕು ಎಂದು. ಇಂತಹ ಫಾಸ್ಟೆಸ್ಟ್ ಗ್ರೋಯಿಂಗ್ ಸಿಟಿಗೆ ಇವತ್ತು ಹೌಸಿಂಗ್ ಬೋರ್ಡ್ ಆಗಲಿ, ಬೆಂಗಳೂರು

ಡೆವಲಪ್‌ಮೆಂಟ್ ಅಥಾರಿಟಿಯಾಗಲಿ, ಟ್ರಾನ್ಸ್‌ಪೋರ್ಟ್ ಆಗಲಿ, ಪೋಲೀಸ್ ಇಲಾಖೆಯಾಗಲಿ, ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಆಗಲಿ, ಎಲ್ಲಾ ಡಿಪಾರ್ಟ್‌ಮೆಂಟ್‌ಗಳನ್ನೊಳಗೊಂಡಂತೆ ಇವತ್ತು ಮೆಟ್ರೋಪಾಲಿಟನ್ ಅಥಾರಿಟಿ ಆಗಬೇಕು. ಈಗಾಗಲೇ ಡೆಲ್ಲಿ, ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್ ಎಲ್ಲಾ ಕಡೆ ಆಗಿದೆ. ಅದು ಇಲ್ಲೂ ಕೂಡ ಆಗಬೇಕಾಗುತ್ತದೆ. ಇಲ್ಲೂ ಕೂಡ ತಾವು ಮಾಡಿದ್ದೀರಿ, ನಮ್ಮ ಕಾಲದಲ್ಲಿ ಅದು ಸ್ಟ್ಯಾಚುಟರಿ ಬಾಡಿ ಆಗಬೇಕು ಅದಕ್ಕೆ ಹೆಚ್ಚಿನ ಅಧಿಕಾರ ಕೊಡಬೇಕು ಎನ್ನತಕ್ಕಂಥ ರೀತಿಯಲ್ಲಿ ಬಿಲ್ ಕೂಡ ನಾವು ರೆಡಿ ಮಾಡಿದ್ದೆವು. ತಾವೂ ಕೂಡ ೧೯೮೩ರಲ್ಲಿ ಪ್ರಾರಂಭ ಮಾಡಿದಿರಿ, ಅಡ್ವೈಸರಿ(ಬಾಡಿ ಎಂದು ಆ ಅಡ್ವೈಸರಿ)ಬಾಡಿಯಲ್ಲಿ ಮುಖ್ಯ ಮಂತ್ರಿಗಳು ಅದಕ್ಕೆ ಅಧ್ಯಕ್ಷರಾಗಿದ್ದಾರೆ, ಆದರಿಂದ ನಡೆಯುವುದಿಲ್ಲ. ಇವತ್ತು ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ಆಗಲೀ (ಕಾರ್ಪೊರೇಷನ್ ಆಗಲೀ) ಇದೆಲ್ಲಾ ಒಳಗೊಂಡ ಮೆಟ್ರೊಪಾಲಿಟನ್ ಅಥಾರಿಟಿ ಇರಬೇಕು. ಇವತ್ತು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡು ಪ್ರತಿ ವರ್ಷ ೭೫ ಸಾವಿರ ಸೈಟುಗಳನ್ನು ಕೊಡತಕ್ಕಂಥಾದ್ದು ಎಂದು ಏನು ಮಾಡುತ್ತಿದ್ದೀರಿ ಅದರ ಬಗ್ಗೆ ವಿಶೇಷವಾದಂಥ ಚರ್ಚೆಯಾಗಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂಥ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡತಕ್ಕ ಕಾರ್ಯಕ್ರಮಗಳ ಬಗ್ಗೆ ತಾವು ವಿಚಾರಮಾಡಬೇಕಾಗುತ್ತದೆ. ಅದರ ಬಗ್ಗೆ ಏನೂ ಮಾಡುತ್ತಾ ಇಲ್ಲ. ಇವತ್ತು ಏನಾಗಿದೆಯೆಂದರೆ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಕೆಲವೇ ಜನರಿಗೆ ಸೈಟುಗಳನ್ನು ಹಂಚತಕ್ಕಂಥ ಮತ್ತು ಇವತ್ತಿನ ದಿವಸ ದೊಡ್ಡ ದೊಡ್ಡ ಲೋಕ್ಯಾಲಿಟಿಯಲ್ಲಿ ಲೇಔಟ್ ಫಾರಂ ಮಾಡಿ, ಯಾರು ಶ್ರೀಮಂತ ವರ್ಗದವರು ಬೆಂಗಳೂರಿಗೆ ಬಂದು ವಾಸ ಮಾಡಬೇಕು ಎಂದು ಇರುತ್ತಾರೆ ಅವರಿಗೆ ಎಲ್ಲಾ ರೀತಿಯ ಸೌಲಭ್ಯ ಒದಗಿಸತಕ್ಕಂಥ ಪರಿಸ್ಥಿತಿ ಇದೆ.

ಇಂಥ ಒಂದು ಪರಿಸ್ಥಿತಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಇದೆ. ಮುಖ್ಯ ಮಂತ್ರಿಗಳು ಗ್ರೀನ್‌ಬೆಲ್ಟ್ ಮೆಂಟೆಯಿನ್ ಮಾಡುತ್ತೇವೆಂದು ಹೇಳಿದ್ದರು. ಇವತ್ತು ಡೆಲ್ಲಿ ಮೆಟ್ರೋಪಾಲಿಟನ್ ಅಥಾರಿಟಿ ಯಾವ ರೀತಿ ಕಾಪಾಡಿಕೊಂಡು ಹೋಗಿದ್ದಾರೆನ್ನುವುದನ್ನು ತಾವು ಹೋಗಿ ನೋಡಬೇಕು. ಇವತ್ತು ಬೆಂಗಳೂರು ನಗರದಲ್ಲಿ ೭೬ ಸೊಸೈಟಿಗಳು ಇದ್ದು, ಅವುಗಳ ಮೂಲಕ ಜನರಿಗೆ ನಿವೇಶನ ಕೊಡಬೇಕೆಂಬ ಬೇಡಿಕೆ ಇದೆ. ಇದರ ಜೊತೆಗೆ ಬೆಂಗಳೂರು ಅಥಾರಿಟಿಯವರು ವರ್ಷಕ್ಕೆ ೭೫,೦೦೦ ನಿವೇಶನಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಪರಿಸ್ಥಿತಿ ಹೀಗಿರುವಾಗ ನೀವು ಯಾವ ರೀತಿಯಲ್ಲಿ ಗ್ರೀನ್ ಬೆಲ್ಟ್ ಕಾಪಾಡುತ್ತೀರಿ ? ಇವತ್ತು ಬೆಂಗಳೂರು ನಗರ ಯಾವ ರೀತಿ ಬೆಳೆಯುತ್ತಿದೆ. ಅದರ ವಿಸ್ತೀರ್ಣ ಏನಾಗುತ್ತಿದೆ ? ಬೆಂಗಳೂರು ನಗರದ ಆವರಣದಲ್ಲಿ ಯಾವ ಯಾವ ಹಳ್ಳಿಗಳು ಬರುತ್ತಿವೆ. ಇವೆಲ್ಲವನ್ನೂ ತಾವು ಯೋಚನೆ ಮಾಡಬೇಕು. ವಿಲೇಜ್ ಪಂಚಾಯಿತಿ ಆಕ್ಟ್‌ಗೆ ಒಳಕ್ಕೆ ತಿದ್ದುಪಡಿ ತಂದು, ವಿಲೇಜ್ ಪಂಚಾಯಿತಿ ಛೇರ್ಮನ್‌ರವರು ಕೂಡ ಇದರ ವ್ಯಾಪ್ತಿಯಲ್ಲಿ ಬರುವಂತೆ ಮಾಡಬೇಕೆಂಬ ಆಲೋಚನೆ ಆಗಿನ ಸರ್ಕಾರಕ್ಕೆ ಇತ್ತು, ಅದು ಎಲ್ಲಿಯವರೆಗೆ ಬಂದಿದೆಯೋ ಗೊತ್ತಿಲ್ಲ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇಂಥ ಸಮಸ್ಯೆಗಳ ಬಗ್ಗೆ ವಿಚಾರ ಮಾಡುವುದು ಒಳ್ಳೆಯದು ಮುಖ್ಯ ಮಂತ್ರಿಗಳು ಲಾಲ್ ಬಾಗಿನ ಗಾಜಿನ ಮನೆಯಲ್ಲಿ ೧೦,೦೦೦ ಸೈಟುಗಳನ್ನು ವಿತರಣೆ ಮಾಡುತ್ತಾ, ಇಷ್ಟು ದೊಡ್ಡ ಪ್ರಮಾಣದಲ್ಲಿ ಯಾವ ಸರ್ಕಾರವು ಮಾಡಿಲ್ಲವೆಂದು ಹೇಳಿದ್ದಾರೆ ೧೯೭೪ ರಿಂದ ೮೧ ರವರೆಗೆ ಮಾಡದೇ ಇರುವಂಥ ಒಂದು ಕೆಲಸವನ್ನು ನಾವು ಮಾಡಿದ್ದೇವೆಂದು ಹೇಳಿದ್ದಾರೆ. ೧೯೪೫ ರಿಂದ ೭೫ ರವರೆಗೆ ಸಿ.ಐ.ಟಿ.ಬಿ. ೬೪,೬೫೨ ಸೈಟುಗಳನ್ನು ಮತ್ತು ಬಿ.ಡಿ.ಎ. ಅಸ್ತಿತ್ವಕ್ಕೆ ಬಂದಮೇಲೆ ೧೯೭೫ ರಿಂದ ೮೮ ರವರೆಗೆ ೫೮,೪೧೬ ಸೈಟುಗಳನು ಹಂಚಲಾಗಿದೆ ಅಂದರೆ ೧೩ ವರ್ಷಗಳಲ್ಲಿ ಕೇವಲ ೪,೦೦೦ ಸೈಟುಗಳ ಅಂತರ ಇದೆ. ಮತ್ತೆ ೧೯೮೭–೮೮ರಲ್ಲಿ ೧೪,೮೮೫ ಸೈಟುಗಳನ್ನು ವಿತರಣೆ ಮಾಡಿದ್ದಾರೆ. ಇವಕ್ಕೆ ಡೀಮಾರ್ಕೇಷನ್ ಇಲ್ಲ. ಪಟ್ಟೆ ಇಲ್ಲ. ೫೦–೬೦ ಕೋಟಿ ರೂಪಾಯಿಗಳನ್ನು ಕಲೆಕ್ಟ ಮಾಡಿದ್ದಾರೆ. ಯಾರಿಗೆ ಎಲ್ಲಿ ಸೈಟು ಕೊಟ್ಟಿದ್ದಾರೆನ್ನುವುದು ಗೊತ್ತಾಗುತ್ತಿಲ್ಲ. ಸೈಟು ಸಿಕ್ಕಿರತಕ್ಕವರು ಎಲ್ಲಾ ಕಡೆ ಹೋಗಿ ಹುಡುಕುತ್ತಿದ್ದಾರೆ. ಇಂಥ ಒಂದು ಪರಿಸ್ಥಿತಿ ಇದೆ. ನಾನು ಇದನ್ನು ಎಕ್ಸಾಜಿರೇಷನ್ ಮಾಡಿ ಹೇಳುತ್ತಿಲ್ಲ. ಬ್ಯಾಂಕಿಗೆ ಹಣ ಕಟ್ಟಬೇಕು. ಅರ್ನೆಸ್ಟ್ ಮನಿ ಡಿಪಾಸಿಟ್ ಮಾಡಿದಾರೆ. ೫೦–೬೦ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ. ಎಷ್ಟೋ ಜನ ಬಡವರು ಒಡವೆಗಳನ್ನು ಮಾರಿ, ಸಾಮಾನುಗಳನ್ನು ಮಾರಿ

ಹಣಕಟ್ಟಿದ್ದಾರೆ. ಆದರೆ, ಪ್ರತಿ ವರ್ಷ ೭೫,೦೦೦ ಸೈಟುಗಳನ್ನು ಕೊಡುತ್ತೇವೆಂದು ಏನು ವಾಗ್ದಾನ ಮಾಡಿದ್ದೀರಿ, ಅದು ಆಗತಕ್ಕ ರೀತಿಯಲ್ಲಿ ಇಲ್ಲ. ಇವತ್ತು ಬೆಂಗಳೂರು ನಗರದ ಜನರಿಗೆ ನಿವೇಶನ ಕೊಡಬೇಕಾದರೆ, ಸುಮಾರು ೧೪ ೧೫೪ ಹೆಕ್ಟೇರ್ ಭೂಮಿಯನ್ನು ಅಕ್ವೈರ್ ಭೂಮಿಯನ್ನು ಅಕ್ವೈರ್ ಮಾಡಬೇಕಾಗಿದೆ ಇದರ ಬೆಲೆ ೬೭೨ ೬೮ ಕೋಟಿ ರೂಪಾಯಿಗಳಾಗುತ್ತದೆ. ಇಷ್ಟು ಜಮೀನನ್ನು ಅಕ್ವೈರ್ ಮಾಡಿದರೆ, ೧,೬೬,೪೬೪ ಸೈಟುಗಳನ್ನು ಹಂಚುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ಕೆಲಸವನ್ನು ೧೯೯೫ನೇ ಇಸವಿಗೆ ಮುಗಿಸಬೇಕೆಂದು ಲೆಕ್ಕ ಹಾಕಿದ್ದೀರಿ. ಇದು ನಿಮ್ಮ ಕೈಲಿ ಆಗಲಾರದಂಥ ಕೆಲಸ. ಇಂಥ ಕೆಲಸಕ್ಕೆ ನೀವು ಕೈಹಾಕಿದರೆ ತೊಂದರೆಯಾಗುತ್ತದೆ. ವಸ್ತುಸ್ಥಿತಿ ಹೀಗಿರುವುದರಿಂದ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಜನಗಳಿಗೆ ಯಾವುದೇರೀತಿಯ ಸೌಲಭ್ಯಗಳನ್ನು ಕೊಡುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ೧೯೮೪ರಲ್ಲಿ ಗ್ರೀನ್ ಬೆಲ್ಟ್ ಮಾಡುತ್ತೇವೆಂದೂ, ಯಾವುದೇ ರೀತಿಯಲ್ಲಿಯೂ ಸೊಸೈಟಿಗಳಿಗೆ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದರು. ಒಂದು ಕಡೆ ಗ್ರೀನ್ ಬೆಲ್ಟ್ ಮಾಡುತ್ತೇವೆಂದೂ, ಅದನ್ನು ಉಳಿಸಿಕೊಂಡು ಹೋಗುತ್ತೇವೆಂದು ಹೇಳಿದ್ದಾರೆ. ಆಗ ಆ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಕೂಡ ಹೇಳಿದ್ದಾರೆ. ಇದಕ್ಕೆ ಮೂರು ಜನರ ಕಮಿಟಿ ಮಾಡಿದ್ದೀರಿ. ರೆವಿನ್ಯೂ ಕಮಿಷನರ್ ಅವರು, ಬೆಂಗಳೂರು ಡೆಪ್ಯುಟಿ ಕಮಿಷನರ್ ಅವರು ಮತ್ತು ಕೋ-ಆಪರೇಟೀವ್ ಸೊಸೈಟೀಸ್ ರಿಜಿಸ್ಟ್ರಾರ್ ಅವರು ಅದರಲ್ಲಿದ್ದಾರೆ. ಮತ್ತೆ ಸಬ್ ಕಮಿಟಿ ಮಾಡಿದ್ದೀರಿ. ಅದರಲ್ಲಿ ಜಾಯಿಂಟ್ ರಿಜಿಸ್ಟ್ರಾರ್ ಮುಂತಾದವರನ್ನು ಹಾಕಿದ್ದಾರೆ. ಇವತ್ತು ೨೬ ಸೊಸೈಟಿಗಳಲ್ಲಿ ೩೦೦-೪೦೦ ಕೋಟಿ ರೂಪಾಯಿ ಹಣ ಇನ ವಾಲ್ವ್ ಆಗಿದೆ. ೨೬ ಹೌಸಿಂಗ್ ಸೊಸೈಟಿಯವರು ಏನು ಅಪ್ಲಿಕೇಷನ್ ಹಾಕಿದ್ದಾರೆ ಅವರಿಗೆ ಯಾವ ರೀತಿ ಜಮೀನು ಕೊಡಬೇಕು, ಯಾವ ನಾರ್ಮ್ಸ್ ಪ್ರಕಾರ ಕೊಡಬೇಕು ಎಂಬ ವಿಚಾರ ಇನ್ನೂ ನಿಮ್ಮ ಹತ್ತಿರ ಪೆಂಡಿಂಗ್ ಇದೆ. ಇದರಿಂದ ಇವತ್ತು ಬಿ.ಡಿ.ಎ. ಸೋರ್ಸ್ ಆಫ್ ಕರಪ್ಷನ್ ಆಗಿದೆ ಎಂದು ಚಾರ್ಜ್ ಮಾಡಬೇಕಾಗುತ್ತದೆ. ೨೬ ಹೌಸಿಂಗ್ ಸೊಸೈಟಿಯ ಜನರು ೪(೧) ನೋಟಿಫಿಕೇಷನ್ ಆಗಿದೆ, ಇಷ್ಟು ಎಕರೆ ಜಮೀನು ತೆಗೆದುಕೊಳ್ಳುತ್ತಿದ್ದೇವೆ, ಸೈಟು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಮಾನ್ಯ ವೆಂಕಟರಾಮಯ್ಯನವರು ಈ ಬಗ್ಗೆ ಪ್ರಶ್ನೆ ಹಾಕಿದ್ದರು. ಆಗ ಬಸವಲಿಂಗಪ್ಪನವರೂ ವಿಚಾರ ಎತ್ತಿದ್ದರು. ಆಗ ತಾವು ಏನು ಹೇಳಿದಿರಿ ಅಂದರೆ ಇಲ್ಲಿಯವರೆಗೆ ಸಂಘ ಸಂಸ್ಥೆಗಳಿಗೆ ಕೊಟ್ಟಿರುವುದನ್ನು ಹೇಳಿ ಟೆಲಿಕಾಂ ಹೌಸಿಂಗ್ ಸೊಸೈಟಿಗೆ ಕೊಟ್ಟಿದ್ದನ್ನು ಹೇಳಿದಿರಿ. ಅದಕ್ಕೆ ೧೨೩೪ ಸೈಟುಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್.—ಕೊಟ್ಟಿಲ್ಲ. ಇನ್ನೂ ಕೊಡಬೇಕಾಗಿದೆ ಎಂದು ಹೇಳಿದ್ದೇವೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ಇಲ್ಲ, ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಷನ್ ಇದೆ, ಟೆಲಿಕಾಂ ಹೌಸಿಂಗ್ ಸೊಸೈಟಿ ಇದೆ. ಇಂಥದ್ದಕ್ಕೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಅದಕ್ಕೆ ನಾನೇನೂ ಹೇಳುವುದಿಲ್ಲ. ಆದರೆ ೨೬ ಸೊಸೈಟಿಗಳು ಈಗ ಅರ್ಜಿ ಹಾಕಿವೆ. ಅರ್ಜಿ ಹಾಕಿರುವ ಸೊಸೈಟಿಯವರು ಬೇರೆ ಕಡೆ ಲೇ ಔಟ್ ಫಾರಮ್ ಮಾಡಿ, ಲ್ಯಾಂಡ್ ಅಕ್ವೈರ್ ಮಾಡಿದ್ದೇವೆ, ತಮಗೆ ಸೈಟುಗಳನ್ನು ಕೊಡುತ್ತಿದ್ದೇವೆ ಎಂದು ಜನರಿಂದ ಸಾಕಷ್ಟು ಹಣ ಕಲೆಕ್ಟ್ ಮಾಡುತ್ತಿದ್ದಾರೆ. ಮೂರು ನಾಲ್ಕು ನೂರು ಕೋಟಿ ರೂಪಾಯಿ ಕಲೆಕ್ಟ್ ಮಾಡಿದ್ದಾರೆ ಗ್ರೀನ್ ಬೆಲ್ಟ್ ಎಲ್ಲಿಯವರೆಗಿದೆ ? ಇದನ್ನು ನಿಗದಿಮಾಡಬೇಕಾಗುತ್ತದೆ. ಇವತ್ತು ಇಂಟೆಗ್ರೇಟೆಡ್ ಅರ್ಬನ್ ಡೆವಲಪ್ಮೆಂಟ್ ಪ್ಲಾನ್ ಇದೆ. ಎಲ್ಲೆಲ್ಲಿ ದೊಡ್ಡದೊಡ್ಡ ಸಿಟಿಗಳು ಬರುತ್ತವೆ ಅದು ಬೆಳೆಯಬಾರದು, ಅದರ ಪಕ್ಕದಲ್ಲಿ ಪಟ್ಟಣ ಬೆಳೆಯಬೇಕು ಎಂದು ಐ.ಯು.ಡಿ.ಪಿ. ಕಾರ್ಯಕ್ರಮ ಮಾಡಿದೆ. ಅದು ಚನ್ನಪಟ್ಟಣದಲ್ಲಿ, ರಾಮನಗರದಲ್ಲಿ ಇದೆ. ಅದನ್ನು ಮಾಡಿ ಬೆಂಗಳೂರು ನಗರಕ್ಕೆ ಹೆಚ್ಚು ಜನರು ಬರಲಾರದಂಥ ರೀತಿಯಲ್ಲಿ ವ್ಯವಸ್ಥೆ ಮಾಡಬೇಕಾಗಿದೆ. ಆದಕ್ಕಾಗಿ ಇವತ್ತಿನ ದಿವಸ ತ್ರೀ ಮ್ಯಾನ್ ಕಮಿಟಿ ಎಗ್ಸಾಮಿನ್ ಮಾಡುತ್ತಿದೆ ಎಂದು ಸದನದಲ್ಲಿ ಪ್ರಶ್ನೆ ಬಂದಾಗ ಹೇಳಿದ್ದಾರೆ. ಆದ್ದರಿಂದ ಇವತ್ತು, ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸದನದಲ್ಲಿ ಕೊಡಬೇಕು. ಯಾರು ಅವರ ಮೇಲೆ ವಿಶ್ವಾಸವನ್ನು ಹೆಚ್ಚಿನ ರೀತಿಯಲ್ಲಿ ಇಟ್ಟಿದ್ದಾರೆ, ಹೌಸಿಂಗ್ ಸೊಸೈಟಿಯಿಂದ ಸೈಟ್ ಸಿಗುತ್ತದೆಂದು ನಂಬಿಕೊಂಡಿದ್ದಾರೆ ಅವರಿಗೆ ಯಾವ ರೀತಿ ವ್ಯವಸ್ಥೆ ಮಾಡುತ್ತೀರಿ ? ಬೆಂಗಳೂರು ಡೆವಲಪ್ಮೆಂಟ್ ಅಥಾರಿಟಿಯವರು ಎಷ್ಟು ಜನರಿಗೆ ನೀರು ಕೊಡುವುದಕ್ಕೆ ಇತರ ಸೌಲಭ್ಯವನ್ನು ಕೊಡುವುದಕ್ಕಾಗುತ್ತದೋ ಅಷ್ಟೇ ಜನರಿಗೆ ಸೈಟುಗಳನ್ನು ಮಾಡಬೇಕು. ಈ ರೀತಿ ಸೈಟು

ಕೊಡುತ್ತಾ ಹೋದರೆ ಒಂದು ದಿನಕ್ಕೆ ಒಬ್ಬರಿಗೆ ೬ ಗ್ಯಾಲನ್ ನೀರೂ ಕೂಡ ಸಿಗದಂಥ ದಿನ ಬರುತ್ತದೆ. ನ್ಯಾಷನಲ್ ಆವರೇಜ್ ಇರತಕ್ಕದ್ದು ೪೫ ಗ್ಯಾಲನ್‌ಗಳು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾಳೆ ಬಾಟ್ಲಿಂಗ್ ಪ್ರಾಜೆಕ್ಟ್ ತೆಗೆದು ಬಾಟಲ್‌ಗಳಲ್ಲಿ ನೀರು ಕೊಡುತ್ತಾರೆ. ಹೊಸ ಬಡಾವಣೆಗಳಲ್ಲಿ ಆ ರೀತಿ ಮಾಡುತ್ತಾರೆ.

ಶ್ರೀ ಎಂ. ಪಿ. ಪ್ರಕಾಶ್.—ರಾಜೀವ್ ಗಾಂಧಿ ಸರ್ಕಾರ ಬಂದಾಗ ನೋಡೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಮ್ಮ ಸರ್ಕಾರದ ಉದ್ದೇಶ ಅದು.

ಶ್ರೀ ಎಂ. ಪಿ. ಪ್ರಕಾಶ್.—ಎಲ್ಲಾ ಭ್ರಷ್ಟಾಚಾರಗಳ ಮೂಲ ಸ್ವರೂಪ ರಾಜೀವ್ ಗಾಂಧಿಯವರಿರುವುದರಿಂದ ಅವರು ಇಲ್ಲಿ ಅಧಿಕಾರಕ್ಕೆ ಬಂದರೆ ಆ ಯೋಚನೆ ಮಾಡಬಹುದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇಲ್ಲಿ ಶುರುವಾಗಿದೆಯಲ್ಲ. ಆಮೇಲೆ ನೋಡೋಣ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ನಾನು ಮಂತ್ರಿಯಾಗಿದ್ದಾಗ ಬೆಂಗಳೂರು ಡೆವಲಪ್ಮೆಂಟ್ ಅಥಾರಿಟಿ ನನಗೆ ನೇರವಾಗಿ ಬರುತ್ತಿರಲಿಲ್ಲ. ಚೀಫ್ ಮಿನಿಸ್ಟರ್‌ಗೆ ಬರುತ್ತಿತ್ತು. ಆಗ ನಾನು ಅಧಿಕಾರಿಗಳಿಗೆ ಹೇಳಿದ್ದೆ. ಸಿಕ್ಕಾಪಟ್ಟೆ ಲೇ ಔಟ್ ಮಾಡಿ ಸೈಟುಗಳನ್ನು ಫಾರ್ಮೇಷನ್ ಮಾಡಿದರೆ ಕಷ್ಟವಾಗುತ್ತದೆ, ಈಗ ಇದ್ದಂಥ ಜನರಿಗೇ ನೀರು ಕೊಡತಕ್ಕ ಪರಿಸ್ಥಿತಿ ಇಲ್ಲ ಪರ್ ಕ್ಯಾಪಿಟಾ ೮–೧೦ ಗ್ಯಾಲನ್ ಕೂಡ ನೀರು ಕೊಡುವುದಕ್ಕಾಗುತ್ತಿಲ್ಲ, ಬೇಸಿಗೆ ಕಾಲದಲ್ಲಿ ಪರಿಸ್ಥಿತಿ ಇನ್ನೂ ಕಷ್ಟವಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಸೈಟ್ ಫಾರ್ಮೇಷನ್ ಮಾಡಬೇಕು ಎಂದು ಹೇಳಿದ್ದೆ.

೫–೩೦ ಪಿ. ಎಂ.

ಪ್ರತಿವರ್ಷ ೧.೬೬ ಲಕ್ಷ ಸೈಟ್ಸ್‌ನ್ನು ಕೊಡುವುದಕ್ಕೆ ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ, ಆದರೆ ಅದಕ್ಕೆ ನೀರನ್ನೂ ಕೂಡ ಕೊಡತಕ್ಕ ಒಂದು ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಬೇಕು. ನೀವು ಈಗಾಗಲೇ ಹಣವನ್ನು ಕಲೆಕ್ಟ್ ಮಾಡಿದ್ದೀರಿ. ಎನ್. ಆರ್. ಐ. ಸ್ಕೀಂ ಬಗ್ಗೆ ಹೇಳುವುದಾದರೆ ಮೊನ್ನೆ ತಾವು ಹೇಳಿದಿರಿ, ನಾವು ಯಾರಿಗೂ ನಿವೇಶನ ಕೊಟ್ಟಿಲ್ಲ ಎಂದು. ಮಾನ್ಯ ಮುಖ್ಯ ಮಂತ್ರಿಗಳು ವಿದೇಶ ಪ್ರವಾಸ ಹೋಗಿದ್ದಾರೆ, ಮಾನ್ಯ ಜೆ. ಹೆಚ್. ಪಟೇಲ್‌ರವರೂ ಹೋಗಿದ್ದಾರೆ. ತಾವು ಇನ್ನೂ ಹೋಗಿಲ್ಲ. ಆದ್ದರಿಂದ ತಾವು ಏನು ವಾಗ್ದಾನ ಮಾಡಿದ್ದೀರೆಂದು ನಾನು ಕೇಳುವುದಕ್ಕೆ ಹೋಗುವುದಿಲ್ಲ. ಹೊರದೇಶಕ್ಕೆ ಹೋದಾಗ ಆ ಜನರಿಗೆ ನಾವು ಇಲ್ಲಿ ಸೈಟ್ಸ್ ಕೊಡುತ್ತೇವೆಂದು ಅಲ್ಲಿ ಎಷ್ಟು ಜನರಿಗೆ ವಾಗ್ದಾನ ಮಾಡಿಬಂದಿದ್ದಾರೆ? ಗ್ರೂಪ್ ಹೌಸಿಂಗ್ ಸ್ಕೀಂಗೆ ಸಂಬಂಧಪಟ್ಟಂತೆ ಎಷ್ಟು ಮನೆಗಳನ್ನು ಕಟ್ಟಿಸಿದ್ದೀರಿ? ಎಷ್ಟು ಮನೆಗಳನ್ನು ಅಲಾಟ್ ಮಾಡಿದ್ದೀರಿ? ಇವತ್ತು ತಮ್ಮ ಪರ್‌ಫಾರ್ಮೆನ್ಸ್ ಬಜೆಟ್‌ನ್ನು ಏನು ಕೊಟ್ಟಿದ್ದೀರಿ ಇದರಲ್ಲಿ ಎಲ್ಲ ವಿವರಗಳೂ ಇರಬೇಕಾಗಿತ್ತು. ಬಿ. ಡಿ. ಎ. ಬಗ್ಗೆ ಸ್ಪಷ್ಟವಾಗಿ, ಸವಿಸ್ತಾರವಾಗಿ ನೀವು ಹೇಳಬೇಕಾಗಿತ್ತು. ಇವತ್ತು ನಿಮ್ಮ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಇಂಥ ಒಂದು ದೊಡ್ಡ ಸಂಸ್ಥೆಯಾದ ಬಿ. ಡಿ. ಎ. ನಲ್ಲಿ ನಡೆಯುತಕ್ಕ ಕೋಟ್ಯಾಂತರ ರೂಪಾಯಿಗಳ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಎಲ್ಲ ವಿವರಗಳನ್ನೂ ಕೊಡಬೇಕಾಗಿತ್ತು. ಸನ್ಮಾನ್ಯ ಸದಸ್ಯರುಗಳಿಗೆ ಮಾಹಿತಿಗಳನ್ನು ಒದಗಿಸಿಕೊಡಬೇಕಾಗಿತ್ತು. ಆದರೆ ಈ ಕೆಲಸವನ್ನು ನೀವು ಮಾಡಿಲ್ಲ. ದಯವಿಟ್ಟು ಆ ಮಾಹಿತಿಗಳನ್ನು ಕೊಡಬೇಕು. ಇವತ್ತು ರೆವಿನ್ಯೂ ಸೈಟುಗಳನ್ನು ೧೯೮೬ ರಲ್ಲಿ ರೆಗ್ಯುಲರೈಸ್ ಮಾಡಿದ್ದೀರಿ. ಬೆಂಗಳೂರು ನಗರದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಇದನ್ನು ನಿಯಂತ್ರಣ ಮಾಡದಿದ್ದರೆ ಮತ್ತೆ ಹಿಂದಿನ ರೀತಿಯಂತೆಯೇ ಅಂದರೆ ೧೯೮೬ ರಲ್ಲಿ ಏನು ರೆಗ್ಯುಲರೈಸೇಷನ್ ಮಾಡಿದ್ದೀರಿ ಅದೇ ರೀತಿ ಮಾಡಬೇಕಾಗುತ್ತದೆ. ನೀವು ಈಗಾಗಲೇ ರೆಗ್ಯುಲರೈಸ್ ಮಾಡಿದ್ದರೂ ಮತ್ತೆ ಮನೆಗಳು ಬರುತ್ತಲೇ ಇವೆ. ಹಿಂದೆ ಸಂಜಯಗಾಂಧಿಯವರು ತುರ್ಕ್‌ಮನ್‌ಗೇಟ್‌ನಲ್ಲಿ ಮಾಡಿದರು. ಬೇರೆಕಡೆ ಮಾಡಿದರು. ೧೯೮೦ರಲ್ಲಿ ಮಾನ್ಯ ಚಂದ್ರಶೇಖರ್‌ರವರು ಮಂತ್ರಿಗಳಾಗಿದ್ದರು. ಅವರು ಗುಲ್ಬರ್ಗಾಕ್ಕೆ ಪ್ರವಾಸ ಹೋಗಿದ್ದಾಗ ಇಲ್ಲಿ ಬುಲ್ಡೋಜಿಂಗ್ ಕಾರ್ಯ ನಡೆಯಿತು. ಈಗಲೂ ನಡೆಯುತ್ತಿದೆ. ನಾನು ಹಿಂದೆ ಇದಕ್ಕೆ ಅಂದರೆ ಈ ಖಾತೆಗೆ ಸಂಬಂಧಪಟ್ಟ ಮಂತ್ರಿಯಾಗಿದ್ದಾಗ ಇಂಥ ಕೆಲಸ ಮಾಡುವುದಕ್ಕೆ ಹೋಗಲಿಲ್ಲ. ತಮಗೂ ಗೊತ್ತಿರುವಂತೆ ತಿಮ್ಮೇಗೌಡರು ಬಂದು ಹೋದರು, ಮಾನ್ಯ ಕೃಷ್ಣಯ್ಯರ್

ರವರು ಬಂದುಹೋದರು, ಯಾರ್ಯಾರ ಕಾಲದಲ್ಲಿ ಏನೇನು ಆಯಿತೆಂಬುದನ್ನು ತಾವು ತಿಳಿದುಕೊಂಡಿರಬಹುದು. ಬಿ.ಡಿ.ಎ. ವಿಚಾರದಲ್ಲಿ ತಾವು ನೇರವಾಗಿ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕಾಗುತ್ತದೆ. ಸ್ಲಂನಲ್ಲಿರತಕ್ಕ ಜನರಿಗೆ ಸೈಟುಗಳನ್ನು ಕೊಡಬೇಕು. ನಂದಿನಿ ಲೇಔಟ್‌ನಲ್ಲಿ ನಾವು ಡಿಮಾರ್ಕೇಷನ್ ಮಾಡಲಿಕ್ಕೆ ಹೋದಾಗ ಮಾನ್ಯ ದೇವರಾಜ ಅರಸ್‌ರವರು ವಿರೋಧಪಕ್ಷದ ನಾಯಕರಾಗಿದ್ದಾಗ ಇಲ್ಲಿ ಒಂದು ನಿಲುವಳಿ ಸೂಚನೆಯನ್ನು ತಂದರು. ಅದಕ್ಕೆ ನಾನು ಮಂತ್ರಿಯಾಗಿ ಉತ್ತರವನ್ನು ಕೊಟ್ಟೆ. ನೀವು ಈ ರೀತಿ ಮಾಡುತ್ತಿದ್ದೀರಿ, ಇದು ಅನ್ಯಾಯ ಎಂದು ಈ ಸದನದಲ್ಲಿ ಅವರು ಹಾಹಾಕಾರವನ್ನು ಮಾಡಿದರು. ಎಲ್ಲ ಕಡೆಯಲ್ಲೂ ಆಯಿತು. ಇದು ತಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ನಂದಿನಿ ಲೇಔಟ್‌ನ ವಿಚಾರದಲ್ಲಿ ಮಾನ್ಯ ಪಂಪಾಪತಿಯವರು ಪ್ರಸ್ತಾಪ ಮಾಡಿದರು. ಅಲ್ಲಿ ಸ್ಲಂನಲ್ಲಿರುವವರು ಕೆಲವರು ದುಡ್ಡನ್ನೂ ಕೂಡ ವಸೂಲ್ಮಾಡಿದ್ದಾರೆಂದು ಹೊಡೆಯಲಿಕ್ಕೆ ಹೋದರು. ಇದರ ಬಗ್ಗೆ ತನಿಖೆ ಆಗಬೇಕು ಎಂದು ಹೇಳಿದರು. ಇವತ್ತು ಬುಲ್ಡೋಜರ್‌ನ್ನು ಉಪಯೋಗಿಸದೇ ಅಲ್ಲಿರತಕ್ಕ ಜನರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಜನರಿಗೆ ರಕ್ಷಣೆ ಕೊಡಬೇಕು. ಇದರ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಮಾತನಾಡುವವರಿದ್ದಾರೆ.

ಇನ್ನು ಕೊನೆಯದಾಗಿ ಹೇಳುವುದಾದರೆ, ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ತರಕಾರಿಯನ್ನು ಮಾರಾಟ ಮಾಡತಕ್ಕ ಜನರು ಒಂದು ಅಸೋಸಿಯೇಷನ್ನು ಮಾಡಿಕೊಂಡಿದ್ದಾರೆ. ಅವರಿಗೆ ಮಡಿವಾಳದಲ್ಲಿ ೨೫ ಎಕರೆ ಜಮೀನನ್ನು ಕೋಲ್ಡ್ ಸ್ಟೋರೇಜ್ ನಿರ್ಮಾಣ ಮಾಡುವ ಸಲುವಾಗಿ ಕೇಳುತ್ತಿದ್ದಾರೆ. ಅದನ್ನು ಅವರಿಗೆ ಕೊಡಬೇಕು, ಗ್ರೀನ್‌ಬೆಲ್ಟನ್ನು ಉಳಿಸಿಕೊಳ್ಳತಕ್ಕ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ತಾವು ಕೊಡಬೇಕು. ಸೊಸೈಟೀಸ್ ಬಗ್ಗೆ ಶ್ರೀಮನ್ಯಾನ್ ಕಮಿಟಿ ಏನಿದೆ ಅದು ಸರ್ಕಾರದ ಧೋರಣೆಯ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಟ್ಟಿರುವುದರಿಂದ ಇದರ ಬಗ್ಗೆ ತಾವು ಏನು ಮಾಡುತ್ತೀರೆಂಬುದನ್ನು ಹೇಳಬೇಕು. ಈ ವ್ಯವಹಾರದ ಬಗ್ಗೆ ಏನಾಗುತ್ತಿದೆ, ಜನರು ಏನು ನಿರೀಕ್ಷಣೆ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಮಾನ್ಯ ಸಚಿವರಿಂದ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಬಿ. ಡಿ. ಎ. ನಲ್ಲಿ ಸೈಟ್ ಕೊಡತಕ್ಕ ವಿಚಾರದಲ್ಲಿ, ನೀರು ಸರಬರಾಜು ವಿಚಾರದಲ್ಲಿ ಅಥವಾ ಇನ್ನೂ ಬೇರೆ ವಿಚಾರದಲ್ಲಿ ಏನು ಮಾಡಬೇಕೆಂದು ಮೆಟ್ರೋಪಾಲಿಟನ್ ಅಥಾರಿಟಿ ಸ್ಟ್ಯಾಚುಟರಿ ಬಾಡಿ ಮಾಡಿ ಅದು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ ಈವತ್ತಿನ ದಿವಸ ದೊಡ್ಡ ದೊಡ್ಡ ಇಲಾಖೆಯ ಬೇಡಿಕೆಗಳು ಇದೆ. ವೈದ್ಯಕೀಯ ಸೇವೆ, ಕುಟುಂಬ ಕಲ್ಯಾಣ, ಜನಾರೋಗ್ಯ ಇವೇ ಮುಂತಾದವು. ಮಾನ್ಯ ರಾಚಯ್ಯನವರು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆಂದು ತಿಳಿದುಕೊಂಡಿದ್ದೇವೆ. ಕಾರಣವೇನೆಂದರೆ ಅವರ ಮೇಲೆ ದೂರು ಯಾವುದು ಬಂದಿಲ್ಲ. ಏತಕ್ಕೆ ಬಂದಿಲ್ಲವೆಂದರೆ ಅವರು ಹೇಗಿದ್ದಾರೋ ಹಾಗೆಯೇ ಇದ್ದಾರೆ. ಹಾಗೆಯೇ ಅವರ ಇಲಾಖೆಯು ಅಷ್ಟೇ. ಅದನ್ನು ಬದಲಾವಣೆ ಮಾಡುವುದಕ್ಕೆ, ಸ್ವಚ್ಛವಾಗಿ ಸರಿಯಾಗಿ ಮಾಡತಕ್ಕಂಥದ್ದಕ್ಕೆ ಅವರು ಏನು ಪ್ರಯತ್ನ ಮಾಡಲಿಲ್ಲವೆಂದು ಕಾಣುತ್ತದೆ. ಮೈಸೂರಿನಲ್ಲಿರುವ ಕೆ. ಆರ್. ಆಸ್ಪತ್ರೆಯ ಬಗ್ಗೆ ಮೊನ್ನೆ ವಿಚಾರ ಬಂದಾಗ ೨೦ ವರ್ಷಗಳಿಂದಲೂ ಅದು ಹಾಗೆಯೇ ಇದೆ. ಹಿಂದೆ ಏನು ವ್ಯವಸ್ಥೆ ಮಾಡಿದರೋ ಅದೇ ವ್ಯವಸ್ಥೆ ಈಗಲೂ ಕೂಡ ಇದೆ. ಅದಕ್ಕೆ ಕೇಳಿದರೆ ಹಣ ಎಲ್ಲಿದೆ, ಹಣ ಬಂದರೆ ಮಾಡುತ್ತೇವೆಂದು ಉತ್ತರ ಕೊಡುತ್ತಾರೆ. ಎಲ್ಲ ಕಡೆ ಇದೇ ವ್ಯವಸ್ಥೆ ನಡೆಯುತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಒಳ್ಳೆಯವರಿದ್ದಾರೆ, ಆದರೆ ಹಣವಿಲ್ಲವೆಂದು ಎಲ್ಲ ಕಾರ್ಯಕ್ರಮಗಳನ್ನು ಮುಂದೂಡಿಕೊಂಡೇ ಬರುತ್ತಿದ್ದಾರೆ. ಇದರ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬೇಕಾಗಿದೆ. ಮಲೆನಾಡಿನಲ್ಲಿ ಮಲೆನಾಡು ಮೆಡಿಕಲ್ ಕಾಲೇಜನ್ನು ತೆರೆಯಬೇಕೆಂದು ಅವತ್ತಿನಿಂದ ಈವತ್ತಿನವರೆಗೂ ಕೇಳುತ್ತಲೇ ಇದ್ದಾರೆ. ೧೦–೨೦ ವರ್ಷಗಳಿಂದಲೂ ಕೇಳುತ್ತಿದ್ದಾರೆ, ಯಾವಾಗ ಕೊಡುತ್ತಾರೋ ಗೊತ್ತಿಲ್ಲ.

ಎರಡನೇ ವಿಚಾರವೇನೆಂದರೆ ನನ್ನ ತಾಲ್ಲೂಕಿನ ಬಗ್ಗೆ ಹೇಳುತ್ತೇನೆ. ಇಲಾಖೆಯ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ತಾಲ್ಲೂಕಿಗೆ ಪ್ರೈಮರಿ ಹೆಲ್ತ್ ಸೆಂಟರನ್ನು ಕೊಡಬೇಕೆಂದು

ಕೇಳಿದ್ದೆವು. ಬೆಂಗಳೂರು ಉತ್ತರ ತಾಲ್ಲೂಕಿಗೆ ಕೊಡುತ್ತೇವೆಂದು ತೀರ್ಮಾನ ಮಾಡಿದ್ದಾರೆ. ದಯಮಾಡಿಟ್ಟು ಅದನ್ನು ಕೂಡಲೇ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಕಾರ್ಮಿಕ ಇಲಾಖೆಯ ಬಗ್ಗೆ ಹೇಳುವುದಾದರೆ, ಇದು ಒಂದು ಬಹಳ ಒಳ್ಳೆಯ ಇಲಾಖೆ. ಬಡ ಜನರಿಗೆ ಸಹಾಯ ಮಾಡತಕ್ಕಂಥ ಇಲಾಖೆ. ಆದರೆ ಜನತೆ ಯಾರು ಸಮಾಜದಲ್ಲಿ ಬಡವರು ಇದ್ದಾರೆ, ಅಂಥವರಿಗೆ ಯಾವ ರೀತಿ ಕೆಲಸವನ್ನು, ಹುದ್ದೆಗಳನ್ನು ಕೊಡಿಸಬೇಕು ಎನ್ನುವ ಬಗ್ಗೆ ಅಂಥ ಕಡೆ ಗಮನ ಹರಿಸಬೇಕು. ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂಥವರಿಗೆ ತಿಂಗಳಿಗೆ ಒಂದು ಸಾರಿ ಸಂಬಳ ಬರುತ್ತದೆ, ಸಂಬಳ ಪಡೆತಕ್ಕಂಥವರು ತಿಂಗಳು ತಿಂಗಳು ಬೇಡಿಕೆಯನ್ನು ಇಡತಕ್ಕಂಥದ್ದು ಇದ್ದೇ ಇರುತ್ತದೆ. ಪರಿಹಾರವನ್ನು ಕೊಡಬೇಕಾಗುತ್ತದೆ. ಆದರೆ ಪರಿಹಾರ ಕೊಡುವುದಕ್ಕೂ ಉತ್ಪಾದನೆಯಾಗುವುದಕ್ಕೂ ಸಾಮರಸ್ಯವಿರಬೇಕು. ಸಾಮರಸ್ಯವಿಲ್ಲದಿದ್ದರೆ ದೇಶವನ್ನು ಅಭಿವೃದ್ಧಿ ಮಾಡಲಿಕ್ಕೆ ಹೇಗೆ ಸಾಧ್ಯವಾಗುತ್ತದೆ ? ಎಲ್ಲದಕ್ಕೂ ಸ್ಟ್ರೈಕ್, ಪೆನ್‌ಡೌನ್ ಸ್ಟ್ರೈಕ್ ಮಾಡುತ್ತಾರೆ. ಇದು ಸರಿಯಾದ ಕ್ರಮವಲ್ಲ. ಇದನ್ನು ಕಡಿಮೆ ಮಾಡಬೇಕು. ಕಡಿಮೆ ಮಾಡುವ ರೀತಿಯಲ್ಲಿ ವಾದ ವಿವಾದಗಳನ್ನು ಸರ್ಕಾರದವರು ಪಂಚಾಯಿತಿಗಳ ಮೂಲಕ ಪರಿಹಾರವನ್ನು ಮಾಡಬೇಕು. ಸ್ಟ್ರೈಕ್ ಆಗದ ರೀತಿಯಲ್ಲಿ ಪ್ರಯತ್ನ ಮಾಡುವುದು ಇಂದು ಬಹಳ ಅವಶ್ಯಕವಾಗಿರುತ್ತದೆ. ಇಲ್ಲದಿದ್ದರೆ ದೇಶದ ಸಂಪತ್ತು ಕುಂಠಿತವಾಗುತ್ತದೆ. ತಾವು ಸರಿಯಾಗಿ ಆಸಕ್ತಿಯನ್ನು ವಹಿಸದೆ ಹೇಗೆ ಫ್ಯಾಕ್ಟರಿಗಳು ನಡೆಯುತ್ತಿವೆಯೋ ಹಾಗೆಯೇ ನಡೆಯುತ್ತಿರಲಿ ಎಂದು ಇರಬಾರದು. ಆ ಕಡೆ ಹೆಚ್ಚಿನ ಗಮನವನ್ನು ಹರಿಸಬೇಕು.

ಹಳ್ಳಿಗಾಡಿನಲ್ಲಿರತಕ್ಕಂಥ ಕಾರ್ಮಿಕರ ಬಗ್ಗೆ ಸಾಕಷ್ಟು ಗಮನ ಕೊಡುತ್ತಿಲ್ಲ. ಕನಿಷ್ಟ ವೇತನವೆಂದು ಹೇಳುತ್ತೀರಿ. ಆ ಕನಿಷ್ಟ ವೇತನವನ್ನು ಕೊಡುತ್ತಿದ್ದಾರೆಯೋ ಇಲ್ಲವೇ ಎನ್ನುವ ಬಗ್ಗೆ ಯಾರೂ ಕೂಡ ವಿಚಾರ ಮಾಡುತ್ತಿಲ್ಲ. ಇನ್‌ಸ್ಪೆಕ್ಟರ್ ಎಂದು ಇರುತ್ತಾರೆ, ಅವರು ಸರಿಯಾಗಿ ತಮ್ಮ ಕರ್ತವ್ಯವನ್ನು ಮಾಡುತ್ತಿದ್ದಾರೋ ಇಲ್ಲವೋ ಎನ್ನುವ ಕಡೆ ಗಮನ ಹರಿಸಬೇಕು. ತಾವು ಕಾನ್‌ಸ್ಟಿಟ್ಯೂಷನ್ ಓದಿದ್ದಿರೋ ಗೊತ್ತಿಲ್ಲ. ಡೈರೆಕ್ಟೀವ್ ಪ್ರಿನ್ಸಿಪಲ್ ಆಫ್ ಕಾನ್‌ಸ್ಟಿಟ್ಯೂಷನ್ ಎಂದು ಇದೆ. ಪ್ರತಿಯೊಬ್ಬ ಕಾರ್ಮಿಕನಿಗೆ ಈ ಸಮಾಜದಲ್ಲಿ ಇಂಡಿಯಾ ದೇಶದಲ್ಲಿ living vages ಕೊಡಬೇಕೆಂದು ಇದೆ. ಎಂದರೆ ಅವನು ಗೌರವದಿಂದ ಜೀವನ ಮಾಡಲಿಕ್ಕೆ ತಕ್ಕ ಕೂಲಿಯನ್ನು ಒದಗಿಸಬೇಕೆಂದಿದೆ. ಹೀಗೆ ಪ್ರತಿಯೊಬ್ಬರಿಗೂ ಇಲ್ಲಿ ಇದರಲ್ಲಿ ಅಳವಡಿಸಿದ್ದಾರೆ. ಅದಕ್ಕಾಗಿ ಕೇಂದ್ರ ಸರ್ಕಾರ ಯಾವ ರೀತಿ ಮಾಡುತ್ತಿದೆ ಎನ್ನುವ ಬಗ್ಗೆ ಕೈ ಹಾಕುವುದಕ್ಕೆ ಹೋಗಬೇಡಿ, ಅವರೂ ಮಾಡಬೇಕು, ನೀವೂ ಕೂಡ ಗಮನ ಕೊಡಬೇಕು. ಬಡವರ ಉದ್ಧಾರಕ್ಕೆ ಸೊಂಟಕಟ್ಟಿ ಕೆಲಸ ಮಾಡಬೇಕು, ಎಷ್ಟೋ ಜನ ಇವತ್ತು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಎಷ್ಟೋ ಜನ ಆಸ್ತಿ ಇಲ್ಲದೆ ಇರುತ್ತಾರೆ. ಸುಮಾರು ೧೦೦ಕ್ಕೆ ೬೦ ಜನ ಆಸ್ತಿ ಇಲ್ಲದವರು ಇದ್ದಾರೆ. ರೈತರಲ್ಲೂ ಕೂಡ ಎಷ್ಟೋ ಜನ ಆಸ್ತಿ ಇಲ್ಲದವರಿದ್ದಾರೆ. ಕನಿಷ್ಟ ಆಸ್ತಿ ಇಲ್ಲದಿರತಕ್ಕಂಥವರು ಅವರು ಜೀವನ ಮಾಡುವುದಕ್ಕಾಗುವುದಿಲ್ಲ, ಅದ್ದರಿಂದ ಅವರಿಗೆ ಯಾವರೀತಿಯಾಗಿ ಕೆಲಸವನ್ನು ಒದಗಿಸಬೇಕು ಎನ್ನುವ ಬಗ್ಗೆ ಚಿಂತನೆ ಮಾಡಬೇಕು. ಕೆಲಸ ಸಿಕ್ಕದಿದ್ದರೆ ಕೆಲಸ ಸಿಕ್ಕುವಂತೆ ಮಾಡಬೇಕು. ಕೆಲಸ ಸಿಕ್ಕರೆ ಅವರು ಸಹ ಗೌರವದಿಂದ ಜೀವನ ಮಾಡಲು ಸೂಕ್ತ ವೇತನ ದೊರೆಯುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಕನ್ನಡದ ಬಗ್ಗೆ ಹೇಳಬಯಸುತ್ತೇನೆ. ಕನ್ನಡದ ಬಗ್ಗೆ ಶ್ರೀ ಇದಿನಬ್ಬರವರು ಬಹಳ ಚೆನ್ನಾಗಿ ಮಾತನಾಡಿ ಪದ್ಯಗಳನ್ನು ಹೇಳಿದ್ದಾರೆ. ಅದನ್ನು ನಾವೆಲ್ಲ ಒಪ್ಪುತ್ತೇವೆ. ಕವಿ ಪುಟ್ಟಪ್ಪನವರು ಸಾಕಷ್ಟು ಹೇಳಿದ್ದಾರೆ. ಎಲ್ಲಾ ಕವಿಗಳು ಸಾರಿದ್ದಾರೆ. ಯೂನಿಟಿ ಇನ್ ಡೈವರ್ಸಿಟಿ ಎಂದು ನಮ್ಮದು ಸಂಸ್ಕೃತಿ ಅನ್ನುತ್ತೇವೆ. ಅದು ಇನ್ನೂ ನನಗೆ ಅರ್ಥವಾಗಿಲ್ಲ. ಯಾವ ಸಂಸ್ಕೃತಿ ? ಯಾವ ಜನಗಳ ಸಂಸ್ಕೃತಿ ಈ ದೇಶದಲ್ಲಿದೆ ? ಆ ಜನರ ಪರಂಪರೆಯನ್ನು ಯಾವ ರೀತಿ ವೃದ್ಧಿಪಡಿಸಿಕೊಳ್ಳಬೇಕೆಂದು ಅರಿವಾಗಿಲ್ಲ. ಕನ್ನಡವನ್ನು ನಾವು ಕಲಿಯಲೇಬೇಕು, ಅದು ನಮ್ಮ ಮಾತೃ ಭಾಷೆ ಕೂಡ ಹೌದು. ಆದರೆ ಇದು ಕನ್ನಡ ದೇಶವಲ್ಲ. ಈ ದೇಶದಲ್ಲಿ ಹಲವಾರು ಭಾಷೆಗಳಿವೆ. ರಾಜ್ಯಾಂಗದಲ್ಲಿ ೧೫ ಭಾಷೆಗಳಿವೆ. ೧೫ ಭಾಷೆಗಳನ್ನು ಕಲಿಯುವುದಕ್ಕೆ ನಿರ್ಬಂಧ ಏಕೆ ಎಂದು ನನ್ನ ಪ್ರಶ್ನೆ ಅವತ್ತಿನಿಂದ ಇದೆ. ಮಕ್ಕಳಿಗೆ ೧೫ ಭಾಷೆಗಳನ್ನು ಕಲಿಸಬೇಕು, ಕನ್ನಡವನ್ನು ಜಾಸ್ತಿ ಕಲಿಸಬೇಕು. ಬರೀ ಕನ್ನಡ ಕಲಿಸಿದರೆ ಕರ್ನಾಟಕ ರಾಜ್ಯದಲ್ಲಿರಬೇಕೇ ಹೊರತು ಬೇರೆ ರಾಜ್ಯಗಳಿಗೆ ಹೋಗಲಿಕ್ಕೆ ಆಗುವುದಿಲ್ಲ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಆದ್ದರಿಂದ ತಾವು ಇದರ ಬಗ್ಗೆ ಯೋಚನೆ ಮಾಡಿ. ಬಸವಲಿಂಗಪ್ಪನವರು ಹೀಗೆ ಹೇಳುತ್ತಿದ್ದಾರೆಂದು ಪ್ರಕಾಶ್‌ರವರು ವಿಕಾರ ಮಾಡಿಕೊಳ್ಳಬೇಡಿ. ನಮ್ಮ ಮಕ್ಕಳು ಮುಂದೆ ಬರಬೇಕು, ಬಾಳಬೇಕು. ಅದು ಈ ದೇಶದಲ್ಲಿ ಮಾತ್ರವಲ್ಲ. ಪ್ರಪಂಚದಲ್ಲಿ ಎಲ್ಲಾ ಕಡೆ ಬಾಳಬೇಕು, ಬದುಕಬೇಕು. ಕನ್ನಡದ ಕಸ್ತೂರಿ ಎಂದು ಅದರ ಬಗ್ಗೆ ಪ್ರಶಂಸೆ ಮಾಡಿಕೊಂಡು ಕನ್ನಡವನ್ನು ಕಲಿತು ಕನ್ನಡದಲ್ಲಿ ಉದ್ಧಾರವಾಗಲಿಕ್ಕೆ ಪ್ರಯತ್ನ ಮಾಡಿ ನಾವು ಉದ್ಧಾರವಾಗಿದ್ದೇವೆ. ಆದರೆ ನಮ್ಮ ಮಕ್ಕಳು ಯಾವ ರೀತಿ ಮುಂದೆ ಆಗಬೇಕೆಂಬುದನ್ನು ಯೋಚನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಈಗ ೩ ಕೋಟಿ ೭೧ ಲಕ್ಷ ಜನರಿದ್ದಾರೆ. ಇನ್ನು ೫ ವರ್ಷದಲ್ಲಿ ಎಷ್ಟು ಮಕ್ಕಳು ಜಾಸ್ತಿ ಆಗುತ್ತವೆಂಬುದನ್ನು ವಿಚಾರ ಮಾಡಬೇಕು. ೧೯೯೧ಕ್ಕೆ ೫ ಕೋಟಿಯನ್ನು ಮೀರುತ್ತದೆಂದು ನನಗನ್ನಿಸುತ್ತದೆ. ಸರ್ಕಾರೀ ನೌಕರಿಯಲ್ಲಿ ೪⅓ ಲಕ್ಷ ಜನರಿಗೆ ಮಾತ್ರ ಅವಕಾಶ ಉಂಟು. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದವರೆಲ್ಲರಿಗೂ ಕೆಲಸ ಸಿಕ್ಕಿಲ್ಲ. ಅಂಥವರು ಹತ್ತು ಲಕ್ಷ ಜನರಿದ್ದಾರೆ. ಸರ್ಕಾರೀ ನೌಕರರು ನಾಲ್ಕೂವರೆ ಲಕ್ಷ ಆದರೆ ಆ ಹತ್ತು ಲಕ್ಷ ಜನ ಯುವಕ ಯುವತಿಯರಿಗೆ ಯಾವಾಗ ಕೆಲಸ ಕೊಡುತ್ತೀರಿ ? ಆದ್ದರಿಂದ ನನ್ನ ಸಲಹೆ ಏನೆಂದರೆ ಯುವಕಯುವತಿಯರೇನಿದ್ದಾರೆ ಅವರಿಗೆ ಕರ್ನಾಟಕ ರಾಜ್ಯದಲ್ಲಿ ಅಲ್ಲ ಬೇರೆ ರಾಜ್ಯಗಳಲ್ಲಿ ಹೋಗಿ ಸಂಪಾದನೆ ಮಾಡಿ ಸುಖವಾಗಿ ಗೌರವದಿಂದ ಜೀವನ ಮಾಡತಕ್ಕ ಅವಕಾಶ ಕಲ್ಪಿಸುವುದಕ್ಕೆ ಸರ್ಕಾರ ಮುಂದೆ ಬರಬೇಕು. ಆದ್ದರಿಂದ ನಾನು ಹೇಳುತ್ತಿದ್ದೇನೆ. unity in diversity ಅಂತ ಹಿರಿಯರು ಹೇಳಿದ್ದನ್ನು ಒಪ್ಪುವುದಾದರೆ, now diversity the languages and kannada is the unity ಅಂತ ಹೇಳಿ ಬಿಟ್ಟು ಬೇಕಾದರ ಮಾಡಿಕೊಳ್ಳಿ. ಈ ರೀತಿಯಾಗಿ ಮಾಡಿ ನಮ್ಮ ಮಕ್ಕಳು ಎಲ್ಲಾ ಭಾಷೆಗಳನ್ನು ಬೇಕಾದರೆ ಕಲಿಯಲಿ ಮತ್ತು ಇಂಗ್ಲೀಷನ್ನೂ ಕಲಿಯಲಿ. ಎಲ್ಲಾ ಭಾಷೆಗಳನ್ನು ಕಲಿತರೆ ದೊಡ್ಡ ಮನುಷ್ಯರಾಗಬಹುದು ಮತ್ತು ಈ ದೇಶವನ್ನು ಆಳತಕ್ಕ ಪ್ರಸಂಗ ಬರಬಹುದು. ಒಂದು ಉದಾಹರಣೆ ಹೇಳುವುದಾದರೆ ನಮ್ಮ ಮುಂದಿನ ಪೀಳಿಗೆ ಯಾವ ರೀತಿ ಈ ದೇಶದಲ್ಲಿ ಬಾಳಬೇಕೆಂಬ ಕನಸು ಇಲ್ಲದೆ ಹೋದರೆ, ನಾವು ಇಲ್ಲಿ ಒಂದು ಕೋಣೆಯಲ್ಲಿ ಕೂತು ಕನ್ನಡ, ಕನ್ನಡ ಎಂದು ತಮಟೆ ಬಾರಿಸಿಕೊಂಡು ಹೋದರೆ ಹೇಗೆ ?......

ಶ್ರೀ ಬಿ.ಜಿ. ಕೊಟ್ರಪ್ಪ.—ಬಸವಲಿಂಗಪ್ಪನವರು ಮಂತ್ರಿಗಳಾಗಿದ್ದವರು. ರಷ್ಯಾ ದೇಶದಲ್ಲಿ ಮತ್ತು ಚೈನಾ ದೇಶದಲ್ಲಿ ಯಾವ ಭಾಷೆಯಲ್ಲಿ ಪ್ರತಿಯೊಂದು ವಿಷಯವನ್ನು ಬೋಧನೆ ಮಾಡುತ್ತಾರೆಂದು ತಿಳಿದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರು ಹಳ್ಳಿಯಿಂದ ಬಂದವರು. ಹಳ್ಳಿಯಲ್ಲಿ ಇಂಗ್ಲೀಷ್ ಇತ್ತೇ ? ಕನ್ನಡ ಓದಿಬಂದು ಇಂಗ್ಲೀಷ್ ಕಲಿತುಕೊಂಡು ವಕೀಲರಾಗಿದ್ದಾರೆ. ಮಂತ್ರಿಗಳಾಗಿದ್ದರೇ. ಅವರು ಕನ್ನಡದ ಬಗ್ಗೆ ಇಷ್ಟು ಲಘುವಾಗಿ ಮಾತನಾಡುತ್ತಿದ್ದಾರೆಂಬುದನ್ನು ಅವರು ತಿಳಿದುಕೊಳ್ಳಬೇಕು. ಕನ್ನಡ ಅನ್ನುವುದು ಕಸ್ತೂರಿ.

ಅಧ್ಯಕ್ಷರು,—ಅವು ಅವರ ಅಭಿಪ್ರಾಯಗಳು.

ಶ್ರೀ ಬಿ.ಜಿ. ಕೊಟ್ರಪ್ಪ.—ಅವರ ಮಕ್ಕಳು ಇಂಗ್ಲೀಷ್ ಕಲಿಯಬೇಕು, ಹಳ್ಳಿಯ ಮಕ್ಕಳು ಕನ್ನಡ ಓದಬೇಕು. ಪ್ರತಿಯೊಂದು ವಿಷಯವನ್ನು ಕನ್ನಡದಲ್ಲಿ ಕಲಿಸತಕ್ಕ ವ್ಯವಸ್ಥೆ ಆಗಬೇಕು ನಮ್ಮಲ್ಲಿ. ತಮಿಳ್ನಾಡಿನಲ್ಲಿ ಕನ್ನಡ ಮಾತನಾಡುತ್ತಾರೆಯೆ, ಆಂಧ್ರ ಪ್ರದೇಶದಲ್ಲಿ ಕನ್ನಡ ಮಾತನಾಡುತ್ತಾರೆಯೆ ? ಉತ್ತರ ಪ್ರದೇಶದಲ್ಲಿ ಹಿಂದಿ ಮಾತನಾಡುತ್ತಾರೆ. ಆಯಾಯ ರಾಜ್ಯಗಳಲ್ಲಿ ಅವರವರ ದೇಶ ಭಾಷೆಗಳನ್ನು ಮಾತನಾಡುತ್ತಿರಬೇಕಾದರೆ ಮಾನ್ಯ ಬಸವಲಿಂಗಪ್ಪನವರು ಸಹ ಆ ಒಂದು ಚೈತನ್ಯವನ್ನು ಹೊಂದಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಪ್ರಖ್ಯಾತ ಸೈಕಾಲಜಿಸ್ಟ್ ಫ್ರಾಯ್ಡ್‌ರವರ ಪ್ರಕಾರ "Small minds dream of small things. big minds dream of big things" ಎಂದು ಹೇಳಿದ ಹಾಗೆ. Sri Kotrappa dreams of small things. I pity for him. ನನ್ನ ಉದ್ದೇಶ ಬೇರೆ. ಅವರ ಉದ್ದೇಶವೇ ಬೇರೆ. ಅವರ ಅಭಿಮಾನ ಬೇರೆ. ನನ್ನ ಅಭಿಮಾನ ಬೇರೆ. ನನ್ನದು ದೊಡ್ಡ ಅಭಿಮಾನ, ದೊಡ್ಡ ಕನಸು. ಈ ದೇಶದಲ್ಲಿರತಕ್ಕ ಜನರು ಏನಿದ್ದಾರೆ ಅವರು ಈ ದೇಶವನ್ನು ಆಳಬೇಕು ಎಂದು ನನ್ನ ಕನಸು. ಈ ದೇಶವನ್ನು ಆಳಬೇಕಾದರೆ ಬರೀ ಕನ್ನಡವನ್ನು ಕಲಿತುಬಿಟ್ಟು ಡೆಲ್ಲಿಯಲ್ಲಿ ಹೋಗಿ ದೇಶವನ್ನು ಆಳಲಿಕ್ಕೆ ಆಗುತ್ತದೆಯೇ ? ನಾಳೆಯ ದಿವಸ ದಕ್ಷಿಣ

ಭಾರತದವರು ಡೆಲ್ಲಿಯಲ್ಲಿ ಹೋಗಿ ದೇಶವನ್ನು ಆಳತಕ್ಕ ಪ್ರಸಂಗ ಬರುತ್ತದೆ. ಆ ಒಂದು ಅವಕಾಶ ನಮಗೆ ಸಿಕ್ಕುತ್ತದೆ. ಅದರ ಬಗ್ಗೆ ತಾವೆಲ್ಲಾ ಯೋಚನೆ ಮಾಡಬೇಕು. ನಾಳೆಯ ದಿವಸ ನಮ್ಮ ಪೀಳಿಗೆ ಮಂತ್ರಿಗಳು ಆಗಬಹುದು, ಪ್ರಧಾನ ಮಂತ್ರಿಗಳು ಆಗಬಹುದು ಅಂತಹ ಸಂದರ್ಭಗಳು ಇರುವಾಗ ಬರೀ ಕನ್ನಡ ಕಲಿತುಕೊಂಡರೆ ಆ ಅವಕಾಶ ಬರುತ್ತದೆಯೋ ? ಆದ್ದರಿಂದ. ನಾನು ಈ ಮಾತನ್ನು ಹೇಳುತ್ತಿದ್ದೇನೆ. "ಯೂನಿಟಿ ಇನ್ ಡೈವರ್ಸಿಟಿ", ಎಂದು ನಾನು ಹೇಳಿದೆ. ಇವೊತ್ತು ಕನ್ನಡವನ್ನು ಕಲಿಯೋಣ, ಕನ್ನಡವನ್ನು ಜಾಸ್ತಿ ಕಲಿಯೋಣ, ಕನ್ನಡದಲ್ಲಿ ಪ್ರಾವೀಣ್ಯತೆಯನ್ನು ಪಡೆಯೋಣ, ಜೊತೆಗೆ ಇಂಗ್ಲೀಷ್‌ನಲ್ಲಿ ಪ್ರಾವೀಣ್ಯತೆಯನ್ನು ಸಂಪಾದನೆ ಮಾಡೋಣ. ನಾನು ಸಂಸ್ಕೃತವನ್ನು ಓದಿದ್ದೇನೆ. ಅಷ್ಟೇನೂ ಪ್ರಾವೀಣ್ಯತೆ ನನಗೆ ಇಲ್ಲ. ಆದರೆ ಈಗ ನನಗೆ ಕನ್ನಡ ಮಾತನಾಡಲಿಕ್ಕೆ ಬರುವುದಿಲ್ಲವೇ ? ಇದಕ್ಕೆ ವ್ಯವಹಾರ ಜ್ಞಾನ ಬೇಕು ಅಷ್ಟೆ. ಮುಂದಿನ ನಮ್ಮ ಪೀಳಿಗೆ, ನಮ್ಮ ಮಕ್ಕಳು ಈ ದೇಶವನ್ನು ಆಳತಕ್ಕ ಅವಕಾಶ ಸಿಕ್ಕಬೇಕಾದರೆ ನಾವು ಎಲ್ಲಾ ಭಾಷೆಗಳನ್ನು ಕಲಿಯುತಕ್ಕ ಹಾದಿಯನ್ನು ಹಿಡಿಯಲೇಬೇಕು ಎಂದು ಹೇಳುತ್ತೇನೆ. ನಾನು ಯಾವ ಒಂದು ವ್ಯಾಮೋಹ, ಒಂದು ಮಮತೆ, ಒಂದು ಸ್ವಾರ್ಥ ಇಲ್ಲದೇ ಈ ಸದನಕ್ಕೆ ಕೈ ಜೋಡಿಸಿ ಹೇಳುತ್ತೇನೆ. ಆದ್ದರಿಂದ, ತಾವೆಲ್ಲರೂ ಇದರ ಬಗ್ಗೆ ಯೋಚನೆ ಮಾಡಬೇಕು. ಇವೊತ್ತು ನಮ್ಮ ಮಕ್ಕಳನ್ನು ಯಾವ ರೀತಿಯಲ್ಲಿ ಮುಂದೆ ತರಬೇಕು, ಏನ್ನುವ ಬಗ್ಗೆ ಯೋಚನೆ ಮಾಡಬೇಕು. ಇವೊತ್ತು ಕನ್ನಡದಲ್ಲಿ ಮಾತನಾಡತಕ್ಕವರು, ಕನ್ನಡದ ಅಭಿಮಾನಿಗಳು, ಕನ್ನಡದಲ್ಲಿ ಮಮತೆ ಇರತಕ್ಕವರು, ಇವರ ಮಾತುಗಳನ್ನು ಕೇಳಿ. ಏನೋ ಒಂದು ತರಹ ಹುಚ್ಚು ತರಹ ಆಗಿದೆ. ಕನ್ನಡ ಬಿಟ್ಟುಬಿಟ್ಟರೆ ನಮಗೆ ಜನಗಳು ವಿರೋಧ ಮಾಡುತ್ತಾರೆ ಎಂದು ಹೇಳಿ ಕನ್ನಡ ಓದುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಕನ್ನಡ ಓದುವುದರ ಜೊತೆಗೆ ಇಂಗ್ಲೀಷ್ ಅಂತೂ ಓದಲೇಬೇಕು. ನಾನು ಇವೊತ್ತು ಇಂಗ್ಲೀಷ್ ಓದದೇ ಹೋಗಿದ್ದರೆ ನಾನು ಇವೊತ್ತು ಏನು ಆಗಿದ್ದೇನೋ ಅದು ಆಗುತ್ತಾ ಇರಲಿಲ್ಲ. ನಾನು ಹಿಂದಿಯನ್ನು ಓದಿದ್ದೇನೆ, ಸಂಸ್ಕೃತವನ್ನು ಓದಿದ್ದೇನೆ, ಇವೊತ್ತು ಒಂದು ಭಾಷೆಯ ಹುಚ್ಚು ಪ್ರೇಮ ಬೇಡ. ಭಾಷೆಯ ಮೇಲೆ ಅಭಿಮಾನ ಪ್ರೇಮ ಇರಲಿ, ಮಾನ್ಯ ಪುಟ್ಟಪ್ಪನವರ ತರಹ ಓದಿಕೊಂಡು ದೊಡ್ಡವರಾಗಿ ಬರಲಿಕ್ಕೆ ಆಗುವುದಿಲ್ಲ. ಆದರೆ ಪುಟ್ಟಪ್ಪನವರ ತರಹ ಓದಿಕೊಂಡು, ತಿಳಿದುಕೊಂಡು ಮಾತನಾಡಲಿಕ್ಕೆ ಆಗುವುದಿಲ್ಲವೇ? ಇವೊತ್ತು ನಾನು ಕನ್ನಡದಲ್ಲಿ ಮಾತನಾಡುತ್ತಾ ಇಲ್ಲವೇ? ನನ್ನ ಮಕ್ಕಳನ್ನು ಇಂಗ್ಲೀಷ್ ಸ್ಕೂಲಿಗೆ ಕಳುಹಿಸುತ್ತೇನಾ, ಶ್ರೀಮಾನ್ ಕೊಟ್ರಪ್ಪನವರಲ್ಲಿ ನಾನು ಕೇಳುವುದೇನೆಂದರೇ, Please dream of big things for the entire country. ಅಧ್ಯಕ್ಷರೆ. ಕೊನೆಯದಾಗಿ ನಾನು ಇಲ್ಲಿ ಒಂದು ಮಾತನ್ನು ಹೇಳಿಬಿಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ಈ ವೇದಿಕೆಯ ಮೇಲೆ ಬಹಳ ಸಾರಿ ನಾನು ಹೇಳಿದ್ದೇನೆ. ಹೋದಸಾರಿಯೂ ಸಹ ನಾನು ಈ ಸದನದಲ್ಲಿ ಮಾತನಾಡಿದ್ದೇನೆ. ಹಿಂದೆ ಶ್ರೀಮಾನ್ ಧರ್ಮಸಿಂಗ್ ಅವರು ಮಂತ್ರಿಗಳಾಗಿದ್ದರು. ನಾನು ಇದಕ್ಕೆ ಮಂತ್ರಿಯಾಗಿದ್ದೆ. ಅದರಲ್ಲಿ ಏನೇನು ವ್ಯವಹಾರ ಇದೆ ಎಂದು ನನಗೆ ಗೊತ್ತು. ಅಲ್ಲಿರತಕ್ಕ ಅಧಿಕಾರಿಗಳು ಏನು ಮಾಡಬಲ್ಲರು ಪ್ರತಿಯೊಂದು ನನಗೆ ಗೊತ್ತು. ಎಷ್ಟು ಸೈಟುಗಳನ್ನು ಮಾಡಬಹುದು. ಯಾರು ಯಾರು ಮಾಡಿಕೊಳ್ಳುತ್ತಾರೆ, ಬೇನಾಮಿಯಾಗಿ ಯಾರು ಯಾರು ಮಾಡಿ ಕೊಳ್ಳಬಹುದು, ಅವರವರ ಹೆಸರಿನಲ್ಲಿ ಎಷ್ಟೆಷ್ಟು ಜನರು ಇಟ್ಟುಕೊಳ್ಳಬಹುದು ಎನ್ನತಕ್ಕದ್ದೆಲ್ಲಾ ನನಗೆ ಗೊತ್ತು. ಯಾರು ಯಾರು ಈ ರೀತಿಯಲ್ಲಿ ಇಟ್ಟುಕೊಂಡಿದ್ದಾರೆ, ಯಾರು ಯಾರು ಅನ್ಯಾಯ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಕ್ಕೆ ಯಾರು ಯಾರು ಈ ರೀತಿ ಇಟ್ಟುಕೊಂಡಿದ್ದಾರೆ. ಯಾರು ಯಾರು ಅನ್ಯಾಯ ಮಾಡಿದ್ದಾರೆ ಆ ಬಗ್ಗೆ ೧೯೮೧-೮೨ನೆ ಇಸವಿಯಿಂದ ಇಲ್ಲಿಯವರೆಗೂ ಯಾರು ಯಾರು ಮಾಡಿದ್ದಾರೆ ಅದರ ಬಗ್ಗೆ ವೈಟ್ ಪೇಪರ್ ತಂದು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿದರು. ಅದರ ಪ್ರಕಾರ ಅಧಿಕಾರಿಗಳನ್ನು ನೇಮಕ ಮಾಡಿ ವೈಟ್ ಪೇಪರ್ ತಂದರು. ವೈಟ್ ಪೇಪರ್ ಪ್ರಕಾರ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದು ಆಗಲಿಲ್ಲ. ಯಾರು ತನ್ನ ಹೆಂಡತಿ ಹೆಸರಿನಲ್ಲಿ ತನ್ನ ತಂಗಿ ಹೆಸರಿನಲ್ಲಿ ತನ್ನ ಬಾವಮೈದುನ ಹೆಸರಿನಲ್ಲಿ ತನ್ನ ಸಂಬಂಧಿಗಳ ಹೆಸರಿನಲ್ಲಿ ಹತ್ತಾರು ಸೈಟುಗಳನ್ನು ಇಟ್ಟುಕೊಂಡು ಇವೊತ್ತು ಕೋಟ್ಯಾಂತರ ರೂಪಾಯಿ ಮಾಡಿಕೊಂಡಿರತಕ್ಕವರು ಇದ್ದಾರೆ ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ನನಗೆ ಅರ್ಥವಾಗುತ್ತಿಲ್ಲ. Sri Hegde said 'I am going to take action on whoever is guilty as per the white-paper'. ಎಂದು ಹೇಳಿದರು. ಇದುವರೆಗೂ

ಮಾಡಲಿಲ್ಲ ಅಂದರೆ ಅರ್ಥ ಏನಾಗುತ್ತದೆ ಅವರ ಮೇಲೆ ಅಭಿಮಾನಿಗಳಾಗಿರಬೇಕು ನೀವು ನೀವು ಆಕ್ಷನ್ ತೆಗೆದುಕೊಳ್ಳುವುದಿಲ್ಲ ಅಂದರೆ ಕ್ರಿಮಿನಲ್ ಕೋರ್ಟ್ ಆಗಲಿ, ಮತ್ತೆ ಲೋಕಾಯುಕ್ತ ಆಗಲೀ. ಅಲ್ಲಿ ನಾನೇ ಅರ್ಜಿ ಹಾಕುತ್ತೇನೆ.

ನಿಮಗೆ ಶಕ್ತಿ ಇದ್ದರೆ ನೀವೇ ಮಾಡಿ. ನೀವು ಮಾಡುವುದಕ್ಕಾಗದಿದ್ದರೆ ಈ ರೀತಿ ದೇಶದ ಸ್ವತ್ತನ್ನು ಅಪಹರಣ ಮಾಡುವುದಕ್ಕೆ ಯಾರು ಪ್ರಯತ್ನ ಮಾಡುತ್ತಾರೆ. ಅಂತಹವರಿಗೆ ಬೆಂಬಲ ವಾಗಿರುವುದಾದರೆ, ನಾನೇ ಮುಂದೆ ಬಂದು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇನೆ. ಅದನ್ನು ಈ ಸಭೆಯಲ್ಲಿ ಹೇಳಬೇಕೆಂದಿದ್ದೆ, ಹೇಳಿದ್ದೇನೆ. ಅಲ್ಲಿನ ಲೆಕ್ಕ ಪತ್ರಗಳ ಬಗ್ಗೆ ಅಕೌಂಟೆಂಟ್ ಜನರಲ್ ರವರು ಹೇಳಿದ ಪ್ರಕಾರ ಅಲ್ಲಿ ಸರಿಯಾದ ಅಕೌಂಟ್ಸೇ ಇಲ್ಲ. ಪ್ರಾಪರ್ಟಿ ರಿಜಿಸ್ಟರ್ರೇ ಇಲ್ಲ. ೧೯೭೭-೭೮ನೇ ಇಸವಿಯಿಂದ ಇವತ್ತಿನವರೆಗೂ ಏನೇನೂ ಇಲ್ಲ. ಬರೆದಿದ್ದರೂ ಬಹಳ ಲೇಜಿಯಾಗಿ ಬರೆಯುತ್ತಾರೆ. ಅದಕ್ಕೆ ಯಾರೂ ದಿಕ್ಕೇ ಇಲ್ಲ, ಆ ಬಗ್ಗೆ ಅಕೌಂಟೆಂಟ್ ಜನರಲ್‌ರವರು ಅಲ್ಲಿನ ಅಕೌಂಟ್ಸ್ ಬಗ್ಗೆ ಏನು ವ್ಯಾಖ್ಯಾನ ಮಾಡಿದ್ದಾರೆಂಬುದು ನೀವೇ ಹೊರಡಿಸಿದಂತಹ ವೈಟ್ ಪೇಪರ್ ನಲ್ಲಿ ಬಂದಿದೆ. ನಾನು ಅದನ್ನು ಕೋಟ್ ಮಾಡುತ್ತಿದ್ದೇನೆ,

> "The AG has observed that the BDA has prepared annual monthly receipts and statement of accounts. In the absence of income and expenditure account and balance sheet, its true state of affairs of the authority cannot be as certained. The Accountant General has emphasised that the BDA must pre are the income and expenditure account and balance-sheet, as also initial records such as detailed inventory of assets and liabilities, bank reconciliation statement, demand collection, balance statement on revenue deposit registers, advance registers etc. The BDA has not prepared the basic accounts for the years after 1977-78."

ಸ್ವಾಮಿ ಇರತಕ್ಕ ಪರಿಸ್ಥಿತಿ ಇದು. ಈಗ ೧೯೭೭-೭೮ ರಿಂದ ಕೂಡ ಎಲ್ಲ ದಾಖಲಾತಿಗಳು ಬಿ.ಡಿ.ಎ ನಲ್ಲಿ ಇಲ್ಲದಿದ್ದರೆ ಹೇಗೆ? ಈಗ ಅಲ್ಲಿಗೆ ಒಬ್ಬ ಬ್ಯೂರೋಕ್ರಾಟ್‌ನ್ನು ಚೇರ್ಮನ್ ಆಗಿ ಹಾಕಿದ್ದೀರಿ, ಬ್ಯೂರೋಕ್ರಾಟನ್ನು ಏತಕ್ಕೋಸ್ಕರ ಹಾಕಿದ್ದೀರಿ? ಉದ್ದೇಶ ಏನು ಇರಬೇಕು? ನನಗೆ ತಿಳಿದ ಪ್ರಕಾರ ಇಲ್ಲಿ ಅವ್ಯವಹಾರ ಏನು ನಡೆದಿವೆ, ಅದನ್ನು ಸರಿಪಡಿಸಬೇಕೆಂಬ ಉದ್ದೇಶದಿಂದ ಅವರನ್ನು ನೇಮಕ ಮಾಡಿರಬೇಕು. ಆದರೆ ಅಲ್ಲಿ ದಿಕ್ಕು ತಪ್ಪಿದ ಲೆಕ್ಕಾಚಾರವಾಗಿದೆ. ಇನ್‌ವೆಂಟರಿಯೇ ಇಲ್ಲ. ಪ್ರಾಪರ್ಟಿ ರಿಜಿಸ್ಟರ್ರೇ ಇಲ್ಲ. ಇಂತಹವನ್ನು ಸರಿಮಾಡುತ್ತಾರೆ ಎಂಬ ಉದ್ದೇಶದಿಂದ ಮಾಡಿರಬೇಕೆಂದು ನನ್ನ ಒಂದು ಆಸೆ. ಆದರೆ ಇವತ್ತಿನವರೆಗೂ ಮೊದಲು ಹೇಗಿತ್ತೋ ಹಾಗೆಯೇ ಇದೆ. ಹಿಂದಿನ ರೀತಿಯೇ ವ್ಯವಹಾರಗಳಾಗುತ್ತಿವೆ. ಅಕೌಂಟೆಂಟ್ ಜನರಲ್‌ರವರು ಅದರ ಅಕೌಂಟ್ಸನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಬೇಸತ್ತು ಬೇಡ ಅಂತ ಬರೆದುಕೊಟ್ಟಿದ್ದಾರೆ,

ಶ್ರೀ ಎಂ. ಪಿ. ಪ್ರಕಾಶ್.—೧೯೭೭-೭೮ ರಿಂದ ಅಲ್ಲಿನ ಲೆಕ್ಕ ಪತ್ರಗಳು ಸರಿಯಾಗಿಲ್ಲ ಎಂಬ ಪ್ರಸ್ತಾಪ ಬಂದ ಮೇಲೆ ಅಲ್ಲಿ ಲೆಕ್ಕ ಪತ್ರಗಳನ್ನು ಕಳೆದ ೨-೩ ವರ್ಷಗಳಲ್ಲಿ ೧೯೮೬-೮೭ರವರೆಗೆ ಎಲ್ಲ ಲೆಕ್ಕ ಪತ್ರಗಳೂ ಅಂತಿಮವಾಗಿ ಪರಿಶೀಲಿಸಲ್ಪಟ್ಟಿವೆ. ಈಗ ಅಕೌಂಟ್ಸ್ ಬಗ್ಗೆ ಯಾವುದೇ ರೀತಿಯ ಬಾಕಿ ಇಲ್ಲ. ಅದೇ ರೀತಿ ಕಮರ್ಷಿಯಲ್ ಸಿಸ್ಟಂನ್ನು ಅಕೌಂಟಿಂಗ್‌ನಲ್ಲಿ ಜಾರಿಗೆ ತರಬೇಕೆಂಬ ಎ.ಜಿ. ಯವರ ಸಲಹೆ ಏನು ಇತ್ತು, ಆ ಒಂದು ಪದ್ಧತಿಯನ್ನೂ ಕೂಡ ಅಲ್ಲ ಈಗ ಅಳವಡಿಸಿಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳುತ್ತಿರತಕ್ಕಂತಹದ್ದು ೧೯೮೩ಕ್ಕಿಂತ ಪೂರ್ವದಲ್ಲಿ ಇದ್ದಂತಹ ಪರಿಸ್ಥಿತಿಯ ಬಗ್ಗೆ ಹೇಳುತ್ತಿದ್ದಾರೆ. ೧೯೮೩ರ ನಂತರ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ. - ನಾನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷನಾಗಿದ್ದಾಗ ಇವರ ಲೆಕ್ಕಪತ್ರಗಳನ್ನು ಪರಿಶೀಲನೆ ಮಾಡಲು ಎ.ಜಿ.ಯವರನ್ನೇ ನೇಮಿಸಬೇಕೆಂದು ನಿರ್ಣಯ ಮಾಡಿದ್ದರ ಮೇರೆಗೆ ಈಗ ನೇಮಿಸಿದ್ದಾರೆ. ಹಿಂದಿನ ಹಾಗೆ ಇಲ್ಲ. ಈಗ ವ್ಯವಹಾರ ಸರಿಯಾಗಿದೆ ಅಂತೆ ಮಾನ್ಯ

ಮಂತ್ರಿಗಳು ಹೇಳುತ್ತಿದ್ದಾರೆ. Whether you have maintained the inventory of all the assets and property registers brought upto date.

ಶ್ರೀ ಎಂ. ಪಿ. ಪ್ರಕಾಶ್.—ಕಂಪ್ಯೂಟರೈಸ್ ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ Past inventories of all the assets and property records are brought upto date is the question. ಮಾಡಿಲ್ಲ. ಅಂತ ಹೇಳುತ್ತಿದ್ದೇನೆ. ಮಾಡಿದ್ದೇನೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಅಕೌಂಟ್ಸ್ ಇಂದಿನವರೆಗೆ ಆಗಿದ್ದರೆ ನಮಗೆ ಅದರ ವರದಿ ಏಕೆ ಸಿಕ್ಕಿಲ್ಲ? ಅದನ್ನು ನಮಗೆ ಏಕೆ ಕೊಟ್ಟಿಲ್ಲ? ಎ.ಜಿ.ಯವರನ್ನು ನೇಮಕ ಮಾಡಿದ್ದು ಇಂತಹ ಲೆಕ್ಕ ಪತ್ರಗಳನ್ನು ನೋಡಿ, ಅದರ ಬಗ್ಗೆ ವರದಿಯನ್ನು ನಮಗೆ ಕಳುಹಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅದರ ಬಗ್ಗೆ ವರದಿಗಳು ಬಂದಿಲ್ಲವಾದ್ದರಿಂದ ಇವತ್ತಿನವರೆಗೂ ಅದು ಆಗಿಲ್ಲವೆಂದು ಅರ್ಥವಾಗುತ್ತದೆ. ನೀವು ಸಮರ್ಪಕವಾಗಿ ಮಾಡಿಲ್ಲವೆಂದು ಪೇಪರ್ ಹೇಳುತ್ತಿದೆ. ಎ.ಜಿ.ಯವರಿಗೆ ಸರಿಯಾದ ವಿವರಗಳನ್ನು ಒದಗಿಸಿಲ್ಲ. ನಾನು ಈ ಬಗ್ಗೆ ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಅದಕ್ಕೋಸ್ಕರ ಹೇಳುತಿದ್ದೇನೆ. ಪೇಪರ್‌ನ್ನು ಒದಗಿಸುತ್ತಿಲ್ಲ. ಅಕೌಂಟಿಂಗ್‌ನ್ನು ಸರಿಯಾಗಿ ಅವರಿಗೆ ಕೊಟ್ಟಿಲ್ಲ. ಸರಿಯಾದ ದಾಖಲಾತಿ ಅಲ್ಲಿ ಇಲ್ಲವೇ ಇಲ್ಲ. ಈ ಎಲ್ಲ ಕಾರಣಗಳಿಂದಾಗಿ ಅವರು ಮಾಡುವುದಕ್ಕಾಗುವುದಿಲ್ಲ ಅಂತ ಸ್ಪಷ್ಟವಾಗಿ ಹೇಳಿದರು. ಇದರ ಮೇಲೆ ತಮಗೆ ಬಿಟ್ಟಿದ್ದು. ಹೊಸದಾಗಿ ಬಂದಿದ್ದೀರಿ. ಬಹಳ ಸಂತೋಷ ಸರಿ ಮಾಡಿದ್ದೇವೆಂದು ಹೇಳಿದ್ದೀರಿ. ಆದೂ ನಿಮ್ಮ ಕೈಯಲ್ಲಾದರೆ, ನಮ್ಮ ಕೈಯಲ್ಲೇ ಆಗಲಿಲ್ಲ ಅಂತ ಹೇಳಿದ್ದೇನೆ. ಮಂತ್ರಿಯಾಗಿದ್ದಾಗಲೂ ಆಗಿಲ್ಲ ಅಂತ ಹೇಳಿದ್ದೇನೆ. ಶ್ರೀಮಾನ್ ಧರ್ಮಸಿಂಗ್‌ರವರು ಮಂತ್ರಿಯಾಗಿದ್ದರೂ ಅವರ ಕೈಯಲ್ಲೂ ಆಗಲಿಲ್ಲ ಇಂತಹ ಕಷ್ಟದ ಕೆಲಸವನ್ನು ಸಾಧನೆ ಮಾಡುವುದಾದರೆ ನನಗಂತೂ ಬಹಳ ಸಂತೋಷ. ಅದರ ಬಗ್ಗೆ ಇರುವಂತಹ ವರದಿಯನ್ನು ಕೊಡಿ. This organisation will have to give a balance-sheet for all these things. ಸ್ವಾಮಿ ಇದು ಮೊದಲು ಟ್ರಸ್ಟ್ ಬೋರ್ಡ್ ಇದ್ದುದು ಈಗ ಬಿಡಿಎ ಎಂದು ಆಗಿದೆ. ಬಿಡಿಎ ಆದ ಮೇಲೆ ಇವರು ಕೊಟ್ಟಿರತಕ್ಕ ನಿವೇಶನಗಳ ಸಂಖ್ಯೆ ೧೯೮೦ರವರೆಗೆ ೧ ಲಕ್ಷವನ್ನೂ ಮೀರಿಲ್ಲ. ಮತ್ತೆ ೧,೬೬,೪೬೪ ಸೈಟ್‌ಗಳನ್ನು ಮಾಡುತ್ತೇವೆಂದು ಇವರು ಅಂದಾಜು ಪಟ್ಟಿಯನ್ನು ಈಗ ಇಟ್ಟುಕೊಂಡಿದ್ದಾರೆ. ೪೦ ವರ್ಷಗಳಾದರೂ ಇನ್ನೂ ಒಂದು ಲಕ್ಷ ಸೈಟುಗಳನ್ನು ಹಂಚುವುದಕ್ಕೆ ಇವರ ಕೈಯಲ್ಲಿ ಆಗಲಿಲ್ಲ. ಇವತ್ತು ೧,೬೬,೪೬೪ ಹಂಚಲು ಎಷ್ಟು ವರ್ಷ ಅಧಿಕಾರದಲ್ಲಿ ಇರಬೇಕೆಂದು ಮಾಡಿದ್ದಾರೆ? ಇಷ್ಟು ಸೈಟು ಹಂಚಲೂ ಇನ್ನೂ ೫೦ ಅಥವಾ ೬೦ ವರ್ಷಗಳು ಇವರು ಅಧಿಕಾರದಲ್ಲಿ ಇರಬೇಕಾಗುತ್ತದೆ. ಸುಮಾರು ೧೨,೧೩೪ ಎಕರೆ ಅಕ್ವೈರ್ ಮಾಡಬೇಕೆಂದರೆ ಸುಮಾರು ೧೯ ಸ್ಕೀಮ್‌ಗಳನ್ನು ತಂದಿದ್ದೀರಿ. ಯಾರಿಗೋಸ್ಕರ ನೀವು ಇದನ್ನು ಅಕ್ವೈರ್ ಮಾಡುತ್ತೀರಿ? ಇವತ್ತು ಬೆಂಗಳೂರು ಸುತ್ತಮುತ್ತ ಇರತಕ್ಕ ರೈತರ ಬಾಳು ಬಿಕ್ಕಟ್ಟು ಹೋಗಿದೆ. ಯಾರಿಗೋಸ್ಕರ ಸೈಟ್‌ಗಳನ್ನು ಮಾಡುತ್ತಿದ್ದೀರಿ? ಇವತ್ತು ಯಾರು ಯಾರ ಜಾಗವನ್ನು ಮೊದಲನೇ ಸಾರಿ, ಎರಡನೇ ಸಾರಿ, ಮೂರನೇ ಸಾರಿ, ನಾಲ್ಕನೇ ಸಾರಿ ಅಕ್ವೈರ್ ಮಾಡಿದ್ದೀರಿ ಅಂತಹದ್ದನ್ನು ಇವತ್ತು ಕೊಟ್ಟು ಮುಗಿಸಿದ್ದೀರಾ? ಇವನ್ನೇ ಇನ್ನೂ ಹಂಚಿಲ್ಲ ಮತ್ತೆ ಹೊಸದಾಗಿ ಕರೆಯಲಾಗಿದೆ. ಹೊಸದಾಗಿ ಕರೆಯುವುದು ಏನಿದೆ? ಬೆಂಗಳೂರಿನ ಸುತ್ತಮುತ್ತ ಇರತಕ್ಕ ಪ್ರದೇಶ ಯಾರು ಯಾರು ಬರುತ್ತಾರೋ ಅವರಿಗೆ ಹಂಚಿಕೆ ಮಾಡತಕ್ಕ ವ್ಯಾಪಾರ ಮಾಡತಕ್ಕ ಪ್ರಶ್ನೆ ಇದು. ಇವತ್ತು ದಯಮಾಡಿ ಸಮಾಧಾನದಿಂದ ಯೋಚನೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಇವತ್ತು ಬೆಂಗಳೂರು ನಗರವನ್ನು ಉಳಿಸಬೇಕು ಎನ್ನುವ ಧ್ಯೇಯಧೋರಣೆ ನಿಮಗೆ ಇದೆಯೇ? ಇವತ್ತು ಎಷ್ಟು ಜನ ಕನ್ನಡಿಗರಿಗೆ ಅರ್ಹತೆಯ ಆಧಾರದ ಮೇಲೆ ಸೈಟುಗಳನ್ನು ಕೊಟ್ಟಿದ್ದೀರಿ? ವ್ಯಾಪಾರ ಮಾಡುವವರು, ಒಂದೊಂದು ಮನೆತನಕ್ಕೆ ೫,೬ ೭ ಸೈಟ್‌ಗಳನ್ನು ಅರ್ಜಿ ಕರೆದಾಗಲೆಲ್ಲಾ ಹಾಕಿದಾಗ ಅಲಾಟ್ ಮಾಡಿ ಇವತ್ತು ಕೊಡುತ್ತಿದ್ದೀರಿ. ಇದಕ್ಕೆ ನಾನು ದಾಖಲಾತಿಗಳನ್ನು ಕೊಡುತ್ತೇನೆ. ಒಂದು ಫ್ಯಾಮಿಲಿಗೆ ೫-೬ ಏಕೆ ಕೊಡುತ್ತೀರಿ? ಇವತ್ತು ಕನ್ನಡದವರಿಗೆ ಸೈಟು ಇಲ್ಲ. ಕನ್ನಡಿಗರು, ಕನ್ನಡಿಗರು, ಕನ್ನಡಿಗರು ಎಂದು ಮಾನ್ಯ ಇದಿನಬ್ಬನವರು ಈ ಹಿಂದೆ ಮಾತನಾಡಿದರು. ತಮಿಳರು ಬರುತ್ತಿದ್ದಾರೆ, ಆಂಧ್ರದವರು ಬರುತ್ತಿದ್ದಾರೆ. ಇವತ್ತು ಕನ್ನಡ ಮಾತನಾಡತಕ್ಕ ಜನರಿಗೆ ಎಷ್ಟು ಸೈಟುಗಳನ್ನು ಕೊಟ್ಟಿದ್ದೀರಿ? ಎಷ್ಟು ಸಂಖ್ಯೆಯಲ್ಲಿ ಕೊಟ್ಟಿದ್ದೀರಿ? ಇದನ್ನೆಲ್ಲಾ ಏಕೆ

ಹೇಳುತ್ತಿದ್ದೇನೆಂದರೆ, ದಯಮಾಡಿ ಇಂತಹ ಯೋಜನೆಗಳನ್ನು ಇಟ್ಟುಕೊಳ್ಳುವುದು ಬೇಡ. ೧ ಲಕ್ಷ ೬೭ ಸಾವಿರ ಸೈಟುಗಳನ್ನು ಮಾಡುತ್ತೇವೆಂದು ಯೋಜನೆ ಇಟ್ಟುಕೊಂಡರೆ ಸುತ್ತಮುತ್ತ ಇರತಕ್ಕ ರೈತರ ಬಾಳು ಹರಣ ಮಾಡಿದ ಹಾಗಾಗುತ್ತದೆ. ನನ್ನ ಪಕ್ಕದ ಕ್ಷೇತ್ರದ ಜನರ ಗೋಳನ್ನು ನಾನು ಕಂಡಿದ್ದೇನೆ. ಅವರಿಗೆ ದುಡ್ಡು ಕೊಟ್ಟರೂ ಎಲ್ಲಿಯವರೆಗೆ ಅದು ಇರುತ್ತದೆ? ಅವರ ಮಕ್ಕಳ ಗತಿ ಏನು? ಅವರಿಗೆ ಕೆಲಸ ಸಿಗುತ್ತದೆಯೇ? ದಯಮಾಡಿ ಇದನ್ನು ಯೋಚನೆ ಮಾಡಿ. ಬಿಡಿಎಯಲ್ಲಿ ಯಾರು ಛೇರ್ಮನ್ ಇದ್ದಾರೆ ಅವರು ಎಷ್ಟು ಬೇಕಾದರೂ ಜಾಗವನ್ನು ಅಕ್ವೈರ್ ಮಾಡಿ ಬಂದ ಬಂದವರಿಗೆ ಮಾರಿಬಿಟ್ಟು ಅದರಿಂದ ದುಡ್ಡು ಮಾಡತಕ್ಕದ್ದು ಮಾತ್ರ ಉದ್ದೇಶವಾ? ಇವತ್ತು ಅವಶ್ಯಕತೆ ಏನು ಇದೆ ಎಂಬುದನ್ನು ನೋಡಿ ಅವಶ್ಯಕತೆಯ ಆಧಾರದ ಮೇಲೆ ಅಕ್ವೈರ್ ಮಾಡಿ ಸೈಟ್‌ಗಳನ್ನು ಮಾಡಿ ಹಂಚಿಅವಶ್ಯಕತೆಯ ಆಧಾರದ ಮೇಲೆ ತಾವು ಸೈಟ್‌ಗಳನ್ನು ಅಲಾಟ್ ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ಇದನ್ನು ಬಿಟ್ಟು ಬೇರೆ ವ್ಯವಹಾರ ಮಾಡುವುದಕ್ಕೆ ಹೋಗಬೇಡಿ. ಈಗ ಹೌಸಿಂಗ್ ಸ್ಕೀಮ್ ಎಂದು ಮಾಡುತ್ತಿದ್ದೀರಿ. High Income Group and Economically Weaker Sections ಎಂದು ಹೇಳಿ ನಾಲ್ಕು ಕ್ಯಾಟಗರಿ ಮಾಡುತ್ತಿದ್ದೀರಿ. ಈ ನಾಲ್ಕು ಕ್ಯಾಟಗರಿ ಮಾಡಿ ಅರ್ಜಿ ಕರೆಯುತ್ತೀರಿ, ಇವತ್ತು ದುಡ್ಡು ಯಾರು ಕೊಡುತ್ತಾರೋ ಅವರಿಗೆ ಮನೆ ಕಟ್ಟಿಸಿಕೊಡುತ್ತೀರಿ ಆದರೆ ಇದರಲ್ಲಿ ಶೆಡ್ಯೂಲ್ಡ್ ಕಾಸ್ಟ್‌ಗೆ ರಿಸರ್ವೇಷನ್ ಏಕೆ ಮಾಡುವುದಿಲ್ಲ? ಅವರನ್ನೂ ಕರೆಯಿರಿ. Whoever is capable he will participate in the debenture He will take the. But why are you not reserving these Houses for Schedule Caste people? You make an ...... announcement that so many houses are reserved. ಇದನ್ನು ತಾವು ಮಾಡದೇ ಹೋದರೆ ಆಗುವುದಿಲ್ಲ ಆರು ವರ್ಷದ ಕನ್ಸೇಷನ್ ಎಂದು ಹೋದ ಕಾಂಗ್ರೆಸ್ ಸರ್ಕಾರದಲ್ಲಿ ಏನು ಕೊಟ್ಟಿದ್ದೆವು ಅದನ್ನು ಮೂರು ವರ್ಷಕ್ಕೆ ಇಳಿಸಿದ್ದೇವೆಂದು ಹೇಳಿದಿರಿ. ಆದರೆ ಆ ಕನ್ಸೇಷನ್ನನ್ನೇ ನೀವು ಕೊಡಬೇಕು

೬-೦೦ ಪಿ. ಎಂ.

ಮನೆಗಳನ್ನು ಕಟ್ಟುತ್ತಿದ್ದೀರಿ, ನೂರು ಮನೆಗಳಲ್ಲಿ ೨೫ ಮನೆಗಳು ಇಂತಹವರಿಗೆ ಕೊಡಬೇಕೆಂದು ಮೀಸಲಾಗಿ ಇಟ್ಟಿದ್ದೀರಾ? ನೀವು ಎಷ್ಟೆ ಮನೆಗಳನ್ನು ಕಟ್ಟಿ ಮೀಸಲಾಗಿ ಇಡದೇ ಹೋದರೆ ಪರಿಶಿಷ್ಟ ಜಾತಿಯವರಿಗೆ ನೀವು ಮನೆಗಳನ್ನು ಕೊಡುವುದಿಲ್ಲ. ಯಾರದೋ ಶಿಫಾರಸು ಬರುತ್ತದೆ ಅವರಿಗೆ ಮನೆಗಳು ಹೋಗುತ್ತವೆ. ಸೈಟುಗಳನ್ನು ಕೊಡುವಾಗಲೂ ಸಹ ಇದೇರೀತಿ ನಡೆಯುತ್ತದೆ. ಸೈಟುಗಳನ್ನು ಕೊಡಲಿಕ್ಕೆ ನೋಟೀಫಿಕೇಶನ್ ಹೊರಡಿಸುತ್ತೀರಿ, ಇಂತಿಷ್ಟು ಸೈಟುಗಳನ್ನು ಇಂತಹವರಿಗೆ ಮೀಸಲಾಗಿಟ್ಟಿದ್ದೇವೆಂದು ಯಾವ ನೋಟೀಫಿಕೇಶನ್ ನೀವು ಹೊರಡಿಸಿದ್ದೀರಿ? ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅವಶ್ಯಕತೆಯ ಆಧಾರದ ಮೇಲೆ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು ಯಾರಿದ್ದಾರ ಅವರಿಗೆ ಸೈಟುಗಳನ್ನು ಕೊಡುತ್ತಿದ್ದಾರೆಂದು ಕೇಳಿದ್ದೇನೆ. ಒಬ್ಬರಿಗೆ ೧೦ ಸೈಟು ಆದರೆ ಹತ್ತಾರು ಸದಸ್ಯರು ಇರುವ ಕಡೆ ನೂರಾರು ಸೈಟುಗಳು ಹೋಗುತ್ತವೆ. ಸದಸ್ಯರುಗಳು ಯಾರಿಗೆ ಬೇಕಾದರೂ ಮಾರತಕ್ಕ ವ್ಯವಸ್ಥೆ ಇದ್ದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಏತಕ್ಕೆ ಬೇಕು? ಹತ್ತಾರು ಸದಸ್ಯರುಗಳಿಗೆ ನೂರಾರು ಸೈಟುಗಳು ಹೋಗುತ್ತವೆ ಇದು ಏತಕ್ಕೆ? ಎರಡು ಮೂರು ಸಾರಿ ಯಾರು ಸೈಟುಗಳಿಗಾಗಿ ಅರ್ಜಿಯನ್ನು ಹಾಕಿಕೊಂಡಿದ್ದಾರೆ ಅವರಿಗೆ ಸೈಟುಗಳನ್ನು ಕೊಡುವ ತನಕ ಬೇರೆ ಅರ್ಜಿಗಳನ್ನು ಕರೆಯಬಾರದು. ಕಾಂಗ್ರೆಸ್ ಸರ್ಕಾರ ಇದ್ದಾಗ ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ಸೈಟು ಅಲಾಟ್ ಆದರೆ ಅವರು ಹಣ ತುಂಬಲಿಕ್ಕೆ ಆರು ವರ್ಷ ಸಮಯವಿತ್ತು. ನೀವು ಅದನ್ನು ಮೂರು ವರ್ಷಗಳಿಗೆ ಇಳಿಸಿದ್ದೀರಿ. ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ಸೈಟುಗಳನ್ನು ಕೊಡುವಾಗ ಯಾರು ಮೊದಲನೆಯ ಕಂತು ತುಂಬುತ್ತಾರೆ ಅಂತಹವರಿಗೆ ಆ ಸೈಟಿನ ಸ್ವಾಧೀನ ಕೊಡತಕ್ಕ ವ್ಯವಸ್ಥೆ ಆಗದಿದ್ದರೆ ಅವರಿಗೆ ಅನುಕೂಲವಾಗುವುದಿಲ್ಲ. ಕಂತುಗಳನ್ನು ಕಟ್ಟದಿದ್ದರೆ ಆಮೇಲೆ ಸೈಟನ್ನು ಕಿತ್ತುಕೊಳ್ಳಿ. ಹೈಯರ್ ಇನ್‌ಕಂ ಗ್ರೂಪ್, ಲೋಯರ್ ಇನ್‌ಕಂ ಗ್ರೂಪ್ ಮನೆಗಳನ್ನು ಏನು ಕಟ್ಟುತ್ತಿದ್ದೀರಿ ಆ ಮನೆಗಳಲ್ಲಿ ಇಂತಿಷ್ಟು ಮನೆಗಳನ್ನು ಇವರಿಗಾಗಿ ಮೀಸಲಾಗಿ ಇಡಲೇಬೇಕು. ನೀವು ಯಾವುದೇ ಸ್ಕೀಮ್‌ನಲ್ಲಾದರೂ ಮನೆ ಕಟ್ಟಿ.

ದರೂ ಅವರಿಗೆ ಮನೆಗಳು ಮೊದಲು ಇರಲೇಬೇಕು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ತಾವು ಸ್ವಲ್ಪ ಕಂಟ್ರೋಲ್‌ಗೆ ತೆಗೆದುಕೊಳ್ಳಬೇಕು. ತೆಗೆದುಕೊಳ್ಳದಿದ್ದರೆ ಮನಸೋಯಿಚ್ಛೆ ಮಾಡುತ್ತಿರುತ್ತಾರೆ. ಮತ್ತೊಂದು ವಿಚಾರ ಅಲ್ಲಿ ಛೇರ್ಮನ್ ಆದವರು ಲಂಡನ್, ಅಮೇರಿಕಾ ಎಲ್ಲೆಲ್ಲೊ ಪ್ರವಾಸ ಮಾಡುತ್ತಿದ್ದಾರೆ ಇದು ಏತಕ್ಕೆ ? ಇದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಫಾಯಿದೆ ಇದೆಯೆ ? ಅದು ಯಾರು ದುಡ್ಡು ? ಅವರು ವಿದೇಶದಲ್ಲಿ ಪ್ರವಾಸ ಮಾಡಲಿಕ್ಕೆ ಯಾರು ಹಣ ಕೊಡುತ್ತಾರೆ ? ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಣ ಕೊಡುತ್ತಾರೆಯೋ ಅಥವಾ ಅವರ ಸ್ವಂತವಾಗಿ ಹೋಗುತ್ತಾರೆಯೋ, ಸ್ವಂತವಾಗಿ ಹೋಗುವುದಾದರೆ ಹೋಗಲಿ. ಆದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಣದಿಂದ ಪ್ರವಾಸ ಹೋಗುವುದು ಸರಿ ಅನಿಸುವುದಿಲ್ಲ ಅದು ಅವಶ್ಯಕತೆಯಿಲ್ಲ. ಅಲ್ಲಿ ನಾನೂ ಕೆಲಸ ಮಾಡಿದ್ದೇನೆ, ನೀವೂ ಮಾಡಿದ್ದೀರಿ ಅವಕ್ಕೆ ನಾನು ಹೇಳುತ್ತಿದ್ದೇನೆ. ನಿಮ್ಮ ಥಿಂಕ್ ಟ್ಯಾಂಕ್, ಯೋಚನೆಯ ಕೆರೆಯ ಚಿಲುಮೆ ಏನಾದರೂ ಅವರನ್ನು ಹಾರಿಸಿ ಬಿಟ್ಟರೋ ಹೇಗೆ ? ಅವರನ್ನು ವಿದೇಶಕ್ಕೆ ಯಾರು ಕಳುಹಿಸುತ್ತಾರೋ ಏನೋ ಗೊತ್ತಿಲ್ಲ. ಅಧ್ಯಕ್ಷರು ಸಾವಿರಾರು ಸಾರಿ ವಿದೇಶಕ್ಕೆ ಹೋಗಿದ್ದಾರೆ. ಪುನಃ ಹೋಗುವುದು ಅನಾವಶ್ಯಕ ಇದೆ. ಅವರು ಏನಾದರೂ ಪರ್ಸೊನಲ್ ಆಗಿ ಹಣ ಹಾಕಿಕೊಂಡು ಹೋಗುವುದಾದರೆ ಹೋಗಲಿ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಣವನ್ನು ತೆಗೆದುಕೊಂಡು ವಿದೇಶಕ್ಕೆ ಹೋಗಿದ್ದರೆ ಅದನ್ನು ವಾಪಸ್ಸು ಕೊಡಬೇಕು. ನಾನು ಇಷ್ಟು ಹೇಳಿದ್ದೇನೆ, ದಯಮಾಡಿ ತಾವು ಉತ್ತರ ಕೊಡುವಾಗ ಪ್ರತಿಯೊಂದು ಪ್ರಶ್ನೆಗೂ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈಗ ಚರ್ಚೆ ಮುಕ್ತಾಯವಾಯಿತು, ಮಂತ್ರಿಗಳಿಂದ ಉತ್ತರ. ಮೊದಲು ಕಾರ್ಮಿಕ ಮಂತ್ರಿಗಳು ಉತ್ತರ ಕೊಡಲಿ. ಒಬ್ಬೊಬ್ಬ ಮಂತ್ರಿಗಳು ಅರ್ಧಗಂಟೆಯೊಳಗೆ ಮುಗಿಸಬೇಕು.

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).— ಮಾನ್ಯ ಅಧ್ಯಕ್ಷರೆ, ಕಾರ್ಮಿಕ ಖಾತೆಯಲ್ಲಿ ನಾಲ್ಕು ಇಲಾಖೆಗಳಿವೆ, ಅವುಗಳ ಬಗ್ಗೆ ಮಾನ್ಯ ಸಭಾಪತಿಯವರು ಸ್ವಲ್ಪ ಮಟ್ಟಿಗೆ ಮಾತನಾಡಿದ್ದಾರೆ, ಬೇರೆಯವರು ಹೆಚ್ಚಿಗೆ ಮಾತನಾಡಿಲ್ಲ ರಾಜ್ಯದಲ್ಲಿ ಸುಮಾರು ೩೦ ಪರ್ಸೆಂಟ್ ಕಾರ್ಮಿಕರು ಇದ್ದಾರೆ. ಕಾರ್ಮಿಕರ ಸಂಘಟನೆ, ಅವರಿಗೆ ಸಿಗತಕ್ಕ ಸಂಬಳ ಮತ್ತಿತರ ರಕ್ಷಣೆ ಕೊಡತಕ್ಕ ವಿಚಾರದಲ್ಲಿ ನಿಜವಾಗಿಯೂ ಅವರು ಹೇಳಿದಹಾಗೆ ಕೇವಲ ರಾಜ್ಯಸರ್ಕಾರದ್ದೆ ಅಲ್ಲ ಕೇಂದ್ರಸರ್ಕಾರದ್ದು ಜವಾಬ್ದಾರಿಯಿದೆ. ಕೇಂದ್ರಸರ್ಕಾರ ಯಾವರೀತಿಯ ಲಕ್ಷ್ಯಕೊಡಬೇಕಾಗಿತ್ತೋ ಈ ಇಲಾಖೆಯನ್ನು ಬೆಳಸಲಿಕ್ಕೆ ಒಂದು ಲಕ್ಷ್ಯನ್ನು ಕೊಡುತ್ತಿಲ್ಲ ಎನ್ನತಕ್ಕದ್ದು ಇಡೀ ದೇಶಕ್ಕೆ ಎಲ್ಲಾ ಕಾರ್ಮಿಕ ಸಂಘದವರಿಗೆ ಎಲ್ಲಾ ಕಾರ್ಮಿಕರಿಗೆ ಗುರುತು ಇದೆ. ಇವತ್ತಿನ ಪರಿಸ್ಥಿತಿಯಲ್ಲಿ ಕೆಲವು ಮುಷ್ಕರ ಮತ್ತು ಬೀಗಮುದ್ರೆಗೆ ಕಾರ್ಮಿಕರು ಅಥವಾ ಮಾಲೀಕರು ಇಂಥಾದ್ದಕ್ಕೆ ಕಾರಣವೆನ್ನತಕ್ಕದ್ದು, ಹಾಗೆ ಹೇಳುವುದು ಅಷ್ಟು ಸಮಂಜಸ ಅಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಸಭಾಪತಿಯವರಿಗೆ ಗೊತ್ತಿದೆ. ಒಂದಲ್ಲ ಒಂದು ಕಾರಣದಿಂದ ಕಾರ್ಮಿಕರಿಂದ ಮುಷ್ಕರ ಆಗುತ್ತದೆ. ಯಾವುದೋ ಕಾರಣದಿಂದ ಲಾಕೌಟ್ ಮಾಡಿಸುತ್ತಾರೆ. ಯಾವುದೇ ಕಾನೂನಿನಲ್ಲಿ ಅವರು ನಮ್ಮ ಕೈಗೆ ಸಿಕ್ಕದ ಹಾಗೆ ಸಸ್ಪೆನ್‌ಶನ್ ಆಫ್ ವರ್ಕ್ ಅಂತ ಹೇಳಿ ಹೊಸರೀತಿಯ ಯೋಜನೆ ಹಾಕಿಕೊಂಡು ಮಾಲೀಕ ವರ್ಗದವರು ತಮ್ಮ ಕಾರ್ಖಾನೆಯನ್ನು ಒಂದಲ್ಲಒಂದು ರೀತಿಯಿಂದ ಬಂದ್ ಮಾಡುತ್ತಾರೆ ನಾವು ಅವರ ಮೇಲೆ ಯಾವುದೇ ಕಾನೂನಿನ ಕ್ರಮ ತೆಗೆದುಕೊಳ್ಳುವಾಗ ಅಲ್ಲಿ ಒಂದು ಪ್ರಶ್ನೆ ಬರುತ್ತದೆ, ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಚರ್ಚೆ ಪ್ರಾರಂಭವಾಗುತ್ತದೆ. ಸಂಧಾನ ಮಾತುಕತೆ ನಡೆಸಬೇಕಾಗುತ್ತದೆ. ನಮಗೆ ಹಣ ಇಲ್ಲ. ನಾವು ನಡೆಸುವುದು ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಕೆಲವುಸಲ ಮಾಲೀಕ ವರ್ಗದವರು ಹೇಳುತ್ತಾರೆ. ಹಣಕಾಸಿಗೂ ಕಾರ್ಮಿಕರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ. ಮಾಲೀಕ ವರ್ಗದವರ ವಿಚಾರಗಳು ಏನಿರುತ್ತವೆ ಎಂದರೆ ಎಲೆಕ್ಟ್ರಿಸಿಟಿ, ಅಷ್ಟರ ಮಟ್ಟಿಗೆ ಸಿಗದೇ ಇದ್ದರೆ ಕಾರ್ಮಿಕರನ್ನು ಕಾರಣ ಮಾಡುತ್ತಾರೆ. ರಾಮೆಟಿರಿಯಲ್ಸ್ ರೇಟ್ ಜಾಸ್ತಿ ಆಯಿತು ಎಂದು ಅವರ ಸಂಬಳದಲ್ಲಿ ಕಡಿಮೆ ಮಾಡುತ್ತಾರೆ. ಒಂದಲ್ಲಒಂದು ರೀತಿಯಿಂದ ನೌಕರರೇ ಕಾರಣವೆಂದು ಹೇಳುತ್ತಾರೆ. ಇವತ್ತು ಇಡೀ ದೇಶದಲ್ಲಿ ಕಾರ್ಮಿಕರು ಯಾವರೀತಿಯಿಂದ ಯಾವ ಉದ್ಯೋಗದಲ್ಲಿ ಕೆಲಸ ಮಾಡುತ್ತಿದ್ದಾರೆ, ಯಾವ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಅದು ದಿನನಿತ್ಯ ಕಡಿಮೆಯಾಗುತ್ತಿದೆ. ಅಂಕಿಅಂಶಗಳನ್ನು ನೋಡಿದರೆ ಫ್ಯಾಕ್ಟರೀಸ್ ಹೆಚ್ಚಾಗಿ ಆಗುತ್ತವೆ. ಸುಮಾರು ನಾಲ್ಕು ವರ್ಷಗಳ ಪೂರ್ವದಲ್ಲಿ ಕರ್ನಾಟಕದಲ್ಲಿ ಇವುಗಳ ಸಂಖ್ಯೆ ೫ ಸಾವಿರ ಇದ್ದರೆ ಈಗ

೧೨೫೦೦ ಫ್ಯಾಕ್ಟರಿಗಳು ಆಗಿರಬಹುದು. ಆದರೆ ಇಡೀ ದೇಶದಲ್ಲಿ ಕೆಲಸ ಮಾಡತಕ್ಕಂಥ ಹೆಚ್ಚಿನ ಕಾರ್ಮಿಕರು ಅವರ ಸಂಖ್ಯೆ ಇದ್ದದ್ದು ಟೆಕ್ಸ್‌ಟೈಲ್ ಮಿಲ್ಸ್‌ಗಳಲ್ಲಿ ಎರಡನೇಯದ್ದು ಫುಡ್ ಪ್ರೊಡಕ್ಷನ್‌ನಲ್ಲಿ. ಮೂರನೇಯದು ಇಂಜಿನಿಯರಿಂಗ್. ನಾಲ್ಕನೇಯದ್ದು ಎಲೆಕ್ಟ್ರಿಸಿಟಿ ಉತ್ಪನ್ನ ಆಗತಕ್ಕಂಥಾದ್ದು. ಇವತ್ತಿನ ದಿವಸ ರೈತರು ಯಾವ ವಸ್ತುಗಳನ್ನು ಬೆಳೆಯುತ್ತಾರೆ, ಅಗ್ರೋ ಬೇಸ್ಡ್ ಇಂಡಸ್ಟ್ರೀಸ್, ಈ ಫ್ಯಾಕ್ಟರೀಸ್‌ನಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರ ಸಂಖ್ಯೆ ದಿನನಿತ್ಯ ಕಡಿಮೆಯಾಗುತ್ತಾ ಬರುತ್ತಿದೆ. ಮುಖ್ಯವಾಗಿ ಟೆಕ್ಸ್‌ಟೈಲ್ ಮಿಲ್‌ನಲ್ಲಿ ತಿಳಿದುಕೊಳ್ಳುವುದಾದರೆ ಇವತ್ತಿನ ದಿವಸ ಎಲ್ಲರಿಗೂ ಬಟ್ಟೆ ಬೇಕು. ಸುಮಾರು ೨೦ ವರ್ಷಗಳಿಗೆ ಮೊದಲು ಅದನ್ನು ಮಾಡತಕ್ಕಂಥ ಕಾರ್ಮಿಕರ ಸಂಖ್ಯೆ ೨೦ ಲಕ್ಷ ಇದ್ದರೆ, ಇವತ್ತಿನ ದಿನ ೧೦ ಲಕ್ಷಕ್ಕೂ ಕಡಿಮೆಯಾಗಿದೆ. ಇದೇರೀತಿ ಫುಡ್ ಪ್ರೊಡಕ್ಟ್ಸ್‌ನಲ್ಲಿ ಉದ್ಯಮಗಳು ಹೊಸ ಮಾಡರ್ನೈಸ್‌ಜೇಶನ್ ಹೆಸರಿನ ಮೇಲೆ ಹೆಚ್ಚಿನ ಬಂಡವಾಳ ಹಾಕಿ ಕಡಿಮೆ ಕೆಲಸಗಾರರನ್ನು ತೆಗೆದುಕೊಳ್ಳತಕ್ಕದ್ದು ನಡೆದಿದೆ. ಇವತ್ತು ದೇಶದಲ್ಲಿ ಈ ಪರಿಸ್ಥಿತಿ ನಡೆದಿದೆ. ಇದಕ್ಕೆ ಕೇವಲ ರಾಜ್ಯಸರ್ಕಾರ ಅಲ್ಲ ಕೇಂದ್ರಸರ್ಕಾರ ಕೂಡ ಅಷ್ಟೇ ಹೊಣೆಗಾರಿಕೆಯನ್ನು ಹೊಂದಿದೆ. ಯಾವ ಉತ್ಪಾದನೆ ಆಗುತ್ತದೆ, ಆ ಉತ್ಪನ್ನದ ಲಾಭ ಸಾಮಾನ್ಯವಾಗಿ ದೇಶದ ಎಲ್ಲಾ ಜನರಿಗೆ ಸಿಗಬೇಕು, ಮುಖ್ಯವಾಗಿ ಹಳ್ಳಿಯ ಜನರಿಗೆ ಕೂಡ ಮುಟ್ಟಬೇಕು. ರೈತರು, ಯಾವ ಭೂಗರ್ಭ ಗಣಿಸಂಪತ್ತನ್ನು ತೆಗೆಯತಕ್ಕಂಥ ಕಾರ್ಮಿಕರು ಮತ್ತು ಅರಣ್ಯದಿಂದ ಬರತಕ್ಕಂಥ ಉತ್ಪನ್ನ ಯಾರಿಗೆ ಹೋಗಬೇಕು ಅಧ್ಯಕ್ಷರೆ? ಕೇವಲ ಕೆಲವು ೩೦೦-೪೦೦ ಮನೆತನಗಳಿಗೆ ಹೋಗುತ್ತಿದೆ. ಇದಕ್ಕೆ ಕೇಂದ್ರಸರ್ಕಾರದ ನೀತಿಯು ಬದಲಾವಣೆ ಆಗಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಬಹುಶಃ ಈ ಸರ್ಕಾರದ ಕ್ಯಾಬಿನೇಟ್‌ನಲ್ಲಿ ಒಂದು ಡಿಸಿಶನ್ ಆಗಿದೆಯೋ ಗೊತ್ತಿಲ್ಲ. ಪ್ರತಿಯೊಬ್ಬ ಮಂತ್ರಿಯೂ ಉತ್ತರ ಕೊಡಲು ಪ್ರಾರಂಭ ಮಾಡುವಾಗ ಕೇಂದ್ರಸರ್ಕಾರವೇ ಕಾರಣವೆಂದು ಹೇಳಿ ಪ್ರಾರಂಭ ಮಾಡುತಾರೆ. ನಿನ್ನೆ ಅಳ್ವಾರವರು ಇದೇ ಧಾಟಿಯಲ್ಲಿ ಹೇಳಿದರು. ಆಮೇಲೆ ಅಸ್ನೋಟಿಕರವರು ಸಹ ಇದೇ ಧಾಟಿಯಲ್ಲಿ ಹೇಳಿದರು. ಈಗ ಈ ಮಂತ್ರಿಗಳು. ಇವರು ಒಂದು ರೆಸ್ಯೂಲೇಶನ್ ಮಾಡಿರಬೇಕೆಂದು ಕಾಣುತ್ತದೆ ಈ ಒಂದು ಪಾಯಿಂಟ್ ಅನ್ನು ಮೊದಲು ಹಾಡಿ ಮುಂದೆ ತಮ್ಮ ಕಾರ್ಯಕ್ರಮ ಹೇಳಬೇಕು. ಎಂದು ನಿರ್ಧರಿಸಿದ ಹಾಗೆ ಕಾಣುತ್ತದೆ.

ಶ್ರೀ ಎಸ್. ಕೆ. ಕಾಂತಾ.—ನಾನು ಆ ವಿಚಾರ ಮಾಡಲಿಲ್ಲ. ನಿಮಗೂ ಗೊತ್ತಿದೆ, ನಾವು ನೀವು ಕೂಡಿ ಕಾರ್ಮಿಕ ವರ್ಗದಲ್ಲಿ ಕೆಲಸ ಮಾಡಿದ್ದೇವೆ. ಎಷ್ಟು ಜನರು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿದ್ದರು ಈಗ ೧೨-೧೫ ವರ್ಷಗಳಲ್ಲಿ ಎಷ್ಟು ಜನ ಕಡಿಮೆಯಾಗಿದೆ ಎನ್ನುವಂತಾದ್ದು. ನಾವು ಎಷ್ಟೋ ಸಲ ಮಾತನಾಡುತ್ತೇವೆ. ನನ್ನ ಹತ್ತಿರ ಕೆಲವು ಅಂಕಿಅಂಶಗಳು ಇವೆ. ಕೇಂದ್ರ ಸರ್ಕಾರ ಪ್ರಕಟ ಮಾಡಿರುವಂಥ ಪ್ರೈವೇಟ್ ಫ್ಯಾಕ್ಟರಿಗಳಲ್ಲಿ ಮುಷ್ಕರ ಮತ್ತು ಲಾಕೌಟ್ಸ್ ಎಷ್ಟಾಗಿದೆ, ಮ್ಯಾನ್‌ಡೇಸ್ ಎಷ್ಟು ನಷ್ಟವಾಗಿದೆ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಎಷ್ಟು ನಷ್ಟವಾಗಿದೆ ಎನ್ನುವುದನ್ನು ನೋಡ ಪುದಾದರೆ ೧೯೮೦ರಲ್ಲಿ ೪ ಲಕ್ಷ ೧೩ ಸಾವಿರ ಜನರಿಗೆ ಕೆಲಸ ಇಲ್ಲದೇ ಇದ್ದರೆ. ಪ್ರೈವೇಟ್ ಸೆಕ್ಟರ್‌ನಲ್ಲಿ ೧೭ ಲಕ್ಷ ೮೯ ಸಾವಿರ ಜನರಿಗೆ ಕೆಲಸ ಇಲ್ಲ. ೧೯೮೧ರಲ್ಲಿ ಪಬ್ಲಿಕ್ ಸೆಕ್ಟರ್‌ನಲ್ಲಿ ೧೨ ಲಕ್ಷ ೭ ಸಾವಿರ ಜನರಿಗೆ ಕೆಲಸ ಇಲ್ಲ, ಪ್ರೈವೇಟ್ ಸೆಕ್ಟರ್‌ನಲ್ಲಿ ೨೬ ಲಕ್ಷ ೫೨ ಸಾವಿರ ಜನರಿಗೆ ಕೆಲಸ ಇಲ್ಲ. ೧೯೮೫ರಲ್ಲಿ ೩ ಲಕ್ಷ ೨೫ ಸಾವಿರ ಜನರಿಗೆ ಕೆಲಸ ಇಲ್ಲದೇ ಅಷ್ಟು ಮಾನವದಿನಗಳು ನಷ್ಟವಾಗಿವೆ. ಪ್ರೈವೇಟ್ ಸೆಕ್ಟರ್‌ನಲ್ಲಿ ೨೬ ಲಕ್ಷದ ೩ ಸಾವಿರದ ಜನರಿಗೆ ಅಷ್ಟು ಮಾನವ ದಿನಗಳು ನಷ್ಟವಾಗಿದೆ. ಇದು ಪರ್ಸೆಂಟೇಜ್. ಏಕೆಂದರೆ ೧೯೮೬ರಲ್ಲಿ ಕಡಿಮೆಯಾಗುತ್ತಿದೆ. ಪಬ್ಲಿಕ್ ಸೆಕ್ಟರ್‌ನಲ್ಲಿ ೨ ಲಕ್ಷ ಮಾನವದಿನಗಳು ನಷ್ಟವಾಗಿದೆ. ಅಂದರೆ ಪರ್ಸೆಂಟೇಜ್ ೯.೧ ಆದರೆ ಪ್ರೈವೇಟ್ ಸೆಕ್ಟರ್‌ನಲ್ಲಿ ೨೦ ಲಕ್ಷ ಮಾನವದಿನಗಳ ನಷ್ಟ ಆಗಿದೆ. ಅಂದರೆ ೯೦ ಪರ್ಸೆಂಟ್ ಇವರ ಅರ್ಥ ಏನೆಂದರೆ, ಪಬ್ಲಿಕ್ ಸೆಕ್ಟರ್‌ನಲ್ಲಿ ಹೆಚ್ಚಾಗಿ ಯಾವುದೇ ರೀತಿಯ ಮುಷ್ಕರ, ಬೀಗಮುದ್ರೆ ಆಗುತ್ತಿಲ್ಲ, ಆದರೆ ಪ್ರೈವೇಟ್ ಸೆಕ್ಟರ್‌ನಲ್ಲಿ ಆಗುವುದಕ್ಕೆ ಕಾರಣ ಇದೆ. ಈಗ ಕಾರ್ಮಿಕರ ಪರಿಸ್ಥಿತಿ ನಲ್ಲಿ ಏನಿದೆ ಎಂದು ಹೇಳಿದರೆ, ಸುಮಾರು ೨೪ ಕಾನೂನುಗಳು ಜಾರಿಗೆ ತಂದಿದೆ. ಇವರಿಗೆ ರಕ್ಷಣೆ ಕೊಡತಕ್ಕಂಥ ಇಲಾಖೆ, ಕಾರ್ಮಿಕ ಇಲಾಖೆ ಕಾರ್ಮಿಕರ, ಮಾಲೀ, ಮಾಲೀಕರು ಯಾವುದೇ ರೀತಿಯಲ್ಲಿ ತಪ್ಪಿದರೂ ನಾವು ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳುತ್ತೇವೆ. ಇವರ ಮೇಲೆ ಪ್ರಾಸಿಕ್ಯೂಷನ್ ಮಾಡುತ್ತೇವೆ, ಮೊಕದ್ದಮೆ ಮಾಡುತ್ತೇವೆ. ಇವರಿಂದ ಏನಾಗುತ್ತದೆ ೫೦೦ ರೂಪಾಯಿಗಳ ದಂಡ ಆಗಬಹುದು ಅಥವಾ ಒಂದು ಸಾವಿರ ರೂಪಾಯಿಗಳ ದಂಡ ಆಗ

ಬಹುದು. ಇದಕ್ಕಿಂತ ಹೆಚ್ಚಿಗೆ ಏನೂ ಮಾಡುವುದಕ್ಕಾಗುವುದಿಲ್ಲ. ಇದು ಮಾನ್ಯ ಸಭಾಪತಿಯವರಿಗೂ ಗೊತ್ತಿದೆ. ಮಾನ್ಯ ಖರ್ಗೆಯವರಿಗೂ ಗೊತ್ತಿದೆ, ಮತ್ತು ಮಾನ್ಯ ಬಸವಲಿಂಗಪ್ಪನವರಿಗೂ ಗೊತ್ತಿದೆ, ಮಾನ್ಯ ಧರ್ಮಸಿಂಗ್ ಅವರಿಗೂ ಗೊತ್ತಿದೆ. ಆದರೆ ಈ ಕಾನೂನನ್ನು ಕೇಂದ್ರ ಸರ್ಕಾರ ಬದಲಾವಣೆ ಮಾಡಬೇಕಾಗುತ್ತದೆ. ನಮ್ಮ ಹತ್ತಿರ ೨೮ ಕಾನೂನುಗಳಲ್ಲಿ ೧೬ ಕಾನೂನುಗಳು ಕೇಂದ್ರ ಸರ್ಕಾರದ ಮೇರೆಗೆ ನಡೆಸುತ್ತಿದ್ದೇವೆ. ಕೆ.ಇ.ಬಿ.ನವರು ಎಲೆಕ್ಟ್ರಿಸಿಟಿ ಚಾರ್ಜಸ್ ಜಾಸ್ತಿ ಮಾಡಿದರೆ, ಮಾಲೀಕರು ಕಾರ್ಮಿಕರ ಸಂಬಳವನ್ನು ಕಡಿತ ಮಾಡುತ್ತಾರೆ. ಈ ಬಗ್ಗೆ ಸಂಧಾನ ಮಾಡುವುದಕ್ಕೆ ಹೋದರೆ ಅವರ ಹಕ್ಕುಬಾಧ್ಯತೆಗಳಿಗೆ ಧಕ್ಕೆ ಬರುತ್ತದೆ. ಈ ವಿಷಯ ತಮಗೂ ಗೊತ್ತಿದೆ. ಲಿವಿಂಗ್ ಇಂಡೆಕ್ಸ್ ಜಾಸ್ತಿಯಾದರೆ, ಎಲ್ಲಾ ಕಾರ್ಮಿಕರಿಗೂ ಸಂಬಳ ಜಾಸ್ತಿ ಸಿಕ್ಕುವುದಿಲ್ಲ. ಆದರೆ, ನಾನ್ ಪ್ರೊಡಕ್ಟೀವ್ ಸಿಬ್ಬಂದಿಗೆ ಹೆಚ್ಚು ಸಂಬಳ ಸಿಗುತ್ತದೆ. ಇವತ್ತು ರಾಜ್ಯಸರ್ಕಾರದಲ್ಲಿ ಕೆಲಸ ಮಾಡತಕ್ಕಂಥ ವರು ಇರಬಹುದು, ಕೇಂದ್ರಸರ್ಕಾರದಲ್ಲಿ ಕೆಲಸ ಮಾಡತಕ್ಕ ಗುಮಾಸ್ತರು ಇರಬಹುದು .ಅವರಿಗೆ ಯಾವುದೇ ಸಂದರ್ಭದಲ್ಲೂ ಸಂಬಳಕ್ಕೆ ತೊಂದರೆ ಆಗುವುದಿಲ್ಲ. ಇವರುಗಳಿಗೆ ಒಂದು ರೀತಿಯ ಸಂಬಳದ ಶ್ರೇಣಿಗಳನ್ನು ನಿಗದಿ ಮಾಡಿರುತ್ತಾರೆ. ಇದೇ ರೀತಿ ಸಂಘಟಿತ ಕಾರ್ಮಿಕರಿಗೆ ನಮ್ಮ ದೇಶದಲ್ಲಿ ಒಂದು ರೀತಿಯ ಕನಿಷ್ಠ ವೇತನ ಇಲ್ಲ. ನೂರಾರು ರೀತಿಯ ಕನಿಷ್ಠವೇತನ ಇದೆ ನೂರಾರು ವರ್ಷಗಳಿಂದ ಬಂದಿರತಕ್ಕ ಟೆಕ್ಸ್‌ಟೈಲ್ ಇಂಡಸ್ಟ್ರೀಸ್ ಇವತ್ತು ಸಿಕ್ ಆಗುತ್ತಿವೆ. ಸುಮಾರು ೧೯೫೮ರಿಂದ ಈವರೆಗೂ ಅದೇ ಪರಿಸ್ಥಿತಿ ಇದೆ. ಈಗ ಸಿದ್ದೇಶ್ವರ, ಗಣೇಶ್ವರ ಫ್ಯಾಕ್ಟರಿಗಳೇ ಅಲ್ಲ ಇವತ್ತು ನೂರಾರು ಫ್ಯಾಕ್ಟರಿಗಳು ಬಂದ್ ಆಗಿವೆ. ನಮ್ಮ ರಾಜ್ಯಕ್ಕಿಂತ ಬೇರೆ ರಾಜ್ಯಗಳಲ್ಲಿ ಇದಕ್ಕಿಂತ ಹೆಚ್ಚು ಫ್ಯಾಕ್ಟರಿಗಳನ್ನು ಮುಚ್ಚಿದ್ದಾರೆ. ಕಾರ್ಮಿಕರ ಸಂಖ್ಯೆ ಇವತ್ತು ಕಡಿಮೆಯಾಗುತ್ತಿದೆ. ಇದರ ಮೂಲ ಕಾರಣವನ್ನು ಹುಡುಕದೇ ಕೇವಲ ಕಾರ್ಮಿಕರಲ್ಲಿ ದೋಷ ಇದೆ ಎಂದು ಹೇಳುವುದು ತಪ್ಪಾಗುತ್ತದೆ. ಆದರೆ ಇವತ್ತಿನದಿವಸ ಎಂ.ಎಸ್.ಕೆ.ಮಿಲ್ ಬಂದ್ ಆಗಿದೆ ಮಿನರ್ವ ಮಿಲ್ ಬಂದ್ ಆಗಿದೆ. ಎನ್.ಟಿ.ಸಿ.ನವರು ಇವನ್ನೆಲ್ಲಾ ರಾಷ್ಟ್ರೀಕರಣ ಮಾಡಿ, ಅಲ್ಲಿಯ ಜನರಿಗೆ ಕೆಲಸ ಕೊಡಬೇಕು. ಕಾರ್ಮಿಕರ ಕೈಗೆ ಕೆಲಸ ಸಿಗಬೇಕು. ಟೆಕ್ಸ್‌ಟೈಲ್ ಇಂಡಸ್ಟ್ರೀಸ್ ಲೇಬರ್ ಇಂಟೆನ್‌ಸೀವ್ ಎಂದು ಹೇಳಿ ಕೇಂದ್ರ ಸರಕಾರ ಈ ಒಂದು ಉದ್ಯಮವನ್ನು ೧೯೭೩ರಲ್ಲಿ ರಾಷ್ಟ್ರೀಕರಣ ಮಾಡಿದ ಮೇಲೆ ೧೬ ವರ್ಷದ ನಂತರ ಹೇಳುತ್ತಾರೆ ನಷ್ಟವಾಗುತ್ತಿದೆ ಎಂದು ಇವತ್ತಿನದಿವಸ ಎಲ್ಲಾ ಕಾನೂನುಗಳನ್ನೂ ಬದಿಗಿಟ್ಟು ಎನ್.ಟಿ.ಸಿ.ಯವರು ಮಿನರ್ವ ಮಿಲ್‌ನಲ್ಲಿ ಅಲ್ಲಿಯ ಕಾರ್ಮಿಕರು ಎಲ್ಲ ರೀತಿಯ ಸಹಕಾರ ಮಾಡುತ್ತಿದ್ದರೂ ಕೂಡಾ ಅಲ್ಲಿದ್ದ ಸುಮಾರು ಐದನೂರು ಪ್ಲೇನ್ ಲೂಮ್ಸ್‌ನ್ನು ತೆಗೆದುಹಾಕಿ ೭೦ ರಷ್ಟು ಲೂಮ್ಸ್‌ನ್ನು ಕೂಡಿಸಲಿಕ್ಕೆ ಪರ್ಮಿಷನ್ ಕೊಟ್ಟ ತಕ್ಷಣ ೩೮೦ ಜನ ಕಾರ್ಮಿಕರನ್ನು ಒಂದು ಮುಂಜಾನೆ ಅವರನ್ನು ಕೆಲಸದಿಂದ ತೆಗೆದು ಹಾಕಿದರು ಈ ರೀತಿ ಕೆಲಸದಿಂದ ತೆಗೆದುಹಾಕಿದಾಗ ಏನಾಗುತ್ತದೆ ತಾವೇ ಹೇಳಿರಿ ಇಲ್ಲಿಯವರೆಗೆ ಅವರಿಗೆ ಎಲ್ಲಾ ಸವಲತ್ತುಗಳನ್ನು ಕೊಡುತ್ತಿದ್ದರು. ಇಡೀ ದೇಶದಲ್ಲಿ ಇಂತಹ ಸವಲತ್ತುಗಳನ್ನು ಕೊಡುತ್ತಿದ್ದಾರೆ. ಅದನ್ನು ಒಂದು ದಿವಸ, ಆ ಪ್ರಿವಿಲೇಜಸ್‌ನ್ನು ಉಪಯೋಗ ಮಾಡುತ್ತಿದ್ದ ಕಾರ್ಮಿಕರನ್ನು ತೆಗೆದು ಹಾಕಿದರು. ಹತ್ತಾರು ವರ್ಷಗಳಿಂದ ಕೆಲಸ ಮಾಡಿದಂಥ ಕಾರ್ಮಿಕರು ಎಲ್ಲಿಗೆ ಹೋಗಬೇಕು ? ಅದೇ ರೀತಿಯಾಗಿ ಎಂ.ಎಸ್.ಕೆ. ಮಿಲ್. ಗುಲ್ಬರ್ಗಾದಲ್ಲಿ ಕೂಡಾ ಎಲೆಕ್ಟ್ರಿಸಿಟಿ ಬಿಲ್ ಕಟ್ಟದೇ ಬಂದ್ ಮಾಡುವುದಕ್ಕೆ ಹೊರಟಿದ್ದಾರೆ ಇವತ್ತು ನಾವು ಇದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬೇಕು ಹೇಳಿರಿ? ಈ ರೀತಿಯಿಂದ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನ್ನು ಸರಕಾರವೇ ನಡೆಸತಕ್ಕಂಥ ಕಾಲದಲ್ಲಿ ತನ್ನ ಉದ್ದಿಮೆಗಳನ್ನು ಈ ರೀತಿ ನಡೆಸಿದರೆ ನಾವು ಪ್ರೈವೇಟ್ ಇಂಡಸ್ಟ್ರೀಸ್‌ನವರಿಗೆ ಯಾವ ರೀತಿ ಹೇಳಬೇಕು ತಾವೇ ಹೇಳಿರಿ. ಈ ರೀತಿಯಿಂದ ಉದ್ದಿಮೆಗಳು ನಡೆಯ ಕೂಡದು ಒಂದು ಒಳ್ಳೆಯ ಕೈಗಾರಿಕಾ ನೀತಿ ಆಗಬೇಕು ಈ ದೇಶದಲ್ಲಿ ಯಾವ ಯಾವ ಕೈಗಾರಿಕೆಗಳು ಯಾವರೀತಿ ನಡೆಯಬೇಕು, ಅವುಗಳಿಗೆ ಲೈಸೆನ್ಸ್ ಯಾವ ರೀತಿ ಕೊಡಬೇಕೆಂಬ ಬಗ್ಗೆ ಒಂದು ಸಮಗ್ರವಾದ ಯೋಜನೆ ಮಾಡದೇ ಹೋದರೆ ಕಾರ್ಮಿಕರಿಗೆ ಅನ್ಯಾಯವಾಗುತ್ತದೆ. ಯಾವುದೇ ರೀತಿಯ ಫ್ಯಾಕ್ಟರಿಗಳು ಬಂದ್ ಆದರೂ ಸಂಧಾನ ಮಾಡಿ ಅದನ್ನು ಬಗೆಹರಿಸುವುದಕ್ಕೆ ಸಾಧ್ಯತೆ ಇಲ್ಲ, ಅದನ್ನು ನಡೆಸಲಿಕ್ಕೆ ಸಾಧ್ಯತೆ ಇಲ್ಲ ಈಗ ಬಿ.ಎಫ್.ಐ.ಆರ್ ಎಂದು ಮಾಡಿರುತ್ತಾರೆ, ಸಿಕ್ ಇಂಡಸ್ಟ್ರೀಸ್‌ಗೆ ವೈಯಬಿಲಿಟಿ ಇದ್ದರೆ ಎಲ್ಲಾ ಕನ್ಸೆಷನ್ ಕೊಡುತ್ತೇವೆ ಎಂದು ಮಾಡಿದ್ದಾರೆ. ಮಾಲೀಕರು ದಿನನಿತ್ಯ ಇಲ್ಲೇ ಕೆಲಸ ಮಾಡುತ್ತಿದ್ದಾರೆ ದಿನನಿತ್ಯ ಒಂದು ಫ್ಯಾಕ್ಟರಿ ಬಂದ್ ಮಾಡುತ್ತಿದ್ದಾರೆ. ನಿನ್ನೆಯವರೆಗೆ ಒಳ್ಳೆಯ ರೀತಿಯಿಂದ ನಡೆಯುತಕ್ಕ ಫ್ಯಾಕ್ಟರಿಗಳೂ ಇವತ್ತಿನ ದಿವಸ ಸಿಕ್ ಆಗಿದೆ ಮೂರು ವರ್ಷದ ಬ್ಯಾಲೆನ್ಸ್ ಶೀಟ್ ತೋರಿಸಿ ಅದು ಸಿಕ್ ಆಗಿದೆ ಎಂದು ಹೇಳಿ, ಕೇಂದ್ರ ಸರಕಾರದಿಂದ. ರಾಜ್ಯ ಸರಕಾರದಿಂದ ವಂತ್ತಷ್ಟು ಹಣ ಪಡೆದು ಮತ್ತೆ ಕೆಲವು ದಿವಸಗಳ

ಕಾಲ ನಡೆಸುತ್ತಾರೆ. ಆದರಲ್ಲಿ ಕಾರ್ಮಿಕರು ಕಡಿಮೆ ಆಗಬೇಕು, ಅವರು ರಿಟ್ರೆಂಚ್ ಆಗಬೇಕು ಬೇರೆ ಬೇರೆ ರೀತಿಯ ಸವಲತ್ತುಗಳು ಸಿಗಬೇಕು, ಸೇಲ್ಸ್‌ಟ್ಯಾಕ್ಸ್ ಕೇಳಬಾರದು, ಈ ರೀತಿ ಸವಲತ್ತುಗಳನ್ನು ಕೇಳುವ ಪ್ರವೃತ್ತಿಯಿಂದ ಕಾರ್ಮಿಕರಿಗೆ ರಕ್ಷಣೆ ಸಿಗದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಹೋಗಬೇಕಾದರೆ ನೀತಿ ಬದಲಾವಣೆಯಾಗಬೇಕು. ನಾನು ಟೀಕೆ ಮಾಡುತ್ತಿಲ್ಲ. ಆದರೆ ಕಾರ್ಮಿಕರಿಗೆ ನಿಜವಾದ ರಕ್ಷಣೆ ಸಿಗಬೇಕಾದರೆ ಸಮಗ್ರವಾದ ನೀತಿ ಆಗಬೇಕು. ಔದ್ಯಮಿಕ ನೀತಿಯಲ್ಲಿ ಬದಲಾವಣೆ ಆಗಬೇಕು. ಕೇವಲ ಕಾರ್ಮಿಕ ನೀತಿ ಮಾತ್ರವಲ್ಲ. ನಾವು ಕ್ಲೋಷರ್‌ಗೆ ಪರ್ಮಿಷನ್ ಕೊಡುವುದಿಲ್ಲ, ಡಿನೈ ಮಾಡುತ್ತೇವೆ ಎಂದರೆ, ಕಂಪೆನೀಸ್ ಆಕ್ಟ್ ಪ್ರಕಾರ ಲಿಕ್ವಿಡೇಟ್ ಮಾಡುತ್ತಾರೆ. ಎ.ಬಿ.ಎಲ್. ಫ್ಯಾಕ್ಟರಿಯನ್ನು ಟಾಟಾದವರು ನಾನಿ ಫಾಲ್ಕಿವಾಲಾ ರಂಥವರು ನಡೆಸುತ್ತಿದ್ದರು. ಆ ಫ್ಯಾಕ್ಟರಿಯಿಂದ ಎಲ್ಲಿಯವರೆಗೆ ಲಾಭ ಬಂತು, ಅಲ್ಲಿಯವರೆಗೆ ನಡೆಸಿದರು. ಬಾಯ್ಲರ್ಸ್‌ಗೆ ಆರ್ಡರ್ಸ್ ಇಲ್ಲ ಎಂದು ಲಿಕ್ವಿಡೇಟ್ ಮಾಡಿಕೊಂಡು ಹೋದರು. ಕ್ಲೋಷರ್‌ಗೆ ಪರ್ಮೀಷನ್ ಸಹ ಕೇಳಲಿಲ್ಲ. ನಾವೆಲ್ಲಾ ಕೂಡಿ ಹೋಗಬೇಕಾಯಿತು. ಅವರೂ ನಾವೂ ಕೂಡಿ ಕೇಂದ್ರ ಸರಕಾರಕ್ಕೆ ಮೊರೆ ಇಡಬೇಕಾಯಿತು. ಬಿ.ಹೆಚ್.ಇ.ಎಲ್.ಗೆ ಕೊಡುವಂತಹ ಆರ್ಡರ್‌ನ್ನು ಈ ಫ್ಯಾಕ್ಟರಿಗೆ ಕೊಡಿ ಎಂದು ಹೇಳಬೇಕಾಯಿತು. ಈ ಫ್ಯಾಕ್ಟರಿಯವರು ಬಿ.ಹೆಚ್.ಇ.ಎಲ್ ಗಿಂತ ಹೆಚ್ಚು ಹಣ ತೆಗೆದುಕೊಳ್ಳುತ್ತಾರೆ. ಅವರಿಗೆ ಲಾಭ ಇಲ್ಲ. ಆದರೂ ಕೂಡಾ ಮೂರು ಸಾವಿರ ಕಾರ್ಮಿಕರ ಸಲುವಾಗಿ ಕೇಂದ್ರ ಸರಕಾರದಿಂದ ಒತ್ತಾಯ ಮಾಡಿಸಿ ಈ ಫ್ಯಾಕ್ಟರಿಗೆ ಮತ್ತೆ ೫೫ ಕೋಟಿ ರೂಪಾಯಿಗಳನ್ನು ಐ.ಡಿ.ಬಿ.ಐ. ಮುಖಾಂತರ ಸಾಲ ಕೊಡಿಸಿ ನಡೆಸಬೇಕಾಯಿತು. ಆದರೆ ಇವರು ಎಷ್ಟು ದಿವಸ ನಡೆಸುತ್ತಾರೆ ನಮಗೆ ಗೊತ್ತಿಲ್ಲ. ಔದ್ಯಮಿಕ ನೀತಿ ಈ ರೀತಿಯಾದರೆ, ಯಾವುದೇ ಫ್ಯಾಕ್ಟರಿಗಳೂ ಮುಂದೆ ಬರುವುದಿಲ್ಲ. ನಮ್ಮಲ್ಲಿ ಹತ್ತು ಹದಿನೈದು ಫ್ಯಾಕ್ಟರೀಸ್ ಈ ಸ್ಥಿತಿಗೆ ಬಂದು ಬಿಟ್ಟಿವೆ. ದೀಪಕ್ ಕೇಬಲ್ಸ್ ಬಂದ್ ಆಯಿತು. ಮಿನರ್ವಾ ಮಿಲ್ಸ್‌ನ್ನು ಬಂದ್ ಮಾಡತಕ್ಕಂಥ ನೀತಿಯನ್ನು ವಿಚಾರ ಮಾಡುತ್ತಿದ್ದಾರೆ.

ಅದೇ ರೀತಿಯಾಗಿ ಅಲೆಂಬಿಕ್ ಫ್ಯಾಕ್ಟರಿ ಇದೆ, ಅಲ್ಲಿ ಲಾಭವಿಲ್ಲವೆಂದು ಅಲ್ಲ ನಾವು ನಡೆಸುವುದಿಲ್ಲ ನಮಗೆ ಎಲೆಕ್ಟ್ರಿಸಿಟಿ ಕಡಿಮೆ ಇದೆ ೩೦ ಪರ್ಸೆಂಟ್ ಆದರೆ ನಡೆಯುವುದಿಲ್ಲವೆಂದು ಹೇಳುತ್ತಾರೆ. ನಾವು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹಾಕಿದ್ದೇವೆ ಅದು ನಡೆಯುತ್ತಿದೆ. ಇದೆಲ್ಲಾ ನೋಡಿದಾಗ ಈ ಒಂದು ಸಮಗ್ರವಾದಂತಹ ನೀತಿ ಇಟ್ಟುಕೊಂಡು ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೂಡಿ ಮಾಡಬೇಕಾಗುತ್ತದೆ. ಕೇವಲ ಒಂದು ಕೈನಿಂದ ಚಪ್ಪಾಳೆ ಬಾರಿಸಿದರೆ ಆಗುವುದಿಲ್ಲ ಅಥವಾ ಒಬ್ಬರನ್ನೂ ದೂಷಿಸಿದರೆ ಆಗುವುದಿಲ್ಲ. ಕಾರ್ಮಿಕರ ಬಗ್ಗೆ ವಿರೋಧ ನೀತಿ ಏನು ಇದೆ ಅದು ಹೋಗಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.— ಕೇಂದ್ರದ ನೀತಿ ಬದಲಾವಣೆಯಾಗುವವರೆಗೆ ಸುಮ್ಮನೆ ಇದ್ದುಬಿಡಿ.

ಶ್ರೀ ಎಸ್. ಕೆ. ಕಾಂತ.— ನಾವೂ ಸುಮ್ಮನೆ ಕೂತಿಲ್ಲ ಎಷ್ಟು ಕೆಲಸ ಮಾಡಬೇಕೋ ಅಷ್ಟು ಮಾಡಿದ್ದೇವೆ. ನಮ್ಮಲ್ಲಿ ಕೆಲವು ಫ್ಯಾಕ್ಟರಿಗಳಲ್ಲಿ ಅಂದರೆ ಉದಾಹರಣೆಗೆ ಹೇಳುವುದಾದರೆ ಕೆ. ಆರ್ ಮಿಲ್‌ನಲ್ಲಿನ ಕಾರ್ಮಿಕರು ೧೫೦ ರಿಂದ ೨೦೦ ರೂಪಾಯಿ ಕಡಿಮೆ ಸಂಬಳ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದಾರೆ. ಮಾನ್ಯ ಪಂಪಾಪತಿಯವರು ಅವರ ಸಂಬಳದಲ್ಲಿ ಏನಾದರೂ ಹಿಡಿದುಕೊಳ್ಳಲಿ ಕಟ್ ಮಾಡಿಕೊಳ್ಳಲಿ ಎರಡು ವರ್ಷ ಕಟ್ ಮಾಡಿಕೊಳ್ಳಲಿ ನಂತರ ಯಾವಾಗ ವಯಬಲಿಟಿ ಬರುತ್ತದೆಯೋ ಆಗ ಆ ಹಣವನ್ನು ವಾಪಸ್ ಮಾಡಲೀ ಎಂದು ಹೇಳುತ್ತಾರೆ. ಕನಿಷ್ಟ ವೇತನ ಇವತ್ತು ಎಲ್ಲಾ ಕಡೆಗಳಲ್ಲೂ ಒಂದೇ ರೀತಿಯಿಂದ ಇಲ್ಲ. ಶುಗರ್ ಇಂಡಸ್ಟ್ರೀಸ್‌ನಲ್ಲಿ ಒಂದು ಕನಿಷ್ಟ ವೇತನವಿದ್ದರೆ ಟೆಕ್ಸ್‌ಟೈಲ್‌ನಲ್ಲಿ ಬೇರೆ ರೀತಿ ಇದೆ ಇಂಜಿನಿಯರಿಂಗ್‌ನಲ್ಲಿ ಬೇರೆ ಇದೆ ಸಿಮೆಂಟ್ ಫ್ಯಾಕ್ಟರಿಯಲ್ಲಿ ಬೇರೆ ರೀತಿ ಇದೆ. ಈ ಎಲ್ಲಾ ವಿಚಾರಗಳನ್ನು ವಿಮರ್ಶಿಸಿ ನೋಡಿದಾಗ ಗೊತ್ತಾಗುತ್ತದೆ. ದೇಶದಲ್ಲಿನ ಎಲ್ಲಾ ಕಾರ್ಮಿಕರು ಕಲೆತರೆ ಒಂದು ಕೋಟಿಗಿಂತಲೂ ಹೆಚ್ಚು ಸಂಘಟಿತ ಕಾರ್ಮಿಕರಿದ್ದಾರೆ. ನಮ್ಮ ರಾಜ್ಯದಲ್ಲಿ ೧೫೦೦ ಫ್ಯಾಕ್ಟರಿಗಳು ಇದ್ದು ಸುಮಾರು ೮ ಲಕ್ಷ ಜನ ಸಂಘಟಿತ ಕಾರ್ಮಿಕರಿದ್ದಾರೆ. ಈ ಕಾರ್ಮಿಕರಿಗೆ ಬಹಳಷ್ಟು ರಕ್ಷಣೆ ಕೊಡಬೇಕು. ಈ ಸರಕಾರ ಅದೇ ರೀತಿ ರಕ್ಷಣೆ ಕೊಡುತ್ತಿದೆ. ಯಾವುದೇ ಮುಚ್ಚತಕ್ಕಂತಹ ಫ್ಯಾಕ್ಟರಿಗಳು ಏನು ಇವೆ ಅವನ್ನು ದಿನನಿತ್ಯ ಪ್ರಾರಂಭ ಮಾಡಿ ಯಾವ್ಯಾವ ಸವಲತ್ತುಗಳನ್ನು ಅವರಿಗೆ ರಾಜ್ಯ ಸರ್ಕಾರದಿಂದ ಕೊಡಬೇಕೋ ಆ ಸವಲತ್ತುಗಳನ್ನು ಕೊಡಲಿಕ್ಕೆ ನಾವು ತಯಾರಿದ್ದೇವೆ ಅದು ಪ್ರಾರಂಭವಾಗಬೇಕು. ಇವತ್ತು ಕಾರ್ಮಿಕರು ಕೂಡ ಮುಂದೆ ಬಂದಿದ್ದಾರೆ. ನಮಗೆ ಸ್ವಲ್ಪ

ಸಂಬಳ ಕಡಿಮೆಯಾದರೂ ಚಿಂತೆ ಇಲ್ಲ ಅದನ್ನು ಉಳಿಸಿಕೊಂಡು ಮಾಡಿ ಎಂದು ಹೇಳುತ್ತಿದ್ದಾರೆ. ಕೆ.ಆರ್ ಮಿಲ್‌ನವರು ಹೇಳುತ್ತಿದ್ದಾರೆ. ೨೦೦, ೧೦೦೦ ವರ್ಕರ್ಸ್ ಅನ್ನು ಕಡಿಮೆ ಮಾಡಿದರೂ ಪರವಾಗಿಲ್ಲ ನಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಇವೆಲ್ಲವನ್ನೂ ನೋಡಿದಾಗ ನನ್ನ ಅನಿಸಿಕೆ ಇಷ್ಟೇ. ಈ ವಿಚಾರದಲ್ಲಿ ನಾವು ಔದ್ಯೋಗಿಕ ನೀತಿ ಮತ್ತು ಕಾರ್ಮಿಕ ನೀತಿ ಮತ್ತು ಇಲ್ಲಿ ಬೇರೆ ಬೇರೆ ರಾ ಮೆಟೀರಿಯಲ್ ಏನು ಸಿಗುತ್ತದೆ ವಿದ್ಯುಚ್ಛಕ್ತಿ ಮತ್ತು ಇತರ ವಿಚಾರಗಳನ್ನೂ ಈ ಎಲ್ಲ ಸಮಸ್ಯೆಗಳನ್ನು ಪರ್ಯಾಲೋಚಿಸಿ ನಂತರ ಈ ಒಂದು ವಿಚಾರಕ್ಕೆ ಬರಬಹುದು ಎಂದು ನನಗನ್ನಿಸುತ್ತದೆ. ಅದನ್ನು ಬಿಟ್ಟು ಕಾರ್ಮಿಕರಿಗೆ ಕಾರ್ಮಿಕ ಇಲಾಖೆ ಎಷ್ಟು ಬೇಕೋ ಅಷ್ಟು ಸಹಾಯವನ್ನು ಮಾಡಿಲ್ಲ ವೆಂದು ಹೇಳುವುದು ಸರಿಯಲ್ಲ. ಕಾರ್ಮಿಕ ಇಲಾಖೆ ಇವತ್ತು ಚಿಕ್ಕದಾಗಿದ್ದರೂ ಕೂಡ ಕಾರ್ಮಿಕರ ಬಗ್ಗೆ, ಅವರಿಗೆ ಎಷ್ಟು ಬೇಕೋ ಅಷ್ಟು ಸಹಾಯವನ್ನು ರಾಜ್ಯ ಸರಕಾರದಿಂದ ಮಾಡುತ್ತಿದ್ದೇವೆ. ಮಾನ್ಯ ಪಂಪಾಪತಿಯವರು ಕೆಲವು ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಅಧಿಕಾರಿಗಳ ಸಂಖ್ಯೆ ಕಡಿಮೆ ಯಿದೆ ಅಲ್ಲಿ ಇನ್ಸ್‌ಪೆಕ್ಷನ್ ಅಥಾರಿಟಿ ಇಲ್ಲವೆಂದು. ಹೌದು ಬಹಳ ಕಡಿಮೆ ಇದೆ ಇದನ್ನು ಹೆಚ್ಚಿಗೆ ಮಾಡ ಬೇಕಾಗುತ್ತದೆ. ಅಸಂಘಟಿತ ಕಾರ್ಮಿಕರು ನಮ್ಮ ರಾಜ್ಯದಲ್ಲಿ ಸುಮಾರು ಒಂದು ಕೋಟಿ ಇದ್ದಾರೆ. ಕೇಂದ್ರ ಸರ್ಕಾರದ ಒಂದು ಸೆನ್ಸಸ್‌ನಲ್ಲಿ ೬೪ ಕೋಟಿ ಜನ ಸಂಖ್ಯೆಯಲ್ಲಿ ೩೫ ಕೋಟಿ ಜನ ಅಸಂಘಟಿತ ಕಾರ್ಮಿಕರಿದ್ದಾರೆ ಅವರು ಬಿಲೋ ಪಾವರ್ಟಿ ಲೈನಿನಲ್ಲಿ ಬಂದಿದ್ದಾರೆ. ಆ ಕುಟುಂಬಕ್ಕೆ ಅರ್ಬನ್ ಏರಿಯಾದಲ್ಲಿ ಒಂದು ವರ್ಷಕ್ಕೆ ಕುಟುಂಬದ ಆದಾಯ ಸುಮಾರು ೬೩೦೦ ಕ್ಕಿಂತ ಕಡಿಮೆ ಆದಾಯ ಇರ ಕೂಡದು ರೂರಲ್ ಏರಿಯಾದಲ್ಲಿ ೬೪೦೦ ರೂಪಾಯಿಗಳಿಗಿಂತ ಕಡಿಮೆ ಆದಾಯ ಇರಕೂಡದು ಎನ್ನತಕ್ಕಂಥ ವಿಚಾರ ಕೇಂದ್ರ ಸರಕಾರದ್ದು ಇದೆ. ಇದು ಇದ್ದಾಗ ನಾವು ಅವರಿಗೆ ಕನಿಷ್ಟ ವೇತನವನ್ನು ಕೊಡಲಿಕ್ಕೆ ತೊಂದರೆಯಾಗಿ ಅವರಿಗೆ ಏನು ಸಿಕ್ಕಬೇಕಾಗಿದೆ ಅದು ಸಿಕ್ಕದೇ ವಂಚಿತರಾಗತಕ್ಕಂತಹ ಜನರು ಸಾಕಷ್ಟು ಇದ್ದಾರೆ. ಆ ಜನರಿಗೆ ನಾನು ಹೇಳತಕ್ಕಂಥಾದ್ದು ಇಷ್ಟೇ ಕಾರ್ಮಿಕರ ಸಂಘಗಳು ನಿಷ್ಠೆಯಿಂದ ಕೆಲಸ ಮಾಡಬೇಕು. ಸೋಷಿಯಲ್ ಆರ್ಗನೈಸೇಷನ್ಸ್‌ಗಳು ಚೆನ್ನಾಗಿ ಕೆಲಸ ಮಾಡಬೇಕು ಎಂದು. ನಮ್ಮ ಇಲಾಖೆಯಲ್ಲಿರುವ ಇನ್ಸ್‌ಪೆಕ್ಟರುಗಳ ಸಂಖ್ಯೆ ಏನು ಇದೆ, ಆ ಸಂಖ್ಯೆಯಿಂದ ನಾವು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಕಾರ್ಮಿಕ ಸಂಘಗಳನ್ನು ಮಾಡಿಕೊಂಡು ಕಾರ್ಮಿಕರು ಸಂಘಟಿತರಾಗಬೇಕು. ಸೋಷಿಯಲ್ ಆರ್ಗನೈಸೇಷನ್ ಕೂಡ ಕಾರ್ಮಿಕ ರಿಗೆ ಅನುಕೂಲ ಒದಗಿಸಿಕೊಡುವುದಕ್ಕೆ ಮುಂದೆ ಬರಬೇಕು. ಕಾರ್ಮಿಕರಿಗೆ ಕನಿಷ್ಟ ವೇತನವನ್ನು ಕೊಡಿಸುವುದಕ್ಕೆ ಸಂಘ ಸಂಸ್ಥೆಗಳು ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕನಿಷ್ಟ ವೇತನದ ಬಗ್ಗೆ ನಮ್ಮ ರಾಜ್ಯ ಸರ್ಕಾರ ಬಹಳ ಕೆಲಸ ಮಾಡಿದೆ. ಈಗ ಮಾನ್ಯ ಸದಸ್ಯರಾದ ಪಂಪಾಪತಿಯವರು ಅಸಂಘಟಿತ ಕಾರ್ಮಿಕರಿಗೆ ರಾಜ್ಯ ಸರ್ಕಾರದ ಕೆಲವು ಇಲಾಖೆ ಗಳಲ್ಲೂ ಸಹ ಕನಿಷ್ಟ ವೇತನವನ್ನು ಕೊಡುತ್ತಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ನಮ್ಮ ಇಲಾಖೆ ಏನು ಮಾಡಿದೆ ಎಂಬ ಬಗ್ಗೆ ದಿನಾಂಕ ೩೧-೩-೧೯೮೮ರ ಕನ್ನಡ ಪ್ರಭಾ ದಿನ ಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. ಅದು ಏನೆಂದರೆ ‘ಕನಿಷ್ಟ ವೇತನ ಕಾಯಿದೆ ಅನ್ವಯ ಮಳವಳ್ಳಿ ತಾಲ್ಲೂಕಿನಲ್ಲಿ ಪಿ ಡಬ್ಲ್ಯೂಡಿ ಇಲಾಖೆಯಲ್ಲಿ ಕಾರ್ಮಿಕರಿಗೆ ತುಟ್ಟಿಭತ್ಯೆ ನೀಡಲಿಲ್ಲವೆಂದು ಸಲ್ಲಿಸಿದ್ದ ಅರ್ಜಿಯನ್ನು ಪರಿಶೀಲಿಸಿದ ಜಿಲ್ಲಾ ಕಾರ್ಮಿಕ ಅಧಿಕಾರಿಯವರು ಸಂಬಂಧಪಟ್ಟ ೬೬ ಕಾರ್ಮಿಕರಿಗೆ ಒಟ್ಟು ೫೫,೯೯೨ ರೂಪಾಯಿಗಳನ್ನು ತುಟ್ಟಿಭತ್ಯೆಯಾಗಿ ಕೊಡಬೇಕೆಂದೂ ಹಾಗೂ ೧೬,೫೦೦ ರೂಪಾಯಿಗಳನ್ನು ಪರಿಹಾರ ಧನವಾಗಿ ಕೊಡ ಬೇಕೆಂದೂ ಮಳವಳ್ಳಿ ಡಿವಿಷನ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಗೆ ಆದೇಶ ನೀಡಿದ್ದಾರೆ’’ ಎಂದು ತಿಳಿದು ಬಂದಿದೆ. ಅದೇ ರೀತಿ ಅಬೀದುಲ್ಲಾಖಾನ್ ಎನ್ನುವವರು ತನ್ನ ಲಾರಿ ಚಾಲಕನಿಗೆ ಕನಿಷ್ಟ ವೇತನವನ್ನು ಕೊಡಲಿಲ್ಲವೆಂದು ಕೇಸ್ ದಾಖಲು ಮಾಡಿಕೊಂಡು ಪೂರ್ತಿ ಸಂಬಳವನ್ನು ಲಾರಿ ಚಾಲಕನಿಗೆ ಕೊಡಿಸಲಾಗಿದೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ. ರಾಜ್ಯ ಸರ್ಕಾರದ ಯಾವುದೇ ಇಲಾಖೆ ಯಾಗಲೀ, ಪಿ. ಡಬ್ಲ್ಯೂ.ಡಿ. ಇಲಾಖೆಯಾಗಲೀ, ಸೋಷಿಯಲ್ ವೆಲ್‌ಫೇರ್ ಇಲಾಖೆಯಾಗಲೀ, ಅಗ್ರಿಕಲ್ಚರ್ ಇಲಾಖೆಯಾಗಲೀ ಅಥವಾ ಇನ್ಯಾವುದೇ ಇಲಾಖೆಯವರಾಗಲೀ ಕಾರ್ಮಿಕರಿಗೆ ಕನಿಷ್ಟ ವೇತನ ವನ್ನು ಕೊಡುತ್ತಿಲ್ಲವೆಂದು ನಮಗೆ ದೂರು ಕೊಟ್ಟಿದ್ದೇ ಆದರೆ ಅಂಥ ಕಾರ್ಮಿಕರಿಗೆ ಪೂರ್ತಿ ಸಂಬಳವನ್ನು ನಾವು ಕೊಡಿಸುತ್ತೇವೆ. ಷೆಡ್ಯೂಲ್ ಆಫ್ ಎಂಪ್ಲಾಯ್‌ಮೆಂಟ್‌ನಲ್ಲಿ ಈಗ ೩೭ ಉದ್ಯಮಗಳಿಗೆ ಕನಿಷ್ಟ ವೇತನವನ್ನು ನಿಗದಿ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಈಗಾಗಲೇ ಷೆಡ್ಯೂಲ್ ಆಫ್ ಎಂಪ್ಲಾಯ್‌ಮೆಂಟ್‌ನಲ್ಲಿ ೩೬ ಉದ್ಯಮಗಳಿಗೆ ಕನಿಷ್ಟ ವೇತನವನ್ನು ನಿಗದಿ ಮಾಡಿದ್ದೇವೆ. ಅದರಲ್ಲೂ ಮುಖ್ಯವಾಗಿ ಅಗ್ರಿಕಲ್ಚರಲ್ ಲೇಬರರ್ಸ್‌ಗೆ ನಾವು ಕನಿಷ್ಟ ವೇತನವನ್ನು ೧೨ ರೂಪಾಯಿಗಳಿಗೆ

ಏರಿಸಿದ್ದೇವೆ. ಮೊದಲು ಇವರು ಕನಿಷ್ಠ ವೇತನ ೭ ರೂಪಾಯಿ ೮೦ ಪೈಸೆ ಇತ್ತು. ಕನಿಷ್ಠ ವೇತನದ ಬಗ್ಗೆ ನಮ್ಮ ರಾಜ್ಯ ಸರ್ಕಾರ ಒಂದು ರೀತಿಯ ಪ್ರಗತಿಪರ ದಾರಿಯಲ್ಲಿ ಹೋಗುತ್ತಿದೆ. ಅದೂ ಅಲ್ಲದೆ ಕನಿಷ್ಠ ವೇತನವನ್ನು ಕಾರ್ಮಿಕರಿಗೆ ಕೊಡದೇ ಇದ್ದ ಮಾಲೀಕರಿಂದ ಒಟ್ಟು ೧೫ ಲಕ್ಷ ರೂಪಾಯಿ ವರೆಗೆ ರಿಕವರಿ ಮಾಡಿದ್ದೇವೆ. ಯಾವುದೇ ರೀತಿಯಲ್ಲೂ ನಮ್ಮ ಸರ್ಕಾರ ಹಿಂದೆ ಬಿದ್ದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಅಧ್ಯಕರು.— ಸ್ವಲ್ಪ ಸ್ಪೀಡ್ ಆಗಿ ಹೇಳ್ರಿ.

ಶ್ರೀ ಎಸ್. ಕೆ. ಕಾಂತಾ.— ನಾನು ಅಂಕಿ ಅಂಶಗಳನ್ನು ಮಾತ್ರ ಹೇಳುತ್ತೇನೆ, ಅಧ್ಯಕ್ಷರೇ, ಕಾರ್ಮಿಕರ ನ್ಯಾಯಾಲಯಗಳಲ್ಲಿ ಸುಮಾರು ೭,೧೬೦ ಕೇಸ್‌ಗಳು ಇನ್ನೂ ಇತ್ಯರ್ಥವಾಗದೆ ಬಾಕಿ ಉಳಿದಿವೆ. ಅದಕ್ಕೋಸ್ಕರ ಈ ವರ್ಷ ಮೈಸೂರಿನಲ್ಲಿ ಒಂದು ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ನ್ನು ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಚಿಕ್ಕಮಂಗಳೂರಿನಲ್ಲಿ ಸಹ ಒಂದು ಲೇಬರ್ ಕೋರ್ಟ್ ಮಾಡಿ ಕಾರ್ಮಿಕರ ದೂರುಗಳನ್ನು ಆದಷ್ಟು ತೀವ್ರವಾಗಿ ಸೆಟಲ್‌ಮೆಂಟ್ ಮಾಡಬೇಕೆನ್ನುವ ವಿಚಾರ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೭ ಸಾವಿರ ಕೇಸ್‌ಗಳಲ್ಲಿ ಬರೀ ಎರಡು ಸಾವಿರ ಕೇಸ್‌ಗಳು ಡಿಸ್ಪೋಸ್ ಆಗಿವೆ.

ಶ್ರೀ ಎಸ್. ಕೆ. ಕಾಂತ.— ಅದಕ್ಕೋಸ್ಕರ ಕೋರ್ಟ್‌ಗಳನ್ನು ಹೆಚ್ಚಿಗೆ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಆಫೀಸರ್‌ಗಳನ್ನು ಕರೆದು ಮೀಟಿಂಗ್ ಮಾಡಿದ್ದೇನೆ. ಈಗ ಹಾಲಿ ಇರುವ ನ್ಯಾಯಾಲಯಗಳಲ್ಲೂ ೪ ಕಡೆ ಜಡ್ಜ್‌ಗಳ ಪೋಸ್ಟ್ ಖಾಲಿ ಇವೆ. ಮಾನ್ಯ ಮಂತ್ರಿಯವರಾದ ಲಕ್ಷ್ಮೀಸಾಗರ್‌ರವರಿಗೆ ಇದರ ಬಗ್ಗೆ ಹೇಳಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್ ರವರು ಹೈಕೋರ್ಟ್ ಚೀಫ್ ಜಸ್ಟೀಸ್‌ನವರಿಗೆ ಪತ್ರ ಬರೆದು ಜಡ್ಜ್‌ಗಳನ್ನು ಅಪಾಯಿಂಟ್ ಮಾಡ ಬೇಕೆಂದು ಕೇಳಿಕೊಂಡಿದ್ದಾರೆ, ಜಡ್ಜ್‌ಗಳನ್ನು ಕೊಟ್ಟಿದ್ದೇ ಆದರೆ ಪೆಂಡಿಂಗ್ ಕೇಸಸ್ ಏನು ಇವೆಯೋ ಅವುಗಳನ್ನು ತೀವ್ರವಾಗಿ ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

೬–೩೦ ಪಿ.ಎಂ.

ಶ್ರೀ ಬಿ. ಬಸವಲಿಂಗಪ್ಪ.—ತಾವುಗಳು ಬಹಳ ಚೆನ್ನಾಗಿ ಕೆಲವು ವಿವರಗಳನ್ನು ಕೊಟ್ಟಿದ್ದೀರಿ ಹಾಗಾದರೆ ರಾಜ್ಯದಲ್ಲಿ ಒಟ್ಟು ಎಷ್ಟು ಫ್ಯಾಕ್ಟರಿಗಳು ಮುಚ್ಚಿದ್ದಾವೆ ಮತ್ತು ಎಷ್ಟು ಫ್ಯಾಕ್ಟರಿಗಳಲ್ಲಿ ಸ್ಟ್ರೈಕ್ ಆಗಿದೆ ಮತ್ತು ಹೀಗೆ ಸ್ಟ್ರೈಕ್ ಆದ ಎಷ್ಟು ಫ್ಯಾಕ್ಟರಿಗಳನ್ನು ತಾವುಗಳು ಸರಿ ಮಾಡಿದ್ದೀರಿ ಎಂದು ಹೇಳ ಬೇಕು. ರಾಜ್ಯದಲ್ಲಿನ ಎಲ್ಲಾ ಫ್ಯಾಕ್ಟರಿಗಳನ್ನು ಮುಚ್ಚಿ ನೀವು ಬಹಳ ಒಳ್ಳೆಯ ಕಾರ್ಮಿಕ ಮಂತ್ರಿ ಎಂದು ಹೇಳಿದರೆ ಏನು ಪ್ರಯೋಜನ ?

ಶ್ರೀ ಎಸ್.ಕೆ. ಕಾಂತಾ.—ಮಾನ್ಯ ಸದಸ್ಯರು ಕೇಳುವ ಎಲ್ಲಾ ಪ್ರಶ್ನೆಗಳಿಗೆ ನನ್ನ ಹತ್ತಿರ ವಿವರ ಗಳು ಇವೆ. ಆದರೆ ಸಮಯದ ಅಭಾವದಿಂದ ಅದನ್ನೆಲ್ಲಾ ಹೇಳುವುದಕ್ಕೆ ಅಸಾಧ್ಯವಾಗಿದೆ. ಒಂದು ರೀತಿಯಲ್ಲಿ ಬೇರೆ ರಾಜ್ಯಗಳಿಗೆ ನಮ್ಮ ರಾಜ್ಯವನ್ನು ಹೋಲಿಸಿದರೆ, ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿ ಫ್ಯಾಕ್ಟರಿಗಳು ಮುಚ್ಚಿವೆ ಎಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿಯೂ ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಇಂತಹ ವಿಷಯಗಳಲ್ಲಿ ಜಾತಕವು ಇಬ್ಬರದ್ದೂ ಗೊತ್ತಾಗಬೇಕು ಅದಕ್ಕಾಗಿ ನಿಮ್ಮದು ಮತ್ತು ನಮ್ಮದು ಜಾತಕವನ್ನು ಹೇಳ ಬೇಕಾಗುತ್ತದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ. – ಹಾಗಾದರೆ ನಮ್ಮ ಜಾತಕಕ್ಕೆ ನಿಮ್ಮ ಜಾತಕವನ್ನು ಹೋಲಿಸಿದಾಗ ಗೊತ್ತಾಗುತ್ತದೆ. ಸುಮ್ಮನೆ ಅದನ್ನೆಲ್ಲಾ ಹೇಳುವುದನ್ನು ಬಿಟ್ಟು ನಮ್ಮ ಸರಕಾರ ಇರು ವಾಗ ಏನಿತ್ತು ಮತ್ತು ನಿಮ್ಮ ಸರಕಾರ ಬಂದಮೇಲೆ ಏನಾಗಿದೆ ಎಂದು ಹೇಳಿ. ಅದನ್ನು ಬೇಕಾದರೆ ಒಪ್ಪಿಕೊಳ್ಳೋಣ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಲಕ್ಷ್ಮೀಸಾಗರ್‌ರವರಿಗೆ ಬೇರೆ ಕೆಲಸ ಇಲ್ಲವೇ ? ಅವರು ಐದು ವರ್ಷಗಳಿಂದ ನಾನು ನೋಡುತ್ತಾ ಇದ್ದೇನೆ ಇಡೀ ಇಂಡಿಯಾ ದೇಶದ

ವಿಚಾರವನ್ನು ಇಲ್ಲಿ ಹೇಳುತ್ತಾ ಇರುತ್ತಾರೆ. ಪ್ರಥಮವಾಗಿ ಬಂದಾಗ ಹೇಳಲಿ ಎಂದು ಒಂದು ವರ್ಷ ನೋಡಿದ್ದಾಯಿತು, ಅನಂತರ ಹೊಸಬರು ಏನೋ ಹೇಳುತ್ತಾರೆ ಎಂದು ಕೇಳಿದ್ದಾಯಿತು. ಆದರೆ ಅವರು ಅವರ ಈ ಹವ್ಯಾಸವನ್ನು ಹೆಚ್ಚಿಗೆ ಮಾಡಿದರೇ ಹೊರತು ಕಡಿಮೆ ಮಾಡಲಿಲ್ಲ. ಹೀಗೆ ಹೋಲಿಕೆ ಮಾಡುವ ಕೆಲಸವನ್ನು ಮಾಡುತ್ತಲೇ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನೀವುಗಳು ಹೀಗೆ ೪೦ ವರ್ಷಗಳಿಂದ ಜನರಿಗೆ ಟೋಪಿ ಹಾಕಿಕೊಂಡು ಬಂದಿದ್ದೀರಲ್ಲ ? ನೀವು ಇಷ್ಟು ವರ್ಷಗಳಲ್ಲಿ ಏನು ಮಾಡಿದ್ದೀರಿ ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ,—ನೀವು ಕೂಡ ನಮ್ಮ ಜೊತೆಯಲ್ಲಿ ಇರುವಾಗ ಟೋಪಿ ಹಾಕಿದ್ದೀರಿ ಈಗ ಮಾತ್ರ ತೆಗೆದಿದ್ದೀರಿ...

ಶ್ರೀ ಎ. ಲಕ್ಷ್ಮೀಸಾಗರ್.—ನೀವು ೪೦ ವರ್ಷಗಳಿಂದ ಏನು ಮಾಡಿದ್ದೀರಿ ಎಂದರೆ ಏನೂ ಇಲ್ಲ ಎಂದು ಹೇಳ ಬೇಕಾಗುತ್ತದೆ...

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ನೀವು ಕೂಡ ಟೋಪಿ ಹಾಕಿಕೊಳ್ಳುತ್ತೀರಿ. ನಿಮ್ಮ ಮುಂದೆ ಅಲ್ಲಿ ಕುಳಿತವರು ಕೂಡ ಕೆಲವರು ಟೋಪಿ ಹಾಕಿಕೊಳ್ಳುತ್ತಾರೆ. ಈಗ ಮಾತ್ರ ಅವರಲ್ಲಿ ಕೆಲವರು ತೆಗೆದಿದ್ದಾರೆ ಅಷ್ಟೆ...

ಶ್ರೀ ಆರ್.ಎನ್. ನಾಯ್ಕ್.—ಮಾನ್ಯ ಮುಖ್ಯಮಂತ್ರಿಯವರು...

ಶ್ರೀ ಆರ್.ವಿ. ದೇಶಪಾಂಡೆ—ನಿಮಗೆ ಮುಖ್ಯಮಂತ್ರಿಯವರ ವಿಚಾರವನ್ನು ಬಿಟ್ಟರೆ ಬೇರೆ ಯಾರ ಹೆಸರೂ ನೆನಪು ಬರುವುದಿಲ್ಲವೇ ? ಯಾವಾಗಲೂ ಮುಖ್ಯಮಂತ್ರಿಯವರ ವಿಷಯದಲ್ಲಿಯೇ ಮಾತನಾಡುತ್ತಿರುತ್ತೀರಲ್ಲಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಮ್ಮ ನಾಯ್ಕರವರು ನಾರ್ಥ್‌ಕೆನರಾದಲ್ಲಿದ್ದಾಗ ರಾಮಕೃಷ್ಣ ಹೆಗಡೆಯವರಿಂದ ನನಗೆ ಓಟು ಬಂತು ಎಂದು ಸಾರ್ವಜನಿಕರ ಎದುರು ಹೇಳುವ ಬುದ್ಧಿವಂತ ಮಾಡುತ್ತಾರೆ ಆದರೆ ಇಲ್ಲಿ ಬಂದು ಹೀಗೆ ಹೇಳುತ್ತಾರೆ...

ಶ್ರೀ ಆರ್.ಎನ್. ನಾಯ್ಕ್.—ನೀವೆಲ್ಲ ಟೋಪಿಗಳ ಜೊತೆಯಲ್ಲಿ ಎಷ್ಟು ದಿವಸ ಇದ್ದಿರಿ ? ಅಷ್ಟು ದಿವಸ ಇದ್ದರೂ ನೀವುಗಳು ಏಕೆ ಟೋಪಿ ಹಾಕುವುದನ್ನು ಕಲಿತಿಲ್ಲ ?

ಅಧ್ಯಕ್ಷರು.—ಕಾಂತಾರವರೇ ಬೇಗನೆ ಮುಕ್ತಾಯ ಮಾಡಿ,

ಶ್ರೀ ಎಸ್.ಕೆ. ಕಾಂತಾ.—ನಮ್ಮ ಖಾತೆಯ ವಿಭಾಗಗಳಾದ ಎಂಪ್ಲಾಯ್‌ಮೆಂಟ್ ಎಕ್ಸ್‌ಚೆಂಜ್ ಮತ್ತು ಇಎಸ್‌ಐಗಳೂ ಕೂಡ ಬಹಳ ಒಳ್ಳೆಯ ಕೆಲಸವನ್ನು ಮಾಡಿವೆ ಮತ್ತು ಮಾಡುತ್ತಾ ಇವೆ ಹಾಗೆಯೇ ಐ.ಟಿ.ಐ.ಗಳಲ್ಲಿಯೂ ಕೂಡ ಒಳ್ಳೆಯ ಕೆಲಸವಾಗಿದೆ ಈ ವರ್ಷ ರಾಜ್ಯಸರಕಾರದ ವತಿಯಿಂದ ೩೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ ಅದೇ ರೀತಿಯಲ್ಲಿ ಕೇಂದ್ರ ಸರಕಾರದಿಂದ ೩೦ ಲಕ್ಷ ರೂಪಾಯಿಗಳು ಬಂದಿವೆ. ನಮ್ಮ ಸರಕಾರದ ೩೦ ಲಕ್ಷ ರೂಪಾಯಿಗಳನ್ನು ಸೇರಿಸಿ ಒಟ್ಟು ೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೇವೆ. ಅಲ್ಲಿರುವ ಹಳೆಯ ಮೆಷಿನರಿಗಳನ್ನು ಬದಲಾಯಿಸಿ ಹೊಸ ಮೆಷಿನರಿಗಳನ್ನು ಅಳವಡಿಸ ಬೇಕೆಂದಿದ್ದೇವೆ. ಅಂತಹ ಒಂದು ಯೋಜನೆಯು ಇದೆ ಹಾಗೆಯೇ ವಿಶ್ವಬ್ಯಾಂಕ್‌ನ ಒಂದು ಯೋಜನೆಯೂ ಕೂಡ ಇದೆ. ಅದರ ಬಗ್ಗೆ ಕೇಂದ್ರ ಸರಕಾರದ ಜೊತೆಗೆ ಚರ್ಚೆ ನಡೆಸಿದ್ದೇವೆ ಈ ವಿಷಯದಲ್ಲಿ ನಮ್ಮ ಇಲಾಖಾ ಅಧಿಕಾರಿಗಳ ಮತ್ತು ಕಾರ್ಮಿಕ ಸಂಘಗಳ ಸಹಾಯ ಮತ್ತು ಎಲ್ಲಾ ಮಾನ್ಯ ಸದಸ್ಯರುಗಳ ಸಹಾಯದಿಂದ ಒಳ್ಳೆಯ ರೀತಿಯಲ್ಲಿ ನಡೆಸುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಬಯಸುತ್ತೇನೆ. ಇಷ್ಟು ಮಾತುಗಳನ್ನು ನನ್ನ ಇಲಾಖಾ ಬೇಡಿಕೆಯ ಮೇಲೆ ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ.—ಅವರು ಹೇಳಿರುವುದನ್ನೆಲ್ಲಾ ಒಪ್ಪುತ್ತೇನೆ. ಮುಖ್ಯವಾಗಿ ಅವರು ಹೆಚ್ಚು ಅಧಿಕಾರವನ್ನು ಪಡೆಯಬೇಕು ಮತ್ತು ಸರಕಾರದಿಂದ ಹೆಚ್ಚು ಹಣವನ್ನು ಪಡೆಯಬೇಕು ಮತ್ತು ಹೆಚ್ಚು ನೌಕರರನ್ನು ಪಡೆಯಬೇಕು ಈ ಮೂರು ಆದರೆ ಅವರು ಸಮರ್ಪಕವಾಗಿ ಕಾರ್ಮಿಕರ ಕಲ್ಯಾಣವನ್ನು ಕಾರ್ಮಿಕರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅದನ್ನು ಮಾಡುವುದಕ್ಕೆ ಏನು ಮಾಡುತ್ತಾರೆಂಬುದನ್ನು ಹೇಳಬೇಕು.

ಶ್ರೀ ಎಸ್.ಕೆ. ಕಾಂತ.—ನಾನು ಈಗಾಗಲೇ ಯೋಜನೆಯನ್ನು ಕೊಟ್ಟಿದ್ದೇನೆ ಅದು ಸರಕಾರದ ಮುಂದೆ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನೇಕ ಖಾಸಗಿ ಐ.ಟಿ.ಐ.ಗಳನ್ನು ತೆರೆಯಲು ಸರಕಾರ ಅನುಮತಿ ಕೊಟ್ಟಿದೆ ಆದರೆ ಅದರಲ್ಲಿ ಏನಾಗುತ್ತದೆ ಎಂದರೆ ಡೊನೇಷನ್ ಕೊಟ್ಟೇ ಹೋದತಕ್ಕಂತಹ ಅವಕಾಶ ಇದೆ. ಆದರೆ ಬಡವರ ಮಕ್ಕಳಿಗೆ ಅನುಕೂಲವಾಗಬೇಕಾದರೆ ಕೆಲವು ಬ್ಯಾಕ್‌ವರ್ಡ್ ಏರಿಯಾದಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್ ಅನ್ನು ತೆರೆಯಬೇಕೆಂದು ನಾನು ಹೋದ ಸಲ ಕೇಳಿದ್ದೆ ಆಗ ಗುರು ಮಿಠ್‌ಕಲ್‌ನಲ್ಲಿ ತೆರೆಯುತ್ತೇವೆಂದು ಹೇಳಿದ್ದರು ಆದರೆ ಶಹಬಾದ್‌ನಲ್ಲಿ ತೆಗೆದ ಮೇಲೆ ಗುರು ಮಿಠ್‌ಕಲ್ ಬಗ್ಗೆ ಮರೆತರು ಅದರ ಬಗ್ಗೆ ಹೇಳಬೇಕು ಇನ್ನು ಬೀಡಿ ಕಾರ್ಮಿಕರ ನಿವಾಸಕ್ಕೆಂದು ಮನೆಗಳನ್ನು ಕಟ್ಟಿ ಕಾರ್ಮಿಕರ ಕಾಲೋನಿ ಮಾಡಿ ಮನೆ ಕಟ್ಟಿ ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೇವೆ, ಕೇಂದ್ರ ಸರಕಾರದಿಂದ ಹೆಚ್ಚಿನ ಹಣ ಬರುತ್ತದೆ ಆ ಕೆಲಸವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದರು. ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರಿಗೆಂದು ಎಷ್ಟು ಮನೆಗಳನ್ನು ಕಟ್ಟಿಸುತ್ತೀರಿ ಎಂಬ ಬಗ್ಗೆ ತಾವು ಹೇಳಬೇಕು ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಬಹಳಷ್ಟು ಕ್ಲರ್ಕ್‌ಗಳು ಹಿಂದೆ ಬಂದವರನ್ನು ಮೊದಲು ಹಾಕುವುದು ಮೊದಲು ಬಂದವರನ್ನು ಹಿಂದೆ ಹಾಕುವುದು ಮಾಡಿ ರಿಜಿಸ್ಟ್ರೇಷನ್‌ನಲ್ಲಿ ವ್ಯತ್ಯಾಸ ಮಾಡಿ ಇಂಟರ್‌ವ್ಯೂ ಕಾಲ್ ಕಳಿಸುವುದರಲ್ಲಿ ವ್ಯತ್ಯಾಸ ಮಾಡುತ್ತಿದ್ದಾರೆ ಇಡೀ ರಾಜ್ಯದಲ್ಲಿ ಕಂಪ್ಯೂಟರೈಸೇಷನ್ ಮಾಡುತ್ತೇವೆಂದು ಹೋದ ಸಲ ಹೇಳಿದ್ದರು ಈ ರಾಜ್ಯದಲ್ಲಿ ೧೦,೬,೬೬೭ ಜನ ಅನ್‌ಎಂಪ್ಲಾಯ್ಡ್ ಇದ್ದಾಗ ಅವರೆಲ್ಲರಿಗೂ ನೌಕರಿ ಕೊಡಬೇಕಾದರೆ ಸಿಸ್ಟಮ್ಯಾಟಿಕಲ್ ಆಗಿ ಒಂದು ಪ್ರೊಸೀಜರ್ ಅನ್ನು ಫಾಲೋ ಮಾಡಬೇಕಾಗುತ್ತದೆ ಅದಕ್ಕೆ ಕಂಪ್ಯೂಟರೈಸೇಷನ್ ಮಾಡುತ್ತೇವೆಂದು ಹೇಳಿದರು ಈ ವರ್ಷ ಎಷ್ಟು ಜಿಲ್ಲೆಗಳಲ್ಲಿ ಆ ಕಂಪ್ಯೂಟರೈಸೇಷನ್ ಮಾಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಕೆ. ಕಾಂತ.—ಬೀಡಿ ಕಾರ್ಮಿಕರಿಗೆಂದು ಕೇಂದ್ರ ಸರ್ಕಾರದ ಒಂದು ವೆಲ್‌ಫೇರ್ ಬೋರ್ಡ್ ಇದೆ. ಅದಕ್ಕೆ ನಾನೇ ಚೇರ್ಮನ್ ಆಗಿದ್ದೇನೆ. ಅಲ್ಲಿ ೫ ಸಾವಿರ ರೂಪಾಯಿ ಸಬ್ಸಿಡಿ ಕೊಡುತ್ತಾರೆ ಒಂದು ಸಾವಿರ ರೂಪಾಯಿ ಡೆವಲಪ್‌ಮೆಂಟ್ ಚಾರ್ಜ್ ಫ್ರೀ ಆಗಿ ಕೊಡುತ್ತಾರೆ. ೧೦ ಸಾವಿರ ರೂಪಾಯಿಗಳನ್ನು ಹುಡ್ಕೋದಿಂದ ಸಾಲ ಪಡೆದು ಒಟ್ಟು ೧೬ ಸಾವಿರದಲ್ಲಿ ಮನೆ ಆಗುತ್ತಾ ಇದ್ದರೆ ಅಲ್ಲಿ ನಾವು ಸ್ಥಳವನ್ನು ಫ್ರೀಯಾಗಿ ಕೊಡಬೇಕು, ಸ್ಥಳವನ್ನು ಕೊಟ್ಟಾಗ ಮಾತ್ರ ಈ ಯೋಜನೆಯನ್ನು ಅಲ್ಲಿ ಮಾಡಲಿಕ್ಕೆ ತಯಾರಿದ್ದೇವೆ. ಈಗಾಗಲೇ ಚಾಮರಾಜ ನಗರದಲ್ಲಿ ೪೨೫ ಮನೆಗಳನ್ನು ಕಟ್ಟಲಾಗಿದೆ ಅದನ್ನು ಹ್ಯಾಂಡ್ ಓವರ್ ಕೂಡ ಕೊಡಲಾಗಿದೆ. ನಿಪ್ಪಾಣಿಯಲ್ಲಿ ಸ್ಥಳ ಸಿಕ್ಕಿದೆ ಯೋಜನೆಯನ್ನು ಮಾಡುತ್ತಿದ್ದೇವೆ. ಮುಖ್ಯವೆಂದರೆ ೧೫ ಸಾವಿರ ರೂಪಾಯಿಯಲ್ಲಿ ಮನೆ ಆಗಬೇಕು ಅದಕ್ಕಿಂತ ಹೆಚ್ಚಾದರೆ ಕೇಂದ್ರ ಸರ್ಕಾರಕ್ಕೆ ಬರೆಯಬೇಕಾಗುತ್ತದೆ. ಮಾನ್ಯ ಸದಸ್ಯರಾದ ಖರ್ಗೆಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ಗುರುಮಿಠಕಲ್‌ನಲ್ಲಿ, ಯಾದ್‌ಗಿರಿಯಲ್ಲಿ ಸ್ಥಳದ ಅವಕಾಶ ಮಾಡಿಕೊಟ್ಟಿದ್ದೇ ಆದರೆ ಆದಷ್ಟು ತೀವ್ರವಾಗಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಐ.ಟಿ.ಐ, ಬಗ್ಗೆ ಕೇಳಿದಿರಿ ಗುರುಮಿಠ್‌ಕಲ್ ಬಗ್ಗೆ ನನಗೆ ಗೊತ್ತಿಲ್ಲ, ವಾಡಿಯಲ್ಲಿ ಅಲ್ಲಿ ಕಾರ್ಮಿಕರು ಬಹಳ ಹೆಚ್ಚಿಗೆ ಇದ್ದಾರೆ. ಗುಲ್ಬರ್ಗಾಕ್ಕೆ ಹೆಚ್ಚಿನ ಹುಡುಗರು ಬರತಕ್ಕಂಥ [illegible] ವಾಡಿ ಮತ್ತು ಶಹಬಾದ್‌ನಿಂದ. ಅದಕ್ಕೋಸ್ಕರ ಎರಡು ಸೆಕ್ಷನ್‌ಗಳನ್ನು ಈ ವರ್ಷ ಪ್ರಾರಂಭ ಮಾಡಬೇಕೆಂದು ವಿಚಾರ ಇದೆ. ಮುಂದಿನ ವರ್ಷ ನಾನು ಗುರುಮಿಠ್‌ಕಲ್ ಬಗ್ಗೆ ವಿಚಾರ ಮಾಡುತ್ತೇನೆ. ಇನ್ನು ಎಂಪ್ಲಾಯ್‌ಮೆಂಟ್ ಕಂಪ್ಯೂಟರೈಸೇಷನ್ ಅನ್ನು ಈ ವರ್ಷವೇ ಒಂದೇ ಸಲ ಎಲ್ಲಾ ಕಡೆ [illegible] ಮಾಡುವುದಕ್ಕೆ ಸಾಧ್ಯವಿಲ್ಲ. ಇಡೀ ದೇಶದಲ್ಲಿ ಒಳ್ಳೆಯ ಮಾದರಿಯಾಗಿ ಕೆಲಸ ಮಾಡತಕ್ಕಂಥದ್ದು ಕರ್ನಾಟಕ ಸರ್ಕಾರವಾಗಿದ್ದು. ಈ ವರ್ಷ ಗುಲ್ಬರ್ಗ ಮತ್ತು ಹುಬ್ಬಳ್ಳಿಯಲ್ಲಿ ಪ್ರಾರಂಭ ಮಾಡಬೇಕೆಂಬ ಯೋಜನೆ ಇದೆ. ೯ ಲಕ್ಷ ರೂಪಾಯಿ ಖರ್ಚು ಮಾಡಿ ಈ ಹುಬ್ಬಳ್ಳಿ ಮತ್ತು ಗುಲ್ಬರ್ಗದಲ್ಲಿ ಮಾಡಬೇಕೆಂಬ ವಿಚಾರ ಇದೆ ಅದನ್ನು ಮಾಡುತ್ತೇವೆ ಹಂತ ಹಂತವಾಗಿ ಇತರ ಜಿಲ್ಲೆಗಳಲ್ಲಿಯೂ ಕೂಡ ಇದನ್ನು ಮಾಡುತ್ತೇವೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಐಟಿಐನಲ್ಲಿ ವ್ಯಾಸಂಗ ಮಾಡತಕ್ಕಂಥ ವಿದ್ಯಾರ್ಥಿಗಳಲ್ಲಿ ದುರ್ಬಲ ವರ್ಗದವರು, ಪರಿಶಿಷ್ಟ ವರ್ಗ, ಪರಿಶಿಷ್ಟ ಜನಾಂಗದವರು ಎಲ್ಲಾ ಸೇರಿ ಹೆಚ್ಚಾಗಿ ಅಲ್ಲಿ ವಿದ್ಯಾರ್ಥಿಗಳು ವ್ಯಾಸಂಗವನ್ನು ಮಾಡುತ್ತಿದ್ದಾರೆ. ಅವರಿಗೆ ಕೊಡತಕ್ಕಂಥ ಸ್ಕಾಲರ್‌ಶಿಪ್ ಏತಕ್ಕೂ

ಸಾಲದು. ಆದ್ದರಿಂದ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಅವರಿಗೆ ಹೆಚ್ಚಿನ ಸ್ಕಾಲರ್‌ಷಿಪ್ ಅಂದರೆ ಕನಿಷ್ಠ ಒಂದು ನೂರು ರೂಪಾಯಿಯನ್ನಾದರೂ ಕೊಡುವ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳುತ್ತೇನೆ. ಎರಡನೆಯದಾಗಿ ಗ್ರಾಮೀಣ ಪ್ರದೇಶದಿಂದ ವಿದ್ಯಾರ್ಥಿಗಳು ಬರುತ್ತಿದ್ದಾರೆ, ಅವರಿಗೆ ವಸತಿ ವ್ಯವಸ್ಥೆ ಇಲ್ಲ. ಅದಕ್ಕಾಗಿ ಮುಖ್ಯ ಪಟ್ಟಣಗಳಲ್ಲಿ ಐ.ಟಿ.ಐ.ಯನ್ನು ಸರ್ಕಾರ ನಡೆಸತಕ್ಕಂಥದ್ದರಲ್ಲಿ ಕೂಡಲೇ ವಿದ್ಯಾರ್ಥಿ ನಿಲಯಗಳನ್ನು ಕಟ್ಟಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಈ ಒಂದು ಅನುಕೂಲವನ್ನು ಮಾಡಿಕೊಟ್ಟರೆ ಅವರಿಗೆ ತರಬೇತಿ ದಿಶೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇವೆರಡಕ್ಕೂ ಆಶ್ವಾಸನೆಯನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಕೆ. ಕಾಂತ.—ಅಧ್ಯಕ್ಷರೇ, ವಿದ್ಯಾರ್ಥಿನಿಲಯವನ್ನು ಮಾಡಲಿಕ್ಕೆ ಸ್ಥಳದ ಅವಕಾಶ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಸ್ಥಳದ ಅವಕಾಶ ಸಾಕಷ್ಟು ಇದೆ. ದಾವಣಗೆರೆಯಲ್ಲಿ ಇದೆ.

ಶ್ರೀ ಎಸ್. ಕೆ. ಕಾಂತ.—ಅದನ್ನು ನೋಡುತ್ತೇನೆ. ಇನ್ನು ಹುಡುಗರಿಗೆ ಈಗಾಗಲೇ ೫೦ ರೂಪಾಯಿಯನ್ನು ಕೊಡುತ್ತಿದ್ದೇವೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಾವು ಹೆಚ್ಚಿನ ಪ್ರಮಾಣದಲ್ಲಿ ಕೊಡುತ್ತಿದ್ದೇವೆ. ಆದರೂ ಸಾಧ್ಯವಾದರೆ ಮುಂದಿನ ವರ್ಷ ಅದರ ಬಗ್ಗೆ ನೋಡುತ್ತೇನೆ.

ಶ್ರೀ ವೀರಯ್ಯಸ್ವಾಮಿ.—ಹಿಂದಿನ ಗ್ರಾಮೀಣ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್‌ನಲ್ಲಿದ್ದಂಥ ಎಂಪ್ಲಾಯಿಗಳು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್‌ನಲ್ಲಿ ಅವರು ಬಂದಿದ್ದಾರೆ. ಅವರಿಗೆ ಮಿನಿಮಮ್ ವೇಜಸ್‌ನ್ನು ಕೊಡುತ್ತಿಲ್ಲ. ಕೆಲವು ಕಡೆ ೧೦೦ ರೂಪಾಯಿ, ೧೫೦ ರೂಪಾಯಿ, ಎರಡು ನೂರು ರೂಪಾಯಿ ಈ ರೀತಿ ಪಗಾರವನ್ನು ಕೊಡುತ್ತಿದ್ದಾರೆ. ಬೇರೆ ಗೌರ್ನಮೆಂಟ್ ಡಿಪಾರ್ಟ್‌ಮೆಂಟ್‌ಗಳಿಗೆಲ್ಲಾ ಲೇಬರ್ ಡಿಪಾರ್ಟ್‌ಮೆಂಟ್‌ನವರು ಸರ್ಕ್ಯುಲರನ್ನು ಕಳುಹಿಸಿದ್ದಾರೆ, ಮಿನಿಮಮ್ ವೇಜಸ್ ೯–೫೦ ಪೈಸೆ ಎಂದು ಒಂದು ದಿನಕ್ಕೆ ಇರಬೇಕು ಎಂದು ಹೇಳಿ ಕಳುಹಿಸಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ ?

ಶ್ರೀ ಎಸ್. ಕೆ. ಕಾಂತ.—ಇದು ಪರಿಶೀಲನೆಯಲ್ಲಿದೆ. ಲೋಕಲ್ ಬಾಡೀಸ್‌ಗಳಲ್ಲಿ ಕೆಲಸ ಮಾಡತಕ್ಕಂಥ ಎಲ್ಲಾ ಕಾರ್ಮಿಕರಿಗೂ ಕೂಡಾ ಕನಿಷ್ಟ ವೇತನದಲ್ಲಿ ತರುತ್ತಿದ್ದೇವೆ. ಇನ್ನು ಮೂರು–ನಾಲ್ಕು ತಿಂಗಳಲ್ಲಿ ಮಾಡುತ್ತೇವೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ.—

> "೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೭೨ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೭೨ ಕಾರ್ಮಿಕ ಮತ್ತು ಉದ್ಯೋಗ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ ವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೧,೦೦,೧೧,೦೦೦ ರೂ. ಗಳಿಗಿಂತ

ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಧ್ಯಕ್ಷರು.—ಈಗ ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳಿಂದ ಉತ್ತರ.

ಶ್ರೀ ಎಂ.ಪಿ. ಪ್ರಕಾಶ್.... ಸನ್ಮಾನ್ಯ ಅಧ್ಯಕ್ಷರೇ, ಸುಮಾರು ನಾಲ್ಕೈದು ಖಾತೆಗೆ ಸಂಬಂಧಿಸಿರತಕ್ಕಂಥ ಬೇಡಿಕೆಯನ್ನು ಈ ಸಭೆಯ ಮುಂದೆ ಮಂಡಿಸಿದಾಗ ಅನೇಕ ಸದಸ್ಯರು ಬಹಳ ಉತ್ತಮವಾಗಿರತಕ್ಕಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಮಾನ್ಯ ಸದಸ್ಯರು ವ್ಯಕ್ತ ಮಾಡಿದಂಥ ಬಹಳ ಮಹತ್ವದ ಖಾತೆಗಳು ಇವಲ್ಲ ಎನ್ನುವ ಕಾರಣಗಳಿದ್ದರೂ ಕೂಡಾ ಮೂಲವಾಗಿ ಇಡೀ ಸರ್ಕಾರಕ್ಕೆ ಮತ್ತು ಸಮಾಜಕ್ಕೆ ಒಂದು ನೈತಿಕ ತಿರುವನ್ನು ವೈಚಾರಿಕ ನೆಲೆಗಟ್ಟನ್ನು ಮತ್ತು ಎಲ್ಲ ವಿಷಯಗಳ ಬಗ್ಗೆ ಕೆಲವೊಂದು ಗುರಿಯನ್ನು ಕಲ್ಪಿಸಿಕೊಡಲಿಕ್ಕೆ ಸಂಸ್ಕೃತಿ, ಸಾಹಿತ್ಯ ಕಲೆ ಇವೆಲ್ಲಾ ಅತ್ಯಂತ ಮುಖ್ಯವಾಗಿರತಕ್ಕಂಥದ್ದು ಮಾನ್ಯ ಕೆಲವು ಸದಸ್ಯರು ಈ ಇಲಾಖೆಯಲ್ಲಿ ಬಹಳ ದುಂದುವೆಚ್ಚ ಆಗುತ್ತಿರುವುದರಿಂದ ಈ ಇಲಾಖೆ ಯಾವುದೇ ಉತ್ಪಾದನೆ ಕ್ರಿಯೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳದೆ ಇರುವುದರಿಂದ ಈ ಇಲಾಖೆಯನ್ನು ರದ್ದು ಮಾಡುವುದು ಬಹಳ ಒಳ್ಳೆಯದು ಎನ್ನತಕ್ಕಂಥ ಮಾತನ್ನು ವ್ಯಕ್ತ ಮಾಡಿದ್ದಾರೆ. ಯಾವುದೇ ಒಂದು ಬದುಕಿಗೆ ಒಂದು ನಿರ್ದಿಷ್ಟವಾಗಿರತಕ್ಕಂಥ ಒಂದು ಗುರಿ ಇರಲೇಬೇಕು, ಬದುಕು ಬರೀ ಅನ್ನಕ್ಕಾಗಿ ಹೋರಾಟ ಮಾಡತಕ್ಕಂಥದ್ದಲ್ಲ. ಅವನು ಬದುಕತಕ್ಕಂಥ ಪರಿಸರವನ್ನು ತಾನು ಹುಟ್ಟಿದಾಗ ಇರತಕ್ಕಂಥ ಪರಿಸರವನ್ನು ಮತ್ತೆ ಸುಂದರಗೊಳಿಸತಕ್ಕಂಥದ್ದು ಅತ್ಯಂತ ಅಗತ್ಯ. ನಮ್ಮ ಮೇಲೆ ತಲೆಮಾರಿನ ಒಂದು ದೊಡ್ಡ ಜವಾಬ್ದಾರಿ ಇರುತ್ತದೆ. ಇಂದು ನಿನ್ನೆಗೆ ಋಣಿಯಾಗಿರುತ್ತದೆ, ನಾಳೆ ಇಂದಿಗೆ ಋಣಿಯಾಗಿರುತ್ತದೆ. ಒಂದು ನಿರಂತರವಾದ ಜನತೆಯ ಈ ಪ್ರತಿಕ್ರಿಯೆಯಲ್ಲಿ ಇಂದು ನಿನ್ನೆ ಮತ್ತು ನಾಳೆ ಎನ್ನುವಂಥದ್ದು ಬಹಳ ಮುಖ್ಯ. ಆದುದರಿಂದಲೇ ಶ್ರೀಮಾನ್ ಬಸವಲಿಂಗಪ್ಪನವರು ನಾವೆಲ್ಲಾ ಕನಸುಗಾರರಾಗಬೇಕು ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಪ್ರಾಯಶಃ ನಾವು ಕನಸುಗಾರರು ಆಗದೇ ಹೋದರೆ ವರ್ತಮಾನಕ್ಕೆ ನಾವು ತಕ್ಕವರು ಆಗುವುದಿಲ್ಲ ಮತ್ತು ಭವಿಷತ್ತಿನ ಬಗ್ಗೆ ಕಲ್ಪನೆಗಳನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಅನೇಕ ಸಲ ನಾವು ಸಿನಿಕತನವನ್ನು ಬೆಳೆಸಿಕೊಳ್ಳಬಹುದು. ಬಹಳ ನಂಜನ್ನು ಕೂಡ ಉಣ್ಣಬಹುದು. ಇದು ಆಗದೇ ಹೋಗಬಹುದು ಎನ್ನತಕ್ಕಂಥ ಹತಾಶಃ ಮನೋಭಾವನೆಗೆ ನಾವು ಒಳಗಾಗಬಹುದು. ಆದರೆ ಈ ಮನೋಭಾವನೆಗಳೇ ಮನುಕುಲದ ಬದುಕಿಗೆ ಸ್ಪಂದನೆ ಆಗದಿದ್ದರೆ ಇಷ್ಟು ಸುಂದರವಾಗಿ ಜಗತ್ತನ್ನು ಮತ್ತು ಇಂತಹ ಜನತಂತ್ರ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯ ಆಗುತ್ತಿರಲಿಲ್ಲ. ಆಗ ಸತ್ಯಮಯವಾದ, ಮಂಗಳಮಯವಾದ ಸಮಾಜವನ್ನು ಕಟ್ಟಲಿಕ್ಕೆ, ಸಂಗೀತ, ಸಂಸ್ಕೃತಿ. ಸಾಹಿತ್ಯ, ಕಲೆ ಮೊದಲಾದವೆಲ್ಲಾ ಸೃಜನಾತ್ಮಕ ಕ್ರಿಯೆಗಳು, ಕ್ರಿಯೆಗಳು ಮತ್ತು ಪ್ರಕ್ರಿಯೆಗಳು ಆಗುತ್ತಿರಲಿಲ್ಲ. ಇದನ್ನು ಮುಖ್ಯ ಕಾರಣಕ್ಕಾಗಿ ನಮ್ಮ ಅನೇಕ ಮಿತ್ರರು ಪ್ರಸ್ತಾಪ ಮಾಡಿದಂತೆ ಯಾವ ಮಟ್ಟದಲ್ಲಿ ಹಣ ಬಿಡುಗಡೆ ಆಗಬೇಕಾಗಿತ್ತೋ ಆ ಮಟ್ಟದಲ್ಲಿ ಹಣ ಬಿಡುಗಡೆ ಆಗಿಲ್ಲ ಬಹಳ ಕಲಾತ್ಮಕವಾಗಿ ಸ್ವತಃ ಕವಿಗಳೂ ಆದಂತಹವರು, ಮತ್ತು ಕನ್ನಡದ ಬಗ್ಗೆ ಅಚಲವಾದ ವಿಶ್ವಾಸವನ್ನು ಇಟ್ಟುಕೊಂಡಿರುವ ಹಿರಿಯ ಸದಸ್ಯರಾದ ಶ್ರೀ ಇದಿನಬ್ಬನವರು ಬಹಳ ಸುಂದರವಾದ ಮಾತುಗಳನ್ನು ಹೇಳಿದ್ದಾರೆ ಮತ್ತು ಹೆಚ್ಚು ಹಣವನ್ನು ಇದರಲ್ಲಿ ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಅದು ಏನೇ ಇರಲಿ, ಈಗಿರುವಂತಹ ಕಷ್ಟದ ಪರಿಸ್ಥಿತಿಯಲ್ಲಿ ನೇರವಾಗಿ ನಮಗೆ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡದೇ ಹೋಗಿದ್ದರೂ ಸಹ ಅನೇಕ ಸಂದರ್ಭಗಳಲ್ಲಿ ನಮಗೆ ವಿನಾಯಿತಿಗಳನ್ನು ಕೊಟ್ಟು ಬೇರೆ ಬೇರೆ ಸಂದರ್ಭಗಳಲ್ಲಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವ ವಿಷಯ ಇದೆ. ಈ ವಿಷಯವಾಗಿ ಹೇಳುವುದಾದರೆ ಕೇಂದ್ರ ಸರ್ಕಾರದ ನೆರವಿನ ಮೂಲಕ ಒಂದು ಕೋಟಿಗಿಂತ ಹೆಚ್ಚು ನಮಗೆ ಕೇಂದ್ರ ಸರ್ಕಾರದಿಂದ ಬಂದಿದೆ. ಬಂದಂತಹ ಹಣದಲ್ಲಿ ನಾವು ಸ್ವತಃ ಬೇರೆ ಬೇರೆ ಇಲಾಖೆಗಳಿಗೆ ಕೊಟ್ಟಿರತಕ್ಕಂಥ ಹಣವನ್ನು ಸೇರಿಸಿ ರಷ್ಯಾ ಉತ್ಸವವನ್ನು ಮಾಡತಕ್ಕಂಥ ಒಂದು ದೊಡ್ಡ ವ್ಯವಸ್ಥೆ ಆಯಿತು. ರಷ್ಯಾ ಉತ್ಸವಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಆಯಿತು. ನಾವು ಈ ಸಂದರ್ಭವನ್ನು ಉಪಯೋಗಿಸಿಕೊಂಡು ರವೀಂದ್ರ ಕಲಾಕ್ಷೇತ್ರವನ್ನು ಅತ್ಯಂತ ಉತ್ತಮವಾಗಿ ಪ್ರತಿಷ್ಠಿತ ಕಲಾಮಂದಿರವನ್ನು ಸಂಪೂರ್ಣವಾಗಿ ಹವಾ ನಿಯಂತ್ರಣಕ್ಕೆ ಒಳಪಡಿಸುವ ವ್ಯವಸ್ಥೆಯನ್ನು ಮಾಡಿದ್ದೇವೆ. ಅದಕ್ಕೆ ಪ್ರತ್ಯೇಕವಾದ ಬಯಲು ಮಂದಿರಗಳನ್ನು ಕಟ್ಟಿಸಬೇಕು ಎಂದು, ಆ ಉದ್ದೇಶಕ್ಕಾಗಿ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಪ್ರಸಿದ್ಧವಾದ ಕಲ

ಪ್ರದರ್ಶನ ಇರಬೇಕು ಎಂಬ ಆ ಕಾರಣಕ್ಕಾಗಿ ಸುಮಾರು ೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ಅದಕ್ಕೆ ಲಿಫ್ಟ್ ಒಳಪಡಿಸಿ ಹವಾ ನಿಯಂತ್ರಣಕ್ಕೆ ವ್ಯವಸ್ಥೆ ಮಾಡಿಸಿ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಕಲಾ ಪ್ರದರ್ಶನಗಳನ್ನು ಮಾಡುವುದಕ್ಕೆ ಸಾಧ್ಯತೆ ಆಗುತ್ತದೆ ಎಂಬ ದೃಷ್ಟಿಯಿಂದ ಈ ಕಾರ್ಯಗಳನ್ನು ಮಾಡಿದ್ದೇವೆ. ಇವೊತ್ತು ನಮ್ಮ ರವೀಂದ್ರ ಕಲಾಕ್ಷೇತ್ರ ಭಾರತ ದೇಶದ ಅತ್ಯುತ್ತಮ ರಂಗಮಂದಿರಗಳಲ್ಲಿ ಒಂದು ಎಂಬ ಅಭಿಮಾನ ಮತ್ತು ಹೆಮ್ಮೆ ಅದು ಎಲ್ಲರದ್ದೂ ಕೂಡ ಆಗಿದೆ. ಈ ರೀತಿ ಪ್ರತಿಯೊಂದು ಇಲಾಖೆಯಲ್ಲಿ ಏನೇನು ಖರ್ಚು ಮಾಡಿದ್ದೇವೆ. ಈ ಒಂದೇ ವಿಷಯ ಅಲ್ಲ, ಸಂಸ್ಕೃತಿ ಇಲಾಖೆಗೆ ಹೆಚ್ಚಿನ ಹಣ ಕೊಡುವುದರ ಜೊತೆಗೆ ಪ್ರಥಮ ಬಾರಿಗೆ ನಮ್ಮ ಸರ್ಕಾರ ೫೦ ಲಕ್ಷ ರೂಪಾಯಿಗಳಿಗೂ ಹೆಚ್ಚು ಹಣವನ್ನು ಹೊರನಾಡ ಕನ್ನಡಿಗರಿಗೆ ಗಡಿನಾಡುಗಳಲ್ಲಿರುವ ಕನ್ನಡಿಗರಿಗೆ ಹಣ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಜಮ್ಮು ಮತ್ತು ಕಾಶ್ಮೀರ ಕನ್ನಡ ಸಂಘಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ೨೫೦೦೦ ರೂಪಾಯಿಗಳ ಅನುದಾನವನ್ನು ನೀಡಿದ್ದೇವೆ, ಕಾನ್‌ಪುರದಲ್ಲಿ ದೂರದ ಕನ್ನಡ ಸಂಘದವರಿಗೆ ಕಾಸರಗೋಡಿನವರಿಗೂ ಸುಮಾರು ೧೦-೧೨ ಲಕ್ಷ ರೂಪಾಯಿಗಳಿಗೂ ಹೆಚ್ಚು ಹಣವನ್ನು ಬೇರೆ ಬೇರೆ ಸಂಘಕ್ಕೆ ಕೊಟ್ಟಿದ್ದೇವೆ ಅದು ಕಟ್ಟಡದ ಕೆಲಸ ಆಗಿರಬಹುದು, ಅಥವಾ ಕಾರ್ಯಕ್ರಮಗಳು ಆಗಿರಬಹುದು, ಅಥವಾ ಕಮ್ಮಟ ಆಗಿರಬಹುದು, ಕಾರ್ಯಾಗಾರಗಳು ಆಗಿರಬಹುದು, ಇವುಗಳಿಗೂ ಕೂಡ ನಮ್ಮ ಇಲಾಖೆಯಿಂದ ಹಣವನ್ನು ಕೊಟ್ಟಿದ್ದೇವೆ, ಕಳೆದ ಮೂರು ವರ್ಷಗಳ ಸಂದರ್ಭದಲ್ಲಿ ಕನಿಷ್ಟ ೫೦ ಲಕ್ಷ ರೂಪಾಯಿಗಳನ್ನು ಈ ರೀತಿಯಾಗಿ ಬೇರೆ ಬೇರೆ ಹೊರನಾಡಿನ ಕನ್ನಡಿಗರಿಗೆ ಹಣ ಕೊಡುವಂತಹ ವ್ಯವಸ್ಥೆ ಮಾಡಿದ್ದೇವೆ, ಇದರ ಜೊತೆಗೆ ಬರೀ ರಷ್ಯಾ ಉತ್ಸವ ಎನ್ನತಕ್ಕದ್ದು ಅಲ್ಲ, ಶಿವರಾತ್ರಿಯ ಸಂದರ್ಭದಲ್ಲಿ ಅದನ್ನು ಜಾತ್ಯಾತೀತವಾಗಿ ಆಚರಣೆ ಮಾಡಬೇಕು ಎನ್ನುವ ಕಾರಣದಿಂದ ಇಡೀ ರಾತ್ರಿ ಕವಾಲಿ ಕಾರ್ಯಕ್ರಮಗಳನ್ನು ಕೂಡಾ ಗುಲ್ಬರ್ಗಾದಲ್ಲಿರತಕ್ಕ ಪ್ರದೇಶಗಳಲ್ಲಿ ಕಂದಾಯ ವಿಭಾಗಕ್ಕೆ ಸಂಬಂಧಪಟ್ಟಂತೆ ಪ್ರಥಮ ಬಾರಿಗೆ ಮಹಾ ಶಿವರಾತ್ರಿಯ ಸಂದರ್ಭದಲ್ಲಿ ಸಾಂಸ್ಕೃತಿಕ ಜಾಗೃತಿಯನ್ನು ಕೊಡಬೇಕು ಎನ್ನುವ ಕಾರಣಕ್ಕಾಗಿ ಕೂಡ ಬೇರೆ ಬೇರೆ ರೀತಿಯ ಪ್ರಕಾರಗಳಿಗೆ ಒಳಗಾಗಿರತಕ್ಕ ಕಲೆಗಳನ್ನು ಪ್ರದರ್ಶನಗಳನ್ನು ಮಾಡತಕ್ಕ ಹೊಸ ಕಾರ್ಯಕ್ರಮವನ್ನು ನಾವು ಅಳವಡಿಸಿಕೊಂಡಿದ್ದೇವೆ. ಅದೂ ಅಲ್ಲದೆ ಅನೇಕ ವಿಷಯಗಳ ಬಗ್ಗೆ ಒಂದು ಸಾಂಸ್ಕೃತಿಕ ನೀತಿ ಎನ್ನುವಂಥಾದ್ದು ಇಲ್ಲ. ಸಂಸ್ಕೃತಿಗೆ ಇಂತಹದೇ ಎನ್ನುವ ಮಾತನ್ನು ಹೇಳುವುದಕ್ಕಾಗುವುದಿಲ್ಲ. ಅದು ಒಂದು ಜೀವನದ ಕ್ರಮ ಎನ್ನಬಹುದು. ನಾಗರೀಕನಾಗಿರತಕ್ಕ ಪ್ರತಿ ಒಬ್ಬ ಮನುಷ್ಯನೂ ಕೂಡ ಬಹಳ ಸುಸಂಸ್ಕೃತನಾಗಿ ಸಜ್ಜನನಾಗಿ ಇರುತ್ತಾನೆ ಎನ್ನುವ ಮಾತು ಅಲ್ಲ ಅಥವಾ ಅನಾಗರೀಕನಾಗಿರತಕ್ಕದ್ದು ತನ್ನ ಸುಸಂಸ್ಕೃತಿಯಿಂದ ಹೊರಗಾಗಿ ಇರುತ್ತಾನೆ ಎನ್ನುವ ಮಾತು ಅಲ್ಲ. ಸಂಸ್ಕೃತಿ ಎನ್ನತಕ್ಕದ್ದು ಸೌಂದರ್ಯಕ್ಕೆ ಸಂಬಂಧಪಟ್ಟದ್ದು ಮತ್ತು ಹೃದಯಕ್ಕೆ ಸಂಬಂಧಪಟ್ಟದ್ದು ಬಹಳ ಪಕ್ವವಾಗಿ ಮನಸ್ಸಿಗೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ಈಗ ಯಾವುದೇ ಒಂದು ವ್ಯಾಖ್ಯಾನವನ್ನು ಕೊಡುವುದರ ಮೂಲಕ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ. ಸಾಂಸ್ಕೃತಿಕ ನೀತಿ ಎನ್ನುವಂತಹದ್ದು ನಮ್ಮ ರಾಷ್ಟ್ರದಲ್ಲಿಯಾಗಲಿ, ನಮ್ಮ ರಾಜ್ಯಸರ್ಕಾರದಲ್ಲಿಯಾಗಲಿ, ಇಲ್ಲ ಎನ್ನುವ ಮಾತು ಪದೇ ಪದೇ ಬಂದರೂ ಕೂಡ ಇತ್ತೀಚಿನ ದಿನಗಳಲ್ಲಿ ಇವು ಜನಪದ ಕಲೆಗಳಿಗೆ ಹೆಚ್ಚು ಒತ್ತನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಜನಪದ ಮತ್ತು ಯಕ್ಷಗಾನ ಅಕಾಡೆಮಿಗಳಿಗೆ ಜನಪದ ಮತ್ತು ಬಯಲಾಟಗಳಿಗೆ ಈ ವರ್ಷಗಳಲ್ಲಿ ಹೆಚ್ಚಿನ ಅನುದಾನವನ್ನು ಕೊಡುವುದರ ಮೂಲಕವಾಗಿ ಅದು ಹೆಚ್ಚು ಸಕ್ರಿಯವಾಗಿ ಕೆಲಸ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ ಈ ಒಂದೇ ಒಂದು ವರ್ಷದಲ್ಲಿ ಆಲ ಗಂಟೆಗಳಿಗಿಂತಲೂ ಹೆಚ್ಚು ಆಗುವಂತಹ ರೀತಿಯಲ್ಲಿ ಸೋಲಿಗರಿಗೆ ಸಂಬಂಧಪಟ್ಟಂತೆ ಜನಾಂಗಕ್ಕೆ, ಸಿದ್ಧಿ ಜನಾಂಗಕ್ಕೆ ಸಂಬಂಧಪಟ್ಟಂತೆ ತೌಳಿಗಳಿಗೆ ಸಂಬಂಧಪಟ್ಟಂತೆ ಈ ರೀತಿಯಾಗಿರತಕ್ಕಂಥ ನಮ್ಮ ಬುಡಕಟ್ಟಿನಜನಾಂಗಕ್ಕೆ ಸೇರಿಸತಕ್ಕಂಥ ಕಲೆಗಳನ್ನು ನಾವು ಚಿತ್ರೀಕರಣ ಮಾಡತಕ್ಕದ್ದು ಮತ್ತು ಅದನ್ನು ಕ್ಯಾಸೆಟ್ ಸುರುಳಿಯಲ್ಲಿ ಉಪಯೋಗಿಸಿಕೊಳ್ಳತಕ್ಕದ್ದು ಅವರುಗಳ ಹಾಡುಗಾರಿಕೆಯನ್ನ ಧ್ವನಿಮುದ್ರಣ ಮಾಡಿ ಕೊಳ್ಳತಕ್ಕಂಥದ್ದು ಮತ್ತು ಅದಕಾಗಿ ಪುಸ್ತಕಗಳನ್ನು ಪ್ರಕಟಣೆ ಮಾಡತಕ್ಕ ಕಾರ್ಯಕ್ರಮಗಳನ್ನುಮಾಡಿದ್ದೇವೆ.

ಶ್ರೀಮಾನ್ ಕರೀಂ ಖಾನ್‌ರವರಂತಹ ವಯೋ ವೃದ್ಧರು, ಜ್ಞಾನ ವೃದ್ಧರೂ ಮತ್ತು ಈ ದಿಸೆಯಲ್ಲಿ ಕೆಲಸ ಮಾಡಿರತಕ್ಕಂಥಹ ಒಬ್ಬ ಅತ್ಯಂತ ಪ್ರಖ್ಯಾತನಾಗಿರತಕ್ಕಂಥ ವ್ಯಕ್ತಿಯನ್ನು ಜನಪದ ಅಕಾಡೆಮಿಯ ಅಧ್ಯಕ್ಷನನ್ನಾಗಿ ಮಾಡಿರುವುದರಿಂದ ಅದಕ್ಕೆ ಹೆಚ್ಚು ಒತ್ತನ್ನು ಕೊಡತಕ್ಕಂಥ ಕೆಲಸವನ್ನು

ಮಾಡಿದ್ದೇವೆ. ಜನಪದ ಬದುಕುವುದರ ಮೂಲಕವಾಗಿ ನಮ್ಮ ಇಡೀ ನಾಡಿನಲ್ಲಿ ಸೃಜನಾತ್ಮಕ ಕ್ರಿಯೆ ಉಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಶಿಷ್ಟ ಸಾಹಿತ್ಯವನ್ನೇ ಉಳಿಸಿಕೊಳ್ಳತಕ್ಕಂತಹದ್ದು ಆಗಲೀ, ಶಿಷ್ಟ ಸಂಪ್ರದಾಯದ ನಾಟ್ಯ ಭಂಗಿಗಳನ್ನು ಉಳಿಸಿಕೊಳ್ಳಬೇಕಾಗಿರತಕ್ಕದ್ದು ಈ ಸರ್ಕಾರದ ನೀತಿ ಎಲ್ಲಾ ಆಗಿರುವುದರಿಂದ ಪ್ರತಿ ಸಂದರ್ಭದಲ್ಲಿಯೂ ಕೂಡ ಯಕ್ಷಗಾನಕ್ಕೆ, ಸಣ್ಣ ಆಟಕ್ಕೆ, ದೊಡ್ಡ ಆಟಕ್ಕೆ, ತೊಗಲು ಗೊಂಬೆ ಆಟಕ್ಕೆ. ದೊಂಬಿ ದಾಸರ ಆಟಗಳಿಗೆ ಈ ಎಲ್ಲಾ ವಿಚಾರಗಳ ಬಗ್ಗೆ ಹೆಚ್ಚು ಒತ್ತನ್ನು ನಾವು ಕೊಟ್ಟಿರುವುದರಿಂದ ರಷ್ಯಾ ಉತ್ಸವಗಳಲ್ಲಿ ಅದು ತಾಷ್ಕೆಂಟ್‌ನಲ್ಲಿ ಆಗಿರಬಹುದು. ಮಾಸ್ಕೋದಲ್ಲಿ ಆಗಿರಬಹುದು, ಅಥವಾ ಲೆನಿನ್ ಗ್ರೌಂಡ್‌ನಲ್ಲಿ ಆಗಿರತಕ್ಕಂಥ ಮೂರು ನಮ್ಮ ಭಾರತದ ಉತ್ಸವದಲ್ಲಿ ನಮ್ಮ ಕರ್ನಾಟಕದ ಶಿವಮೊಗ್ಗ ಜಿಲ್ಲೆಯಿಂದ ಹೋಗಿರತಕ್ಕಂಥ ಶಿಕಾರಿಪುರದ ಡೊಳ್ಳು ಕುಣಿತ ಹೆಚ್ಚು ಅಭಿಮಾನಕ್ಕೆ, ಪ್ರೀತಿಗೆ, ಗೌರವಕ್ಕೆ ಪಾತ್ರ ಆಯಿತೆಂದು ನಾವು ಬಹಳ ಹೆಮ್ಮೆಯಿಂದ ಕೂಡ ಹೇಳಿಕೊಳ್ಳಬಹುದಾಗಿದೆ. ಈ ರೀತಿ ಆಗಿರತಕ್ಕಂಥ ನಮ್ಮ ಕನ್ನಡ ಸಂಸ್ಕೃತಿಯಲ್ಲಿ ಎರಡು ಬಹಳ ಮುಖ್ಯವಾದಂತಹ ಕೆಲಸವನ್ನು ನಾವು ಮಾಡಬೇಕಾಗಿರತಕ್ಕಂಥಾದ್ದು.

ಈ ನೆಲದ ಭಾಷೆ ಕನ್ನಡ. ಆದ್ದರಿಂದ ನಾವು ಕನ್ನಡದಲ್ಲಿಯೇ ಆಡಳಿತ ನಡೆಸುತ್ತಿದ್ದೇವೆಂಬ ಮಾತನ್ನು ಹೇಳುತ್ತಿರುವಾಗ, ಇದನ್ನು ನಾವು ಹೆಚ್ಚು ಹೆಚ್ಚು ವ್ಯಾಪಕವಾಗಿ ಬೆಳೆಸುವಂತಹ ಪ್ರಯತ್ನವನ್ನು ಸಹ ಮಾಡಬೇಕಾಗಿದೆ. ಈ ದಿಸೆಯಲ್ಲಿ ಮಾನ್ಯ ಬಸವಲಿಂಗಪ್ಪನವರು ಕೆಲವು ಮುಖ್ಯವಾದಂಥ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಅವು ಮೇಲ್ನೋಟಕ್ಕೆ ಸರಿ ಕಾಣದಿದ್ದರೂ ಸಹ ಇದಕ್ಕೆ ಮತ್ತೊಂದು ತಿರುವು ಕೂಡ ಇದೆ. ರಾಷ್ಟ್ರಕವಿ ಕುವೆಂಪು ಅವರು ಸಹ ಇಂತಹ ವಿಷಯಗಳನ್ನು ಪ್ರಸ್ತಾಪ ಮಾಡುವಾಗ "ಬಾರಿಸು ಕನ್ನಡ ಡಿಂಡಿಮವ" ಎಂದು ಹೇಳಿದ್ದರೂ ಸಹ ತಾವು ಇಂಗ್ಲೀಷ್ ಭಾಷೆಯನ್ನು ಕಲಿಯದೆ ಹೋಗಿದ್ದರೆ ಈ ದಿವಸ ಏನಾಗುತ್ತಿದೆ ಎಂಬತಕ್ಕಂಥ ಮಾತನ್ನು ಸಹ ಅವರು ಇತ್ತೀಚೆಗೆ ಹೇಳಿದ್ದಾರೆ. ಅಂದರೆ ನಾವು ಕನ್ನಡದ ಬಗ್ಗೆ ಅಭಿಮಾನ ಪಡುತ್ತೇವೆಂದು ಹೇಳಿಕೊಳ್ಳುವಾಗ ಅದನ್ನು ವೈಭವೀಕರಿಸುವಂತಹ ಅಗತ್ಯ ಇಲ್ಲ. ಈ ಕನ್ನಡದ ಬಗ್ಗೆ ನಾವು ಮಾತನಾಡುತ್ತೇವೆಂದರೆ, ಶ್ರೀಮಾನ್ ಬಸವಲಿಂಗಪ್ಪನವರು ಮಾತನಾಡುತ್ತಾರೆಂದರೆ, ಅದು ಈ ದೇಶದ ಕೊನೆಯ ಮನುಷ್ಯನ ಪರವಾಗಿ ಮಾತನಾಡುತ್ತಿದ್ದಾರೆಂದು ಅರ್ಥ. ಯಾರು ಈ ದೇಶದ ಕೊನೆಯ ಮನುಷ್ಯ. ಈ ದೇಶದ ಭಾಷೆಗಾಗಿ ನ್ಯಾಯಬದ್ಧವಾದ ನಾನಾ ಕಾರಣಗಳ ಹಕ್ಕನ್ನು ಮೂಲಕವಾಗಿ ಈ ನಮ್ಮ ಸಮಾಜದಲ್ಲಿ ತೊಡಗಿಸುವುದಕ್ಕೆ ಅಸಹಾಯಕನಾಗಿರುತ್ತಾನೋ, ಅಂತಹ ಮನುಷ್ಯನ ಪರವಾಗಿ ನಾವು ಇಲ್ಲಿ ಮಾತನಾಡುತ್ತಿದ್ದೇವೆಂದು ಇದರ ಅರ್ಥ. ಈ ರೀತಿ ಹೇಳುವುದರಲ್ಲಿಯೂ ಧ್ವಂಧ್ವ ಇದೆ. ಕನ್ನಡ ಕನ್ನಡ ಎಂದು ಹೇಳುವುದರ ಮೂಲಕವಾಗಿ ಇಲ್ಲಿಯವರೆಗೆ ಎಲ್ಲ ರೀತಿಯ ಸವಲತ್ತುಗಳಿಂದ ವಂಚನೆಗೊಳಗಾಗಿರುವ ಜನ ವರ್ಗ ಏನಿದೆ, ಆ ವರ್ಗದ ಜನ ಮತ್ತೆ ದಡ್ಡರಾಗಿ ಉಳಿಯುತ್ತಾರೆಂಬ ಸಂಶಯವನ್ನು ಮಾನ್ಯ ಬಸವಲಿಂಗಪ್ಪನವರು ಎತ್ತಿದ್ದಾರೆ. ಇಂತಹ ಜನ ಒಂದು ಸೀಮಿತವಾದಂಥ ನೆಲೆಯಲ್ಲಿಯೇ ಉಳಿಯುತ್ತಾರೆಂಬ ಅಪಾಯದ ಬಗ್ಗೆ ಅವರು ಎಚ್ಚರಿಸಿದ್ದಾರೆ. ಯಾವುದೇ ಒಂದು ಭಾಷೆ ಶ್ರೀಮಂತ ಭಾಷೆಯಾಗಿ ಮತ್ತು ಒಳ್ಳೆಯ ಪ್ರಭುತ್ವವಾದಂಥ ಭಾಷೆಯಾಗಿ ಈ ನಮ್ಮ ಸಮಾಜದಲ್ಲಿ ಉಳಿಯುವುದಕ್ಕೆ ಸಾಧ್ಯವಿದೆ. ಆದರೆ ಎಲ್ಲಿಯವರೆಗೆ ಈ ನಮ್ಮ ಸಮಾಜ ಬಡತನದಲ್ಲಿರುತ್ತದೋ ಅದಕ್ಕಿಂತ ಮುಖ್ಯವಾಗಿ ಭೌತಿಕ ಬಡತನಕ್ಕಿಂತ ಹೆಚ್ಚಾಗಿ ಭೌತಿಕವಾದಂಥ ಪ್ರಭುತ್ವತೆಯನ್ನು ಕಳೆದುಕೊಂಡಿರುವಂತಹ ಈ ನಮ್ಮ ಸಮಾಜ ತನ್ನದೇ ಆದಂತಹ ಚಿಂತನೆಯ ಮೂಲಕ ನಮ್ಮ ಕನ್ನಡ ಭಾಷೆಯನ್ನು ಬೆಳೆಸುವುದಕ್ಕಾಗುವುದಿಲ್ಲ, ಈ ಭಾಷೆ ಅನ್ನುವಂಥಾದ್ದು ಒಂದು ಅಸ್ತ್ರ. ಇದನ್ನು ಹೆಚ್ಚು ಹೆಚ್ಚಾಗಿ ಉಪಯೋಗ ಮಾಡಿದರೆ, ಆಳವಾಗಿ ಉಪಯೋಗ ಮಾಡಿದರೆ, ವಿಸ್ತೀರ್ಣವಾಗಿ ಉಪಯೋಗ ಮಾಡಿದರೆ, ಇದು ಬಹಳ ಹರಿತವಾಗಿರುವುದಕ್ಕೆ ಸಾಧ್ಯತೆ ಇದೆ. ಈ ನಮ್ಮ ದೇಶ ಭಾಷೆ ಹೆಚ್ಚು ಶ್ರೀಮಂತವಾಗಿದೆ. ಈ ದೇಶದ ಜನ ಹೆಚ್ಚು ಸೃಜನಾತ್ಮಕವಾದ ಕ್ರಿಯೆಗಳಲ್ಲಿ ತೊಡಗಿದ್ದಾರೆ. ಒಳ್ಳೆಯ ಚಿಂತನ ಶೀಲರಾಗಿದ್ದಾರೆ. ನಮ್ಮ ಸರ್ಕಾರ ಕೂಡ ಈ ಕೆಲವೊಂದು ಸೌಲಭ್ಯಗಳಿಂದ ವಂಚಿತವಾಗಿರುವ ಜನ ವರ್ಗ ಏನಿದೆ, ಅದರ ಧ್ವನಿಯಾಗಿ ಕೆಲಸ ಮಾಡುತ್ತಿದೆ. ನಾವೂ ಸಹ ಕನ್ನಡದ ಪರವಾಗಿದ್ದೇವೆ. ಈ ದಿಸೆಯಲ್ಲಿ ನಮ್ಮ ಇಲಾಖೆಯವರು ಕೂಡ ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಶ್ರೀಮಾನ್ ಪಾಟೀಲ್ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಕನ್ನಡದ ಕೆಲಸ ಬಹಳ ಅದ್ಭುತವಾಗಿದೆ. ಇವರ ಒಂದು ಪ್ರಯತ್ನದಿಂದಾಗಿ ನೂರಕ್ಕೆ ಹತ್ತರಷ್ಟು ಪರಿಣಾಮಕಾರಿಯಾಗಿ ಕನ್ನಡವನ್ನು

ಬೆಳೆಸುವುದಕ್ಕೆ ಸಾಧ್ಯವಾಗಿದೆ. ಇದೇ ಸದನದಲ್ಲಿ ಕಳೆದ ಹತ್ತು ವರ್ಷಗಳ ಹಿಂದೆ ಹೆಚ್ಚು ಇಂಗ್ಲೀಷ್ ಭಾಷೆಯನ್ನು ಕೇಳುವುದಕ್ಕೆ ಸಾಧ್ಯವಿತ್ತು. ಆದರೆ ಈಗ ತಮ್ಮ ಒಂದು ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು ನೋಡಿದಾಗ ಶೇಕಡಾ ೯೫ರಷ್ಟು ಕಾರ್ಯಕಲಾಪಗಳು ಕನ್ನಡದಲ್ಲಿಯೇ ನಡೆಯುತ್ತಿವೆ.

ಇನ್ನು ಎರಡನೆಯ ವಿಷಯವೆಂದರೆ, ಈ ಸಾಂಸ್ಕೃತಿಕ ಕಾರ್ಯಕ್ರಮಗಳ ಲಾಭವನ್ನು ಕೇವಲ ಬೆಂಗಳೂರು ನಗರದಲ್ಲಿರುವವರು ಮತ್ತು ಇದರ ಸುತ್ತಮುತ್ತ ಇರುವವರು ಪಡೆಯುತ್ತಿದ್ದಾರೆ, ಇದು ಸರಿಯಲ್ಲ, ದೂರದ ನಗರಗಳಲ್ಲಿರುವವರು ಸಹ ಇದರ ಪ್ರಯೋಜನ ಪಡೆಯುವಂತಹ ವ್ಯವಸ್ಥೆ ಮಾಡಬೇಕು ಎಂದು ಮಾನ್ಯ ಸದಸ್ಯರಾದ ಶ್ರೀ ವೀರಯ್ಯಸ್ವಾಮಿ ಅವರು ಪ್ರಸ್ತಾಪ ಮಾಡಿದ್ದಾರೆ. ಈ ಸಾಂಸ್ಕೃತಿಕ ಕಾರ್ಯಕ್ರಮಗಳ ಲಾಭವನ್ನು ಪಡೆಯಲು ಎಲ್ಲರಿಗೂ ಸಾಧ್ಯವಾಗದಿರುವುದಕ್ಕೆ ಕೆಲವೊಂದು ಮೂಲಭೂತವಾದ ಕಾರಣಗಳಿವೆ. ಇಲ್ಲಿ ನಾವು ಯಾವ ಸಂದರ್ಭಗಳಲ್ಲಿ ಎಂತಹ ಉತ್ಸವಗಳನ್ನು ಏರ್ಪಡಿಸುತ್ತೇವೆಂಬುದು ಮುಖ್ಯ. ನಾವು ಶಿಷ್ಟ ಸಂಪ್ರದಾಯದ ಕಲೆಯನ್ನು ಪ್ರದರ್ಶನ ಮಾಡುವ ಸಂದರ್ಭದಲ್ಲಿ ಅವು ಸಾಧಾರಣವಾಗಿ ರಾಜಧಾನಿಯ ಹತ್ತಿರದಲ್ಲಿಯೇ ನಡೆಯುತ್ತವೆ. ಇದಕ್ಕೆ ಕಾರಣವೆಂದರೆ, ಇಂತಹ ಶಿಷ್ಟ ಸಂಪ್ರದಾಯದ ಕಲೆಗಳು ಸಾಮಾನ್ಯವಾಗಿ ಗುರು ಮನೆ ಮತ್ತು ಅರಮನೆ ಹತ್ತಿರದಲ್ಲಿಯೇ ಇರುತ್ತವೆ. ಇವು ಹೆಚ್ಚಾಗಿ ಪರಾಣು ಜೀವಿಗಳಾಗಿ ಬೆಳೆಯುವುದರಿಂದ, ಈ ಕಲೆಗಳಿಗೆ ನಾವು ಎಷ್ಟೇ ಒತ್ತು ಕೊಟ್ಟರೂ ಸಹ. ಇವು ಹೆಚ್ಚಾಗಿ ಊಳಿಗಮಾನ್ಯ ಪದ್ಧತಿಯಲ್ಲಿ ಬೆಳೆದಿರುವುದರಿಂದ ಮೊದಲಿನ ಪದ್ಧತಿಗಳಾಗಿಯೇ ಉಳಿದುಕೊಂಡಿವೆ, ಆದ್ದರಿಂದ ಇಂತಹ ಶಿಷ್ಟ ಸಂಪ್ರದಾಯಕ್ಕೆ ಒಳಗಾಗಿರುವಂತಹ ನೃತ್ಯ ಮತ್ತು ಸಂಗೀತಗಳು ಏನಿವೆ, ಇವುಗಳ ಪೈಕಿ ಪ್ರಾಯಶಃ ನಿಜಾಂಶಾಹಿ ಪದ್ಧತಿಯಲ್ಲಿ ಹೆಚ್ಚಿನ ಹೆಸರು ಪಡೆದಿದ್ದ ಕ್ಯಾಲ್ ಪದ್ಧತಿ ಸಂಗೀತವನ್ನು ಹೆಚ್ಚು ಆಸಕ್ತಿಯಿದ್ದವರು ಮತ್ತು ಹೆಚ್ಚು ಹಣವಿದ್ದವರು ಎರಡು ಮೂರು ತಾಸುಗಳ ಕಾಲ ಕೇಳುತ್ತಿದ್ದರು.

ಆದರೆ ಬದಲಾಗುತ್ತಿರುವ ಅಭಿರುಚಿಯಲ್ಲಿ, ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಯಲ್ಲಿ ಈ ಮನುಷ್ಯ ಸುಮಾರು ೩ ತಾಸುಗಳವರೆಗೆ ಸಂಗೀತದ ಒಂದು ರಾಗದ ಛಾಯೆಯನ್ನು ಕೇಳಲಿಕ್ಕೆ ಅವನಿಗೆ ಸಾಧ್ಯವಾಗುವುದಿಲ್ಲ, ಆದುದರಿಂದ ಇಂತಹ ಒಂದು ಸಾಮಾಜಿಕ ಬದಲಾವಣೆಗಳು ಇಂತಹ ಶಿಷ್ಟ ಸಂಪ್ರದಾಯದಲ್ಲಿ ಕೆಲಸವನ್ನು ಮಾಡುತ್ತೇವೆ. ಅಧ್ಯಕ್ಷರೆ, ಬಹುಶಃ ಮೈಸೂರಿಗೆ ಸೀಮಿತಗೊಳಿಸಿರತಕ್ಕಂಥ ಈ ಕಲೆ ರಾಜಧಾನಿ ಬೆಂಗಳೂರಿಗೆ ಬಂದಿರತಕ್ಕದ್ದನ್ನು ನಾವು ನೋಡುತ್ತೇವೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಅನೇಕರು ಕೂಡ ನವದೆಹಲಿಗೆ ಹೋಗಿರತಕ್ಕದ್ದನ್ನು ನಾವು ಕಂಡಿದ್ದೇವೆ. ಆದುದರಿಂದ ಅನೇಕ ಸಂದರ್ಭಗಳಲ್ಲಿ ಕೆಲವು ಕಲಾವಿದರಿಗೆ ಹೆಚ್ಚು ಪ್ರೋತ್ಸಾಹ ಸಿಕ್ಕಿದೆ ಎನ್ನುವ ಮಾತು ಇದ್ದರೂ ಕೂಡ ಜನಪದ ಸಾಹಿತ್ಯಕ್ಕೆ ನಾವು ಹೆಚ್ಚು ಒತ್ತನ್ನು ಕೊಟ್ಟಂಥ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಜನಗಳಿಗೆ ಹೆಚ್ಚು ಅವಕಾಶಗಳು ಸಿಕ್ಕಿದೆ. ಇವತ್ತು ಯಡ್ರಾಮನಹಳ್ಳಿ ಭರಮಪ್ಪನವರ ತೊಗಲು ಗೊಂಬೆಯಾಟ ಪಶ್ಚಿಮ ಜರ್ಮನಿಗೆ ಹೋಗಿ ಬಂದಿರತಕ್ಕದ್ದು ಇದೆ. ಯಕ್ಷಗಾನ ಕಲೆ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕಂಥಾದ್ದು ಇವತ್ತು ಅಮೇರಿಕ, ಯೂರೋಪ್ ಮೊದಲಾದ ದೇಶಗಳಿಗೆ ಹೋಗಿದೆ, ಇವತ್ತು ಮಧ್ಯಪ್ರಾಚ್ಯಕ್ಕೆ ಹೋಗತಕ್ಕಂಥ ವ್ಯವಸ್ಥೆ ಇದೆ. ಯಾರ ಮುಲಾಜಿಲ್ಲದೆ ತನ್ನ ಕಾಲ ಮೇಲೆ ತಾನು ನಿಲ್ಲತಕ್ಕ ರೀತಿಯಲ್ಲಿ ಯಕ್ಷಗಾನ ಸಂಪ್ರದಾಯ ಬೆಳೆದುಬಂದಿದೆ. ಇವತ್ತು ಸರಿಯಾದಂಥ ಒಬ್ಬ ಭಾಗವತ ಕೇವಲ ಆರು ತಿಂಗಳಲ್ಲಿ ಈ ಯಕ್ಷಗಾನದಲ್ಲಿ ಸುಮಾರು ೪೦ ಸಾವಿರ ರೂಪಾಯಿಗಳವರೆಗೆ ಗೌರವ ಸಂಭಾವನೆ ಪಡೆಯತಕ್ಕಂಥ ಸಾಧ್ಯತೆ ಇದೆ. ಇದು ಮಾನ್ಯ ಇದಿನಬ್ಬ ರವರಿಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕಂಥ ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತು, ಸುಮಾರು ೧೦-೧೫ ಲಕ್ಷ ಬಂಡವಾಳ ಹಾಕಿರತಕ್ಕಂಥ ಯಕ್ಷಗಾನ ಮಂಡಲಗಳು ಸರ್ಕಾರದ ಯಾವ ಕೃಪೆ ಇಲ್ಲದೆ ಬದುಕತಕ್ಕ ರೀತಿಯ ವಾತಾವರಣವನ್ನು, ಅಭಿರುಚಿಯನ್ನು ಕಲ್ಪಿಸಿಕೊಂಡಿರತಕ್ಕಂಥಾದ್ದು ಇದೆ, ಒಳ್ಳೆಯ ವಿದ್ಯಾವಂತರಾಗಿರತಕ್ಕಂಥ ಜನ ಕೂಡ ಅಲ್ಲಿದ್ದಾರೆ. ಅವರೆಲ್ಲರೂ ಯಕ್ಷಗಾನದಲ್ಲಿ ಕೆಲಸ ಮಾಡುತ್ತಾರೆ, ಮತ್ತು ನೋಡಿ ಖುಷಿ ಪಡುವಂಥ ಮನಸ್ಥಿತಿಯನ್ನು ಅವರು ಬೆಳೆಸಿಕೊಂಡಿದ್ದಾರೆ. ಯಾವುದೇ ಒಂದು ಕಲೆ ಎನ್ನುವಂಥಾದ್ದು ಬದುಕಿನ ಒಂದು ಅವಿಭಾಜ್ಯವಾಗಿರತಕ್ಕಂಥ ಅಂಗ. ಈಗ ಕೊಡಗಿನಲ್ಲಿ ಉಮ್ಮತ ಆಟ ಎನ್ನುವಂಥಾದ್ದು ಇರುವುದೇ ಆಗಿದ್ದರೆ, ಅಲ್ಲಿ ಬೇರೆ ಬೇರೆ ಆಟಗಳು ಇರುವುದೇ ಆಗಿದ್ದರೆ ಅಲ್ಲಿ

ಸುಶಿಕ್ಷಿತರೇ ಆಗಿರಬಹುದು, ದೊಡ್ಡ ಅಧಿಕಾರಿಯಾಗಿಬಹುದು, ಸೈನ್ಯದಲ್ಲಿ ದೊಡ್ಡ ದಂಡಾಧಿಕಾರಿಯಾಗಿರಬಹುದು ಅದು ಅವನ ಬದುಕಿನ ಅಂಗವಾಗಿ ಮದುವೆ, ಮುಂಜಿ ಅಥವಾ ಹಬ್ಬ ಹರಿದಿನಗಳಲ್ಲಿ ನೃತ್ಯ ಮಾಡತಕ್ಕಂಥಾದ್ದು ಆತನ ಬದುಕಿನ ಒಂದು ಭಾಗವಾಗಿರುವುದರಿಂದ ಸರ್ಕಾರದ ಕೃಪೆಯಿಲ್ಲದೆ ಬದುಕತಕ್ಕಂಥ ಒಂದು ಅಂಗವಾಗಿದೆ. ಆದರೆ ಇವತ್ತು ಬದುಕಿನ ಲಕ್ಷಣಗಳು ಬೇರೆಯಾಗಿದೆ. ನಮ್ಮಲ್ಲಿ ಕುಟ್ಟುವ, ಬೀಸುವ ಹಾಡುಗಳಿಲ್ಲ ಎಂದು ತವಕಪಡುವಂಥಾದ್ದು ಅಗತ್ಯವಿಲ್ಲ. ಈಗ ನಮ್ಮ ಗಿರಣಿಗಳಿಗೆ ನಮ್ಮ ಜೋಳವನ್ನು ತೆಗೆದುಕೊಂಡು ಹೋಗಿ ಬೀಸುವಂಥ ವ್ಯವಸ್ಥೆ ಇದ್ದಂಥ ಸಂದರ್ಭದಲ್ಲಿ ಬೀಸುವ ಹಾಡುಗಳು ಉಳಿಯುಲಿಕ್ಕೆ ಸಾಧ್ಯವಾಗುವುದಿಲ್ಲ, ಕುಟ್ಟುವ ಹಾಡುಗಳು ಉಳಿಯಲಿಕ್ಕೆ ಸಾಧ್ಯವಾಗುವುದಿಲ್ಲ. ಯಾವ ಬದುಕಿನ ದೈಹಿಕ ಶ್ರಮವನ್ನು ಕಡಿಮೆ ಮಾಡಿಕೊಳ್ಳಲಿಕ್ಕಾಗಿ ಮಾನವ ತನ್ನಷ್ಟಿಗೆತಾನೇ ಸೃಷ್ಟಿಮಾಡಿಕೊಂಡಿರತಕ್ಕ ಹಾಡುಗಳು ಇವು. ಇವು ಹೊಸ ಹೊಸ ರೂಪವನ್ನು ತಾಳಲಿಕ್ಕೆ ಸಾಧ್ಯವಾಗಿದೆ. ಆದುದರಿಂದ ಈ ಸಾಂಸ್ಕೃತಿಕ ಜಗತ್ತಿಗೆ ನಾವು ನಮ್ಮ ಸರ್ಕಾರ ಕಳೆದ ೫ ವರ್ಷಗಳಲ್ಲಿ ದೊಡ್ಡದಾಗಿರತಕ್ಕಂಥ ಒತ್ತನ್ನು ಕೊಟ್ಟಿದ್ದೇವೆ. ನಮ್ಮ ಬದುಕಿಗೆ ಅರ್ಥ ಬರುವಂಥರೀತಿಯಲ್ಲಿ ಕೆಲಸಗಳು ಆಗಬೇಕಾಗಿದೆ, ಇನ್ನೂ ಮಾಡಬೇಕಾಗಿರತಕ್ಕಂಥ ಕೆಲಸಗಳೂ ಕೂಡ ಇದೆ. ಆ ಕೆಲಸಗಳ ಬಗ್ಗೆ ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳನ್ನು ನಾವು ಸ್ವೀಕಾರ ಮಾಡುತ್ತೇವೆಎನ್ನುವಂಥ ಮಾತನ್ನು ನಾನು ಹೇಳುತ್ತೇನೆ. ಇನ್ನು ಪ್ರವಾಸೋದ್ಯಮ ಇಲಾಖೆಗೆ ಸಂಬಂಧಪಟ್ಟಂತೆ ನಾವು ಯಾವ ಪ್ರಮಾಣದಲ್ಲಿ ಆ ಇಲಾಖೆಯನ್ನು ಬೆಳೆಸಬೇಕಾಗಿತ್ತೋ ಆ ಪ್ರಮಾಣದಲ್ಲಿ ಆಗಿಲ್ಲ. ನಮ್ಮ ಸುದೈವದಿಂದಾಗಿ ಕರ್ನಾಟಕ ರಾಜ್ಯ ಅತ್ಯಂತ ಮುಖ್ಯವಾಗಿರತಕ್ಕಂಥ ಒಂದು ಸ್ಥಳದಲ್ಲಿದೆ. ಸುಮಾರು ೨೦೦ ಕಿಲೋಮೀಟರುಗಳಿಗಿಂತಲೂ ಉದ್ದವಾಗಿರತಕ್ಕಂಥ ಕಡಲುತೀರ ಇದೆ, ಸಹ್ಯಾದ್ರಿ ಬೆಟ್ಟಗುಡ್ಡಗಳಿವೆ. ವಿಫುಲವಾದ ಸೌಂದರ್ಯಕ್ಕೆ ಒಳಗಾಗಿರತಕ್ಕಂಥ ಎಲ್ಲ ದೊಡ್ಡ ದೊಡ್ಡ ಅರಣ್ಯ ನಮ್ಮಲ್ಲಿದೆ ಮತ್ತು ಸಮತಟ್ಟಾಗಿರುವಂಥ ಬಯಲುಸೀಮೆ ಇದೆ. ಮತ್ತು ಸೂರ್ಯನ ಬಿಸಿಲಿನಿಂದ ಕಪ್ಪಾಗಿದ್ದರೂ ಕೂಡ ತನ್ನದೇ ಆದಂಥ ಆಂತರಿಕ ಶಕ್ತಿಯನ್ನು, ಸೌಂದರ್ಯವನ್ನು, ಪಡೆದಿರತಕ್ಕಂಥ ಎರೆಸೀಮೆ ನಾಡು ಇದೆ. ಇಷ್ಟೆಲ್ಲಾ ಇರತಕ್ಕಂಥ ಪ್ರದೇಶದಲ್ಲಿ ನಾವು ಇಡೀ ಭಾರತದೇಶಕ್ಕೆ ಅಲ್ಲ, ಪ್ರಪಂಚಕ್ಕೆ ಕೂಡ ಹೆಮ್ಮೆಪಡುವಂಥ ರೀತಿಯ ವಾಸ್ತು ಶಿಲ್ಪಗಳು, ಗುಹಾಂತರ್ದೇವಾಲಯಗಳು ೪ನೇ, ೫ನೇ ಶತಮಾನದಿಂದ ಹಿಡಿದು ಚಾಲುಕ್ಯರ ಕಾಲದಿಂದ, ರಾಷ್ಟ್ರಕೂಟರ ಕಾಲದಿಂದ, ಕದಂಬರ ಕಾಲದಿಂದ ಪ್ರಾರಂಭಮಾಡಿರತಕ್ಕಂಥ ದೊಡ್ಡ ದೊಡ್ಡ ಐತಿಹಾಸಿಕ ಮಹತ್ವ ಪಡೆದಿರತಕ್ಕಂಥ ಸ್ಥಳಗಳು ನಮ್ಮಲ್ಲಿದೆ. ಅದೇರೀತಿಯಾಗಿ ಸಂಗೀತ ಪ್ರಕಾರಗಳು ಕೂಡ ಇವೆ. ಅತ್ಯಂತ ಪ್ರಮುಖವಾಗಿರತಕ್ಕಂಥ ಕರ್ನಾಟಕ ಸಂಗೀತ ನಮ್ಮ ಕರ್ನಾಟಕ ರಾಜ್ಯದ ಬಾದಾಮಿಯಲ್ಲಿರತಕ್ಕಂಥ ಗಣಪತಿ ದೇವರ ವಾತಾಪಿ ಗಣನಾಯಕ ಎಂಬ ಸ್ತುತಿಯಿಂದ ಪ್ರಾರಂಭವಾಗಿರತಕ್ಕಂಥಾದ್ದಾಗಿದೆ. ಇದು ತಮಿಳುನಾಡಿನಲ್ಲಿ, ಆಂಧ್ರದಲ್ಲಿ ಹೆಚ್ಚು ಪ್ರಖ್ಯಾತಿಗಳಿಸಿದ್ದರೂ ಕೂಡ ಕರ್ನಾಟಕ ಸಂಗೀತ ಎಂತಲೇ ಹೆಸರು ಇರತಕ್ಕಂಥ ನಿದರ್ಶನ ಇದೆ. ಅದೇರೀತಿಯಾಗಿ, ಹಿಂದೂಸ್ತಾನಿ ಸಂಗೀತಕ್ಕೆ ಸಂಬಂಧಪಟ್ಟಂತೆ ಉತ್ತರ ಕರ್ನಾಟಕದ ಧಾರವಾಡ ಜಿಲ್ಲೆಯೊಂದರಲ್ಲೇ ಭಾರತದೇಶದಲ್ಲೇ ಅಗ್ರಮಾನ್ಯ ಸ್ಥಾನದಲ್ಲಿರತಕ್ಕಂಥ ೫ ಜನ ದೊಡ್ಡ ಹಿಂದೂಸ್ತಾನಿ ಸಂಗೀತಗಾರರು ನಮ್ಮಲ್ಲಿರತಕ್ಕಂಥಾವರಾಗಿದ್ದಾರೆ. ಅವರು ನಮ್ಮ ಕರ್ನಾಟಕದವರೇ ಎಂದು ಹೇಳಿಕೊಳ್ಳುವಂಥ ಹೆಮ್ಮೆಯ ಪರಂಪರೆಯಾಗಿದೆ. ಆ ಕಾರಣಕ್ಕಾಗಿ ಪ್ರವಾಸೋದ್ಯಮ ಇಲಾಖೆಯ ಮೂಲಕವಾಗಿ ಕಡಲತೀರದಲ್ಲಿರತಕ್ಕಂಥ ವಿಹಾರಗಳಾಗಿರಬಹುದು ಅಥವಾ ಬೆಟ್ಟಗುಡ್ಡಗಳಿಗೆ ಹೋಗಿ ಬರತಕ್ಕಂಥ ವನಸಂಚಾರವಾಗಿರಬಹುದು ಅಥವಾಅದ್ಭುತ ವಾಗಿರತಕ್ಕಂಥ ಅಡ್ವೆಂಚರಿಸಂಎಂದು ಏನು ಕರೆಯುತ್ತೇವೆ ಆ ರೀತಿ ಕೆಲಸಮಾಡುವಂಥಾದ್ದು ಆಗಿರಬಹುದು ಅಥವಾ ಬೇರೆ ಬೇರೆ ಐತಿಹಾಸಿಕ ಮಹತ್ವದ ಪುಣ್ಯಕ್ಷೇತ್ರಗಳಿಗೆ ಜನಗಳನ್ನು ಕರೆದುಕೊಂಡು ಹೋಗಿ ಬರುವಂಥಾದ್ದು ಆಗಿರಬಹುದು...

ಆ ಪ್ರಮಾಣದಲ್ಲಿ ಕೆಲಸವಾಗಿಲ್ಲ. ಆದರೆ, ಇದರಲ್ಲಿ ಮೂಲಭೂತವಾಗಿರತಕ್ಕಂಥಾದ್ದು ಶ್ರೀಮಾನ್ ಖರ್ಗೆಯವರು ಮತ್ತೆ ನಮ್ಮನ್ನು ತಪ್ಪು ತಿಳಿದುಕೊಳ್ಳಬಾರದು. ಅವರು ನೀವು ಏನಾದರೂ ಸಂಪುಟದಲ್ಲಿ ಇಟ್ಟು ನಿರ್ಣಯ ತೆಗೆದುಕೊಂಡಿದ್ದೀರಾ ? ಪ್ರತಿಯೊಂದು ವಿಚಾರದ ಸಂದರ್ಭ ಕೇಂದ್ರಸರ್ಕಾರದ ಬಗ್ಗೆ ಟೀಕೆ ಮಾಡಿ ನೀವು ಭಾಷಣ ಮಾಡುತ್ತೀರೆಂದು ಹೇಳುತ್ತಾರೆ, ಅನೇಕದಲ್ಲಿ ಕೇಂದ್ರ ಸರ್ಕಾರದವರು ಮಾಡುತಕ್ಕ ನೀತಿ ನಿಯಮಗಳು ಏನಿವೆ, ಅವು ಅಸಾಧ್ಯವಾಗಿರತಕ್ಕ ಗುರಿಗಳಾಗಿರುತ್ತವೆ. ೭ ವರ್ಷಗಳ ಹಿಂದೆ ೧೦ ಲಕ್ಷ ಪ್ರವಾಸಿಗರು ಈ ದೇಶದಲ್ಲಿ ಬಂದಾಗ, ಅವರಿಗೆ ಸ್ವಾಗತ ಮಾಡತಕ್ಕ ಗುರಿ ಇಟ್ಟುಕೊಳ್ಳಲಾಗಿತ್ತು ೧೯೯೦ ರಲ್ಲಿ ೨೫ ಲಕ್ಷ ಪ್ರವಾಸಿಗರು ಬರುತ್ತಾರೆಂಬ ಲೆಕ್ಕಾಚಾರದ ಮಾತನ್ನು ಹೇಳಿದ್ದರು. ೧೦ ಲಕ್ಷ ಪ್ರವಾಸಿಗರ ಗುರಿಯನ್ನು

ಮುಟ್ಟಬೇಕಾದರೆ ೭ ವರ್ಷ ಹಿಡಿಯಿತು. ೨೫ ಲಕ್ಷ ಮುಟ್ಟಬೇಕಾಗಿದ್ದರೆ, ಕನಿಷ್ಠ ಇನ್ನು ೧೦ ವರ್ಷಗಳು ಆಗುತ್ತದೆ. ಅನೇಕ ಸಂದರ್ಭದಲ್ಲಿ ನಾವು ನಿರ್ಧರಿಸಲ್ಪಟ್ಟ ಗುರಿಗಳಿಗೆ ಮತ್ತು ಇರತಕ್ಕ ವಾಸ್ತವಾಂಶಗಳಿಗೆ ಒಂದಕ್ಕೊಂದಕ್ಕೂ ಸಂಬಂಧ ಇರುವುದಿಲ್ಲ. ಪ್ರವಾಸಿಗರಿಗೆ ಬೇಕಾಗಿರತಕ್ಕ ಅನುಕೂಲಗಳು ಅಂದರೆ ಪಂಚತಾರ ನಕ್ಷತ್ರಗಳ ಹೋಟೆಲುಗಳ ಬಗ್ಗೆ ಯೋಚನೆ ಮಾಡುತ್ತೇವೆ ಪ್ರವಾಸೋದ್ಯಮ ಒಂದು ಉದ್ಯಮ ಎನ್ನುವ ರೀತಿಯಲ್ಲಿ ರಿಯಾಯಿತಿಗಳನ್ನು ಕಲ್ಪಿಸಿಕೊಡಲಿಕ್ಕೆ ಬೆಂಗಳೂರು ಮತ್ತು ಇತರೆ ದೊಡ್ಡ ದೊಡ್ಡ ನಗರಗಳಲ್ಲಿ ಪಂಚತಾರ ಹೋಟೆಲುಗಳು ಸಂಸ್ಕೃತಿಯನ್ನು ಪಡೆಯುತ್ತೇವೆ. ನಿಜವಾಗಿಯೂ ನಮ್ಮಲ್ಲಿರತಕ್ಕ ಪ್ರವಾಸಿಗರಿಗಾಗಲಿ, ಒಳನಾಡಿನ ಪ್ರವಾಸಿಗರಿಗಾಗಲಿ, ಹೊರನಾಡಿನಿಂದ ಬಂದಿರತಕ್ಕ ಕೆಳ ಮತ್ತು ಮಧ್ಯಮ ಪ್ರವಾಸಿಗರಿಗಾಗಲೀ, ಯುವಕರಿಗೆ ವಿದ್ಯಾರ್ಥಿಗಳಿಗಾಗಲೀ, ಅನುಕೂಲ ಕಲ್ಪಿಸಿಕೊಡತಕ್ಕ ಪ್ರಶ್ನೆಯೇ ನಮ್ಮ ಮುಂದಿಲ್ಲ. ಹಿಂದೆ ಇರತಕ್ಕ ಸಂಪ್ರದಾಯಗಳ ರೀತಿ ದೇವಾಲಯಗಳು, ಗುಡಿ ಗುಂಡಾರಗಳಲ್ಲಿ ಮಲಗತಕ್ಕ ವ್ಯವಸ್ಥೆ ಇತ್ತು. ಛತ್ರಗಳ ಅನುಕೂಲ ಇತ್ತು. ಇವುಗಳು ಇಲ್ಲದಂಥ ಈ ಪರಿಸ್ಥಿತಿಯಲ್ಲಿ ಬಹಳ ದೊಡ್ಡದಾಗಿ ಈ ಉದ್ಯಮವನ್ನು ಬೆಳೆಸುವುದಕ್ಕೆ ಸಾಧ್ಯವಾಗಿಲ್ಲ, ಆದರೂ ಕೂಡ ೩-೪ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮರುವಂತಿಗೆ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ೬ ಎಕರೆ ಜಮೀನನ್ನು ತೆಗೆದುಕೊಳ್ಳಲಾಗಿದೆ ಆದರೆ ಅಲ್ಲಿ ಹೋಟೆಲು ಕಟ್ಟುವುದಕ್ಕಾಗಿಲ್ಲ. ಮರುವಂತಿಗೆಯಲ್ಲಿ ಕಡಲತೀರ ಬಹಳ ಆಳವಾಗಿದ್ದು ಹೋಟೆಲು ಕಟ್ಟುವುದಕ್ಕೆ ತೊಂದರೆಯಾಗಿದೆ. ತತ್‌ಕ್ಷಣವೇ ಅದಕ್ಕಿಂತ ಸ್ವಲ್ಪ ಮೇಲೆ ಹೋಗಿ ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟ ತಂಗು ದಾಣಕ್ಕೆ ಕಟ್ಟುವುದಕ್ಕೆ ನಿರ್ಧಾರ ಮಾಡಿದ್ದೇವೆ. ಮಲ್ಪೆ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಕೂಡ ಸಂತೋಷಪಡುವ, ಅಭಿಮಾನ ಪಡುವ ಸಂಗತಿಯೇನೂ ಅಲ್ಲ. ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ೬೦-೬೫ ಲಕ್ಷ ಖರ್ಚು ಮಾಡಿದರೂ ಇನ್ನೂ ಮುಕ್ತಾಯಕ್ಕೆ ಬಂದಿಲ್ಲ. ಇದುವರೆಗೆ ೧ ಕೋಟಿ ೧೦ ಲಕ್ಷ ಹಣ ಖರ್ಚಾಗಿದೆ ಈ ಹಣ ಯಾವ ಯಾವ ರೀತಿ ಖರ್ಚು ಮಾಡಲಾಗಿದೆ ಎನ್ನುವುದರ ಬಗ್ಗೆ ಇಲಾಖೆಯ ಕಾರ್ಯದರ್ಶಿಗಳನ್ನು ವಿಚಾರಣೆ ಮಾಡಲು ಎನ್‌ಕ್ವೈರಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ ಕಂಪನಿ ಆಕ್ಟ್ ಕೆಳಗೆ ಬರತಕ್ಕ ಪ್ರವಾಸೋದ್ಯಮ ನಿಗಮಕ್ಕೆ ಸೇರಿದ ಎಲ್ಲಾ ಕಾಗದಪತ್ರಗಳನ್ನು ತರಿಸಿಕೊಂಡು ಪ್ರಸ್ತಾಪ ಮಾಡಲಾಗಿದೆ. ಈ ಹೋಟೆಲನ್ನು ಖಾಸಗೀಯವರಿಗೆ ಮಾರಬಾರದೆಂದು ಶ್ರೀಮಾನ್ ಇದಿನಬ್ಬನವರ ಅಭಿಪ್ರಾಯಕ್ಕೆ ನನ್ನ ಒಮ್ಮತ ಇದೆ. ಅದನ್ನು ಸಂಪೂರ್ಣವಾಗಿ ಮುಗಿಸಬೇಕಾದರೆ, ಇನ್ನೂ ೨೦-೩೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈ ಹಣವನ್ನು ಪ್ರವಾಸೋದ್ಯಮ ನಿಗಮದವರು ಒದಗಿಸುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟರೂ ಕೂಡ ಖಾಸಗೀಯವರು ಯಾರೂ ಮುಂದೆ ಬಂದಿಲ್ಲ ಪ್ರಾಯಶಃ ಹಾಕಿದಂಥ ಬಂಡವಾಳ ಪುನರಪಿ ವಾಪಸ್ಸು ಬರುವ ನಂಬಿಕೆ ಇಲ್ಲದೇ ಇರಬಹುದು ಅಥವಾ ಬೇರೆ ಕಾರಣಗಳು ಇರಬಹುದು.

ಸ್ಟೆಂಟ್ ಮೇರೀಸ್ ಐಲ್ಯಾಂಡ್ ಮಲ್ಪೆ ನಡುವೆ ಜಲಕ್ರೀಡೆಗೆ ಸಂಬಂಧಪಟ್ಟಂತೆ ಅನುಕೂಲ ಮಾಡುವ ಬಗ್ಗೆ ಹೇಳಿದ್ದಾರೆ. ಜಲಾನಯನ ಪ್ರದೇಶಗಳಲ್ಲಿ, ದೊಡ್ಡ ದೊಡ್ಡ ಅಣೆಕಟ್ಟುಗಳಲ್ಲಿ ಸರೋವರಗಳು ಇರತಕ್ಕ ಕಡೆ ದೊಡ್ಡ ದೊಡ್ಡ ನಗರಗಳಲ್ಲಿ ಜಲಕ್ರೀಡೆಗೆ ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದ ಕೇಂದ್ರ ಸರ್ಕಾರದವರು ೪೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಈಗಾಗಲೇ ಕಾರ್ಯ ಕ್ರಮ ಹಾಕಿಕೊಳ್ಳಲಾಗಿದೆ. ವಾಟರ್ ಸ್ಪೋರ್ಟ್ಸ್ ಪ್ರಾರಂಭ ಮಾಡಿದ್ದೇವೆ. ಇನ್ನು ನಮ್ಮಲ್ಲಿರತಕ್ಕ ಹೋಟೆಲುಗಳು ಕಳೆದ ೨-೩ ವರ್ಷಗಳಿಂದ ಲಾಭ ಮಾಡುತ್ತಿವೆ. ಪ್ರವಾಸೋದ್ಯಮ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿಯವರಿಗೆ, ಬಡ್ತಿ ಕೊಡುವ ವಿಷಯದಲ್ಲಿ ಅಧಿಕಾರಿಗಳ ವರ್ಗಾವರ್ಗಿ ವಿಷಯದಲ್ಲಿ ಅಲ್ಲಿನ ಸೇವಾ ನಿಯಮಗಳಿಗೆ ಸಂಬಂಧಪಟ್ಟಂತೆ, ಅವುಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಆಗಿರತಕ್ಕ ತಪ್ಪುಗಳ ಬಗ್ಗೆ ವಿಚಾರಣೆ ಮಾಡಿ ಸೂಕ್ತ ಕ್ರಮತೆಗೆದುಕೊಳ್ಳಲು ಕಾರ್ಯದರ್ಶಿಗಳಿಗೆ ತಿಳಿಸಲಾಗಿದೆಯೆಂದು ತಮ್ಮ ಮುಖಾಂತರ ಅರಿಕೆ ಮಾಡಿಕೊಳ್ಳುತ್ತೇನೆ. ಪ್ರವಾಸೋದ್ಯಮ ಇಲಾಖೆಗೆ ಹೊಸ ರೂಪವನ್ನು ಕೊಡುವ ಬಗ್ಗೆ ಕಾರ್ಯಕ್ರಮಗಳನು ಹಾಕಿಕೊಳ್ಳಲಾಗಿದೆ ನಮ್ಮ ಹೋಟೆಲುಗಳಲ್ಲಿ ಕಡಿಮೆ ಬೆಲೆಗೆ, ನ್ಯಾಯವಾದ ಬೆಲೆಗೆ ತಿಂಡಿ ತೀರ್ಥಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ ಮತ್ತು ಹಳೇಬೀಡು, ಹಂಪೆ, ಬೇಲೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ, ಉತ್ತರ ಭಾರತದಲ್ಲಿರುವಂತೆ ಗೋಲ್ಡನ್ ಟ್ರಯಾಂಗಲ್ ರೀತಿ ಅಂದರೆ, ಬಂಗಾರದ ತ್ರಿಕೋಣದ ರೀತಿ ಚಿನ್ನದ ತ್ರಿಕೋಣದ

ಮಾದರಿಯಲ್ಲಿ ಮಥುರಾ, ಆಗ್ರಾ ಮತ್ತು ನವದೆಹಲಿ ಸೇರಿದಂತೆ ಯಾತ್ರಾರ್ಥಿಗಳಿಗೆ ಪ್ಯಾಕೇಜ್‌ಟೂರ್ ವ್ಯವಸ್ಥೆ ಮಾಡಿದಂತೆ ನಮ್ಮಲ್ಲಿ ಬೆಳ್ಳಿಯ ತ್ರಿಕೋಣದ ರೀತಿ ಬೆಂಗಳೂರು, ಮೈಸೂರು, ಹಾಸನ ಹಾಗೂ ಬೇಲೂರು, ಹಳೇಬೀಡು ಮತ್ತೆ ಬೆಂಗಳೂರು ಸೇರಿ ಒಂದು ಯೋಜನೆ ಮಾಡುತ್ತಿದ್ದೇವೆ,

ಇನ್ನೊಂದು ಬೆಂಗಳೂರು, ಹಂಪೆ, ಪಟ್ಟದಕಲ್ ಐಹೊಳೆ ಬಿಜಾಪುರ, ಬೆಂಗಳೂರು ಈ ರೀತಿಯಾಗಿ ಆಗಿರತಕ್ಕಂಥ ಯೋಜನೆಗಳನ್ನು ಮಾಡುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇದೇ ರೀತಿಯಾಗಿ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂಥ ಮತ್ತು ಜಂಗಲ್ ಲಾಡ್ಜ್‌ಗೆ ಸಂಬಂಧಪಟ್ಟಂಥ ಬೇರೆ ಬೇರೆ ರೀತಿಯ ಯೋಜನೆಗಳನ್ನು ಹಾಕಿಕೊಂಡು ಕೆಲಸವನ್ನು ಮಾಡುತ್ತಿದ್ದೇವೆ. ಇನ್ನು ಮಲ್ಪೆಗೆ ಸಂಬಂಧಪಟ್ಟಿರತಕ್ಕಂಥದ್ದರ ಬಗ್ಗೆ ಇವೊತ್ತು ಆಡಳಿತ ಮಂಡಳಿ ಸಭೆಯನ್ನು ಕರೆದು ಅದರ ಬಗ್ಗೆ ಚರ್ಚೆ ಕೂಡ ಮಾಡಿದ್ದಾರೆ. ಇದರಲ್ಲಿ ನಿರ್ಣಯವನ್ನು ಕೂಡ ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರಾದ ಇದಿನಬ್ಬ ಅವರಿಗೆ ಇಷ್ಟು ಮಾತ್ರ ಹೇಳುತ್ತೇನೆ. ಇನ್ನು ಸ್ವಲ್ಪ ದಿವಸದಲ್ಲಿ ಮಲ್ಪೆ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಿರತಕ್ಕಂಥ ಹೋಟೆಲ್ ಏನಿದೆ ಅದು ಒಂದು ಐತಿಹಾಸಿಕ ಕುರುಹಾಗಿ ಉಳಿಯುವಂತಹ ರೀತಿಯಲ್ಲಿ ಜನಗಳಿಗೆ ಅನುಕೂಲವಾಗುವಂಥ ರೀತಿಯಲ್ಲಿ ಅದಕ್ಕೆ ಒಂದು ರೂಪವನ್ನು ಕೊಡುತ್ತೇವೆ. ಖಂಡಿತವಾಗಿಯೂ ಅದನ್ನು ಪೂರ್ಣಗೊಳಿಸುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ, ಮಾನ್ಯ ಅಧ್ಯಕ್ಷರೆ, ಪ್ರವಾಸಿಗರಿಗೆ ಸಂಬಂಧಪಟ್ಟಂಥ ಅನೇಕ ಚಿತ್ರಗಳನ್ನು ಮಾಡತಕ್ಕಂಥ ಯೋಜನೆಗಳನ್ನು ಇಟ್ಟುಕೊಂಡಿದ್ದೇವೆ. ಹಂಪೆ, ಬೇಲೂರು ಮತ್ತು ಹಳೇಬೀಡು ಈ ಮೂರು ಜಾಗಗಳನ್ನು ಬಿಟ್ಟರೆ ಬೇರೆ ಜಾಗಗಳ ಕುರುತಾಗಿರತಕ್ಕ ಚಲನಚಿತ್ರಗಳು ಇಲ್ಲ. ಅದು ಕೇವಲ ೧೦ ನಿಮಿಷಗಳು ಅಥವಾ ೨೦ ನಿಮಿಷಗಳದ್ದು ಆಗಬಹುದು ಇವುಗಳ ಬಗ್ಗೆ ಮತ್ತು ಇಡೀ ನಕಾಶೆಯ ಬಗ್ಗೆ ಬೇರೆ ಬೇರೆ ನಗರಗಳ ನಕಾಶೆಯ ಬಗ್ಗೆ ಬಹಳ ಚೆನ್ನಾಗಿ ಮುದ್ರಿಸಿ ನಾವು ಭಾರತ ದೇಶದಲ್ಲೆಲ್ಲಾ ಹಂಚುವಂಥ ವ್ಯವಸ್ಥೆ ಇದೆ. ಮಾನ್ಯ ಸದಸ್ಯರಾದ ರಮಾನಾಥ ರೈ ಅವರು ಹಿಮಾಚಲ ಪ್ರದೇಶದ ಬಗ್ಗೆ ಮಾತನಾಡಿ ಅವರು ಅಲ್ಲಿ ಮಾಡುತ್ತಿರುವ ಕಾರ್ಯಕ್ರಮವನ್ನು ಬಹಳ ಒಳ್ಳೆಯ ಮಾತುಗಳಲ್ಲಿ ಹೇಳಿದರು. ಹಿಮಾಚಲ ಪ್ರದೇಶದಲ್ಲಿ ಅವರು ಮಾಡತಕ್ಕಥ ಸಿಮ್ಲಾ ಮೊದಲಾಗಿರತಕ್ಕ ಪ್ರದೇಶಗಳ ಬಗ್ಗೆ ಅವರು ಪ್ರತಿ ಸಂದರ್ಭದಲ್ಲಿಯೂ ಕೂಡ ಕೊಡತಕ್ಕ ಜಾಹಿರಾತು ಏನಿದೆ ಅವರು ಅದಕ್ಕೆ ಕೊಟ್ಟಿರತಕ್ಕ ಒತ್ತು ಏನು ಇದೆ. ಅದೇ ರೀತಿಯಾಗಿ ನೀವು ಕೂಡ ಈ ಕೆಲಸ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಇವೊತ್ತು ಗೋವಾದವರು ಪ್ರವಾಸಿಗರ ಬಗ್ಗೆ ಇಟ್ಟಿರುವಂಥ ರೀತಿಯಲ್ಲಿ ಕನ್ನಡ ನಾಡಿನಲ್ಲಿ ಏತಕ್ಕೆ ಮಾಡಬಾರದೆಂದು ಹೇಳಿದರು. ಅಧ್ಯಕ್ಷರೆ ನಾನು ನನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತೇನೆಂದು ಅಲ್ಲ, ಆದರೆ ಇದರ ಬಗ್ಗೆ ಕೂಡ ನಾವು ಹೆಚ್ಚು ಯೋಚನೆ ಮಾಡಬೇಕಾಗುತ್ತದೆ. ಪ್ರವಾಸಿಗರನ್ನು ಹೆಚ್ಚು ಹೆಚ್ಚಾಗಿ ನಮ್ಮ ನಾಡಿಗೆ ಆಕರ್ಷಿಸುವುದರ ಮೂಲಕವಾಗಿ ನಮ್ಮ ಸಾಮಾಜಿಕ ಆರ್ಥಿಕ ಮತ್ತು ಜೀವನದ ನಡವಳಿಕೆಗಳಲ್ಲೂ ದೊಡ್ಡದಾಗಿ ಬದಲಾವಣೆ ಆಗುವಂಥ ಸಂಭವ ಇದೆ. ಆ ಅಪಾಯದ ಕುರಿತಾಗಿ ಈಗಾಗಲೇ ಗೋವಾದಲ್ಲಿ ದೊಡ್ಡದಾದಂಥ ಚಳುವಳಿ ನಡೆಯುತ್ತಿದೆ. ನಮ್ಮ ಕರ್ನಾಟಕದಲ್ಲಿ ಇರತಕ್ಕಂಥ ಕಡಲ ತೀರದಲ್ಲಿ ಗೋವಾದವರು ಐತಿಹಾಸಿಕ ಕಾರಣಗಳಿಗಾಗಿ ಸುಮಾರು ೪೫೦ ವರ್ಷಗಳ ಪೋರ್ಚುಗೀಸರ ಗುಲಾಮಗಿರಿಗೆ ಒಳಪಟ್ಟಿರತಕ್ಕಂಥ ಆ ಪ್ರದೇಶ ತನ್ನದೇ ಆದಂಥ ಜೀವನಕ್ರಮ ಸಾಮಾಜಿಕವಾದಂಥ ಬದುಕಿನಲ್ಲಿ ಬದುಕುತ್ತಿರುವುದರಿಂದ ಕೆಲವು ಪ್ರಕರಣಗಳನ್ನು ರೂಪಿಸಿಕೊಂಡಿದೆ. ಅಲ್ಲಿರತಕ್ಕಂಥ ಕೆಲವೊಂದು ವಿಷಯಗಳ ಬಗ್ಗೆ ಅಲ್ಲಿಯ ಜೀವನದ ಕ್ರಮ ಆಗಿರಬಹುದು, ಅಥವಾ ಮದ್ಯಪಾನದಿಂದ ಅಲ್ಲಿರತಕ್ಕಂಥ ನೀತಿಗಳಿಂದ ಆಗಿರಬಹುದು ಸಾಮಾಜಿಕ ಚೌಕಟ್ಟುಗಳಿಂದ ಆಗಿರಬಹುದು. ಇವುಗಳು ಪ್ರವಾಸಿಗರನ್ನು ಆಕರ್ಷಿಸಲಿಕ್ಕೆ ಸಾಧ್ಯವಾಗುತ್ತದೆ. ಆದರೆ ಅಂತಹದ್ದೇ ಸಾಮಾಜಿಕ ವ್ಯವಸ್ಥೆಯನ್ನು ನಾವು ದಕ್ಷಿಣ ಕನ್ನಡದಲ್ಲಿ, ಉತ್ತರ ಕನ್ನಡದಲ್ಲಿ ನಡೆಸಲಿಕ್ಕೆ ಸಾಧ್ಯವಾಗುವುದಿಲ್ಲ. ಪ್ರಾಯಶಃ ಅದೇ ರೀತಿಯಾಗಿ ಭಟ್ಕಲ್‌ನಲ್ಲಿ ಮಾಡುವುದು ಆಗಿದ್ದರೆ ನಮ್ಮ ನಾಯಕ್ ಅವರೇ ಅದಕ್ಕೆ ಪ್ರತಿರೋಧವನ್ನು ಮಾಡುತ್ತಾರೆ ಏಕೆಂದರೆ ಅಲ್ಲಿ ಆ ರೀತಿಯವಗಿರತಕ್ಕ ಗೋವಾ ಸಂಸ್ಕೃತಿಯನ್ನು ಭಟ್ಕಲ್ ಕಡಲ ತೀರದಲ್ಲಿ ತರಲಿಕ್ಕೆ ಸಾಧ್ಯವಾಗುವುದಿಲ್ಲ. ಜೀವನದ ಕ್ರಮ ಯಾವ ರೀತಿಯಾಗಿ ಇರುತ್ತದೆ ಎಂದರೆ ಎಷ್ಟೇ ಬದಲಾವಣೆ ಆಗಿದ್ದರೂ ತನ್ನದೇ ಆಗಿರತಕ್ಕಂಥ ತನ್ನ ಒಳಪಡುವವರನ್ನು ಸಂಸ್ಕೃತಿಯನ್ನು ಉಳಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಲಾಗುತ್ತದೆ. ನವ ಜನಾಂಗ ಇವೊತ್ತು ಭಟ್ಕಲ್‌ನಲ್ಲಿ ಇರತಕ್ಕವರು ಮುಸ್ಲಿಂ ಜನಾಂಗದವರು ಆಗಿದ್ದರೂ ೭ ಗಂಟೆಯೊಳಗೆ ಊಟ ಮಾಡತಕ್ಕ ಕ್ರಮವನ್ನು ನಾವು ಭಟ್ಕಲ್‌ನಲ್ಲಿ ನೋಡುತ್ತೇವೆ. ಅಂದರೆ ಮೂಲದಲ್ಲಿ ಜೈನರು ಹಾಕಿರತಕ್ಕ ಒಂದು ಸಾಮಾಜಿಕ ಕ್ರಮ ಪ್ರಾಯಶಃ ಮುಂದೆ

ಪರಿವರ್ತನೆಗೊಂಡರೂ ಅದು ಕೂಡ ಉಳಿದಿರತಕ್ಕದ್ದು ಕಂಡಾಗ ನಾವು ತಕ್ಷಣದಲ್ಲೇ ಯಾವುದಾದರೂ ಬದಲಾವಣೆ ಬಂದಾಗ ಯಾವುದೇ ರೀತಿಯಾದಂಥ ಸಾಮಾಜಿಕ ಸಂಕೋಲೆಗಳಿಗೆ, ಮೌಲ್ಯಗಳಿಗೆ ಒಳಗಾಗ ದಂತೆ ಪ್ರವಾಸಿಗರು ನಾಡಿಗೆ ಬರುವುದರ ಮೂಲಕ ಅಲ್ಲಿರತಕ್ಕ ಮೂಲ ನಿವಾಸಿಗಳೊಂದಿಗೆ ದ್ವಂದ್ವ ಮತ್ತು ಘರ್ಷಣೆ ಆಗತಕ್ಕಂತಾದ್ದು ಇದೆ. ತಕ್ಷಣದಲ್ಲೇ ಅಲ್ಲಿ ಆಗತಕ್ಕ ಆರ್ಥಿಕ ಬದಲಾವಣೆ ಅವರ ಮೇಲೆ ದೊಡ್ಡ ಪರಿಣಾಮವನ್ನು ಬೀರುತ್ತದೆ. ಇವೊತ್ತು ಮಧ್ಯಪ್ರಾಚ್ಯಕ್ಕೆ ಅನೇಕ ಉದ್ಯೋಗಕ್ಕಾಗಿ ನಮ್ಮ ಜನ ಹೋಗಿರತಕ್ಕದ್ದು ಇದೆ. ಕೇರಳಾ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಯ ಜನ ಈಗ ಅಲ್ಲಿಂದ ಬಂದಿರತಕ್ಕ ಹಣದ ಮೂಲಕವಾಗಿ ಅಲ್ಲಿ ಉಳಿದಿರತಕ್ಕಂಥ ಜನಗಳ ಮೇಲೆ ಹೆಚ್ಚು ಪ್ರಭಾವ ಬೀರಿದೆ ಅವರ ಜೀವನ ಎನ್ನುವಂತಾದ್ದು ಬಹಳ ದುಸ್ತರವಾಗುವಂಥ ಪರಿಸ್ಥಿತಿ ಇದೆ. ಅದಕ್ಕೋಸ್ಕರ ನಾವು ಪ್ರವಾಸೋದ್ಯಮ ಇಲಾಖೆಗೆ ನಾವು ಐತಿಹಾಸಿಕ ಮಹತ್ವ ಸ್ಥಳಗಳಿಗೆ, ಪ್ರೇಕ್ಷಣೀಯ ಸ್ಥಳಗಳಿಗೆ ಈ ಯಾತ್ರಿಕರಿಗೆ ಸಂಬಂಧಪಟ್ಟಿರತಕ್ಕ ಪವಿತ್ರ ಸ್ಥಳಗಳಿಗೆ ಕುರಿತಾದ ರೀತಿಯಲ್ಲಿ ಹೆಚ್ಚು ಒತ್ತು ಕೊಡ ಬೇಕೆಂದು ನಿರ್ಧಾರವನ್ನು ಮಾಡಿದ್ದೇವೆ. ಅಧ್ಯಕ್ಷರೆ, ಇನ್ನು ನಮ್ಮ ಪತ್ರಿಕೆಗೆ ಸಂಬಂಧಪಟ್ಟಂತೆ ವಾರ್ತಾ ಇಲಾಖೆಗೆ ಸಂಬಂಧಪಟ್ಟ ಹಾಗೆ ಜಾಹಿರಾತು ಕುರಿತು ಮಾತನಾಡಿದ್ದಾರೆ. ಸುಮಾರು ೧ ಕೋಟಿ ೧೦ ಲಕ್ಷ ರೂಪಾಯಿಗಿಂತಲೂ ಕಡಿಮೆ ಹಣವನ್ನು ನಾವು ಕೊಡುತ್ತಿದ್ದೇವೆ. ಬೇರೆ ಬೇರೆ ಜಾಹಿರಾತುಗಳನ್ನು ಕೊಡುತ್ತಿದ್ದೇವೆ. ಇಲ್ಲಿ ಜಾಹಿರಾತುಗಳ ಮೂಲಕವಾಗಿ ನೀವು ಸ್ವಂತ ಪರಾಕ್ರಮ ಗಳನ್ನು ಹೇಳಿಕೊಳ್ಳುತ್ತಿದ್ದೀರಿ ಎನ್ನುವ ಮಾತು ಅನೇಕ ಸಂದರ್ಭಗಳಲ್ಲಿ ಬಂದಿದೆ.

ಇಲ್ಲಿ ಜಾಹಿರಾತುಗಳನ್ನು ಮಾಡುವುದರ ಮೂಲಕ ಸರ್ಕಾರವನ್ನು ಹೆಚ್ಚಿಗೆ ಪ್ರತಿಷ್ಠಿತಗೊಳಿಸ ತಕ್ಕಂಥ ಮಾತಲ್ಲ. ಆದರೆ ಜಾಹಿರಾತು ಮತ್ತು ಸರ್ಕಾರದ ಪ್ರಚಾರ ಇಲಾಖೆಯ ಮುಖ್ಯ ಉದ್ದೇಶ ಸರ್ಕಾರ ಅನುಷ್ಠಾನಕ್ಕೆ ತಂದಿರತಕ್ಕ ಕಾರ್ಯಕ್ರಮಗಳನ್ನು ಜನರಿಗೆ ತಿಳಿಸಿಕೊಡತಕ್ಕದ್ದು ಅದರ ಮೂಲಕ ಮಧ್ಯವರ್ತಿಗಳಾದ ಜನರನ್ನು ಕಡಿಮೆ ಮಾಡಿ ಅದರ ಸಂಪೂರ್ಣವಾದ ಲಾಭವನ್ನು ಜನಸಾಮಾನ್ಯರು ಪಡೆಯತಕ್ಕಂಥ ಎಲ್ಲ ಚಟುವಟಿಕೆಗಳನ್ನೂ ಹಮ್ಮಿಕೊಳ್ಳತಕ್ಕದ್ದು ನಿರ್ದೇಶಿಸಲ್ಪಟ್ಟಿರತಕ್ಕ ವಿಚಾರಗಳ ಬಗ್ಗೆ ಜನರನ್ನು ಜಾಗೃತಿಗೊಳಿಸತಕ್ಕದ್ದು ಈ ರೀತಿ ಎಲ್ಲ ಕಾರ್ಯಕ್ರಮಗಳೂ ಮುಖ್ಯವಾಗಿರುವುದರಿಂದ ವಾರ್ತಾ ಮತ್ತು ಪ್ರಸಾರ ಇಲಾಖೆಯು ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದು ಕೊಳ್ಳುವುದಕ್ಕೆ ಸಾಧ್ಯವಾಗುತ್ತಿದೆ ಸಮೂಹ ಮಾಧ್ಯಮಗಳು ಜನರ ಅಭಿಪ್ರಾಯವನ್ನು ರೂಪಿಸು ವುದರಲ್ಲಿ ಬಹಳ ಹಿರಿಯ ಪಾತ್ರವನ್ನು ಪತ್ರಿಕೆಗಳು ವಹಿಸುತ್ತಿವೆ. ಆದ್ದರಿಂದ ನಮ್ಮ ವಾರ್ತಾ ಇಲಾಖೆ ಯಿಂದ ಪತ್ರಿಕೆಗಳಿಗೆ ಜಾಹಿರಾತನ್ನು ಕೊಡುವುದರಲ್ಲಿ ಯಾವುದೇ ರೀತಿಯ ಪಕ್ಷಪಾತ ಅಥವಾ ಭೇದ ಭಾವವನ್ನು ತೋರಿಸುವ ಕೆಲಸವನ್ನು ನಾವು ಮಾಡಿಲ್ಲ ಆದರೆ ಮಾನ್ಯ ಸದಸ್ಯರಾದ ಇದಿನಬ್ಬನವರೂ ಮತ್ತು ಇನ್ನೂ ಕೆಲವು ಹಿರಿಯ ಮಾನ್ಯ ಸದಸ್ಯರು ಸಲಹೆ ಮಾಡಿದಂತೆ ಸಣ್ಣ ಪತ್ರಿಕೆಗಳನ್ನು ಉಳಿಸ ಬೇಕಾದ್ದು ಬಹಳ ಮುಖ್ಯವಾದುದು, ಮಾಲೀಕತ್ವಕ್ಕೆ ಒಳಪಟ್ಟಿರತಕ್ಕ ದೊಡ್ಡ ದೊಡ್ಡ ಪತ್ರಿಕೆಗಳನ್ನು ಉಳಿಸುವುದು ಅಷ್ಟೇನೂ ಮುಖ್ಯವಲ್ಲ ಅವು ತಮ್ಮ ಆಂತರಿಕ ಶಕ್ತಿಯಿಂದ ಜಾಹಿರಾತುಗಳ ಮೂಲಕ ಅವು ಉಳಿದುಕೊಳ್ಳಬಲ್ಲವು. ಆದರೆ ಇಲ್ಲಿ ತಮ್ಮ ಜಿಲ್ಲೆಯ ಅಥವಾ ತಾಲ್ಲೂಕಿನ ಅಥವಾ ೨-೩ ಜಿಲ್ಲೆಗಳ ವ್ಯಾಪ್ತಿಗೆ ಒಳಪಟ್ಟಿರುವ ಸಣ್ಣ ಪತ್ರಿಕೆಗಳಿಗೆ ನಾವು ವರ್ಷದಲ್ಲಿ ೩-೪ ಸಾರಿಯಾದರೂ ಅಂದರೆ ಅದು ಗಣರಾಜ್ಯೋತ್ಸವ ಆಗಬಹುದು, ಸ್ವಾತಂತ್ರ್ಯ ದಿನಾಚರಣೆ ಆಗಬಹುದು ೪೦ನೇ ವರ್ಷದ ಸ್ವಾತಂತ್ರ್ಯೋ ತ್ಸವ ಆಗಬಹುದು ಇಂಥ ಸಂದರ್ಭಗಳಲ್ಲಿ ೨೫೦ ರೂಪಾಯಿ ಗಳಿಗೆ ಕಡಿಮೆ ಇಲ್ಲದಂತೆ ಜಾಹಿರಾತುಗಳನ್ನು ನಾವು ಕೊಡುತ್ತಿದ್ದೇವೆ. ಈ ರೀತಿ ಜಾಹಿರಾತು ಕೊಡುವಾಗ ಕಾಲಂ ವೈಸ್ ಜಾಹಿರಾತಿನ ಬೆಲೆಯನ್ನು ಹೆಚ್ಚಿಸಬೇಕೆನ್ನತಕ್ಕ ವಿಚಾರದ ಬಗ್ಗೆ ನೇಮಿಸಿದಂಥ ಪ್ರಜಾವಾಣಿ ಪತ್ರಿಕೆಯ ಸಂಪಾದಕರೂ ಮತ್ತು ಇದರ ಬಗ್ಗೆ ಹೆಚ್ಚಿನ ಅನುಭವ ಹೊಂದಿರತಕ್ಕವರೂ ಆದ ಎಂ. ಡಿ. ಸಿಂಗ್‌ರವರ ವರದಿಯನ್ನು ನಾವು ತತ್ವಶಃ ಒಪ್ಪಿಕೊಂಡಿದ್ದೇವೆ. ಅದರ ಪ್ರಕಾರ ನಾವು ಹೆಚ್ಚಿಗೆ ಹಣವನ್ನೂ ಕೂಡ ಕೊಟ್ಟಿದ್ದೇವೆ. ಆದರೆ ಇತ್ತೀಚೆಗೆ ಹೆಚ್ಚಿನ ಜಾಹಿರಾತುಗಳನ್ನೂ ಕೂಡ ಕೊಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ೧.೧೦ ಕೋಟಿ ರೂಪಾಯಿಗಳಲ್ಲಿ ನಮ್ಮ ಕರ್ನಾಟಕ ಸರ್ಕಾರದ ಪ್ರಚಾರದ ಜೊತೆಗೆ ಸುಮಾರು ೭೦ ಲಕ್ಷ ರೂಪಾಯಿ ಗಳಷ್ಟು ಹಣವನ್ನು ಸಮ್ಮ ಟೆಂಡರು ನೋಟೀಸ್ ಮುಂತಾದ ಪ್ರಕಟಣೆಗಳಿಗೆ ಹೋಗುತ್ತಿರುವುದರಿಂದ ನಾವು ಹೆಚ್ಚಿನ ಪ್ರಚಾರವನ್ನು ಮಾಡಿಕೊಂಡಿದ್ದೇವೆಂದು ಹೇಳುವುದು ಸರಿಯಲ್ಲ. ಇದಕ್ಕೆ ಸಂಬಂಧ ಪಟ್ಟಂತೆ ವಾರ್ತಾ ಇಲಾಖೆ ನಮ್ಮ ಕರ್ನಾಟಕದ್ದು ಇಡೀ ಭಾರತ ದೇಶದಲ್ಲಿ ಬಹಳ ಉತ್ತಮವಾದ ಪ್ರಚಾರವನ್ನು ಪಡೆದಿದೆ. ತಮಗೆ ಒಂದು ಮಾತನ್ನು ಹೇಳುವುದಾದರೆ: ನವದೆಹಲಿ ನಗರದಲ್ಲಿರತಕ್ಕ ನಮ್ಮ ವಾರ್ತಾ ಇಲಾಖೆಯನ್ನು ಇಡೀ ಭಾರತ ದೇಶದಲ್ಲಿರತಕ್ಕ ಎಲ್ಲ ರಾಜ್ಯಗಳಿಗಿಂತಲೂ ಬಹಳ

ಅತ್ಯುತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿರತಕ್ಕ ವಾರ್ತಾ ಕೇಂದ್ರ ಎಂದು ಭಾರತ ಸರ್ಕಾರವೂ ಕೂಡ ಪುರಸ್ಕಾರ ಮಾಡಿದೆ, ಏಕೆಂದರೆ ನಮ್ಮ ವಾರ್ತಾ ಇಲಾಖೆ ಪಾಲ್ಗೊಂಡಿರತಕ್ಕ ಗಣರಾಜ್ಯೋತ್ಸವ ಇರಬಹುದು, ದಸರ ಉತ್ಸವ ಇರಬಹುದು ಸ್ತಬ್ಧ ಚಿತ್ರಗಳು ಇರಬಹುದು, ಹೀಗೆ ಪ್ರತಿಯೊಂದು ಸಂದರ್ಭಗಳಲ್ಲದ ಕೂಡ ನಮ್ಮ ವಾರ್ತಾಕೇಂದ್ರ ಮೊದಲನೇ ಅಥವಾ ಎರಡನೇ ಬಹುಮಾನಗಳನ್ನು ಪಡೆಯುತ್ತಾ ಬಂದಿದೆ. ನಾವು ನಿರೀಕ್ಷಿಸಿದಷ್ಟು ದುಡ್ಡು ಈ ವಾರ್ತಾ ಇಲಾಖೆಗೆ ಬರುತ್ತಿದೆ. ನಮ್ಮ ಜನತಾ ಸರ್ಕಾರ ಮಾಡಿರತಕ್ಕ ಅನೇಕ ಕಾರ್ಯಕ್ರಮಗಳು ಏನಿವೆ ಅವು ಪ್ರಚಾರ ರಹಿತವಾಗಿವೆ. ಹಿಂದೆ ಇದ್ದಂಥ ಸರ್ಕಾರಗಳು ಮಾಡಿದಂಥ ಕೆಲಸ ಸ್ವಲ್ಪವೇ ಆಗಿದ್ದರೂ ಪ್ರಚಾರಮಾತ್ರ ಬಹಳ ಹೆಚ್ಚಿಗೆ ಮಾಡುತ್ತಿದ್ದುವು. ಮಾಧ್ಯಮಗಳ ಮೇಲೆ ಅವರಿಗೆ ಇದ್ದಷ್ಟು ಹಿಡಿತ ನಮಗೆ ಇಲ್ಲ. ತಾವು ಪ್ರಚಾರಗಳ ಪ್ರಿಯರೆಂಬುದು ಅವರಿಗೆ ಗೊತ್ತಿಲ್ಲ. ಕೇಂದ್ರದಲ್ಲಿ ಈ ರೀತಿ ಪ್ರಚಾರಗಳ ಮೂಲಕ ಇಡೀ ಸಮೂಹ ಮಾಧ್ಯಮಂಗಳ ಮೂಲ ಕಜನಗಳನ್ನು ತಾತ್ಕಾಲಿಕವಾಗಿ ಸಮ್ಮೋಹನಕ್ಕೀಡುಮಾಡತಕ್ಕ ಕೆಲಸ ಕೇಂದ್ರ ಸರ್ಕಾರಕ್ಕೆ ಕರತಲಾಮಲಕವಾದಷ್ಟು ಮಟ್ಟಿಗೆ ನಮ್ಮ ರಾಜ್ಯಸರ್ಕಾರಕ್ಕೆ ಇನ್ನೂ ಆಗಿಲ್ಲ.

ಇನ್ನು ದೂರದರ್ಶನದಲ್ಲೂ ಕೂಡ ಕನ್ನಡಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ಎನ್ನತಕ್ಕ ಮಾತನ್ನು ಹೇಳಿದ್ದೇವೆ. ಕನ್ನಡ ಕಾರ್ಯಕ್ರಮಗಳು ಕರ್ನಾಟಕದಲ್ಲಿ ಇನ್ನು ಹೆಚ್ಚು ಬರಬೇಕಾಗಿದೆ. ಬೆಂಗಳೂರಿನಲ್ಲಿರತಕ್ಕ ದೂರದರ್ಶನದ ಪ್ರಚಾರ ಜಾಲ ಇಡೀ ಕರ್ನಾಟಕದ ಉದ್ದಗಲಕ್ಕೂ ಆಗಬೇಕಾಗಿದೆ ಇದು ಈಗ ಕೇವಲ ೪೦ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಮಾತ್ರ ಇದೆ. ಇದು ಆಗಬಾರದು. ದೂರದರ್ಶನದ ೨ನೇ ಚಾನಲ್ ಏನಿದೆ ಇದು ಕೇವಲ ರಾಜ್ಯಸರ್ಕಾರಕ್ಕೆ ಸಂಬಂಧಪಟ್ಟ ಕಾರ್ಯಕ್ರಗಳನ್ನು ಅಳವಡಿಸಿಕೊಳ್ಳುವುದಕ್ಕೆ ಪ್ರತ್ಯೇಕವಾದ ವ್ಯವಸ್ಥೆ ಆಗಬೇಕು. ಈಗ ಬಿ.ಬಿ.ಸಿ.ಯಲ್ಲಿ ಮಾಡಿದಂಥ ವ್ಯವಸ್ಥೆಯನ್ನು ನೋಡಿದರೆ ಮಾರ್ಗರೇಟ್ ಥ್ಯಾಚರ್‌ರವರು ಪ್ರಧಾನಮಂತ್ರಿಗಳಿಗೆ ಹೇಳಿದಂಥ ಮಾತನ್ನೂ ಕೂಡ ಮೀರಿ ನಿಲ್ಲತಕ್ಕ ಸ್ವಯಂ ಅಧಿಕಾರವನ್ನು ಬಿ.ಬಿ.ಸಿ.ಯು ಪಡೆದಿದೆ. ಇಂಥ ಸ್ವಯಂ ಅಧಿಕಾರವನ್ನು ನಮ್ಮ ದೂರದರ್ಶನವೂ ಕೂಡ ಪಡೆಯುವುದಾದರೆ ಪ್ರಾಯಶಃ ನಾವೆಲ್ಲರೂ ಕೂಡ ಇಂಥ ಒಂದು ಅಪಾಯದಿಂದ ಮುಕ್ತರಾಗುತ್ತೇವೆಂದು ನನ್ನ ಭಾವನೆ, ದೂರದರ್ಶನದವರು ನಮ್ಮ ರಾಜ್ಯಸರ್ಕಾರಕ್ಕೆ ೨ನೇ ಚಾನಲ್‌ನ್ನು ಕೊಡಬೇಕೆಂದು ನಾನು ಹೇಳಬೇಕಾದರೂ ಕೂಡ ಇದು ನಮ್ಮ ರಾಜ್ಯಸರ್ಕಾರದ ಹತೋಟಿಯಲ್ಲೂ ಕೂಡ ಇರಬಾರದು ಏಕೆಂದರೆ ರಾಜ್ಯಸರ್ಕಾರದಲ್ಲಿರತಕ್ಕವರೂ ಕೂಡ ಅನೇಕ ಸಂದರ್ಭಗಳಲ್ಲಿ ಈ ಮಾಧ್ಯಮವನ್ನು ದುರುಪಯೋಗ ಪಡಿಸಿಕೊಳ್ಳತಕ್ಕ ಸಂದರ್ಭ ಇದೆ. ಈ ಕಾರಣದಿಂದ

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ. ಮಾನ್ಯ ಸಚಿವರು ಟಿ.ವಿ. ವಿಚಾರಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದಾರೆ. ಅವರು ಈಗತಾನೆ ಥ್ಯಾಚರ್‌ರವರ ಬಗ್ಗೆ ಹೇಳಿದರು ಥ್ಯಾಚರ್‌ರವರು ಹೇಳಿರತಕ್ಕದ್ದು ಇಂಗ್ಲೀಷರ ಬಗ್ಗೆ. ಪಾಶ್ಚಿಮಾತ್ಯ ದೇಶಗಳ ಬಗ್ಗೆ ಅವರು ಹೇಳಿದ್ದು ಅಲ್ಲಿ ಜಾತಿಗಳು ಇಲ್ಲ, ಜಾತಿಗಳ ಗೊಂದಲ ಇಲ್ಲ ಎಂದು. ಆದರೆ ಇಲ್ಲಿ ನೀವು ಟಿ.ವಿ.ಯನ್ನು ಸ್ವಿಚ್ ಆನ್ ಮಾಡಿದರೆ ಸಾಕು ಕೇವಲ ಕೆಲವೇ ಜನರ ಮುಖಗಳನ್ನು ನಾವು ನೋಡಬೇಕಾಗಿದೆ ಬೆಳಗಿನಿಂದ ಸಂಜೆಯವರೆಗೂ ಅದೇ ಜನ.

ಶ್ರೀ ವೇದಾಂತ ಹೆಮ್ಮಿಗೆ.—ಕೇವಲ ಅದೇ ಜನ ಅಲ್ಲ. ಬರೀ ರಾಜೀವ್ ಗಾಂಧಿಯವರ ಮುಖ ಮಾತ್ರ. ಕೆಲವೇ ಜನ ಮಾತ್ರ ಅಲ್ಲ. ಒಬ್ಬರೇ ಒಬ್ಬರು (ರಾಜೀವ್ ಗಾಂಧಿ).

ಅಧ್ಯಕ್ಷರು.— ಕೆಲವರ ಮುಖವನ್ನೇ ನೋಡಬೇಕಾಗುತ್ತದೆನ್ನುವ ಉತ್ತರವನ್ನು ಸರಿಯಾಗಿ ಕೊಟ್ಟರು.

ಶ್ರೀ ಆರ್. ವಿ. ದೇಶಪಾಂಡೆ.— ಅವರು ಕರೆಕ್ಟಾಗಿ ಹೇಳಿದರೂ ಕೂಡ ನೀವು ಒಪ್ಪುವುದಿಲ್ಲ.

ಶ್ರೀ ಕೆ. ಮಲ್ಲಪ್ಪ.— ಅದು ಒಂದು ರೀತಿಯ ಮನಾಪಲಿಯಾಗಿದೆ ಅದು ಕೇವಲ ಒಬ್ಬರ ಸ್ವಂತದ್ದಾಗಿದೆ.

ಶ್ರೀ ವೇದಾಂತಹೆಮ್ಮಿಗೆ.— ಮಾನ್ಯ ಬಸವಲಿಂಗಪ್ಪನವರು ಒಳ್ಳೆಯ ಮಾತನ್ನು ಹೇಳಿದರು.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ದೇಶಪಾಂಡೆಯವರು ಹೇಳಿದ ಮೇಲೆ ನಾನು ಹೇಳುತ್ತೇನೆ. ಟಿ.ವಿ. ಹಾಕಿದ ತಕ್ಷಣ ಆ ಹೆಂಗಸರ ಮುಖ ನೋಡಿ, ಆ ಗಂಡಸರ ಮುಖ ನೋಡಿ, ಹಾಡುವವರನ್ನು ನೋಡಿ, ಡ್ರಾಮಾ, ನಾಟಕಮಾಡುವವರನ್ನು ನೋಡಿ, ಆ ಅವರು ಯಾರಿದ್ದಾರೆ ಸ್ವಾಮಿ? ಅದೇ ತರಃ ಮುಖಗಳು. ಇಷ್ಟೆಲ್ಲ ಮಾತನಾಡಿದರಲ್ಲ ಒಂದಾದರೂ ಒಳ್ಳೆಯ ಮುಖಗಳು ಇರುತ್ತವೆ ಏನು?

ಶ್ರೀ ಎಂ. ಪಿ. ಪ್ರಕಾಶ್.— ಮಾನ್ಯ ಅಧ್ಯಕ್ಷರೇ ಮಾನ್ಯ ಬಸವಲಿಂಗಪ್ಪನವರ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಈ ಬಗ್ಗೆ ಆರ್. ಕೆ. ಲಕ್ಷ್ಮಣ್‌ರವರು ಒಂದು ಒಳ್ಳೆಯ ವ್ಯಂಗ್ಯ ಚಿತ್ರವನ್ನು ಕೊಟ್ಟಿದ್ದರು ಡೆಲ್ಲಿಯಲ್ಲಿ ದೂರದರ್ಶನದ ಎರಡನೆಯ ಚಾನಲ್‌ನ್ನು ಪ್ರಾರಂಭ ಮಾಡಿದಾಗ ದೂರದರ್ಶನದ ಒಂದನೇ ಚಾನಲ್‌ನಲ್ಲೂ ರಾಜೀವ್‌ಗಾಂಧಿಯವರ ಮುಖ, ದೂರದರ್ಶನದ ಎರಡನೇ ಚಾನಲ್ಲೂ ರಾಜೀವ್‌ಗಾಂಧಿಯವರ ಮುಖ. ಈ ರೀತಿ ಯಾಗತಕ್ಕಂಥ ವ್ಯವಸ್ಥೆ ಇರುವುದರಿಂದ ನಮ್ಮಲ್ಲಿ ಬರೀ ಎರಡನೆಯ ಚಾನಲ್ ಬಂದಿದೆ ಎನ್ನುವಂಥ ಕಾರಣಕ್ಕಾಗಿಯಲ್ಲ, ಇದಕ್ಕೂ ಕೂಡ ಸ್ವಾಯತ್ತತೆ ಇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.— ಅದಕ್ಕೆ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟ್‌ನ ಉಪಯೋಗ ಪಡೆದುಕೊಂಡು ಮಾನ್ಯ ಹೆಗಡೆಯವರ ಫೋಟೋ ಹಾಕಿ ಎಲ್ಲ ಕಡೆ ಓಡ್ಡಾಡಿಸುತ್ತಿದ್ದೀರಲ್ಲ.

ಶ್ರೀ ಎಂ. ಪಿ. ಪ್ರಕಾಶ್.— ಈ ಅಪಾಯದಿಂದ ನಾವೂ ಕೂಡ ಈ ವ್ಯವಸ್ಥೆಯ ಮಕ್ಕಳಾಗಿರುವುದರಿಂದ ಈ ವ್ಯವಸ್ಥೆಯ ಅಪಾಯಗಳಿಂದ ತಪ್ಪಿಸಿಕೊಳ್ಳಬೇಕಾಗಿರತಕ್ಕದ್ದು ನಮ್ಮ ನಿಮ್ಮ ಎಲ್ಲರ ಜವಾಬ್ದಾರಿಯಾಗಿದೆ. ಸನ್ಮಾನ್ಯ ಅಧ್ಯಕ್ಷರೇ, ಭಾರತ ದೇಶ ಒಂದೇ ಎನ್ನುವಂಥ ಅಖಂಡತ್ವ ಕಲ್ಪನೆಯ ಮೇಲೆ ಅವರು ಅಧಿಕಾರಕ್ಕೆ ಬಂದಿರುವುದರಿಂದ ಇಲ್ಲಿ ಏನು ನಡೆಯುತ್ತ ದೆನ್ನುವುದನ್ನು ತಿಳುವಳಿಕೆಗೆ ತೆಗೆದುಕೊಳ್ಳತಕ್ಕದ್ದು ಯು.ಪಿ.ಯಲ್ಲಿರುವ ಜನ ಸಾಮಾನ್ಯರ ಹಕ್ಕು ಕೂಡ ಅದಕ್ಕಾಗಿಯೇ ಸರ್ಕಾರದವರು ಪ್ರಚಾರ ಇಲಾಖೆಯನ್ನು ಇಟ್ಟುಕೊಂಡಿರುವುದು. ಆ ಕಾರಣಕ್ಕಾಗಿ, ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೇ ಇಲ್ಲಿ ಮಾನ್ಯ ಬಸವಲಿಂಗಪ್ಪನವರು ಹೇಳಿದ ಮಾತನ್ನು ಸಂಪೂರ್ಣವಾಗಿ ಒಪ್ಪಿ ನಾವೆಲ್ಲರೂ ಕೂಡ ರಾಜ್ಯ ಸರ್ಕಾರಕ್ಕೆ ಸ್ವಾಯತ್ತತೆಯನ್ನು ಕೊಡತಕ್ಕದ್ದು ಬೇಡ. ಪ್ರತ್ಯೇಕವಾಗಿರತಕ್ಕಂಥ ಸ್ವಾಯತ್ತ ಮಂಡಳಿಯಾಗಿರಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸಮಯ ಇಲ್ಲದಿದ್ದರೂ ಕೂಡ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಿ.ಬಿ.ಸಿ ಯವರು ಸ್ವಲ್ಪ ದಿವಸಗಳ ಹಿಂದೆ ಒಂದು ಕಾರ್ಯಕ್ರಮವನ್ನು ಮಾಡಿದರು. ಅಂದರೆ ಬಹಳ ವರ್ಷಗಳ ಹಿಂದೆ ಇದ್ದಂಥ ಅನುರಿನ್‌ದೇವಾನ್‌ರವರು ಮಾತನಾಡತಕ್ಕಂಥ ಅವರ ಫೋಟೋವನ್ನು ತೋರಿಸಿ ಅವರು ಮಾತನಾಡತಕ್ಕಂಥದ್ದರಲ್ಲಿ ಯುಗೇಟ್‌ಕಿಲ್‌ರವರ ಭಾಷಣವನ್ನು ಹಾಕಿದರು. ಯುಗೇಟ್‌ಕಿಲ್‌ರವರು ಮಾತನಾಡುವ ಮುಖವನ್ನು ತೋರಿಸಿ ಅನುರಿನ್ ದೇವಾನ್‌ರವರ ಮುಖವನ್ನು ತೋರಿಸಿದರು. ಈವತ್ತು ನಾನಿಲ್ಲಿ ಮಾತನಾಡತಕ್ಕಂಥದನ್ನು ಶ್ರೀಮಾನ್ ಖಾರ್ಗೆಯವರ ಭಾಷಣವನ್ನು ಹಾಕಬಹುದು ಈ ವ್ಯವಸ್ಥೆಯಲ್ಲಿ ಶ್ರೀಮಾನ್ ಖಾರ್ಗೆಯವರು ಮಾತನಾಡುವುದನ್ನು ತೋರಿಸಿ ನಾನು ಮಾತನಾಡು ವುದನ್ನು ತೋರಿಸಬಹುದು. ಈ ವ್ಯವಸ್ಥೆಯಲ್ಲಿ ನಾವೆಲ್ಲರೂ ಯಾವ ರೀತಿ ನಪುಂಸಕರಾಗಿದ್ದೇವೆಂದರೆ ಇಡೀ ನಮ್ಮ ಅನಿಸಿಕೆಗಳನ್ನೆಲ್ಲ ಅಸಹ್ಯಾನಕ್ಕೆ ತರಲಾರದಂಥ ರೀತಿಯಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಇದು ಒಂದು ಬದಲಾಯಿಸತಕ್ಕಂಥ ವ್ಯವಸ್ಥೆ ನೀವು ವಿರೋಧ ಪಕ್ಷದಲ್ಲಿದ್ದೀರಿ ನಾವು ಆಡಳಿತ ಪಕ್ಷದಲ್ಲಿದ್ದೇವೆ, ಆದರೆ ಅನೇಕ ಸಂದರ್ಭಗಳಲ್ಲಿ ನಾವು ಎಷ್ಟು ಸ್ಪಷ್ಟವಾಗಿದ್ದೇವೇ? ಹೋಮ್‌ರೂಲ್ ಎಂದು ಕರೆಯುತ್ತೇವೆಯಲ್ಲ, ಆ ರೀತಿಯ ವ್ಯವಸ್ಥೆಗೆ ನಾವು ಒಳಗಾಗಿದ್ದೇವೆ. ಆ ಬಗ್ಗೆ ಚಿಂತನೆ ಮಾಡತಕ್ಕಂಥದ್ದು ಒಳ್ಳೆಯದು. ಆ ರೀತಿ ಯೋಚನೆಯನ್ನು ಮಾಡಿ ಈ ಎರಡನೆಯ ಚಾನಲ್ ಅನ್ನು ಕೊಡತಕ್ಕಂಥದ್ದು ರಾಜ್ಯ ಸರ್ಕಾರದ [illegible] ವಿಷಯಕ್ಕೆ [illegible] ಕೊಡ ಬೇಕಾಗಿರುವುದಿಲ್ಲ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಪ್ರತಿಪಾದನೆ ಇರುವುದು ಅದಕ್ಕೆ ಒಂದು ಸ್ವಾಯತ್ತತೆಯನ್ನು ಕೊಡಿ ಎಂದು ಹೇಳಿ. ಅದಕ್ಕಾಗಿ ನಾವು ನೀವು ಕಲೆತು ಸ್ವಾಯತ್ತತೆಗಾಗಿ ಹೋರಾಟ ಮಾಡಬೇಕು. ಸಮೂಹ ಮಾಧ್ಯಮಗಳನ್ನು ತೆಗೆದು ಕೊಂಡಿರುವುದು ಸಮೂಹ ಸಂದಿಗ್ಧತೆಗಳನ್ನು ಸೃಷ್ಟಿ ಮಾಡುವುದಕ್ಕಲ್ಲ. ಆ ಸಮೂಹ ಸಂದಿಗ್ಧತೆಗಳು ಆಗಲಾರದ ದೃಷ್ಟಿಯಲ್ಲಿ ನಾವು ವ್ಯವಸ್ಥೆಯನ್ನು ಮಾಡಬೇಕಾದದ್ದು ಬಹಳ ಮುಖ್ಯ.

ಇನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಧರ್ಮಸಿಂಗ್‌ರವರು ಮತ್ತು ಬಸವಲಿಂಗಪ್ಪನವರು ಅನೇಕ ಉಪಯುಕ್ತವಾದ ಮಾತುಗಳನ್ನು ಆಡಿದ್ದಾರೆ. ಧರ್ಮಸಿಂಗ್‌ರವರು ಬಹಳ ಮಾತನಾಡಿರತಕ್ಕದ್ದು ಸಮಂಜಸವಾಗಿದೆ ಆದರೆ ಅವರು ತಪ್ಪಾಗಿ ಭಾವಿಸಿರುವುದೇನೆಂದರೆ ೭೫ ಸಾವಿರ ನಿವೇಶನಗಳನ್ನು ಪ್ರತಿ ವರ್ಷ ಕೊಡುತ್ತೇವೆಂದು ಹೇಳಿದ್ದೇವೆಂದು. ಆ ರೀತಿ ಹೇಳಲಿಲ್ಲ. ೭೫ ಸಾವಿರ ಮನೆಗಳ ಅವಶ್ಯಕತೆ ಇದೆ ಎಂದು ಹೇಳಿದ್ದೇವೆ ೬ ಲಕ್ಷಕ್ಕಿಂತ ಹೆಚ್ಚು ಜನ ಮನೆರಹಿತರಾಗಿರತಕ್ಕವರಿದ್ದಾರೆ. ಬೆಂಗಳೂರು ನಗರದಲ್ಲಿ ಪ್ರತಿ ವರ್ಷ ೭೫ ಸಾವಿರ ಮನೆಗಳನ್ನು ನಿರ್ಮಾಣ ಮಾಡಬೇಕಾದ ಅಗತ್ಯ ಇದೆ ಎಂದು ಅಂದಾಜು ಮಾಡಲಾಗಿದೆ ಈ ಒಂದು ಅಂದಾಜು ಮಾಡಿದ್ದೇವೆಯೇ ವಿನಹ ೭೫ ಸಾವಿರ ನಿವೇಶನಗಳನ್ನು ಮಾಡಿ ಹಂಚುತ್ತೇವೆಂದು ಹೇಳಿಲ್ಲ. ಕುಡಿಯುವ ನೀರಿನ ಸೌಲಭ್ಯ, ನಾಗರೀಕ ಸೌಲಭ್ಯ ಕಲ್ಪಿಸದೆ ಜಾಗವನ್ನು ಕೊಟ್ಟಿದ್ದೇವೆಂದು ಯಾರೂ ಹೆಮ್ಮೆ ಪಡಬೇಕಾಗಿಲ್ಲ ಇದಕ್ಕೆ ಸಂಬಂಧಪಟ್ಟ ಹಾಗೆ ಕಾವೇರಿ ನದಿ ನೀರಿನ ೩ನೇ ಹಂತಕ್ಕಾಗಿ ೩೦ ಕೋಟಿ ರೂಪಾಯಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೊಡಬೇಕಾಗಿದೆ ಪ್ರತಿಯೊಂದು ಬಡಾವಣೆಯಲ್ಲಿ ನೀರು, ಬೆಳಕು, ರಸ್ತೆ ಇತ್ಯಾದಿ ಕನಿಷ್ಟ ಅನುಕೂಲಗಳನ್ನು ಕಲ್ಪಿಸಿಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ೧೬ ಸಾವಿರಕ್ಕಿಂತ ಹೆಚ್ಚು ನಿವೇಶನಗಳನ್ನು ಕೊಟ್ಟಿರತಕ್ಕ ಸಂದರ್ಭದಲ್ಲಿ ಬಹಳ ಜನಗಳಿಗೆ ನಿವೇಶನದ ಸಂಖ್ಯೆಯನ್ನು ಕೊಟ್ಟಿಲ್ಲ ಮತ್ತು ನಿವೇಶಗಳನ್ನು ಸ್ವಾಧೀನಕ್ಕೆ ಕೊಟ್ಟಿಲ್ಲ, ಆದರಿಂದ ಏನೂ ಉಪಯೋಗವಾಗಿಲ್ಲವೆಂದು ಹೇಳಿದ್ದಾರೆ. ೧೧ ಸಾವಿರ ನಿವೇಶನದಾರರಿಗೆ ನಿವೇಶನದ ಸಂಖ್ಯೆಯನ್ನು ಕೊಟ್ಟಿದ್ದೇವೆ ಮತ್ತು ನಿವೇಶನಗಳನ್ನು ಸ್ವಾಧೀನಕ್ಕೆ ಕೊಟ್ಟಿದ್ದೇವೆ. ಅನೇಕ ಸಂದರ್ಭಗಳಲ್ಲಿ ಅವರು ಏತಕ್ಕೆ ಸ್ವಾಧೀನಕ್ಕೆ ತೆಗೆದುಕೊಂಡಿಲ್ಲವೆಂದರೆ ಹಣ ಕಟ್ಟಲಿಕ್ಕೆ ಸಾಧ್ಯವಾದ ಕಾಲಾವಕಾಶ ಬೇಡಿದ್ದಾರೆ. ೧೯೭೬ ರಿಂದ ೧೯೮೩ರ ವರೆಗೆ ೫೮ ಸಾವಿರಕ್ಕಿಂತ ಹೆಚ್ಚು ನಿವೇಶಗಳನ್ನು ಕೊಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ೨೮೧೭೦ ನಿವೇಶನಗಳನ್ನು ಕೊಡಲಿಕ್ಕೆ ಸಾಧ್ಯವಾಗಿದೆ, ಅದರಲ್ಲೂ ಕಳೆದ ವರ್ಷ ೧೬ ಸಾವಿರಕ್ಕಿಂತ ಹೆಚ್ಚು ನಿವೇಶನಗಳನ್ನು ಕೊಟ್ಟಿದ್ದೇವೆ. ಯಾವ ಕಾಲದಲ್ಲೂ ಪರಿಶಿಷ್ಟ ಜಾತಿಯ ಜನಾಂಗಕ್ಕೆ ನಿವೇಶನಗಳನ್ನು ನೀಡುವಲ್ಲಿ ಮೀಸಲಾತಿ ಕ್ರಮವನ್ನು ಅನುಸರಿಸಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಕಟ್ಟುನಿಟ್ಟಾಗಿ ಶೇಕಡ ೨೧ರಷ್ಟು ನಿವೇಶನಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಿ ೪೭೭೫ ನಿವೇಶನಗಳನ್ನು ಅವರಿಗೆ ಕೊಟ್ಟಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ —ಅದಕ್ಕೆ ತಮ್ಮೆಲ್ಲರ ಅಭಿಮತ ಇರುವುದು ಸ್ವಾಗತ. ಆದರೆ ಅದರಂತೆ ನಡೆದಿಲ್ಲವೆಂದು ಹೇಳುತ್ತೇನೆ. ಎಲ್ಲಿಯಾದರೂ ಅವರಿಗಾಗಿ ನೋಟಿಫಿಕೇಷನ್ ಮಾಡಿದ್ದೀರಾ ? ಮಾಡಿದ್ದರೆ ತೋರಿಸಿ. ಮೀಸಲಾತಿ ಕ್ರಮವನ್ನು ಅನುಸರಿಸಿದ್ದೇವೆಂದು ಹೇಳುತ್ತೀರಿ, ಆದರೆ ನಿವೇಶನಗಳನ್ನು ಕೊಟ್ಟಿಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಪ್ರಾಯಶಃ ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡಿದ್ದಾರೆ ನಮ್ಮ ಜಾಹಿರಾತಿನಲ್ಲಿ ಮೀಸಲಾತಿ ಇದೆ ಎಂದು ಹೇಳದಿರುವುದರಿಂದ ಕೊಟ್ಟಿಲ್ಲವೆಂದು ಭಾವಿಸಲಿಕ್ಕೆ ಸಾಧ್ಯವಿಲ್ಲ. ನಿಯಮಾವಳಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ೧೫ ಪರ್ಸೆಂಟ್, ಪರಿಶಿಷ್ಟ ವರ್ಗದವರಿಗೆ ೩ ಪರ್ಸೆಂಟ್, ಹಿಂದುಳಿದ ಜನಾಂಗದವರಿಗೆ ೨ ಪರ್ಸೆಂಟ್– ಈ ಪ್ರಕಾರ ೨೦ ಪರ್ಸೆಂಟ್ ಲೆಕ್ಕ ಹಾಕಿ ಅದರ ಪ್ರಕಾರ ಕಳೆದ ಎರಡು ವರ್ಷಗಳಲ್ಲಿ ೪೭೭೫ ನಿವೇಶನಗಳನ್ನು ಹಂಚಿದ್ದೇವೆ. ಇದರ ಜೊತೆಗೆ ಅಂಬೇಡ್ಕರ್ ಜಯಂತಿಗೆ ಸಂಬಂಧಪಟ್ಟ ಹಾಗೆ ಎರಡು ಸಾವಿರ ನಿವೇಶನಗಳನ್ನು ಪರಿಶಿಷ್ಟ ಜಾತಿಯವರಿಗೆ ಕೊಟ್ಟಿದ್ದೇವೆ. ಯಾವ ಕಾಲದಲ್ಲೂ ಇಂಥ ವಿಕ್ರಮವನ್ನು ಸಾಧಿಸಲಿಕ್ಕೆ ಸಾಧ್ಯವಾಗಿಲ್ಲ.

ಶ್ರೀ ಬಿ. ಬಿ. ಬಸವಲಿಂಗಪ್ಪ.—ನೋಟಿಫಿಕೇಷನ್‌ನಲ್ಲಿ ಹಾಕಲಿಕ್ಕೆ ಏನು ಕಷ್ಟ ? ಕಂತಿನಲ್ಲಿ ಹಣ ಕಟ್ಟಬಹುದೆಂದು ಮಾಡಿ ೩ ವರ್ಷ ಸಮಯ ಕೊಟ್ಟು ಒಂದು ಕಂತನ್ನು ಕಟ್ಟಿದ ತಕ್ಷಣ ವಾಪಸ್ಸು ತೆಗೆದುಕೊಂಡರೆ ಹೇಗೆ ?

ಶ್ರೀ ಎಂ. ಪಿ. ಪ್ರಕಾಶ್.— ಯಾವುದನ್ನು ಕಾನೂನಿನಲ್ಲಿ ಅಳವಡಿಸಿಕೊಳ್ಳಲಾಗಿದೆ ಅದನ್ನು ಜಾಹಿರಾತಿನಲ್ಲಿ ನಮೂದಿಸಬೇಕಾಗಿಲ್ಲ. ಆದರೂ ಜಾಹಿರಾತಿನಲ್ಲಿ ನಮೂದಿಸಬೇಕೆನ್ನುವ ಮಾತನ್ನು ಹೇಳಿದ್ದಾರೆ ಅದನ್ನು ಕೂಡ ಮುಂದೆ ಪ್ರಕಟ ಮಾಡುತ್ತೇನೆ. ಇದು ಅಜನ್ಮಸಿದ್ಧವಾದ ಹಕ್ಕು. ರಾಜ್ಯಾಂಗದಲ್ಲಿರತಕ್ಕದ್ದನ್ನು ಪದೇ ಪದೇ ಉಲ್ಲೇಖ ಮಾಡಬೇಕಾದ ಅಗತ್ಯವಿಲ್ಲ. ಶೇಕಡ ೧೮ ರಷ್ಟು ಮೀಸಲಾತಿಯನ್ನು ಇಟ್ಟಿದ್ದೇವೆ. ಅದನ್ನು ಪ್ರತಿಯೊಂದು ಜಾಹಿರಾತಿನಲ್ಲೂ ನಮೂದಿಸಬೇಕಾಗಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಹಾಗೆ ತಿಳಿದುಕೊಳ್ಳಬೇಡಿ. ಕಡ್ಡಾಯವಾಗಿ ಅದನ್ನು ನಮೂದು ಮಾಡಲೇಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಇದು ಒಂದು ದಾನ ಅಥವಾ ಮುಲಾಜಿಗಾಗಿ ಕೊಟ್ಟಿರತಕ್ಕದ್ದಲ್ಲ. ಅಜನ್ಮಸಿದ್ಧವಾದ ಹಕ್ಕು, ರಾಜ್ಯಾಂಗಬದ್ಧವಾದ ಹಕ್ಕು. ಅದನ್ನು ಪಾಲನೆ ಮಾಡಬೇಕಾದುದು ಎಲ್ಲಾ ನಾಗರೀಕ ಸರ್ಕಾರಗಳ ಕರ್ತವ್ಯ. ಪರಿಶಿಷ್ಟ ಜನಾಂಗದವರಿಗೆ ೪೪೭೫ ನಿವೇಶನಗಳನ್ನು ಕೊಡುವುದರ ಜೊತೆಗೆ ಡಾ. ಅಂಬೇಡ್ಕರ್ ಜಯಂತಿಗೆ ಹೊಸದಾಗಿ ಮಾಡಿರತಕ್ಕ ಯೋಜನೆಯಲ್ಲಿ ಎರಡು ಸಾವಿರ ನಿವೇಶನಗಳನ್ನು ಪರಿಶಿಷ್ಟ ಜಾತಿಯವರಿಗೆ ಕೊಟ್ಟಿದ್ದೇವೆ. ಮೀಸಲಾತಿ ಬಗ್ಗೆ ಹೇಳಬೇಕಾದರೆ ಅವನ್ನು ಮುಂದೆ ಪ್ರಕಟಣೆ ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಇನ್ನು ಎರಡನೆಯದಾಗಿ ಮನೆಗಳ ವಿಚಾರದಲ್ಲಿ ಪ್ರಸ್ತಾಪ ಮಾಡಿದರು. ಯಾರು ಸ್ವಯಂ ಹಣವನ್ನು ಹಾಕಿ ಅದರ ಮೂಲಕ ಮನೆಗಳನ್ನು ಕಟ್ಟಿಸತಕ್ಕಂತಹದ್ದು ಏನು ಇದೆ. ಅದರಲ್ಲೂ ಮೀಸಲಾತಿ ಇದೆ. ಶೇಕಡ ಮೀಸಲಾತಿಯನ್ನು ಪ್ರತಿಯೊಂದು ಸಂದರ್ಭದಲ್ಲೂ ಕಟ್ಟುನಿಟ್ಟಾಗಿ ಜಾಹಿರಾತು ಮಾಡಿದ್ದೇವೆ.

ಶ್ರೀ ಬಿ, ಬಸವಲಿಂಗಪ್ಪ,—ಕೊಟ್ಟೇ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಬರುತ್ತೇನೆ ನಂತರ ಅಲ್ಲಿಗೆ. ಈ ವಿಚಾರದಲ್ಲಿ ನಿಮ್ಮನ್ನು ಸಂಪೂರ್ಣವಾಗಿ ಒಪ್ಪಿಸುತ್ತೇನೆ ಎನ್ನುವಂತಹ ನಂಬಿಕೆ. ವಿಶ್ವಾಸ ನನಗೆ ಇದೆ. ಶ್ರೀಮಾನ್ ಖರ್ಗೆಯವರಾಗಬಹುದು. ಶ್ರೀಮಾನ್ ಧರ್ಮಸಿಂಗ್‌ರವರಾಗಬಹುದು. ಅಥವಾ ತಾವಾಗಬಹುದು. ನಾಳೆಯೋ ನಾನು ಸದನದ ಮುಂದೆ ಈ ವಿಚಾರದಲ್ಲಿ ಮನೆಗಳನ್ನು ಕಟ್ಟಿರತಕ್ಕದು ಎಷ್ಟು? ಅವುಗಳಿಗೆ ಬಂದಿರತಕ್ಕಂತಹ ಅರ್ಜಿಗಳು ಎಷ್ಟು? ಕೊಟ್ಟಿರತಕ್ಕ ಮನೆಗಳು ಎಷ್ಟು ಆ ಬಗ್ಗೆ ಇರತಕ್ಕ ಎಲ್ಲ ಕಾಗದ ಪತ್ರಗಳನ್ನು ನಿಮ್ಮ ಸ್ವಾಧೀನಕ್ಕೆ ನಾನು ಕೊಡುತ್ತೇನೆ ಸಂದರ್ಭದಲ್ಲಿ ಹಿಂದೆ ಯಾವ ಕಾಲದಲ್ಲೂ ಜಾರಿಗೆ ತರಲಾಗದಿದ್ದುದನ್ನು ಅನುಷ್ಠಾನಕ್ಕೆ ಶೇ. ೧೮ ರಷ್ಟು ಮೀಸಲಾತಿ ವ್ಯವಸ್ಥೆಯನ್ನು ಮನೆಗಳ ಬಗ್ಗೆಯೂ ಮಾಡಿದ್ದೇವೆ. ಹಾಗೆ ಮನೆಗಳನ್ನು ಕಟ್ಟಿಸತಕ್ಕಂತಹ ಯೋಜನೆಯಲ್ಲಿ ಅವರಿಂದ ನಮಗೆ ಬಂದಿರತಕ್ಕಂತಹ ಅರ್ಜಿ ಕಡಿಮೆ ಇದೆ. ಇದರಲ್ಲಿರತಕ್ಕ ಪ್ರಶ್ನೆ ಇಷ್ಟೆ, ೧ ಲಕ್ಷಕ್ಕಿಂತಲೂ ಹೆಚ್ಚು ಇರತಕ್ಕ ಮನೆಗಳು ಇವೆ. ಒಂದು ಲಕ್ಷ, ೨ ಲಕ್ಷ, ೨ ಲಕ್ಷದ ೩೦ ಸಾವಿರ ೪ ಲಕ್ಷದ ೭೫ ಸಾವಿರ, ಈ ರೀತಿಯಾಗಿ ವಿಭಿನ್ನವಾಗಿರತಕ್ಕ ಮನೆಗಳು ಇರುತ್ತವೆ. ಈ ರೀತಿಯ ವಿಭಿನ್ನವಾಗಿರತಕ್ಕ ಆ ಮನೆಗಳಿಗೆ ಇಷ್ಟೊಂದು ಹಣವನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಎಸ್.ಸಿ.ಎಸ್.ಟಿ. ಗೆ ಮೀಸಲಾತಿಗೆ ಒಳಗಾಗಿರತಕ್ಕವರಿಂದ ಬಂದಂತಹ ಅರ್ಜಿಗಳೇ ಕಡಿಮೆ ಇವೆ. ಆದ್ದರಿಂದ ಅವರಿಂದ ಎಷ್ಟು ಅರ್ಜಿಗಳು ಬಂದಿದೆಯೋ ಅವರೆಲ್ಲರಿಗೂ ನಾವು ಮನೆಗಳನ್ನು ಕೊಟ್ಟಿದ್ದೇವೆ. ಇಷ್ಟೇ ಅಲ್ಲ ಆದರೂ ಬೇರೆಯವರೂ ಕೂಡ ಮನೆಗಳನ್ನು ತೆಗೆದುಕೊಂಡಿಲ್ಲ. ಒಟ್ಟು ೩೦೮ ಮನೆಗಳು ನಂದಿನಿ ಲೇಔಟ್‌ನಲ್ಲಿ ಹಾಗೂ ಬಿ.ಟಿ.ಎಂ. ಬಡಾವಣೆಯಲ್ಲಿ ಈಗಲೂ ಉಳಿದಿವೆ. ಈಗ ಹೊಡೆಯುವರು ಕಟ್ಟಿಸಿರತಕ್ಕ ೪ ಲಕ್ಷದ ೭೦ ಸಾವಿರ ವೆಚ್ಚದಲ್ಲಿ ಕಟ್ಟಿರತಕ್ಕಂತಹ ಮನೆಗಳ ಪೈಕಿ ೫ ಶ್ರೇಷ್ಠ ನ್ಯಾಯಾಲಯದಿಂದ ತಡೆಯಾಜ್ಞೆ ಇರುವುದನ್ನು ಬಿಟ್ಟು ಇನ್ನೂ ೭ ಮನೆಗಳನ್ನು ನಾವು ಕೊಡಬೇಕಾದ ಪರಿಸ್ಥಿತಿಯಲ್ಲಿದ್ದೇವೆ ಆದರೆ ಅದಕ್ಕೆ ಯಾರೂ ಅರ್ಜಿಯನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದೇ ವರ್ಷದಲ್ಲಿ ಪೂರ್ಣ ಹಣವನ್ನು ಕಟ್ಟಬೇಕಾಗಿರತಕ್ಕಂತಹದ್ದು ಇದೆ. ನಮ್ಮ ಪತ್ರಿಕಾ ಕರ್ತರಿಗೂ ೧೨೫ ಮನೆಗಳನ್ನು ಕೊಟ್ಟಿದ್ದರೂ ಅನೇಕರು ಇನ್ನೂ ಮನೆಗಳನ್ನು ಅವರ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಾಗಿಲ್ಲ. ಏಕೆಂದರೆ ಶೇ. ೨೫ ರಷ್ಟು ಹಣವನ್ನು ಅಂದರೆ ಸುಮಾರು ೫೦ ಸಾವಿರ ರೂಪಾಯಿಗಳನ್ನು ಮೊದಲೇ ಮುಂಗಡವಾಗಿ ಹಣವನ್ನು ಕಟ್ಟಬೇಕಾಗುತ್ತದೆ. ಈ ಕಾರಣಗಳಿಂದಾಗಿ ಸೌಲತ್ತುಗಳನ್ನು ಕೊಡಬೇಕೆಂದು ಕಳೆದ ಸಂದರ್ಭದಲ್ಲಿ ಶ್ರೀಮಾನ್ ಬಸವಲಿಂಗಪ್ಪನವರು ಪ್ರಸ್ತಾಪ ಮಾಡಿದರು. ಆದ್ದರಿಂದ ಅಂತಹವರಿಗೆ ಕಂತಿನ ರೂಪದಲ್ಲಿ ಹಣವನ್ನು ಕಟ್ಟುವ ವ್ಯವಸ್ಥೆಯನ್ನು ಮಾಡಬೇಕೆಂಬ ಯೋಚನೆ ಮಾಡಿದ್ದೇವೆ. ಮತ್ತೆ ನಿವೇಶನಗಳ ಬಗ್ಗೆ ಆಗಿರತಕ್ಕ ಯಾವ ಅನ್ಯಾಯವೂ ಇದರಲ್ಲಿ ಆಗಿಲ್ಲ. ಅವರಿಗೆ ಸಂಪೂರ್ಣವಾಗಿ ಅನುಕೂಲಗಳನ್ನು ರಾಜ್ಯಾಂಗದತ್ತವಾಗಿ ಹಕ್ಕನ್ನು ನಾವು ಸಂಪೂರ್ಣವಾಗಿ ಪಾಲನೆ ಮಾಡಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹಳ ಮುಖ್ಯವಾಗಿ ಕೇಳಿಕೆಯಾಗಿರುವಂತಹದ್ದು ಇ.ಡಬ್ಲ್ಯು.ಎಸ್. ಮನೆಗಳು. ಸುಮಾರು ಯಾರು ಆರ್ಥಿಕವಾಗಿ ಹಿಂದುಳಿದಿದ್ದಾರೆ.......

ಶ್ರೀ ಬಿ. ಬಸವಲಿಂಗಪ್ಪ.—ಸಾಕಷ್ಟು ಅರ್ಜಿಗಳು ಈ ಮನೆಗಳು ಬೇಕು ಎಂದು ಬಂದಿಲ್ಲ ಅಂತ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಬರದಿದ್ದರೆ ನೌಕರಿಯನ್ನು ಕೊಡುವಾಗ ಈ ವರ್ಗದ ಜನರಿಂದ ಅರ್ಜಿಗಳಂಬರದಿದ್ದರೆ ೧ ವರ್ಷ ೨ ವರ್ಷ ಯಾವ ರೀತಿ ಕ್ಯಾರಿ ಓವರ್ ಮಾಡುವಂತಹ ಯೋಜನೆಯನ್ನು ಏತಕ್ಕೆ ಇಲ್ಲಿಯೂ ಇಟ್ಟುಕೊಳ್ಳಬಾರದು ಅದೇ ಸಿಸ್ಟಂನ್ನು ಈ ಯೋಜನೆಯಲ್ಲೂ ನೀವು ಏಕೆ ಮಾಡಬಾರದು ಎಂಬುದು ನನ್ನ ಪ್ರಶ್ನೆ. ಪತ್ರಿಕೆಯಲ್ಲಿ ಓದಿ ತಿಳಿದುಕೊಂಡು ಅರ್ಜಿಯನ್ನು ಹಾಕಬೇಕು ನಿಜ. ಕೆಲವರು ನೋಡುವುದೇ ಇಲ್ಲ. ತಿಳುವಳಿಕೆ ಬರುವುದಿಲ್ಲ. ಎಸ್ ಸಿ. ಜನರು ಏನು ಇದ್ದಾರೆ. ಹಿಂದೆ ಬಡವರಿದ್ದರು. ಬಡವರಾಗಿದ್ದರು. ಯೋಗ್ಯತೆ ಇಲ್ಲದವರಿಗೆ ಶಕ್ತಿ ಇಲ್ಲದವರಿಗೆ, ಕೊಡುವುದಕ್ಕೆ ಅಗುವುದಿಲ್ಲ. ಆದರೆ ಅವರಲ್ಲಿ ಇದ್ದಂಥವರಿಗಾದರೂ ಕೊಡುವಂತಹ ವ್ಯವಸ್ಥೆಯನ್ನು ನೀವು ಮಾಡಲೇಬೇಕಾಗುತ್ತದೆ. ಒಂದು ಕಂತನ್ನು ಕಟ್ಟಿದರೂ ಅವರಿಗೆ ಸ್ವಾಧೀನ ಕೊಡುವಂತಹ ವ್ಯವಸ್ಥೆಯನ್ನು ಜಾರಿಗೆ ಕೊಡಬೇಕು. ಮತ್ತೆ ಸಾಕಷ್ಟು ಸಂಖ್ಯೆಯಲ್ಲಿ ಅರ್ಜಿ ಬರಲಿಲ್ಲ ಅಂತ ಏನು ಹೇಳಿದ್ದೀರಿ. ಅಂತಹ ಸಂದರ್ಭದಲ್ಲಿ ಕ್ಯಾರಿಫಾರ್‌ವರ್ಡ್ ರೂಲನ್ನು ಜಾರಿಗೆ ಕೊಡಬೇಕು. ಯಾವ್ಯಾವುದಕ್ಕೆ ಅರ್ಜಿಗಳನ್ನು ಕೊಟ್ಟಿಲ್ಲ, ಅಂತಹವರು ಈಗ ನೇರವಾಗಿ ಅರ್ಜಿಗಳನ್ನು ಕೊಟ್ಟರೆ ಅವುಗಳನ್ನು ಪರಿಶೀಲನೆ ಮಾಡುವುದಕ್ಕೆ ಅಧಿಕಾರಿಗಳಿಗೆ ತಾವು ಆದೇಶವನ್ನು ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್.—ಇಲ್ಲಿ ಪರಿಶಿಷ್ಟ ಜಾತಿ ಹಾಗೂ ಜನಾಂಗದವರಿಗೆ ಸೇರಿರತಕ್ಕವರ ಆರ್ಥಿಕ ಸ್ಥಿತಿ ಸುಧಾರಿಸಿಲ್ಲ ಎನ್ನತಕ್ಕಂತಹ ಪ್ರಶ್ನೆಯಲ್ಲ. ಪ್ರಶ್ನೆ ಇರತಕ್ಕಂತಹದ್ದು ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಿದರೂ ಕೂಡ ಅವರಲ್ಲಿ ಉಳಿತಾಯ ಇರುವುದಿಲ್ಲ. ಇದು ಎಲ್ಲ ಜಾತಿ ಜನಾಂಗದ ಜನರಲ್ಲಿ ಇರತಕ್ಕ ಸಮಸ್ಯೆ. ಇಷ್ಟೆಲ್ಲಾ ಮಾಡಿದರೂ ಕೂಡ ೩೦೭ ಮನೆಗಳು ಇನ್ನೂ ಹಾಗೇ ಉಳಿದಿವೆ ಅವುಗಳನ್ನು ಕೊಡುವುದಕ್ಕಾಗಿಲ್ಲ. ಆದರೆ ಆರ್ಥಿಕವಾಗಿ ದುರ್ಬಲವರ್ಗದವರಿಗೆ ಕಟ್ಟಿಸಿರತಕ್ಕ ಮನೆಗಳಿಗೆ ಹೆಚ್ಚು ಬೇಡಿಕೆ ಇದೆ. ದೊಮ್ಮಲೂರು ಬಡಾವಣೆಯಲ್ಲಿ ಕುಮಾರಸ್ವಾಮಿ ಬಡಾವಣೆಯಲ್ಲಿ ಕಟ್ಟಿಸಿರತಕ್ಕ ಮನೆಗಳಿಗೆ ಹೆಚ್ಚು ಬೇಡಿಕೆ. ಹೆಚ್ಚು ಅರ್ಜಿಗಳೂ ಕೂಡ ಬಂದಿವೆ. ಅಲ್ಲಿ ಸಮಸ್ಯೆ ಬೇರೆ ಇದೆ. ಈ ರೀತಿಯಾಗಿ ದುರ್ಬಲವರ್ಗದವರಿಗೆ ಕಟ್ಟಿಸಿರತಕ್ಕ ಮನೆಗಳ ವಿವರಗಳನ್ನು ಹೇಳುವುದಾದರೆ. ಆಸ್ಟಿನ್‌ಟೌನ್ ಮೊದಲನೆ ಹಂತದಲ್ಲಿ ೧೫ ಮನೆಗಳು ಆಸ್ಟಿನ್ ಟೌನ್ ೨ನೇ ಹಂತದಲ್ಲಿ ೨೧ ಮನೆಗಳು. ಕಲ್ಲಹಳ್ಳಿ ಮೊದಲನೆ ಹಂತದಲ್ಲಿ ೩೩ ಮನೆಗಳು. ದೊಮ್ಮಲೂರಿನಲ್ಲಿ ೫೭ ಮನೆಗಳು, ಕುಮಾರಸ್ವಾಮಿ ಬಡಾವಣೆಯ ಮೊದಲನೆ ಹಂತದಲ್ಲಿ ೪೦ ಮನೆಗಳು, ಕಲ್ಲಹಳ್ಳಿ ೨ನೇ ಹಂತದಲ್ಲಿ ೨೯ ಮನೆಗಳು ಕುಮಾರಸ್ವಾಮಿ ಎರಡನೇ ಹಂತದಲ್ಲಿ ೪೨ ಮನೆಗಳು ಈ ರೀತಿಯಾಗಿ ಒಟ್ಟು ೨೩೭ ಮನೆಗಳನ್ನೂ ಕೂಡ ಈ ವರ್ಗಕ್ಕೆ ಸಂಬಂಧಿಸಿದಂತೆ ಕಟ್ಟಿದ್ದೇವೆ. ಆದರೆ ಇನ್ನೂ ಈ ಮನೆಗಳ ಬಗ್ಗೆ ಬೇಡಿಕೆ ಇದೆ. ಇ.ಡಬ್ಲ್ಯು.ಎಸ್.ಗೆ ಸೀಮಿತವಾಗಿ, ಆರ್ಥಿಕವಾಗಿ ದುರ್ಬಲವರ್ಗದವರಿಗೆ ೧೦ ಸಾವಿರ ಮನೆಗಳನ್ನು ಈ ವರ್ಷದಿಂದ ಮುಂದಿನ ೩ ವರ್ಷಗಳಲ್ಲಿ ಕಟ್ಟತಕ್ಕ ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಬಿ ಡಿ.ಎ. ನವರು ೧೦ ಸಾವಿರ ಮನೆಗಳನ್ನು ಕಟ್ಟಿಸುವಂತಹ ಈ ಯೋಜನೆಯಲ್ಲಿ ಕೇವಲ ಶೇಕಡ ೨೦ ಪರ್ಸೆಂಟ್ ಮಾತ್ರ ಈ ದುರ್ಬಲವರ್ಗದವರಿಗೆ ಸಂಬಂಧಪಟ್ಟಿರತಕ್ಕಂತವರು ಸೀಡ್ ಮನಿ ಎಂಬುದಾಗಿ ಕಟ್ಟ ಬೇಕಾಗಿರತಕ್ಕಂತಹದ್ದು. ಈ ಹಣವನ್ನು ಅವರ ಕೈಯ್ಯಲ್ಲಿ ಕಟ್ಟುವುದಕ್ಕಾಗುವುದಿಲ್ಲ ಎನ್ನುವಂಥ ಕಾರಣಕ್ಕಾಗಿ ಇದನ್ನು ಪ್ರಾಧಿಕಾರದವರೇ ಕಟ್ಟುತ್ತಾರೆ. ಉಳಿದಿರತಕ್ಕ ೮೦ ಪರ್ಸೆಂಟ್ ಹಣವನ್ನು ನಾವೇ ಸಂಪೂರ್ಣವಾಗಿ ಹುಡ್ಕೋ ಸ್ಕೀಮಿನ ಮೂಲಕವಾಗಿ ಹಣವನ್ನು ತೆಗೆದುಕೊಂಡು ಬಂದು ೧೦ ಸಾವಿರ ಮನೆಗಳನ್ನು ಈ ಮುಂದಿನ ೩ ವರ್ಷಗಳಲ್ಲಿ ಕಟ್ಟತಕ್ಕ ವ್ಯಾಪಕವಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೇವೆ. ಇದರ ಜೊತೆಗೆ ನಿವೇಶನಕ್ಕಾಗಿ ಹಾಗೂ ಮನೆಗಳಿಗಾಗಿ ಅರ್ಜಿಯನ್ನು ಹಾಕತಕ್ಕವರಿಗೆ ಮುದ್ರಿತ ಕಾರ್ಡುಗಳನ್ನು ಕೊಟ್ಟಿದ್ದೇವೆ. ಸುಮಾರು ೭೦-೮೦ ಸಾವಿರ ಕಾರ್ಡುಗಳು ಪ್ರತಿಯೊಂದು ಸಂದರ್ಭದಲ್ಲೂ ಕೊಡಬೇಕಾಗುತ್ತದೆ. ಅಂದರೆ ಅಷ್ಟು ಸಂಖ್ಯೆಯಲ್ಲಿ ಜನರು ಅರ್ಜಿಗಳನ್ನು ಹಾಕುತ್ತಿದ್ದಾರೆ. ಅವರೆಲ್ಲರಿಗೂ ಕಾರ್ಡುಗಳನ್ನು ಕೊಡುತ್ತಿದ್ದೇವೆ,

೭—೩೦ ಪಿ. ಎಂ.

ಜ್ಯೇಷ್ಠತೆಯ ಆಧಾರದ ಮೇಲೆ ಈ ರೀತಿಯಾಗಿರತಕ್ಕ ಮನೆಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಗಣಕಯಂತ್ರದಿಂದ ತಪ್ಪುಗಳು ಆಗಿವೆ, ಆದರೆ ಕಡಿಮೆ ಪ್ರಮಾಣದಲ್ಲಿ ತಪ್ಪು

ಆಗಿವೆ. ತಪ್ಪು ಮಾಹಿತಿಗಳನ್ನು ಕೊಟ್ಟಿರತಕ್ಕ ಉದಾಹರಣೆಗಳು ಇವೆ. ಅಂತಹವರ ಮೇಲೆ ಕ್ರಮವನ್ನು ಕೈಗೊಳ್ಳಬೇಕೆಂದು ಅವರು ಕಟ್ಟಿರತಕ್ಕ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆ. ೫೩೫೩ಕ್ಕಿಂತ ಹೆಚ್ಚಾಗಿ ಇಂತಹ ತಪ್ಪು ಮಾಹಿತಿ ಕೊಟ್ಟು ನಿವೇಶನ ಪಡೆದಂತಹವರ ಮೇಲೆ ನಾವು ಕ್ರಮವನ್ನು ಕೈಗೊಂಡಿದ್ದೇವೆ. ಇದರ ಜೊತೆಗೆ ಬೇರೆ ಬೇರೆ ರೀತಿಯಲ್ಲಿ ನಿವೇಶನಗಳನ್ನು ಪಡೆದಿದ್ದಾರೆ. ಬೇನಾಮಿ ಹೆಸರಿನಲ್ಲಿ ಬೇರೆಯವರ ಹೆಸರಿನಲ್ಲಿ ನಿಯಮಕ್ಕನುಗುಣವಾಗದ ರೀತಿಯಲ್ಲಿ ನಿವೇಶನಗಳನ್ನು ಪಡೆದಿದ್ದಾರೆ. ನಿವೇಶನ ಪಡೆದು ಕೊಂಡು ಎರಡು ಮೂರು ವರ್ಷಗಳ ನಂತರವೂ ಮನೆಯನ್ನು ಕಟ್ಟದೇ ಇರತಕ್ಕ ಮೂರು ಸಾವಿರ ಜನಗಳಿಗೆ ಪ್ರಥಮ ಬಾರಿಗೆ ನೋಟೀಸ್‌ನ್ನು ಕೊಟ್ಟಿದ್ದೇವೆ. ಇದರ ಜೊತೆಗೆ ಗ್ರೂಪ್ ಹೌಸಿಂಗ ನಲ್ಲಿ ಬಹು ಮಹಡಿ ಮನೆಗಳನ್ನು ಕಟ್ಟಲಿಕ್ಕೆ ಹೆಚ್ಚು ಒಟ್ಟು ಏತಕ್ಕೆ ಕೊಡುತ್ತಿದ್ದೇವೆಂದರೆ, ಈ ನಗರವನ್ನು ಹೆಚ್ಚು ವ್ಯಾಪಕವಾಗಿ ಬೆಳೆಸುವುದಕ್ಕೆ ಆಗುವುದಿಲ್ಲ, ಹಸಿರು ವಲಯ ಏನಿದೆ ಅದಕ್ಕಿಂಥ ಹೆಚ್ಚು ವಿಸ್ತಾರವಾಗಬಾರದು. ಅದಕ್ಕೆ ಮುಂದೆ ಹೋದರೆ ನಾಗರಿಕ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ದೊಡ್ಡ ತಲೆಬೇನೆಯಾಗಿ ಹಣವನ್ನು ಖರ್ಚುಮಾಡುವುದಕ್ಕೆ ಸಾಧ್ಯವಾಗದ ಪರಿಸ್ಥಿತಿ ಬರುತ್ತದೆ. ಬಹುಮಹಡಿ ಕಟ್ಟಡ ಕಟ್ಟುವ ಮೂಲಕ ನಾಗರಿಕ ಸೌಲಭ್ಯಗಳಾದ ದೀಪ ನೀರು, ರಸ್ತೆ, ಬಸ್ಸು, ಶಾಲೆ ಇವುಗಳ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಿವೇಶನಕ್ಕಾಗಿ ಅರ್ಜಿಗಳನ್ನು ಹಾಕುವಾಗ ಅನೇಕ ತಪ್ಪು ಮಾಹಿತಿಗಳು ಇರುತ್ತದೆ, ಅವರಲ್ಲಿ ಸರಿಯಾದ ಮಾಹಿತಿ ಇರುವುದಿಲ್ಲ. ಆ ಕಾರಣಕ್ಕಾಗಿ ಗಣಕಯಂತ್ರದ ಮೂಲಕ ಮುದ್ರಿಸಿ ಮಾಹಿತಿ ಪತ್ರವನ್ನು ಪ್ರತಿಯೊಬ್ಬ ಅರ್ಜಿದಾರರಿಗೂ ಕೊಡತಕ್ಕ ಕಾರ್ಯಕ್ರಮವನ್ನು ಈ ವರ್ಷ ಪ್ರಾರಂಭ ಮಾಡಿದ್ದೇವೆ. ಈ ರೀತಿಯಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ನಿಯಮಾವಳಿಗಳನ್ನು ಸ್ವಲ್ಪ ಸಡಿಲಗೊಳಿಸತಕ್ಕ ಕೆಲಸವನ್ನು ಮಾಡುವುದಕ್ಕೆ ಹಾಗೂ ನಿಯಮಾವಳಿಗಳನ್ನು ಸರಳಗೊಳಿಸುವುದಕ್ಕೆ ಈಗಿರತಕ್ಕ ಗೊಂದಲವನ್ನು ತಪ್ಪಿಸಲಿಕ್ಕೆ ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಭ್ರಷ್ಟಾಚಾರ ಇಲ್ಲವೇ ಇಲ್ಲವೆನ್ನುವ ಮಾತನ್ನು ಹೇಳುವುದಿಲ್ಲ. ಎಲ್ಲಿ ಹೆಚ್ಚು ಹಣವಿರುತ್ತದೆ ಅಲ್ಲಿ ಬೇಗ ಬೇಗನೇ ಹಣವನ್ನು ಮಾಡಿಕೊಳ್ಳಬೇಕೆನ್ನುವುದು ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇ ಇರುತ್ತದೆ. ಕುತಂತ್ರದಿಂದ ಕಾನೂನು ತಪ್ಪಿಸಿ ಭ್ರಷ್ಟಾಚಾರವನ್ನು ಮಾಡುವುದಕ್ಕೆ ಸಾಧ್ಯತೆಯಿದೆ. ಆದ್ದರಿಂದ ಹೆಚ್ಚು ಭ್ರಷ್ಟಾಚಾರ ಆಗಲಾರದ ರೀತಿಯಲ್ಲಿ ನಿಯಮಗಳನ್ನು ರಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಪ್ರತಿಯೊಬ್ಬರೂ ಮನೆ ನಿವೇಶನಕ್ಕೆ ಅರ್ಜಿಯನ್ನು ಹಾಕಿ ಕೊಳ್ಳುತ್ತಾರೆ. ಆರ್. ಪ್ರಕಾಶ್ ಎನ್ನುವವರು ಅರ್ಜಿ ಹಾಕಿರುತ್ತಾರೆ, ಎಂ. ಪಿ. ಪ್ರಕಾಶ್ ಎನ್ನುವವರು ಅರ್ಜಿ ಹಾಕಿರುತ್ತಾರೆ. ಆರ್. ಪ್ರಕಾಶ್ ಎನ್ನುವವರು ಮೂರು ಪ್ರಯತ್ನ ಮಾಡಿ ಕೈಬಿಟ್ಟಿರುತ್ತಾರೆ. ಎಂ.ಪಿ. ಪ್ರಕಾಶ್ ಎನ್ನುವವರು ಬೆಂಗಳೂರು ಪ್ರಾಧಿಕಾರದಲ್ಲಿರುವ ಗುಮಾಸ್ತರು ಮತ್ತೊಬ್ಬರನ್ನು ಹಿಡಿದು ಅವರು ಶಾಮೀಲಾಗಿ ಎಂ ಪಿ. ಪ್ರಕಾಶ್ ಎಂಬುವರಿಗೆ ಆರ್. ಪ್ರಕಾಶ್ ರವರು ಮೂರು ಪ್ರಯತ್ನ ಮಾಡಿ ಬಿಟ್ಟಿರುತ್ತಾರಲ್ಲಾ ಅವರ ರಿಜಿಸ್ಟರ್ ನಂಬರು ಅನ್ನು ಅರ್ಜಿಯಲ್ಲಿ ಹಾಕಿ ನಾಲ್ಕು ಐದನೇ ಪ್ರಯತ್ನವೆಂದು ಹೇಳಿ ನಿವೇಶನವನ್ನು ಪಡೆಯತಕ್ಕ ಪ್ರಯತ್ನವನ್ನು ಮಾಡುತ್ತಾರೆ. ಅನೇಕ ಸಂದರ್ಭಗಳಲ್ಲಿ ಪ್ರಕಾಶ್ ಎನ್ನುವ ಹೆಸರು ಒಂದೇ ಆಗಿರುವುದರಿಂದ ಅದರ ಬಗ್ಗೆ ಪ್ರಾಧಿಕಾರದವರು ನಿವೇಶನದ ಮಂಜೂರಿ ಕೊಡುತ್ತಾರೆ. ಈ ತರಹ ಬುದ್ಧಿವಂತಿಕೆಯಿಂದ ಇದು ಆಗುತ್ತದೆ. ಭ್ರಷ್ಟಾಚಾರ ಇದೆ ಆದರೆ ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ಸೊಸೈಟಿಗಳ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ನಾನು ಇದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆಳ ಅರ್ಜಿಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬಂದಿದ್ದವು ಆಳ ಅರ್ಜಿಗಳಲ್ಲಿ ಅರ್ಹವಾಗಿರತಕ್ಕವುಗಳು ೧೭ ಆ ಸಂಘ ಸಂಸ್ಥೆಗಳಿಗೆ ನಾವು ಭೂಮಿಯನ್ನು ಕೊಟ್ಟಿದ್ದೇವೆ. ಅದರಲ್ಲಿ ಕಳೆದ ಐದು ವರ್ಷಗಳಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ೭ ಸಂಘಗಳಿಗೆ ಮಾತ್ರ ಕೊಟ್ಟಿದ್ದೇವೆ. ಯಾವುದೇ ಸಂದರ್ಭದಲ್ಲಿ ಯಾವುದೇ ಸಹಕಾರ ಸಂಘಕ್ಕೆ ೨೦ ಎಕರೆಗಿಂತ ಹೆಚ್ಚು ಕೊಟ್ಟಿಲ್ಲ. ತಾವು ಪ್ರಸ್ತಾಪ ಮಾಡಿರತಕ್ಕದ್ದು ೧೨೮ ಸಹಕಾರ ಸಂಘಗಳ ಬಗ್ಗೆ. ಆದರೆ ಅವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನೇರವಾಗಿ ಸಂಬಂಧಪಟ್ಟವು ಅಲ್ಲ. ಅವರು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿರತಕ್ಕದ್ದು ಕಂದಾಯ ಇಲಾಖೆಯ ಮೂಲಕ, ಬೇರೆ ಬೇರೆ ಮೂಲಕವಾಗಿ ತೆಗೆದುಕೊಂಡಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಈ ೧೨೮ ಸಹಕಾರ ಸಂಘಗಳಿಗೆ ಕೊಟ್ಟಿರುವುದು ಇಲ್ಲ. ಬಹುಮಹಡಿ ಕಟ್ಟಡ

ಮಾಡುವಂತಹ ಸಂದರ್ಭದಲ್ಲಿ ದುರ್ಬಲವರ್ಗಗಳಿವೆ ಸೇರಿರತಕ್ಕ ಜನಗಳಿಗೆ ಶೇಕಡ ೩೦ರಷ್ಟು ಮನೆಗಳನ್ನು ಮೀಸಲಿಡಬೇಕೆಂಬ ನಿಯಮಾವಳಿಗಳನ್ನು ತರುತ್ತಿದ್ದೇವೆ, ಅದಕ್ಕೆ ಬೇಕಾದ ಕಾನೂನು ರಚಿಸತಕ್ಕ ಯೋಚನೆಯಲ್ಲಿದ್ದೇವೆ, ನಾವು ಅದನ್ನು ಕಟುನಿಟ್ಟಾಗಿ ಜಾರಿಗೆ ತರುತ್ತೇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇನ್ನು ಮಾಡಬೇಕಾದ ಕೆಲಸ ಬೇಕಾದಷ್ಟು ಇದೆ. ಅದನ್ನು ಖಂಡಿತವಾಗಿಯೂ ಮಾಡುತ್ತೇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ವಿದೇಶಕ್ಕೆ ಪದೇ ಪದೇ ಹೋಗುತ್ತಾರೆಂದು ಹೇಳಿದರು. ಅವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಖರ್ಚಿನಿಂದ ಹೋಗಿಲ್ಲ. ಆಕಸ್ಮಾತ್ ಹೋಗಿದ್ದರೆ, ತಮಗೆ ತಿಳಿದಿದ್ದರೆ ಹೇಳಿ. ಅವರು ಸ್ವಂತ ವಿಚಾರವಲ್ಲಿ ಹೋದದ್ದು ಇದೆ. ವಿದೇಶಕ್ಕೆ ಹೋದಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಖರ್ಚು ಹಾಕಿಲ್ಲ. ಅಂತಹ ಭಾವನೆಯನ್ನು ಇಟ್ಟುಕೊಳ್ಳುವುದು ಅಗತ್ಯವಿಲ್ಲ. ಮಾನ್ಯ ಸದಸ್ಯರುಗಳು ಮಾತನಾಡುವಾಗ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಧರ್ಮಸಿಂಗ್‌ರವರು, ಬಸವಲಿಂಗಪ್ಪನವರು, ಹಿರಿಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆಗಳಿಗೆ ಅನುಗುಣವಾಗಿ ನಾವು ಮಾಡಬೇಕಾಗಿರತಕ್ಕ ಕೆಲಸವನ್ನು ಮಾಡುತ್ತೇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿರತಕ್ಕ ದೌರ್ಬಲ್ಯ, ಕೊರತೆಗಳನ್ನು ಒಪ್ಪಿಕೊಂಡು ನಾನು ಮಂಡಿಸಿರತಕ್ಕ ಎಲ್ಲಾ ಇಲಾಖೆಗಳ ಬೇಡಿಕೆಗಳನ್ನು ಸದನ ಒಪ್ಪಿಕೊಂಡು ಅದಕ್ಕೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ಈಗ ಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಬೇಕು. ಅರ್ಜಿಗಳನ್ನು ಕರೆದಿದ್ದೀರಿ, ಬ್ಯಾಂಕ್ ಅರ್ನೆಸ್ಟ್ ಮನಿ ಡಿಪಾಜಿಟ್ ಮಾಡಲಿಕ್ಕೆ ಹೇಳಿದ್ದೀರಿ. ಆಗ ಎಷ್ಟು ಅರ್ಜಿಗಳು ಬಂದಿದ್ದವು? ಹಾಗೂ ಎಷ್ಟು ದುಡ್ಡು ಕಲೆಕ್ಟ್ ಆಗಿತ್ತು? ಸುಮಾರು ೫೦–೬೦ ಕೋಟಿ ರೂಪಾಯಿಗಳು ಕಲೆಕ್ಟ್ ಆಗಿತ್ತೆ ಎಂಬುದು ನನ್ನ ಒಂದು ಅಂದಾಜು. ಅದರ ಬಗ್ಗೆ ತಾವು ಉತ್ತರ ಹೇಳಬೇಕು.

ಎರಡನೆಯದಾಗಿ, ಗ್ರೀನ್ ಬೆಲ್ಟ್ ಏರಿಯಾ ಬಗ್ಗೆ ಸ್ಪಷ್ಟವಾಗಿ ಹೇಳಲಿಲ್ಲ. ೭೬ ಸೊಸೈಟೀಸ್ ಇವತ್ತು ಸರ್ಕಾರದಲ್ಲಿ ಪೆಂಡಿಂಗ್‌ನಲ್ಲಿವೆ. ಸರ್ಕಾರ ರಚನೆ ಮಾಡಿರತಕ್ಕ ಸಮಿತಿ ಇದೆ. ಅದರಲ್ಲಿ ಬೆಂಗಳೂರು ಜಿಲ್ಲಾಧಿಕಾರಿಗಳು ಇದ್ದಾರೆ, ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಇದ್ದಾರೆ. ಮತ್ತೆ ಬೇರೆ ಇತರರೂ ಕೂಡ ಆ ಸಮಿತಿಯಲ್ಲಿದ್ದಾರೆ. ಈ ೭೬ ಸೊಸೈಟಿಗಳಿಗೆ ಪರ್ಮಿಷನ್ ಕೊಡಬಹುದೇ? ಅಥವಾ ಇಲ್ಲವೆ? ಏಕೆಂದರೆ ಈ ವಿಚಾರ ಈಗ ಸಮಿತಿಯ ಮುಂದೆ ಇದೆ. ಮುಖ್ಯಮಂತ್ರಿಗಳೂ ಕೂಡ ಈ ಸಭೆಯಲ್ಲೇ ಹಿಂದೆ ಒಂದು ಸಾರಿ ಸ್ಪಷ್ಟವಾಗಿ ಹೇಳಿದ್ದಾರೆ. ಆ ಬಗ್ಗೆ ಸರ್ಕಾರದ ನಿಲುವು ಏನು ಎಂಬುದರ ಬಗ್ಗೆ ಸ್ಪಷ್ಟವಾಗಿ ಉತ್ತರ ಹೇಳಬೇಕು. ನಂತರ ತಾವೇನು ಹೊರ ರಾಷ್ಟ್ರಕ್ಕೆ ಹೋಗಿ ಏನು ವಾಗ್ದಾನ ಮಾಡಿ ಬಂದಿದ್ದೀರಿ, ಆ ರೀತಿ ವಿದೇಶದಿಂದ ಬಂದಂತಹವರಿಗೆ ಎಷ್ಟು ಜನರಿಗೆ ಮನೆಗಳನ್ನು ಕೊಟ್ಟಿದ್ದೀರೆಂಬುದನ್ನು ಹೇಳಬೇಕು

ಶ್ರೀ ಎಂ. ಪಿ. ಪ್ರಕಾಶ್.—ಇದರಲ್ಲಿ ತಾವು ಏನು ೧೨೮ ಸೊಸೈಟಿಗಳ ಬಗ್ಗೆ ಹೇಳಿದ್ದೀರಿ, ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಎಷ್ಟು ಜನ ಅರ್ಜಿ ಕೊಟ್ಟಿದ್ದರು, ಎಷ್ಟು ಹಣ ಕಲೆಕ್ಟ್ ಆಗಿತ್ತು ಎಂಬುದಾಗಿ ಕೇಳಿದ್ದಾರೆ. ಸುಮಾರು ೩೩ ಕೋಟಿ ರೂಪಾಯಿಗಳು ಠೇವಣಾತಿ ಶುಲ್ಕವಾಗಿ ನಮ್ಮಲ್ಲಿಗೆ ಬಂದಿದ್ದರೂ, ಇದರಲ್ಲಿ ಯಾರು ಅಸಫಲರಾಗುತ್ತಾರೋ ಅಂತಹ ಅರ್ಜಿದಾರರಿಗೆ ಹಣವನ್ನು ಆ ಕೂಡಲೇ ಕೊಟ್ಟಿದ್ದೇವೆ. ಅಸಫಲದಾರರಿಗೆ ಕ್ರಾಸ್ ಚೆಕ್ ಮೂಲಕ ಅವರು ಕಟ್ಟಿದಂತಹ ಠೇವಣಾತಿ ಶುಲ್ಕವನ್ನು ವಾಪಸ್ಸು ಕೊಡತಕ್ಕ ಕೆಲಸ ಮಾಡಿದ್ದೇವೆ. ಅದರ ಬಗ್ಗೆ ಮಾನ್ಯ ಸದಸ್ಯರು ಕಿಂಚಿತ್ತು ಸಂಶಯ ಇಟ್ಟುಕೊಳ್ಳಬೇಕಾದ ಅಗತ್ಯ ಇಲ್ಲ. ಆಮೇಲೆ ಹಸಿರು ವಲಯದ ಬಗ್ಗೆ ಹೇಳಿದ್ದಾರೆ. ಅದು ಬೆಂಗಳೂರು ನಗರಸಭೆ ಮಾಡಬೇಕಾಗಿರುವಂತಹದ್ದು. ಇದರ ನಿರ್ಧಾರವನ್ನು ಮೂರು ಇಲಾಖೆಗಳು ಸೇರಿ ಮಾಡಬೇಕಾಗಿರುವಂತಹದ್ದು. ಪ್ರತಿ ೫ ವರ್ಷಕ್ಕೊಮ್ಮೆ ಈ ರೀತಿ ಮಾಡಿದಂತಹ ಹಸಿರು ವಲಯವನ್ನು ಪುನರ್‌ವಿಮರ್ಶೆ ಮಾಡತಕ್ಕ ಶಕ್ತಿ ಆ ಒಂದು ಬಿ.ಎಂ.ಆರ್.ಡಿ.ಎ ಗೆ ಇದೆ, ಅದರ ನಿಯಮಗಳಿಗನುಗುಣವಾಗಿ ಆಯಾ ಕಾಲದ ಅಗತ್ಯಕ್ಕೆ ತಕ್ಕ ಹಾಗೆ ನಗರವನ್ನು ಹಾಗೂ ಅದರ ಅನುಕೂಲತೆಗಳನ್ನು ನಿರ್ಮಾಣ ಮಾಡತಕ್ಕ ಅಧಿಕಾರ ಕೂಡ ಅವರಿಗಿದೆ.

ಪ್ರಾಚ್ಯ ವಸ್ತು ಇಲಾಖೆಗೆ ಸಂಬಂಧಪಟ್ಟಂತೆ ಒಂದೆರಡು ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಪ್ರಾಚ್ಯ ವಸ್ತು ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಈ ವರ್ಷ ಎಪಿಗ್ರಫಿ ವಿಚಾರದಲ್ಲಿ ರಾಷ್ಟ್ರ ಮಟ್ಟದಲ್ಲೇ ತರಬೇತಿ ಶಾಲೆಗಳು ಇಲ್ಲ. ಇದಕ್ಕೆ ಸಂಬಂಧಪಟ್ಟ

ತರಬೇತಿ ಶಾಲೆಗಳನ್ನು ಮಾಡಬೇಕೆಂಬ ತೀರ್ಮಾನವನ್ನು ಮಾಡಿದ್ದೇವೆ. ಪ್ರಾಚ್ಯ ವಸ್ತು ಇಲಾಖೆ ಇಂದಿಗೆ ೧೮೦ ವರ್ಷಗಳ ಅವಧಿಯನ್ನು ಮುಗಿಸಿರತಕ್ಕ ಒಂದು ಪುರಾತನ ಇಲಾಖೆಯಾಗಿರುವುದರಿಂದ ಆ ಒಂದು ಸಂಸ್ಥೆಯನ್ನು ಕಟ್ಟತಕ್ಕ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ನನ್ನ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿಲ್ಲ. ಏಕೆಂದರೆ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಹತ್ತಾರು ಸಾವಿರ ಜನರು ನಿವೇಶನಕ್ಕಾಗಿ ಅರ್ಜಿಗಳನ್ನು ಹಾಕಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ೭೧ ಸಾವಿರ ನಿವೇಶನ ವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ೩೩ ಕೋಟಿ ರೂಪಾಯಿಗಳನ್ನು ಜನರಿಂದ ಠೇವಣಾತಿಯಾಗಿ ಸಂಗ್ರಹ ಮಾಡಿದ ಮೇಲೆ ಅಷ್ಟೂ ಜನರಿಗೂ ಏಕೆ ನಿವೇಶನವನ್ನು ಕೊಡಲಿಲ್ಲ? ಅಷ್ಟೂ ಜನರಿಗೆ ನಿವೇಶನಗಳನ್ನು ಕೊಡತಕ್ಕಂಥದ್ದು ನಿಮ್ಮ ಕರ್ತವ್ಯ. ನಾನು ಹೇಳಿದ್ದು ೭೩ ಸೊಸೈಟಿಗಳ ಬಗ್ಗೆ ಮಾತ್ರ. ನಾನು ೧೨೮ ಸೊಸೈಟಿಗಳ ಬಗ್ಗೆ ಹೇಳಲಿಲ್ಲ. ಸೈಟುಗಳನ್ನು ಮಾಡುತ್ತೇವೆಂದು ಸುಮಾರು ೩೦೦–೪೦೦ ಕೋಟಿ ರೂಪಾಯಿಗಳವರೆಗೆ ಹಣವನ್ನು ಜನರಿಂದ ಕಲೆಕ್ಟ್ ಮಾಡಿದ್ದಾರೆ. ಅವರಿಗೆ ಸರ್ಕಾರದಿಂದ ಉತ್ತರ ಸ್ಪಷ್ಟವಾಗಿ ಬೇಕು. ರೆವಿನ್ಯೂ ಡಿಪಾರ್ಟ್‌ಮೆಂಟ್ ಬರುತ್ತದೆ. ಬಿ.ಡಿ.ಎ.ಗೆ ಬರುವುದಿಲ್ಲ ಎಂಬ ಮಾತು ಸರಿಯಾದುದಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ನಗರಾಭಿವೃದ್ಧಿ ಇಲಾಖೆ, ರೆವಿನ್ಯೂ ಡಿಪಾರ್ಟ್‌ಮೆಂಟ್ ಮೂರು ಕೂಡಿ ಅಫಿಷಿಯಲ್ ಥ್ರೀ ಮ್ಯಾನ್ ಕಮಿಟಿ ಮಾಡಿದ್ದಾರೆ. ಆ ಕಮಿಟಿಯಲ್ಲಿ ರೆವಿನ್ಯೂ ಕಮಿಷನರ್, ರಿಜಿಸ್ಟ್ರಾರ್ ಆಫ್ ಕೋ–ಆಪರೇಟೀವ್ ಸೊಸೈಟೀಸ್ ಮತ್ತು ಬೆಂಗಳೂರು ಜಿಲ್ಲಾಧಿಕಾರಿಗಳು ಆ ಕಮಿಟಿಯಲ್ಲಿದ್ದಾರೆ. ಅವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆ. ಆ ಕಮಿಟಿಯ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್.— ತಾವು ಹೇಳಿದ ಹಾಗೆ ೧೧ ಸಾವಿರ ನಿವೇಶನಗಳನ್ನು ಕೊಟ್ಟಿಲ್ಲ. ೧೫೦೧೯ ನಿವೇಶನಗಳನ್ನು ಕೊಟ್ಟಿದ್ದೇವೆ. ಉಳಿದವರಿಗೆ ನಿವೇಶನಗಳನ್ನು ಕೊಡಲಿಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ ನಿವೇಶನ ಕೊಟ್ಟಿರುವವರಿಗೆ ನಿವೇಶನ ಎಲ್ಲಿದೆ ಎನ್ನುವುದು ಗೊತ್ತಿಲ್ಲವೆನ್ನುವ ಆಪಾದನೆಯನ್ನು ಅನೇಕ ಮಾನ್ಯ ಸದಸ್ಯರು ಮಾಡಿದರು. ಬಹಳ ತುರಾತುರಿಯಿಂದ ಸೈಟುಗಳನ್ನು ಕೊಟ್ಟಿದ್ದೀರಿ, ಸೈಟುಗಳ ಸಂಖ್ಯೆಯನ್ನು ಕೊಟ್ಟಿಲ್ಲ. ನಿವೇಶನದಾರರು ಸಂಖ್ಯೆಗಳನ್ನು ಹುಡುಕುತ್ತಿದ್ದಾರೆಂದು ಹೇಳಿದ್ದಾರೆ. ಈಗಾಗಲೇ ಹಂಚಿರತಕ್ಕ ೧೬ ಸಾವಿರ ನಿವೇಶನಗಳಲ್ಲಿ ೧೧ ಸಾವಿರ ನಿವೇಶನಗಳಿಗೆ ಕ್ರಮಸಂಖ್ಯೆಯನ್ನು ಕೊಟ್ಟಿದ್ದೇವೆ. ಉಳಿದಿರತಕ್ಕವರಿಗೆ ತಾಂತ್ರಿಕ ತೊಂದರೆ ಇರುವುದರಿಂದ ನಂಬರುಗಳನ್ನು ಕೊಟ್ಟಿಲ್ಲ. ಅಂದರೆ ಈ ರೀತಿ ೧೬ ಸಾವಿರ ಬಿಟ್ಟು ಉಳಿದಿರ ತಕ್ಕವರು ಅಸಫಲರಾದವರಿಗೆ ಹಣವನ್ನು ವಾಪಸ್ಸು ಕೊಟ್ಟಿದ್ದೇವೆ. ಮೂರು ಮಂದಿ ಸಮಿತಿ ಇದರ ಬಗ್ಗೆ ನಿರ್ಣಯ ಮಾಡುತ್ತಿದೆ. ಮೂರು ಮಂದಿ ಸಮಿತಿ ಸಂಬಂಧಪಟ್ಟಿರ ತಕ್ಕದ್ದು ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಕಂದಾಯ ಇಲಾಖೆ ಈ ಮೂರು ಇಲಾಖೆಗಳಲ್ಲಿನ ಒಬ್ಬೊಬ್ಬರು ಪ್ರತಿನಿಧಿಗಳು ಅದರಲ್ಲಿ ಇದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಒಂದು ನಿರ್ಣಯ ಮಾಡಿದ್ದೇವೆ. ಸರ್ಕಾರ ಕೂಡ ಒಂದು ನಿರ್ಣಯ ತೆಗೆದುಕೊಂಡಿದೆ, ಇನ್ನು ಮುಂದೆ ಯಾವುದೇ ತರವಾದ ನಿವೇಶನ ಕೊಡಬೇಕಾದರೆ ಭೂಸ್ವಾಧೀನ ಕ್ರಮವನ್ನು ಕೈಗೊಳ್ಳುವಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರೇ ಕೈಗೊಳ್ಳಬೇಕು. ಅವರನ್ನು ಬಿಟ್ಟು ಕಂದಾಯ ಇಲಾಖೆ ಮತ್ತೊಬ್ಬರು ಭೂಸ್ವಾಧೀನವನ್ನು ಮಾಡಿಕೊಳ್ಳುವ ಹಾಗೆ ಇಲ್ಲವೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಯಾವುದೇ ಸಂದರ್ಭದಲ್ಲಿಯಾದರೂ ಬಹುಮಹಡಿ ಕಟ್ಟಡವಾಗಬಹುದು, ಬೇರೆ ಯಾವುದೇ ಮನೆಗಳು ಆಗಬಹುದು ೨೦ ಎಕರೆಗಿಂತ ಹೆಚ್ಚು ಜಮೀನು ಕೊಡಬಾರದೆಂಬ ನಿರ್ಣಯ ವನ್ನು ಕೂಡ ಮಾಡಿದ್ದೇವೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.— ೧೯೮೪ರಲ್ಲಿಯೇ ಥ್ರೀ ಮ್ಯಾನ್ ಕಮಿಟಿ ಮಾಡ ಲಾಗಿದೆ. ಈಗಾಗಲೇ ನಾಲ್ಕು ವರ್ಷಗಳಾಗಿವೆ.

ಶ್ರೀ ಎಂ. ಪಿ. ಪ್ರಕಾಶ.— ಹೌದು ಅದರಿಂದ ಒಳ್ಳೆಯ ಕೆಲಸಗಳಾಗಿವೆ. ಅದು ನನಗೆ ನೇರವಾಗಿ ಸಂಬಂಧವಿಲ್ಲ, ಅದರ ಬಗ್ಗೆ ಹೆಚ್ಚು ಮಾಹಿತಿ ನನ್ನ ಹತ್ತಿರ ಇಲ್ಲ. ಆದ್ದರಿಂದ ಅದರ ಬಗ್ಗೆ ಹೆಚ್ಚು ಪ್ರಸ್ತಾಪವಿಲ್ಲ.

ಅಧ್ಯಕ್ಷರು.— ಎಲ್ಲರಿಗೂ ಕ್ಲಾರಿಫಿಕೇಶನ್ ಕೇಳಲಿಕ್ಕೆ ಅವಕಾಶ ಕೊಡುತ್ತೇನೆ. ರಾತ್ರಿ ೧೨ ಗಂಟೆಯಾಗಲಿ ಕೇಳಿ.

ಶ್ರೀ ವೇದಾಂತ ಹೆಮ್ಮಿಗೆ.— ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ತರಕಾರಿ ಮತ್ತು ಹಣ್ಣು ಮಾರಾಟ ಸಹಕಾರ ಸಂಘವೆಂದು ಮಾಡಿಕೊಂಡಿದ್ದಾರೆ. ಅನೇಕ ಸ್ಥಳಗಳಲ್ಲಿ ಹಣ್ಣು ತರಕಾರಿ ಮಾಡುವಂತಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಅದರ ವ್ಯಾಪಾರ ವರ್ಷಕ್ಕೆ ಸುಮಾರು ೧೦ ಕೋಟಿ ರೂಪಾಯಿ. ಇವತ್ತು ರೈತ ಶೋಷಣೆಯಿಂದ ಬಿಡುಗಡೆಯಾಗಿದ್ದಾನೆ. ತರಕಾರಿ ಮಾರಾಟ ಸಹಕಾರ ಸಂಘದವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರ ಹತ್ತಿರ ೨೫ ಎಕರೆ ಭೂಮಿಯನ್ನು ಮಡಿವಾಳದ ಹತ್ತಿರ ಕೇಳುತ್ತಿದ್ದಾರೆ. ಅದರ ಮೂಲ ಉದ್ದೇಶ ರೈತರಿಂದ ಕೊಂಡುಕೊಳ್ಳತಕ್ಕ ತರಕಾರಿ, ಹಣ್ಣು ಹಂಪಲುಗಳನ್ನು ಸ್ಟೋರ್ ಮಾಡುವುದಕ್ಕೆ ಶಿಥಲೀಕರಣವಾದ ವ್ಯವಸ್ಥೆ ಬೇಕು. ಅದಕ್ಕೋಸ್ಕರ ಅವರು ಭೂಮಿಯನ್ನು ಕೇಳಿದ್ದಾರೆ ಆದರೆ ಆದಷ್ಟು ಬೇಗ ಅದನ್ನು ಕೊಡಬೇಕು. ರೈತರಿಗಾಗಿ ಅವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಅವರಿಗೆ ಮಾಡುತ್ತೀರಾ ಎನ್ನುವುದನ್ನು ತಿಳಿಸಬೇಕು. ಎರಡನೆಯದಾಗಿ ಬೆಂಗಳೂರು ನಗರದ ಸುತ್ತಮುತ್ತ ಹಣ್ಣಿನತೋಟಗಳು, ತರಕಾರಿ ಬೆಳೆಯತಕ್ಕ ಪ್ರದೇಶಗಳು ಇವೆ. ತೆಂಗಿನ ತೋಟಗಳು ಇವೆ. ನಿವೇಶನಗಳನ್ನು ಮಾಡುವುದಕ್ಕೋಸ್ಕರ ಇವತ್ತಿನ ದಿವಸ ಅನೇಕ ಪ್ರದೇಶಗಳನ್ನು ಅಕ್ವೈರ್ ಮಾಡುತ್ತಿದ್ದಾರೆ. ಇದರಿಂದ ಬೆಂಗಳೂರಿನ ಸುತ್ತಮುತ್ತ ಇರತಕ್ಕ ಪರಿಸರ ಏನಿದೆ ಆ ಪರಿಸರ ಹಾಳಾಗತಕ್ಕ ಪರಿಸ್ಥಿತಿ ಬಂದಿದೆ. ಆದುದರಿಂದ ಅಕ್ವೈರ್ ಮಾಡುವಾಗ ಪರಿಸರವನ್ನು ಕಾಪಾಡುವ ಉದ್ದೇಶದಿಂದ ಯಾವುದೇ ಹಣ್ಣಿನ ತೋಟ ತೆಂಗಿನ ತೋಟ ಇರಲಿ ಅದನ್ನು ಉಳಿಸತಕ್ಕ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೈಸೂರಿನಲ್ಲಿ...

ಅಧ್ಯಕ್ಷರು.— ಕ್ಲಾರಿಫಿಕೇಶನ್ ಕೇಳಿ ಅಂದರೆ ಚಿಕ್ಕ ಭಾಷಣ ಮಾಡುವುದಕ್ಕೆ ಹೊರಟಿದ್ದೀರಿ.

† ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, Antiquity and Treasuers Act 1972 according to that antiquities which are more that 100 years old and with the private people for prservation should he registercd wsth the Registering Officers Mysore... ಮೈಸೂರಿನಲ್ಲಿ ಏನಾಗಿದೆ ಅಂದರೆ ಶ್ರೀ ಕಂಠದತ್ತ ನರಸಿಂಹರಾಜ ಒಡೆಯರ್‌ರವರು ತಮ್ಮದೇ ಆದ ಒಂದು ಪ್ರದರ್ಶನ ಇಟ್ಟಿದ್ದಾರೆ. ಸುಮಾರು ೫೦೦-೬೦೦ ವರ್ಷಗಳಿಂತ ಹಿಂದಿನ ಪ್ರಾಚ್ಯ ವಸ್ತುಗಳು ಅಲ್ಲಿವೆ. ಇದನ್ನು ಅವರು ರಿಜಿಸ್ಟ್ರರ್ ಮಾಡಿದ್ದಾರೆಯೆ ? ಪರ್ಮಿಷನ್ ಕೇಳಿದ್ದಾರೆಯೆ ? ಕರ್ನಾಟಕದಲ್ಲಿರಕ್ಕ ಪ್ರಾಚ್ಯ ಸಂಗ್ರಹ ವಸ್ತುಗಳು ಏನಿವೆ ಅವನ್ನು ಸುರಕ್ಷಿತವಾಗಿ ಕಾಪಾಡುವ ದೃಷ್ಟಿಯಿಂದ ಸರ್ಕಾರ ಅದನ್ನು ವಶಪಡಿಸಿಕೊಳ್ಳುವ ಕ್ರಮವನ್ನು ತೆಗೆದುಕೊಳ್ಳುತ್ತದೆಯೆ ? ತಮಗ ಗೊತ್ತಿರುವ ಹಾಗೆ ಪ್ರಾಚ್ಯ ವಸ್ತು ಸಂಶೋಧನಾ ಕೇಂದ್ರ ಮೈಸೂರಿನಲ್ಲಿ ಸ್ಥಾಪನೆಯಾಗಿ ನೂರು ವರ್ಷವಾಗಿದೆ.

ಅಧ್ಯಕ್ಷರು.—೧೦-೧೫ ಪ್ರಶ್ನೆಗಳನ್ನು ಒಟ್ಟಿಗೆ ಕೇಳಿದರೆ ಆವರು ಹೇಗೆ ಉತ್ತರ ಹೇಳಬೇಕು.

ಶ್ರೀ ವೇದಾಂತ ಹೆಮ್ಮಿಗೆ.— ನಾನು ೩ ಕ್ಲಾರಿಫೇಕೇಶನ್ ಕೇಳುತ್ತಿದ್ದೇನೆ. ಡಾ. ಎಂ. ಹೆಚ್. ಕೃಷ್ಣನ್‌ರವರು ಬರೆದ ಎರಡು ಗ್ರಂಥಗಳು ಅಲ್ಲಿ ಪತ್ತೆಯಾಗಿವೆ. ಆ ಗ್ರಂಥಗಳನ್ನು ಪ್ರಕಟಣೆ ಮಾಡುತ್ತೇವೆಂದು ೯ನೇ ಸೆಪ್ಟೆಂಬರ್ ೧೯೮೫ರಲ್ಲಿ ಆಳ್ವರವರು ಮಂತ್ರಿಯಾಗಿದ್ದಾಗ ಇದೇ ಸದನದಲ್ಲಿ ವಾಗ್ದಾನ ಮಾಡಿದ್ದರು, ಇದುವರೆಗೆ ಪ್ರಕಟಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ನಿಮ್ಮ ಕೈಯಲ್ಲಿ ಅವುಗಳನ್ನು ಪ್ರಕಟಿಸಲು ಸಾಧ್ಯವಾಗದಿದ್ದರೆ ಹ್ಯೂಮನ್ ಸೊಸೈಟಿ ಆಫ್ ಇಂಡಿಯ ಅಥವಾ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರೀಸರ್ಚ್ ಸಂಸ್ಥೆಗಳಿಗೆ ಕೊಟ್ಟು ಪಬ್ಲಿಕ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಲಾಲ್‌ಬಾಗಿನ ತೋಟಗಾರಿಕೆ ಬೆಳೆಗಾರರ ಸಂಘ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡುತ್ತಿದೆ. ೪-೫ ವರ್ಷಗಳಿಂದ ಹಿಂದೆ ೫೦-೬೦ ಲಕ್ಷ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದ ಸಂಘ ಈಗ ೯ ಕೋಟಿ ರೂಪಾಯಿಗಳ ಸಗಟು ವ್ಯಾಪಾರ ಮಾಡುತ್ತಿದೆ. ಅವರು ಶೈತ್ಯಾಗಾರ ಮಾಡುವುದಕ್ಕೆ ಮತ್ತು ಬೇರೆ ಬೇರೆ ಕಾರ್ಯ ಚಟುವಟಿಕೆಗಳನ್ನು ಮಾಡುವುದಕ್ಕೆ ನಿವೇಶನವನ್ನು ಕೇಳಿರತಕ್ಕದ್ದು ಸಮಂಜಸ. ಅವರು ಮಡಿವಾಳದಲ್ಲಿ ೨೫ ಎಕರೆ ಜಾಗ ಬೇಕೆಂದು ಕೇಳುತ್ತಿದ್ದಾರೆ. ಮಡಿವಾಳದಲ್ಲಿರತಕ್ಕ ಪ್ರದೇಶವನ್ನು ಬಿಡಿಎಯವರು ನಿವೇಶನ

ಮಾಡಬೇಕೆಂಬ ಕಾರಣದಿಂದ ಸ್ವಲ್ಪ ತಡವಾಗಿದೆ. ನಿವೇಶನಕ್ಕಾಗಿ ಇರತಕ್ಕ ಪ್ರದೇಶದಲ್ಲಿ ಅವರು ಜಾಗವನ್ನು ಕೇಳಿರುವುದರಿಂದ ಅಲ್ಲಿ ೨೫ ಎಕರೆಗಳನ್ನು ಕೊಡುವ ಬಗ್ಗೆ ತಾಂತ್ರಿಕ ತೊಡಕು ಉಂಟಾಗಿದೆ. ೨೫ ಎಕರೆ ಜಮೀನನ್ನು ಆ ಬೆಳೆಗಾರರ ಸಂಘಕ್ಕೆ ಕೊಡುವುದಕ್ಕೆ ನಮ್ಮ ಒಪ್ಪಿಗೆ ಇದೆ. ಆದ್ದರಿಂದ ಈ ಬಗ್ಗೆ ಪ್ರಾಧಿಕಾರದ ಜೊತೆ ಮತ್ತು ನಗರಾಭಿವೃದ್ಧಿ ಸಚಿವರ ಜೊತೆ ಮಾತನಾಡಿ ಸೂಕ್ತವಾದ ಕಡೆ ೨೫ ಎಕರೆ ಜಾಗವನ್ನು ಬಿಡಿಎ ವ್ಯಾಪ್ತಿಯಲ್ಲಿ ಕೊಡುತ್ತೇವೆ. ತೋಟಗಾರಿಕಾ ಮಂತ್ರಿಗಳು ಒಪ್ಪಿದಂತಹ ಜಾಗವನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಮಾನ್ಯ ಸಚಿವರು ವಿಚಿತ್ರವಾಗಿ ಹೇಳಿದರು. ತಾಂತ್ರಿಕ ಅಡಚಣೆ ಇದೆ ಎಂದರು, ರಾಜ್ಯದ ಎಲ್ಲಾ ರೈತರ ಹಿತರಕ್ಷಣೆ ಮಾಡುವಂಥ ಹತ್ತು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ವ್ಯವಹಾರ ಮಾಡುವಂಥ ಒಳ್ಳೆಯ ಸಂಸ್ಥೆ ಎಂದು ಒಪ್ಪಿಕೊಂಡಿದ್ದಾರೆ. ದಯವಿಟ್ಟು ಸದನದಲ್ಲಿ ಆ ಬಗ್ಗೆ ನಿಶ್ಚಿತ ವಚನ ಕೊಟ್ಟು ರೈತರ ಹಿತರಕ್ಷಣೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಸರ್ಕಾರ ಆ ಸಂಘಕ್ಕೆ ಖಂಡಿತವಾಗಿಯೂ ನಿವೇಶನವನ್ನು ಕೊಡುತ್ತದೆ. ನಿವೇಶನ ಕೊಡುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಮಡಿವಾಳದಲ್ಲಿ ಕೊಡುವ ಬಗ್ಗೆ ಪ್ರಾಧಿಕಾರದ ಆಯುಕ್ತರ ಜೊತೆ ತೋಟಗಾರಿಕೆ ಇಲಾಖೆಯ ಮಂತ್ರಿಗಳ ಜೊತೆ ಮತ್ತು ನಗರಾಭಿವೃದ್ಧಿ ಸಚಿವರ ಜೊತೆ ಸಮಾಲೋಚನೆ ಮಾಡಿ ಇರುವಂಥ ಕಾನೂನಿನ ಅಡಚಣೆಯನ್ನು ತೊಡೆದು ಹಾಕಿ ಅಲ್ಲಿ ಕೊಡುವುದಕ್ಕೆ ನನ್ನ ಸಹಮತವೂ ಇದೆ. ಅಲ್ಲಿ ಕಾನೂನಿನ ತೊಡಕಿರುವುದರಿಂದ ವಿಚಾರ ಮಾಡಬೇಕಾಗಿದೆ. ನಿವೇಶನ ಕೊಡತಕ್ಕದ್ದು ನಿಶ್ಚಿತ, ದ್ರಾಕ್ಷಿ ತೋಟದ ಬೆಳೆಗಾರರಿಗೆ ಅನುಕೂಲ ಕಲ್ಪಿಸಿಕೊಡಬೇಕು ಮತ್ತು ಭೂಸ್ವಾಧೀನ ಕ್ರಮವನ್ನು ವಿನಾಯ್ತಿಗೊಳಿಸಬೇಕೆಂದು ಮಾನ್ಯ ಹೆಮ್ಮಿಗೆಯವರು ಹೇಳಿದ್ದಾರೆ, ೧-೧-೮೭ರ ಒಂದು ಆಜ್ಞೆ ಪ್ರಕಾರ ಎಲ್ಲಿ ನರ್ಸರಿಗಳನ್ನು ಬೆಳೆಸಿರತಕ್ಕ ಪ್ರದೇಶ ಇದೆ ಅದನ್ನು ಭೂಸ್ವಾಧೀನ ಕ್ರಮದಿಂದ ವಿನಾಯ್ತಿಗೊಳಿಸತಕ್ಕ ಆದೇಶ ಇದೆ ದ್ರಾಕ್ಷಿ ತೋಟಗಳಿಗೆ ಮತ್ತು ತೆಂಗಿನ ತೋಟಗಳಿಗೆ ವಿನಾಯ್ತಿ ಕೊಟ್ಟಿಲ್ಲ. ಮಾನ್ಯ ಬಚ್ಚೇಗೌಡರು ಮತ್ತಿತರ ಶಾಸಕರು ಹಾಗೂ ರೈತರು ಬಹಳ ಒತ್ತಡವನ್ನು ಸರ್ಕಾರದ ಮೇಲೆ ತಂದಿದ್ದಾರೆ.

ಇದು ಪರಿಶೀಲನಾ ಕ್ರಮದಲ್ಲಿದೆ. ಇಷ್ಟರಲ್ಲೇ ನಿರ್ಧಾರವನ್ನು ತೆಗೆದುಕೊಂಡ ನಂತರ ಇದನ್ನು ಪ್ರಕಟಣೆ ಮಾಡುತ್ತೇವೆ. ಇನ್ನು ಮೂರನೆಯದಾಗಿ ಪ್ರಾಚ್ಯ ವಸ್ತುಗಳ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ. ಪ್ರಾಚ್ಯವಸ್ತುಗಳಿಗೆ ಸಂಬಂಧಪಟ್ಟಿರುವುದನ್ನು ನೊಂದಾಯಿಸಬೇಕಾದುದು ಅಗತ್ಯವಿದೆ ಎಂದು ಕಾನೂನಿನಲ್ಲಿದೆ. ಇದು ಶಿಕ್ಷಾರ್ಹ ಅಪರಾಧವೂ ಕೂಡಹೌದು. ಶ್ರೀಕಂಠದತ್ತ ಒಡೆಯರ್ ಅವರು ತಮ್ಮಲ್ಲಿರತಕ್ಕ ಎಲ್ಲಾ ಪುರಾತನ ವಸ್ತುಗಳು ಮತ್ತು ಈ ಇಲಾಖೆಗೆ ಸಂಬಂಧಪಟ್ಟಿರತಕ್ಕ ಕಲಾಕೃತಿಗಳು ಇವೆ ಅವುಗಳನ್ನು ನೊಂದಾಯಿಸಿ ಬೇಕಾಗಿತ್ತು. ಆದರೆ ಅವರು ಇದುವರೆಗೂ ನೊಂದಾಯಿಸಿಲ್ಲ. ಅದಕ್ಕೆ ಬೇಕಾದ ಪಟ್ಟಿಯನ್ನೂ ತಯಾರುಮಾಡಬೇಕಾಗಿತ್ತು, ಅದನ್ನೂ ಕೂಡ ಮಾಡಿಲ್ಲ. ಪ್ರಾಚ್ಯವಸ್ತುಗಳಿಗೆ ಸಂಬಂಧಪಟ್ಟ ನಿರ್ದೇಶಕರು ಇವರಿಗೆ ೭ ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ಈ ನೋಟೀಸ್‌ಗಳಿಗೆ ಅವರಿಂದ ಸ್ಪಷ್ಟೀಕರಣ ಬಂದಿಲ್ಲ. ಉತ್ತರ ಬಂದಿಲ್ಲ. ಇನ್ನು ನಾವು ಮಾಡಬೇಕಾದ್ದು ರಾಜಕೀಯ ನಿರ್ಧಾರ. ಅಕಸ್ಮಾತ್ ನಾವು ಯಾರೂ ಶ್ರೀಕಂಠದತ್ತ ಒಡೆಯರ್ ಅವರಿಗೆ ಭಯಪಟ್ಟಿದ್ದೇವೆ ಎನ್ನುವಂತಾದ್ದಲ್ಲ, ಅವರು ಕಾಂಗ್ರೆಸ್ ಎಂ.ಪಿ. ಎಂದು ಆ ಕ್ರಮ ತೆಗೆದುಕೊಂಡಿದ್ದಾರೆ, ಈ ಕ್ರಮ ತೆಗೆದುಕೊಂಡಿದ್ದಾರೆ ಎನ್ನತಕ್ಕಂಥ ರಾಜಕೀಯ ದುರುದ್ದೇಶದ ಆಪಾದನೆಗಳು ಬರಬಹುದು ಎನ್ನುವ ಕಾರಣಕ್ಕಾಗಿ ಇಲ್ಲಿಯವರೆಗೂ ತಡೆದಿದ್ದೇವೆ. ಮತ್ತೊಂದು ಸಲ ಅವರಿಗೆ ಈ ವಿಷಯದ ಬಗ್ಗೆ ಸ್ಪಷ್ಟೀಕರಣ ಕೇಳುತ್ತೇವೆ. ಅವರಿಂದ ಏನೂ ಉತ್ತರ ಬರದೇ ಇದ್ದರೆ ಕಾನೂನು ಪ್ರಕಾರ ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಇನ್ನು ಎಂ.ಎಸ್. ಕೃಷ್ಣನ್‌ರವರ ಪುಸ್ತಕ ಏನಿದೆ. ಇದರ ಪ್ರಕಟಣೆಗೆ ಎಲ್ಲಾ ಸಿದ್ಧತೆಗಳನ್ನು ಮಾಡಿದ್ದೇವೆ, ಒಂದು ನೂರು ವರ್ಷಗಳ ಶತಮಾನೋತ್ಸವ ಸಂದರ್ಭದಲ್ಲಿ ಎರಡು ಪುಸ್ತಕಗಳನ್ನೂ ಪ್ರಕಟಣೆ ಮಾಡುತ್ತೇವೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ತೋಟಗಾರಿಕೆ ಸಂಘದವರಿಗೆ ಈಗಾಗಲೇ ಮಾನ್ಯ ಸಚಿವರು ಭರವಸೆಯನ್ನು ಕೊಟ್ಟಿದ್ದಾರೆ ಬಹಳ ಸಂತೋಷ. ನಾನು ದಾವಣಗೆರೆ ವಿಷಯ ಕೇಳಿದ್ದೆ. ಟೆಲಿಪ್ರಿಂಟರ್ ಇಲ್ಲದೆ ಸುದ್ದಿ ಸಂಗ್ರಹಿಸುವುದಕ್ಕೆ ಬಹಳ ತೊಂದರೆಯಾಗುತ್ತಿದೆ. ಇದರ ಬಗ್ಗೆ ತಾವು ಭರವಸೆ

ಯನ್ನು ಕೊಡಬೇಕು ಮತ್ತು ಒದಗಿಸಿಕೊಡಬೇಕು ಆಮೇಲೆ ದಾವಣಗೆರೆ ದೊಡ್ಡ ನಗರ ತಮಗೆ ಗೊತ್ತಿದೆ. ಇಲ್ಲಿ ಕಲಾಭವನ ಇಲ್ಲ ದಯಮಾಡಿ ಸಂಸ್ಕೃತಿ. ಕಲೆ, ಸಾಹಿತ್ಯ ಇವುಗಳ ಬಗ್ಗೆ ನಾವು ಮಾತನಾಡುತ್ತೇವೆ. ಇಷ್ಟೊಂದು ದೊಡ್ಡ ಪಟ್ಟಣದಲ್ಲಿ ಕಲಾಭವನ ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತೆ. ದಯಮಾಡಿ ತಾವು ಕಲಾಭವನ ಮಾಡಬೇಕು. ಇನ್ನೊಂದು ಕ್ರೀಡಾಂಗಣ, ತಮಗೆ ಗೊತ್ತಿರುವಹಾಗೆ ದಾವಣಗೆರೆ ಮಧ್ಯವರ್ತಿ ಸ್ಥಳ ಇದು ವಿದ್ಯಾಕ್ಷೇತ್ರದಲ್ಲಿ ಒಳ್ಳೆಯ ಬೆಳವಣಿಗೆ ಇದೆ. ಯುವಕರು ಹೆಚ್ಚಿದ್ದಾರೆ, ಕ್ರೀಡಾಂಗಣದ ಕೊರತೆ ಇದೆ. ಈ ಮೂರು ಬಹಳ ಅಗತ್ಯವಿದೆ, ತಮ್ಮ ಇಲಾಖೆಗೆ ಬರತಕ್ಕಂತಾದ್ದು ಆದ್ದರಿಂದ ತಾವು ಇವುಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಪಂಪಾಪತಿಯವರು ಟೆಲಿಪ್ರಿಂಟರ್ ಒದಗಿಸುವ ಬೇಡಿಕೆ ಇಟ್ಟಿದ್ದಾರೆ, ಇದು ನ್ಯಾಯವಾದುದು. ಆದರೆ ನಮ್ಮಲ್ಲಿರತಕ್ಕ ನೀತಿನಿಯಮಾವಳಿಗಳ ಪ್ರಕಾರ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ಸಣ್ಣ ಪತ್ರಿಕೆಯವರಿಗೆ ಅನುಕೂಲವಾಗಲೀ ಎಂದು ಟೆಲಿಪ್ರಿಂಟರ್ ಒದಗಿಸುತ್ತಿದ್ದೇವೆ. ಇವುಗಳಿಗೆ ಯು. ಎನ್.ಐ. ಮತ್ತು ಪಿ.ಟಿ.ಐ. ನಿಂದ ಬಾಡಿಗೆ ತೆಗೆದುಕೊಂಡು ತಿಂಗಳಿಗೆ ೩ ಸಾವಿರ ರೂಪಾಯಿ ಬಾಡಿಗೆ ಕೊಟ್ಟು ಬೇರೆ ಬೇರೆ ಜಿಲ್ಲಾ ಕೇಂದ್ರಗಳಿಗೆ ಕಳುಹಿಸಿದ್ದೇವೆ. ಇನ್ನು ಉಪಕೇಂದ್ರಗಳಾದ ದಾವಣಗೆರೆ, ಹೊಸಪೇಟೆ, ಜಮಖಂಡಿ, ಉಡುಪಿ, ಶಿರಸಿ, ಹಾವೇರಿ, ಗದಗ್ ಮುಂತಾದ ದೊಡ್ಡದೊಡ್ಡ ನಗರಗಳನ್ನು ಈಗಾಗಲೇ ಗುರುತಿಸಿದ್ದೇವೆ. ಕೆಲವು ಕಾರಣಗಳ ಮೂಲಕ ಜಿಲ್ಲಾ ಕೇಂದ್ರಗಳಲ್ಲದೆ, ಹೆಚ್ಚು ಪ್ರಾಮುಖ್ಯತೆ ಪಡೆದಿರುವ ನಗರಗಳಿಗೂ ಟೆಲಿಪ್ರಿಂಟರ್ ಕೊಡಬೇಕೆಂಬ ಯೋಜನೆ ಇದೆ, ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಕ್ರೀಡಾಂಗಣ ಕೊಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಇದು ನನ್ನ ಇಲಾಖೆಗೆ ಸಂಬಂಧಪಟ್ಟಿಲ್ಲ. ಆದರೂ ಮಾನ್ಯ ಸದಸ್ಯರ ಭಾವನೆಯನ್ನು ಅರ್ಥ ಮಾಡಿಕೊಂಡ ನನ್ನ ಸ್ನೇಹಿತರಾದ ರಮೇಶ್ ಜಿಗಜಿಣಗಿಯವರಿಗೆ ಈ ವಿಚಾರ ತಿಳಿಸುತ್ತೇನೆ. ಇನ್ನು ರಂಗಮಂಟಪ ಕಟ್ಟಿಸತಕ್ಕಂಥ ಒಂದು ಯೋಜನೆ ಸರ್ಕಾರದಲ್ಲಿದ್ದು ಪ್ರತಿ ರಂಗಮಂಟಪಕ್ಕೂ ೫೦ ಸಾವಿರ ರೂಪಾಯಿಗಳನ್ನು ಕೊಡುತ್ತೇವೆ. ಹಿಂದೆ ವಿಶ್ವ ಕನ್ನಡ ಸಮ್ಮೇಳನ ಮಾಡುವಂಥ ಕಾಲದಲ್ಲಿ ಪ್ರತಿಯೊಂದು ಜಿಲ್ಲೆಗೂ ರಂಗ ಮಂಟಪ ಇರಬೇಕೆಂಬ ತೀರ್ಮಾನದಿಂದ, ಒಂದು ಯೋಜನೆ ಮಾಡಿ, ಈ ಯೋಜನೆಗೆ ೭೦ ಲಕ್ಷ ರೂಪಾಯಿಗಳನ್ನು ಯೋಜನೇತರ ವೆಚ್ಚದಲ್ಲಿ ಇಡಲಾಯಿತು. ಯೋಜನೇತರ ವೆಚ್ಚದಲ್ಲಿ ರಂಗಮಂಟಪಗಳನ್ನು ಕಟ್ಟುವುದಕ್ಕೆ ಬರುವುದಿಲ್ಲವೆಂಬ ಕೆಲವು ತಾಂತ್ರಿಕ ಕಾರಣಗಳು ಬಂದವು. ಆದರೆ ಈಗಾಗಲೇ ಕೆಲವು ಕಡೆಗಳಲ್ಲಿ ಅರ್ಧಕ್ಕೆ ಆಗಿರತಕ್ಕ ರಂಗಮಂಟಪಗಳು ಏನಿವೆ ಇವುಗಳನ್ನು ಮುಗಿಸಿದ ನಂತರ ಬೇರೆ ಕಡೆಗೂ ರಂಗ ಮಂಟಪದ ಕಟ್ಟತಕ್ಕಂಥ ಯೋಜನೆ ಸರ್ಕಾರದಲ್ಲಿದೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಮಾನ್ಯಮಂತ್ರಿಗಳು ಮುಡಿವಾಳದಲ್ಲಿ ಕೊಡುವುದಕ್ಕೆ ತಾಂತ್ರಿಕ ಅಡಚಣೆ ಬರುತ್ತದೆ ಎಂದು ಹೇಳಿದರು. ಸರ್ಕಾರಕ್ಕೆ ಅಧಿಕಾರ ಇದೆ. ತೋಟಗಾರಿಕೆ ಬೆಳೆ ಇತ್ತೀಚೆಗೆ ಜಾಸ್ತಿಯಾಗುತ್ತಿದೆ ಮುಡಿವಾಳ ಸೂಕ್ತ ನಿವೇಶನ ಎಂದು ಆ ಜನರು ವಿಚಾರ ಮಾಡಿದ್ದಾರೆ. ಆದ್ದರಿಂದ ಇಂತಹ ಒಳ್ಳೆಯ ಕೆಲಸ ಮಾಡಲು ಮಾನ್ಯ ಮಂತ್ರಿಗಳಿಗೆ ಸದ್ಬುದ್ಧಿ ಬರಲಿ ಎಂದು ಕೇಳುತ್ತೇನೆ. ಮುಡಿವಾಳದಲ್ಲೇ ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಅಡಚಣೆ ಒಡ್ಡಬಾರದು ಮುಡಿವಾಳದಲ್ಲೇ ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಇಷ್ಟೆಲ್ಲಾ ಶಾಸಕರ ಒತ್ತಡ ಇರುವುದರಿಂದ ಇದು ನಿರ್ಣಯ ಆಗತಕ್ಕಂಥಾದ್ದು ಸಂಪೂರ್ಣವಾಗಿ ಅವರ ಪರವಾಗಿ ಆಗುತ್ತದೆ ಎಂದು ಇದ್ದರೂ ಕೂಡಾ ನೇರವಾಗಿ ಈ ಸದನದಲ್ಲಿ ನಾನು ಅಭಿವಚನವನ್ನು ಕೊಡುವುದಕ್ಕೆ ಆಗುವುದಿಲ್ಲ. ನಿಯಮಾವಳಿಗಳು ಇವೆ. ಅದನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಅಭಿವೃದ್ಧಿ ಪ್ರಾಧಿಕಾರದ ಒಪ್ಪಿಗೆ ಪಡೆಯಬೇಕಾಗುತ್ತದೆ. ಆದರೂ ಅವರ ಭಾವನೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಮಂಜೂರಾತಿ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ನನ್ನ ನೇರವಾದ ಪ್ರಶ್ನೆಗೆ ಶ್ರೀಮಾನ್ ಪ್ರಕಾಶ್‌ರವರು ಉತ್ತರ ಕೊಡಲಿಲ್ಲ. ನಾನು ಆಗಲೇ ಹೇಳಿದೆ. ವಿಧಾನಸಭಾ ನಡವಳಿಕೆ ವಾಲ್ಯೂಮ್ ೨೦, ನಂಬರ್ ೧ ರಿಂದ ೫, ೧೯ರಿಂದ ೨೫ನೇ ಆಗಸ್ಟ್ ೮೭ರ ಪ್ರೊಸೀಡಿಂಗ್ಸನ್ನು ನಾನು ಓದಿದೆ, ಓದಿದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ. ಬಿ.ಡಿ.ಎ. ವೈಟ್ ಪೇಪರ್

ಇದೆಯಲ್ಲ ಅದರಲ್ಲಿ ಕೆ. ಕೆ. ಮೂರ್ತಿ, ಆಗ ಬಿ.ಡಿ.ಎ. ಚೇರ್ಮನ್ ಇದ್ದರಲ್ಲ ಅವರ ಹೆಸರೂ ಇದೆ. ಅದನ್ನು ಹೇಳಬೇಕೋ ಬೇಡವೋ ಎಂಬ ಚರ್ಚೆ ಆಗಿ, ವೈಟ್ ಪೇಪರ್‌ನಲ್ಲಿ ಅವರ ಹೆಸರು ಇರುವುದರಿಂದ ಅವರ ಹೆಸರು ಹೇಳಬೇಕೆಂದು ತೀರ್ಮಾನ ಆಯಿತು. ಆದುದರಿಂದ ನಾನು ನೇರವಾಗಿ ಪ್ರಶ್ನೆ ಕೇಳಬೇಕೆಂದು ತೀರ್ಮಾನ ಮಾಡಿದೆ. "He has indulging in nepotism in sale of sites and keeping many sites benami. Now we are going to show all these benami sites," ಅದಕ್ಕೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದೆ. ಅದಕ್ಕೆ ಹೆಗಡೆಯವರು ಏನು ಹೇಳಿದ್ದಾರೆ ಎಂದರೆ "There is no reason for me to feel shy at all. ಶ್ವೇತಪತ್ರವನ್ನು ಪ್ರಕಟಿಸಿ ಈ ಸದನ ಮತ್ತು ಮೇಲ್ಮನೆಯ ಮುಂದೆ ಇಟ್ಟಿದ್ದೇವೆ. ಎನ್‌ಕ್ವೈಯರಿ ಮುಗಿದ ನಂತರ ಯಾವುದೇ ಅಧಿಕಾರಿ ಇದರಲ್ಲಿ ತಪ್ಪಿತಸ್ಥನಾದನೆಂದು ಆದಮೇಲೆ ಅವರ ಮೇಲೆ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ" ಎಂದು ೧೯೮೬ನೇ ಇಸವಿಯಲ್ಲಿ ಹೇಳಿದರು, ಆದರೆ ಇವತ್ತಿನವರೆಗೂ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ನೀವು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾವು ಕಾಯುತ್ತಾ ಕುಳಿತಿದ್ದೆವು. ನೀವು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರೆ ನಾವೇ ನೇರವಾಗಿ ಅವರ ಮೇಲೆ ಕೋರ್ಟಿಗೆ ಹೋಗುತ್ತೇವೆ. ಪ್ರಾಧಿಕಾರದಲ್ಲಿ ಅವರು ಏನು ಅವ್ಯವಹಾರಗಳನ್ನು ಮಾಡಿದ್ದಾರೆ, ಅಕ್ರಮವಾಗಿ ನಿವೇಶನಗಳನ್ನು ಮಂಜೂರು ಮಾಡಿದ್ದಾರೆ, ಅದರ ಮೇಲೆ ಕ್ರಮ ತೆಗೆದುಕೊಳ್ಳಲೇ ಬೇಕಾಗುತ್ತದೆ. ತೆಗೆದುಕೊಳ್ಳದೇ ಇದ್ದರೆ, ಈಗಿನವರು, ಮುಂದೆ ಬರತಕ್ಕಂಥವರು ಅಕ್ರಮ ಮಾಡುವುದಕ್ಕೆ ಅವಕಾಶ ಉಂಟು. ಇದಕ್ಕೆ ತಾವು ನೇರವಾಗಿ ಉತ್ತರ ಕೊಡಬೇಕು. ಎರಡನೆಯದು ರಿಂಗ್ ರೋಡನ್ನು ತಾವು ಮಾಡುತ್ತಿದ್ದೀರಿ. ಇದು ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ರಿಂಗ್ ರೋಡ್‌ನ್ನು ಮಾಡುತ್ತಿದ್ದೀರಿ. ಕಂಟ್ರಾಕ್ಟರ್ ಇಲ್ಲದೆ ತಾವೇ ಕೆಲಸ ಮಾಡತಕ್ಕಂಥ ವ್ಯವಸ್ಥೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಗೆ ಇದೆಯೋ ಇಲ್ಲವೋ ಎಂಬ ಪ್ರಶ್ನೆ ಬರುತ್ತದೆ. ಆ ರೀತಿ ಇದ್ದರೆ ಕಂಟ್ರಾಕ್ಟರ್ ಇಲ್ಲದೆ ನಡೆಸುತ್ತೀರಾ ? ಅಥವಾ ಸಬ್ ಕಂಟ್ರಾಕ್ಟ್ ಕೊಡುತ್ತಿದ್ದೀರಾ ? ಇದು ಅಕ್ರಮವಾಗುತ್ತದೆ ಆದುದರಿಂದ ಇದರ ಬಗ್ಗೆ ನೀವು ಏನು ಮಾಡಿದ್ದೀರಿ ? ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಎಂಬ ಪ್ರಶ್ನೆ ಇದೆ. ಮೂರನೆಯದಾಗಿ ಲೆಜಿಸ್ಲೇಟರ್ಸ್‌ಗೆ. ಅಲ್ಲಿರತಕ್ಕಂಥವರಿಗೆ, ಇಲ್ಲಿರತಕ್ಕಂಥವರಿಗೆ ' ಕನ್‌ಸೆಷನ್ ರೇಟ್‌ನಲ್ಲಿ ಸೈಟ್ ಕೊಡುತ್ತೀರಾ ? ನಾನು ಎಲ್ಲರ ಪರವಾಗಿ ಕೇಳುತ್ತಿದ್ದೇನೆ. ಸೈಟ್‌ಗಳನ್ನು ಆದಷ್ಟು ಜಾಗ್ರತೆ ಕನ್‌ಸೆಷನ್ ರೇಟ್‌ನಲ್ಲಿ ಕೊಡುವುದಕ್ಕೆ ನೀವು ಮನಸ್ಸು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಹಿಂದೆ ಅನೇಕ ಸಂದರ್ಭಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿಯಮಾವಳಿಗಳೇ ಇರಲಿಲ್ಲ. ನಮ್ಮ ಸರಕಾರ ಬಂದ ಮೇಲೆ ಅನೇಕ ನಿಯಮಗಳನ್ನು ಮಾಡುವುದರ ಮೂಲಕವಾಗಿ ಅವರಲ್ಲಿದ್ದಂಥ, ವಿವೇಚನೆಗೆ ಸಂಬಂಧಪಟ್ಟಂತೆ ನಿವೇಶನಗಳನ್ನು ಕೊಡತಕ್ಕಂಥ ಹಕ್ಕನ್ನು ನಾವು ಸಂಪೂರ್ಣವಾಗಿ ನಿಯಂತ್ರಿಸಿದ್ದೇವೆ. ಯಾವುದೇ ಸಂದರ್ಭದಲ್ಲಿ ಯಾವುವೇ ವಿಚಾರದಲ್ಲಿ ಅದು ಔದ್ಯಮಿಕ ಸಂಬಂಧದ ನಿವೇಶನವಾಗಿರಬಹುದು, ಬಿಡಿ ನಿವೇಶನವಾಗಿರಬಹುದು, ಮೂಲೆ ನಿವೇಶನವಾಗಿರಬಹುದು ಅಥವಾ ನೇರವಾಗಿ ಅರ್ಜಿ ಕೊಟ್ಟಿರತಕ್ಕಂಥ ನಿವೇಶನವಾಗಿರಬಹುದು, ಈಗ ಅವರ ವಿವೇಚನೆಗೆ ಒಳಪಟ್ಟಿರತಕ್ಕದ್ದು ಬಹಳ ಕಡಿಮೆ. ಕೇವಲ ಶೇಕಡಾ ೫ರಷ್ಟು ಮಾತ್ರ ಅವರ ವಿವೇಚನೆಗೆ ಒಳಪಡತಕ್ಕ ರೀತಿ ಅವರಿಗೆ ಅಧಿಕಾರ ಕೊಟ್ಟು ಉಳಿದಿರತಕ್ಕಂಥಾದ್ದನ್ನು ಕಡಿಮೆ ಮಾಡಿದ್ದೇವೆ. ೧೯೮೩ರ ಆಚೆ ಅಧ್ಯಕ್ಷರಿಗೇ ಅಧಿಕಾರ ಇತ್ತು. ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಯಾವುದೇ ನಿಯಮಾವಳಿಗಳೂ ಇರಲಿಲ್ಲ. ಒಂದೇ ದಿವಸದಲ್ಲಿ ಒಬ್ಬರು ಅರ್ಜಿಯನ್ನು ಕೊಟ್ಟು ನಿವೇಶನ ತೆಗೆದುಕೊಳ್ಳುವ ರೀತಿ ಇತ್ತು. ಮಾನ್ಯ ಬಸವಲಿಂಗಪ್ಪನವರು ಪ್ರಸ್ತಾಪ ಮಾಡಿದುದರಲ್ಲಿ ನಿಜವಾಗಿ ನಡೆದಿರತಕ್ಕಂಥ ಸತ್ಯಸಂಗತಿಗಳಿವೆ. ನನಗೊಂದು ನಿವೇಶನ ಬೇಕೆಂದು ಅಲ್ಲಿರತಕ್ಕಂಥ ಅಧ್ಯಕ್ಷರಿಗೆ ಅರ್ಜಿ ಕೊಟ್ಟರೆ ಅವರು ಆ ಅರ್ಜಿಯ ಮೇಲೆ ಅದೇ ದಿವಸ ನಿವೇಶನವನ್ನು ಮಂಜೂರು ಮಾಡಬೇಕೆಂದು ಆಜ್ಞೆ ಮಾಡಿರತಕ್ಕಂಥಾ ಉದಾಹರಣೆಗಳು ಇವೆ. ಅದನ್ನೆಲ್ಲಾ ನಾವು ನಮ್ಮ ಶ್ವೇತಪತ್ರದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇದರ ಬಗ್ಗೆ ಕ್ರಮ ಕೈಗೊಂಡಿದ್ದೇವೆ. ನಿರ್ದಿಷ್ಟವಾದ ಪ್ರಕರಣಗಳಲ್ಲಿ ಏನೇನು ಕ್ರಮ ಕೈಗೊಂಡಿದ್ದೇವೆ ಎಂಬ ವಿವರಗಳನ್ನು ನಾನು ಮಾನ್ಯ ಬಸವಲಿಂಗಪ್ಪನವರಿಗೆ ನಂತರ ಕಳುಹಿಸಿಕೊಡುತ್ತೇನೆ. ನೂರು ಕೋಟಿ ರೂಪಾಯಿಗಳನ್ನು ನಾವು ವರ್ತುಲ ರಸ್ತೆಗೆ ಖರ್ಚು ಮಾಡುತ್ತಿಲ್ಲ. ಅದಕ್ಕಿಂತಲೂ ಕಡಿಮೆ ಇದೆ. ಸುಮಾರು ಆರು ಕೋಟಿ ರೂಪಾಯಿಗಳನ್ನು ಖರ್ಚು

ಮಾಡಿದ್ದೇವೆ. ೬೨ ಕಿಲೋಮೀಟರ್ ಉದ್ದದ ವರ್ತುಲ ರಸ್ತೆ ಮಾಡಬೇಕೆಂದು ಇರತಕ್ಕಂಥದ್ದು. ಇದು ನೇರವಾಗಿ ನಮಗೆ ಸಂಬಂಧ ಇಲ್ಲದಿದ್ದರೂ ಕೂಡಾ ಇದನ್ನು ಪ್ರಾಧಿಕಾರದವರೇ ಮಾಡಿ, ಈ ವರ್ತುಲ ರಸ್ತೆಗಳ ಪಕ್ಕದಲ್ಲಿರತಕ್ಕಂಥ ನಿವೇಶನಗಳನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಿ, ಇದಕ್ಕೆ ಖರ್ಚು ಮಾಡುವ ಹಣವನ್ನು ಮರಳಿ ಪಡೆಯಬಹುದು ಎಂಬ ಕಾರಣದಿಂದ ಮಾಡಿದ್ದೇವೆ. ಈಗ ೩೨ ಕಿಲೋಮೀಟರ್ ರಸ್ತೆ ಮಾಡಿದ್ದೇವೆ. ಉಳಿದಿರತಕ್ಕಂಥ ರಸ್ತೆಯನ್ನು ಕೂಡ ಮಾಡುತ್ತೇವೆ. ಆದರೆ ನೂರು ಕೋಟಿ ರೂಪಾಯಿಗಳದಲ್ಲ.

೮-೦೦ ಪಿ.ಎಂ.

ಶ್ರೀ ಬಿ. ಬಸವಲಿಂಗಪ್ಪ.—ಕೆ. ಕೆ. ಮೂರ್ತಿ ಅವರ ಬಗ್ಗೆ ಶ್ವೇತಪತ್ರದಲ್ಲಿ ಇರತಕ್ಕ ದೂರುಗಳು ಏನಿವೆ ಅವುಗಳ ಬಗ್ಗೆ ತನಿಖೆ ಮಾಡಿ, ತಪ್ಪಿತಸ್ಥರಿಗೆ ಶಿಕ್ಷೆ ಮಾಡುತ್ತೀರಾ ಎಂದು ಹೇಳಿದರೆ, ನೀವು ಏನೇನೋ ಹೇಳಿಬಿಟ್ಟಿರಿ.

ಶ್ರೀ ಎಂ. ಪಿ ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವಲಿಂಗಪ್ಪನವರು ಹೇಳಿರತಕ್ಕ ಅನೇಕ ಅವ್ಯವಹಾರಗಳು ಏನಿವೆ, ಇದು ನಿಯಮಾವಳಿಗಳು ಇಲ್ಲದಂಥ ಸಂದರ್ಭದಲ್ಲಿ ನುಣುಚಿ ಕೊಳ್ಳುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಸೂಕ್ಷ್ಮವಾಗಿ ಹೇಳಿದೆ. ನಿಯಮಾವಳಿಗಳು ಇಲ್ಲದೇ ಇರುವುದರಿಂದ ಆ ಕಾಲದಲ್ಲಿ ಅಧ್ಯಕ್ಷರು ಮಾಡಿರತಕ್ಕ ಅನೇಕ ವಿವೇಚನಾ ಮೂಲಕವಾಗಿ ಕೆಲವು ಆಜ್ಞೆಗಳು ಎಂದು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿದೆ, ನಾವು ಯಾರನ್ನೂ ಸಂರಕ್ಷಣೆ ಮಾಡುವಂಥ ಅಗತ್ಯ ಇಲ್ಲ, ರಕ್ಷಣೆ ಕೊಡಬೇಕಾದ ಅಗತ್ಯ ಇಲ್ಲ. ಈ ಬಗ್ಗೆ ಎಲ್ಲಾ ವಿವರಗಳನ್ನೂ ಒದಗಿಸುತ್ತೇನೆ. ಎಲ್ಲೆಲ್ಲಿ ಕ್ರಮ ತೆಗೆದುಕೊಂಡಿಲ್ಲ, ಅಂತಹ ಕಡೆ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಜಿ ಜಮಖಂಡಿ.—ಸನ್ಮಾನ್ಯ ಸಚಿವರು ಹೇಳಿದರು, ರಾಜ್ಯಾಂಗಬದ್ಧವಾಗಿ ಹಾಗೂ ಸಂವಿಧಾನ ಬದ್ಧವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ೧೮+೩ ಪ್ರಕಾರ ನಿವೇಶನ ಹಂಚುತ್ತೇವೆ ಎಂದು ಹೇಳಿದರು. ಇದಕ್ಕೆ ಯಾರ ಮುಲಾಜು ಇಲ್ಲ ಎಂದರು, ಇದನ್ನು ನಾನು ಒಪ್ಪುತ್ತೇನೆ. ಅನಂತರ ಇನ್ನೊಂದು ಮಾತು ಹೇಳಿದರು. ಅಂಬೇಡ್ಕರ್ ಜಯಂತಿ ದಿವಸ ೨ ಸಾವಿರ ನಿವೇಶನ ಹಂಚಬೇಕೆಂಬ ಕಾರ್ಯಕ್ರಮ ಹಾಕಿಕೊಂಡಾಗ, ಅಷ್ಟೊಂದು ಅರ್ಜಿ ಬರಲಿಲ್ಲ, ಆದ್ದರಿಂದ ನಿವೇಶನ ಉಳಿದಿವೆ ಎಂದು ಹೇಳಿದರು. ನಿವೇಶನ ಹಂಚುವ ಸಲುವಾಗಿ ನೋಟಿಫಿಕೇಶನ್ ಮಾಡಬಹುದು ಅಥವಾ ಮಾಡದೇ ಇರಬಹುದು ಎಂಬ ಮಾತನ್ನು ಹೇಳಿದರು. ನೋಟಿಫಿಕೇಷನ್ ಮಾಡದಿರುವುದರಿಂದ, ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಗೊತ್ತಾಗದೇ ಅರ್ಜಿಗಳು ಬಂದಿಲ್ಲ. ಒಂದು ವೇಳೆ ಈಗ ಅರ್ಜಿ ಕೊಟ್ಟರೆ ಅವುಗಳನ್ನು ಪರಿಶೀಲಿಸಿ ನಿವೇಶನ ಹಂಚುವ ವ್ಯವಸ್ಥೆ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಪ್ರಾಯಶಃ ಮಾನ್ಯ ಜಮಖಂಡಿಯವರು ತಪ್ಪಾಗಿ ಭಾವಿಸಿದ್ದಾರೆ. ನಾನು ಹೇಳಿದ್ದು, ಬಸವಲಿಂಗಪ್ಪನವರು, ಧರ್ಮಸಿಂಗ್‌ರವರು ಎತ್ತಿದ ಪ್ರಶ್ನೆಗಳಿಗೆ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗಾಗಿ ಮೀಸಲಾತಿ ಕ್ರಮದಲ್ಲಿ ಮನೆಗಳನ್ನು ಕಟ್ಟಿದ ಸಂದರ್ಭದಲ್ಲಿ ಮೀಸಲಾತಿ ಇಟ್ಟರೂ ಕೂಡ ಅರ್ಜಿಗಳು ಅವರಿಗೆ ಅನುಗುಣವಾದ ರೀತಿಯಲ್ಲಿ ಬರಲಿಲ್ಲ ಎಂಬ ಮಾತನ್ನು ಹೇಳಿದ್ದೇನೆ. ಆದರೆ ನಿವೇಶನಗಳಿಗೆ ಈ ಪ್ರಶ್ನೆ ಬಂದಿಲ್ಲ. ೨ ಸಾವಿರ ನಿವೇಶನಗಳನ್ನು ಅಂಬೇಡ್ಕರ್ ಜಯಂತಿ ದಿನಾಚರಣೆ ಸಂದರ್ಭದಲ್ಲಿ ಕೊಟ್ಟಿದ್ದೇವೆ. ಇದರ ಬಗ್ಗೆ ಎಲ್ಲರಿಗೂ ಬಹಿರಂಗವಾಗಿ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿದ್ದೇವೆ. ಅರ್ಜಿಗಳನ್ನು ಸ್ವೀಕಾರ ಮಾಡಿದ್ದೇವೆ. ಅದೇ ರೀತಿಯಾಗಿ ೨ ಸಾವಿರಕ್ಕಿಂತಲೂ ಹೆಚ್ಚು ಬಂದಿವೆ. ಶೇಕಡ ೨೫ರಷ್ಟು ಬೆಲೆಯಲ್ಲಿ ಕೊಟ್ಟಿದ್ದೇವೆ. ಅಲ್ಲಿ ಕಡಿಮೆಯಾಗಿಲ್ಲ, ೪,೭೭೭ ನಿವೇಶಗಳನ್ನು ಕೊಟ್ಟಿರುವುದರಲ್ಲಿ ಕಡಿಮೆ ಆಗಿಲ್ಲ. ಎಲ್ಲಿ ಮುಂಗಡವಾಗಿ ತಾವೇ ಹಣವನ್ನು ಕಟ್ಟಿ ಮನೆಗಳನ್ನು ತೆಗೆದುಕೊಳ್ಳಬೇಕಾಗಿದೆ, ಅಲ್ಲಿ ಮಾತ್ರ ಅವರ ಮೀಸಲಾತಿಗೆ ಅನುಗುಣವಾಗಿ ಅರ್ಜಿಗಳು ಬಂದಿಲ್ಲ ಎಂದು ಸ್ಪಷ್ಟೀಕರಣ ಕೊಡುವುದಕ್ಕೆ ಇಷ್ಟಪಡುತ್ತೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಅಧ್ಯಕ್ಷರೇ, ನನ್ನದು ಸೀಮಿತವಾದ ಪ್ರಶ್ನೆ. ಗುಲ್ಬರ್ಗಾದಲ್ಲಿ ರಂಗ ಮಂದಿರ ಕಟ್ಟಿಸಬೇಕೆಂದು ಫೌಂಡೇಷನ್ ಸ್ಟೋನ್ ಹಾಕಿದ್ದಾರೆ. ಇಲ್ಲಿಯವರೆಗೂ ಕೆಲಸ ಪ್ರಾರಂಭ ಆಗಿಲ್ಲ. ಕಾರ್ಪೊರೇಷನ್‌ನವರು ತೋಟದಲ್ಲಿ ಸೈಟು ಕೂಡ ಕೊಟ್ಟಿದ್ದಾರೆ,

ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರಿ. ಇದುವರೆಗೆ ಏಕೆ ಪ್ರಾರಂಭ ಮಾಡಿಲ್ಲ ? ೧೯ ಜಿಲ್ಲೆಗಳಲ್ಲಿ ಪ್ರಾರಂಭ ಮಾಡಿ, ಗುಲ್ಬರ್ಗಾ ಡಿವಿಜನ್ ಸ್ಥಳದಲ್ಲಿ ಕೆಲಸ ಪ್ರಾರಂಭಿಸಿಲ್ಲ ಎಂದು ಹೇಳಿದರೆ, ನಿಜವಾಗಿಯೂ ಜನ ಏನು ಹೇಳುತ್ತಾರೆ, ಹಿಂದಿನ ಸರ್ಕಾರ ಮಾಡಿದ ಹಾಗೆ ಜನತಾ ಸರ್ಕಾರದವರು ಮಾಡುವುದಿಲ್ಲ ಎಂಬ ಭಾವನೆ ಇದೆ. ಅದಕ್ಕೆ ದಯವಿಟ್ಟು ಯಾವಾಗ ಪ್ರಾರಂಭ ಮಾಡುತ್ತೀರಿ, ಆ ಮೇಲೆ ಪ್ರಚಾರ ಇಲಾಖೆಯಲ್ಲಿ ನಮ್ಮ ಗುಲ್ಬರ್ಗಾದಲ್ಲಿ ಡೆಪ್ಯೂಟಿ ಡೈರೆಕ್ಟರ್ ಇಲ್ಲ, ಮತ್ತೆ ಯಾದ್‌ಗೀರ್‌ನಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಇಲ್ಲ, ಈ ಎರಡು ಪೋಸ್ಟ್‌ಗಳು ಸುಮಾರು ೩-೪ ತಿಂಗಳಿಂದ ಖಾಲಿ ಇವೆ. ಯಾವ ಕೆಲಸಕಾರ್ಯಗಳೂ ಆಗುತ್ತಿಲ್ಲ, ಯಾವಾಗ ಇವುಗಳನ್ನು ಭರ್ತಿ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಜಿಲ್ಲೆಗೊಂದು ರಂಗಮಂದಿರವನ್ನು ಕಟ್ಟಬೇಕು ಎನ್ನುವ ಬಗ್ಗೆ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ನಿಯಮಾವಳಿಗಳನ್ನೂ ಮಾಡಿದೆ. ಆ ಸಂದರ್ಭದಲ್ಲಿ ಎಲ್ಲೆಲ್ಲಿ ನಿವೇಶನಗಳು ಸಿಕ್ಕಿದವು ಅಲ್ಲಿ, ಅಂದರೆ ೧೯ ಜಿಲ್ಲಾ ಕೇಂದ್ರಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಸನ್ಮಾನ್ಯ ಖರ್ಗೆಯವರ ಪ್ರಯತ್ನ ಮೂಲಕ ನಗರಸಭೆಯು ಉದ್ಯಾನವನದ ವ್ಯಾಪ್ತಿಯಲ್ಲಿ ಜಾಗವನ್ನು ಕೊಟ್ಟಿದೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಆದೇಶ ಆಗಿಲ್ಲ. ಇಷ್ಟರಲ್ಲೇ ಸುಮಾರು ಒಂದು ಕೋಟಿ ರೂಪಾಯಿ ಯೋಜನೆಯಲ್ಲಿ ಮೈಸೂರಿನಲ್ಲಿ ಮಾಡಿದಂಥ ಕಲಾಭವನ, ಇವತ್ತು ಅದು ಸುಮಾರು ೬ ಕೋಟಿ ರೂಪಾಯಿಗೆ ಬಂದಿದೆ. ಈ ರೀತಿಯಾಗಿ ಅದಕ್ಕಾಗಿ ಮೀಸಲಾದ ಹಣ ಮೈಸೂರಿನಲ್ಲಿ ಅರ್ಧಕ್ಕೆ ನಿಂತಿರತಕ್ಕ ಕಲಾಭವನಕ್ಕೆ ಖರ್ಚು ಮಾಡಿದ್ದೇವೆ. ಮತ್ತೆ ಕಾರಣಾಂತರದಿಂದ ಯೋಜನೇತರ ವೆಚ್ಚದಲ್ಲಿ ಇದ್ದ ೭೦ ಲಕ್ಷ ರೂಪಾಯಿಗಳನ್ನು ಕಟ್ಟಡಗಳಿಗಾಗಿ ಉಪಯೋಗ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಆರ್ಥಿಕ ಇಲಾಖೆಯವರು ಮತ್ತು ಯೋಜನಾ ಇಲಾಖೆಯವರು ನಮಗೆ ಮನವರಿಕೆ ಮಾಡಿಕೊಟ್ಟಿದ್ದರಿಂದ ಇದರ ಬಗ್ಗೆ ಇನ್ನೂ ಸ್ಪಷ್ಟೀಕರಣ ಆಗಬೇಕಾಗಿದೆ.

ಗುಲ್ಬರ್ಗಾ ನಗರಕ್ಕೆ ರಂಗ ಮಂದಿರ ಆಗಬೇಕಾದುದು ಬಹಳ ಅವಶ್ಯಕವಿದೆ. ಇದರ ಬಗ್ಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಕೆಲಸ ಮಾಡಿಸುತ್ತೇವೆ. ಆದರೆ, ರಂಗ ಮಂದಿರವನ್ನು ಕಟ್ಟುವುದಕ್ಕೆ ಬೇಕಾದ ನಿವೇಶನ ಇನ್ನೂ ಸರ್ಕಾರದ ಸ್ವಾಧೀನಕ್ಕೆ ಬಂದಿಲ್ಲ. ಅಲ್ಲಿನ ನಗರಸಭೆಯವರು ಒಂದು ಗೊತ್ತುವಳಿಯನ್ನು ಮಾಡಿದ್ದಾರೆ. ನಿವೇಶನ ಸರ್ಕಾರದ ಸ್ವಾಧೀನಕ್ಕೆ ಬಂದ ಕೂಡಲೇ ರಂಗ ಮಂದಿರವನ್ನು ಕಟ್ಟಲಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ಕಾರ ಮನಸ್ಸು ಮಾಡಿದರೆ ಒಂದೇ ದಿವಸದಲ್ಲಿ ಸಂಬಂಧಪಟ್ಟ ನಿವೇಶನವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ? ಗುಲ್ಬರ್ಗಾ ಜಿಲ್ಲೆಯನ್ನು ಬ್ಯಾಕ್‌ವರ್ಡ್ ಏರಿಯಾವನ್ನಾಗಿಯೇ ಇಡಬೇಕೆಂದು ಮಾಡಿದ್ದೀರಾ ? ಮೈಸೂರಿನಲ್ಲಿ ೬ ಕೋಟಿ ರೂಪಾಯಿ ವೆಚ್ಚದಲ್ಲಿ ಕಲಾ ಮಂದಿರವನ್ನು ಕಟ್ಟುವುದಕ್ಕಾಗುತ್ತದೆ. ನಮ್ಮ ಗುಲ್ಬರ್ಗಾ ಜಿಲ್ಲೆಗೆ ಒಂದು ರಂಗ ಮಂದಿರವನ್ನು ಕಟ್ಟುವುದಕ್ಕಾಗುವುದಿಲ್ಲವೇ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರು ಪ್ರತಿ ಮಾತನ್ನು ಸ್ವಲ್ಪ ಮಟ್ಟಿಗೆ ತಿರುಚಿ ಮಾತನಾಡುತ್ತಿದ್ದಾರೆ. ಅವರ ಸರ್ಕಾರ ಇದ್ದಾಗಲೇ ಮೈಸೂರಿನಲ್ಲಿ ಒಂದು ಕಲಾ ಮಂದಿರವನ್ನು ಕಟ್ಟುವುದಕ್ಕೆ ನಿರ್ಣಯವನ್ನು ಮಾಡಿದ್ದರು. ಆ ಕಲಾ ಮಂದಿರವನ್ನು ಕಟ್ಟುವುದಕ್ಕೆ ಒಂದು ಕೋಟಿ ರೂಪಾಯಿಗಳ ಒಂದು ಅಂದಾಜು ಮಾಡಲಾಗಿತ್ತು. ಕಾಲ ವಿಳಂಬವಾದುದರಿಂದ ಒಂದು ಕೋಟಿ ರೂಪಾಯಿಗಳ ಅಂದಾಜು ವೆಚ್ಚ ೬ ಕೋಟಿ ರೂಪಾಯಿ ಆಯಿತು ಅಷ್ಟೇ. ಬೇರೆ ಜಿಲ್ಲೆಗಳಲ್ಲಿ ಮಾಡಿಸಬೇಕಾದ ಕೆಲಸಗಳಿಗೆ ಹಣವನ್ನು ಕಡಿಮೆ ಮಾಡಿ ಆ ಹಣವನ್ನು ಮೈಸೂರು ನಗರದಲ್ಲಿ ಕಲಾ ಮಂದಿರವನ್ನು ಕಟ್ಟುವುದಕ್ಕೆ ಉಪಯೋಗ ಮಾಡಿಲ್ಲ. ಗುಲ್ಬರ್ಗಾ ನಗರ ಅತ್ಯಂತ ಪ್ರಾಮುಖ್ಯವಾದ ಜಿಲ್ಲಾ ಕೇಂದ್ರವಾಗಿದೆ. ಈ ಕೇಂದ್ರದಲ್ಲಿ ರಂಗ ಮಂದಿರವಾಗಬೇಕಾದುದು ಬಹಳ ಅವಶ್ಯಕವಾದುದಾಗಿದೆ. ಮತ್ತೆ ಗುಲ್ಬರ್ಗಾದಲ್ಲಿ ಇರುವ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಉಪ ನಿರ್ದೇಶಕರು ಇಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಹೇಮಪ್ಪ ಎನ್ನುವ ಹಿಂದುಳಿದ ಜನಾಂಗಕ್ಕೆ ಸೇರಿದ ಒಬ್ಬರನ್ನು ಉಪ ನಿರ್ದೇಶಕರ ಹುದ್ದೆಗೆ ನೇಮಕ ಮಾಡಿ ನಾಲ್ಕೈದು ತಿಂಗಳ ಮೊದಲೇ ಕಳುಹಿಸಲಾಗಿದೆ, ಇವರ ಜೊತೆಯಲ್ಲಿ ಗುರುಪ್ರಸಾದ್ ಎನ್ನುವವರೂ ಸಹ ಅಲ್ಲಿ ಕೆಲಸ ಮಾಡು

ತ್ತಿದ್ದಾರೆ. ಗುಲ್ಬರ್ಗಾ ನಗರದಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರ ಹುದ್ದೆ ಖಾಲಿ ಇದೆ ಎಂದು ಯಾರೋ ತಪ್ಪು ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಟ್ಟಿರಬಹುದು. ಹೇಮಪ್ಪ ಮತ್ತು ಗುರುಪ್ರಸಾದ್ ಎನ್ನುವವರನ್ನು ಈಗಾಗಲೇ ಅಲ್ಲಿಗೆ ಹಾಕಲಾಗಿದೆ.

ಶ್ರೀ ರಮೇಶ್ ಕುಮಾರ್.—ಸನ್ಮಾನ್ಯ ಅಧ್ಯಕ್ಷರೇ, ಬಿ.ಡಿ.ಎ. ಒಂದು ದೊಡ್ಡ ಸಂಸ್ಥೆಯಾಗಿದೆ. ಅಲ್ಲಿ ಕೆಲಸ ಮಾಡತಕ್ಕ ನೌಕರಶಾಹಿ ಯಾವ ರೀತಿ ಇದ್ದಾರೆಂದು ಹೇಳುವುದಕ್ಕೆ ಒಂದು ಉದಾಹರಣೆ ಮೂಲಕ ಹೇಳುತ್ತೇನೆ. ಪ್ರಾಣಿಗಳಲ್ಲಿ ಪೆಟ್ ಅನಿಮಲ್ಸ್ (ಮುದ್ದಿನ ಪ್ರಾಣಿ) ಡೊಮೆಸ್ಟಿಕ್ ಅನಿಮಲ್ಸ್, ವೈಲ್ಡ್ ಅನಿಮಲ್ಸ್ ಎಂದು ಮೂರು ಪ್ರಕಾರ ಇವೆ. ವೈಲ್ಡ್ ಅನಿಮಲ್ಸ್ ಆ್ಯಟಿಟ್ಯೂಡ್ ಏನಿದೆ ಅದನ್ನು ಸರಿಪಡಿಸಿ ಕನಿಷ್ಠ ಡೊಮೆಸ್ಟಿಕ್ ಅನಿಮಲ್ಸ್‌ನಲ್ಲಿರತಕ್ಕ ಆ್ಯಟಿಟ್ಯೂಡ್ ನ್ನಾದರೂ ತಂದರೆ ಜನತೆಗೆ ಬಹಳ ಉಪಕಾರವನ್ನು ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಈ ಬಿ.ಡಿ.ಎ., ನಲ್ಲಿ ಕೆಲಸ ಮಾಡುತ್ತಿರುವ ನೌಕರ ಶಾಹಿಗಳಲ್ಲಿ ವೈಲ್ಡ್ ಅನಿಮಲ್ಸ್ ಆ್ಯಟಿಟ್ಯೂಡ್ ಏನಿದೆ ಇದನ್ನು ಯಾವಾಗ ಸರಿಪಡಿಸುತ್ತೀರಾ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು ?

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ದೊಡ್ಡದಾದ ಒಂದು ವ್ಯಾಪ್ತಿಯಲ್ಲಿ ನಮ್ಮ ಪ್ರಾಧಿಕಾರದ ನೌಕರರ ಮೇಲೆ ಆಪಾದನೆಯನ್ನು ಮಾಡಿದ್ದಾರೆ. ಬಹುಶಃ ಇಂಥ ಆಪಾದನೆ ಮಾಡಬೇಕಾದರೆ ಅಂಥ ದೊಡ್ಡ ತಪ್ಪುಗಳು ನಮ್ಮ ಪ್ರಾಧಿಕಾರದಲ್ಲಿ ಆಗಿರಬಹುದು. ಮಾನ್ಯ ಬಸವಲಿಂಗಪ್ಪನವರೂ ಸಹ ಇದರ ಬಗ್ಗೆ ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮುಂದೆ ಪ್ರಾಧಿಕಾರದಲ್ಲಿ ಕೆಲಸ ಮಾಡುವ ನೌಕರರು ಸೌಜನ್ಯದಿಂದ ಸಾರ್ವಜನಿಕರೊಡನೆ ವರ್ತಿಸಬೇಕೆಂದು ಹೇಳುತ್ತೇನೆ. ಭ್ರಷ್ಟಾಚಾರ ಈ ಪ್ರಾಧಿಕಾರ ದಲ್ಲಿ ನಡೆದಿದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಕೆಲವು ನೌಕರರು ಬಹಳ ಬುದ್ಧಿವಂತಿಕೆಯಿಂದ ಭ್ರಷ್ಟಾಚಾರವನ್ನು ಮಾಡಿ ನಯವಂಚಕತನ ಮಾಡುತ್ತಾರೆ. ಕೆಲವು ನೌಕರರು ಹಣವನ್ನು ತೆಗೆದು ಕೊಂಡು ಕೆಲಸವನ್ನೂ ಮಾಡಿಕೊಡದೇ ಸಾರ್ವಜನಿಕರಿಗೆ ಮೋಸ ಮಾಡಿರುವ ಬಗ್ಗೆಯೂ ನನಗೆ ಗೊತ್ತಿದೆ. ಈ ಪ್ರಾಧಿಕಾರದಲ್ಲಿ ಕೆಲವು ಹೆಗ್ಗಣಗಳು ಸೇರಿಕೊಂಡಿವೆ. ಈ ಹೆಗ್ಗಣಗಳ ಹಾವಳಿಯನ್ನು ಕಡಿಮೆ ಮಾಡುವುದಕ್ಕೆ ನಾವು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮೊದಲು ಈ ಪ್ರಾಧಿಕಾರದ ಸಿಸ್ಟಮ್ಸ್, ನಿಯಮಾವಳಿಗಳು ಸರಿಯಾದ ರೀತಿಯಲ್ಲಿ ಇರದೇ ಇದ್ದ ಕಾರಣ ಭ್ರಷ್ಟಾಚಾರ ಮಾಡುವುದಕ್ಕೆ ಒಂದು ಅವಕಾಶ ಆಗಿತ್ತು. ಆದರೆ, ನಮ್ಮ ಜನತಾ ಸರ್ಕಾರ ಬಂದ ಮೇಲೆ ಮೊದಲಿಂದ ಇಲ್ಲಿಯವರೆಗೂ ಎಲ್ಲಾ ಲೆಕ್ಕಪತ್ರಗಳನು ಸರಿಯಾದ ರೀತಿಯಲ್ಲಿ ಇಡಿಸಿದ್ದೇವೆ. ೧೯೮೭ರವರೆಗೂ ಲೆಕ್ಕಪತ್ರಗಳು ಕ್ಲಿಯರ್ ಆಗಿವೆ. ಯಾರು ಬೇಕಾದರೂ ಹೋಗಿ ಡಿ.ಸಿ.ಬಿ ಯನ್ನು ನೋಡುವುದಕ್ಕೆ ಸಾಧ್ಯ ಇದೆ. ನಿಯಮಾವಳಿಗಳನ್ನು ನಾವು ರಚನೆ ಮಾಡಿ ಅಲ್ಲಿರತಕ್ಕ ಅಧಿಕಾರಿಗಳ ಅಧಿಕಾರವನ್ನು ಮೊಟಕುಗೊಳಿಸುವುದರ ಮೂಲಕ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುವಂತೆ ಮಾಡಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಹೆಚ್ಚು ಕೆಲಸ ಗಳನ್ನು ಈ ಪ್ರಾಧಿಕಾರದಲ್ಲಿ ಕೊಡಲಾಗಿದೆ. ಅಮಾನವೀಯವಾಗಿ ಮಾಡುವಂಥ ಕೆಲಸಗಳು ಈಗ ಕಡಿಮೆಯಾಗಿವೆ. ನೌಕರರು ಸಜ್ಜನರಾಗಿ ಕೆಲಸ ಮಾಡುವಂತೆ ಏರ್ಪಾಟು ಮಾಡುತ್ತೇವೆ

ಶ್ರೀ ಬಿ. ಲಕ್ಕಪ್ಪ.—ನಮಗೆ ಅವಕಾಶ ಕೊಡಬೇಕಾಗಿತ್ತು...

ಅಧ್ಯಕ್ಷರು.—ಮೊದಲು ನಿಮ್ಮ ವಿಪ್‌ರವರು ನಿಮ್ಮ ಹೆಸರನ್ನು ಕೊಡಬೇಕು. ಅಂತಹವರಿಗೆ ಮಾತ್ರ ಅವಕಾಶ ಇರುತ್ತದೆ ಅದನ್ನು ಬಿಟ್ಟು ಆ ಕಡೆಯಿಂದ ೧೦ ಜನರು ಈ ಕಡೆಯಿಂದ ೧೦ ಜನರು ಎದ್ದು ನಿಂತು ಕೈ ಎತ್ತಿದ್ದರೆ ನಾನು ಏನು ಮಾಡಬೇಕು ?

ಶ್ರೀ ಶಿವಾನಂದ ಕೌಜಲಗಿ.—ನಮಗೆ ಅವಕಾಶ ಸಿಕ್ಕಿಲ್ಲ. ನಾವು ಮಾತನಾಡುವುದು ಕಡಿಮೆ ಬರೀ ಆ ಕಡೆಯವರಿಗೆ ಹೆಚ್ಚು ಅವಕಾಶಗಳನ್ನು ಕೊಡುತ್ತಿದ್ದೀರಿ...

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು, ತಮಗೆ ಅವಕಾಶವನ್ನು ಕೊಡು ತ್ತೇನೆ.

ಶ್ರೀ ಶಿವಾನಂದ ಕೌಜಲಗಿ.—ನಾವು ಒಂದು ಘಂಟೆಯಿಂದ ತಮ್ಮಲ್ಲಿ ಅವಕಾಶ ಕೊಡಿ ಎಂದು ಕೇಳುತ್ತಾ ಇದ್ದೇವೆ. ಆದರೂ ಕೂಡ ನಮಗೆ ತಾವು ಅವಕಾಶವನ್ನು ಕೊಡುತ್ತಾ ಇಲ್ಲ.

ಅಧ್ಯಕ್ಷರು.—ಆಯಿತು ತಾವು ದಯಮಾಡಿ ಕುಳಿತುಕೊಳ್ಳಿ. ತಮಗೂ ಅವಕಾಶವನ್ನು ಕೊಡುತ್ತೇನೆ. ಈಗ ಲಕ್ಕಪ್ಪನವರೇ ತಮ್ಮ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನಗಳ ಹಂಚಿಕೆಯಲ್ಲಿ ಒಂದು ವಿಶೇಷವಾದಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅವರು ನಿವೇಶನಗಳನ್ನು ಕೊಡುವಾಗ ೨% ಪರ್ಸೆಂಟ್‌ನಷ್ಟು ಸೈಟ್‌ಗಳನ್ನು, ಸಾಹಿತಿಗಳು, ಕಲಾವಿದರು, ಲೇಖಕರು, ಮುಂತಾಗಿ ವಿಶೇಷವಾದಂಥ ವ್ಯಕ್ತಿತ್ವವುಳ್ಳ ಜನರಿಗೆ ಕೊಡುವುದಕ್ಕೋಸ್ಕರವಾಗಿ ಇಟ್ಟಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ಯಾರಿಗೆ ಈ ಸೈಟ್‌ಗಳು ಸಿಗಬೇಕಾಗಿತ್ತೋ ಅವರಿಗೆ ಸಿಗುತ್ತಾ ಇಲ್ಲ. ಆ ಸೈಟ್‌ಗಳು ಬೆಂಗಳೂರಿನಲ್ಲಿರತಕ್ಕಂಥ ಮಾರ್ವಾಡಿಗಳ ಪಾಲಾಗಿದೆ. ಒಂದು ಸೈಟ್‌ಗೆ ೨೫ ಸಾವಿರ ರೂ. ಗಳನ್ನು ಕೊಡುವುದಾದರೆ ಅದರಲ್ಲಿ ಅರ್ಧಕ್ಕಿಂತ ಹೆಚ್ಚಿಗೆ ಹಣವನ್ನು ಅಲ್ಲಿ ಸದಸ್ಯರಾಗಿರತಕ್ಕವರಿಗೆ ಕೊಡಬೇಕಾಗಿದೆ ಆದುದರಿಂದ ಈ ವಿಶೇಷ ವ್ಯಕ್ತಿಗಳಿಗೆ ಕೊಡುವಂಥ ಒಂದು ಅವಕಾಶವನ್ನು ರದ್ದುಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಅಂಡಮಾನ್ ನಿಕೋಬಾರ್‌ನಲ್ಲಿ ಒಂದು ಕನ್ನಡ ಸಂಘ ಇದೆ. ಅಲ್ಲಿ ವಾಸಿಸುತ್ತಿರುವ ಕನ್ನಡಿಗರು ಸೇರಿ ಸ್ಥಾಪನೆ ಮಾಡಿಕೊಂಡಿರುವ ಸಂಘ ಅದಾಗಿದೆ. ಅವರು ತಮ್ಮ ಸಂಘಕ್ಕೆ ಒಂದು ಕಟ್ಟಡವನ್ನು ಕಟ್ಟಲು ಪ್ರಾರಂಭ ಮಾಡಿ ಅದನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ. ನಮ್ಮ ವಿಧಾನ ಮಂಡಲದ ಸಮಿತಿಯವರು ಆ ಪ್ರದೇಶಕ್ಕೆ ಭೇಟಿ ಕೊಟ್ಟಾಗಲೆಲ್ಲಾ ಅವರು ತಮಗೆ ಕಟ್ಟಡವನ್ನು ಪೂರ್ತಿಗೊಳಿಸಲು ಸರಕಾರದ ವತಿಯಿಂದ ನೆರವು ಕೊಡಿಸಬೇಕೆಂದು ಕೇಳಿಕೊಂಡಿದ್ದಾರೆ. ಆದುದರಿಂದ ಮಾನ್ಯ ಸಚಿವರು ಆ ಸಂಘದವರಿಗೆ ಧನಸಹಾಯವನ್ನು ಒದಗಿಸಿಕೊಡಬೇಕಾಗಿ ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ,

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಮಯ ಬಹಳ ಆಗಿದೆ ಈ ಬೇಡಿಕೆ ಮೇಲೆ ಚರ್ಚೆ ಮುಕ್ತಾಯ ಆಗಿ, ಇನ್ನೂ ಇಬ್ಬರು ಮಂತ್ರಿಯವರು ಉತ್ತರವನ್ನು ಕೊಡಬೇಕಾಗಿದೆ, ನಾವು ಇಲ್ಲಿ ಬೆಳಿಗ್ಗೆ ೯ ಗಂಟೆಯಿಂದ ಕುಳಿತುಕೊಂಡಿದ್ದೇವೆ ಮಾನ್ಯ ಸದಸ್ಯರುಗಳು ಹೊರಗೆ ಹೋಗುತ್ತಾರೆ, ಬರುತ್ತಾರೆ. ಆದರೆ ನಾವು ಇಲ್ಲಿಯೇ ಕುಳಿತುಕೊಂಡಿರ ಬೇಕಾಗುತ್ತದೆ. ಆದುದರಿಂದ ದಯಮಾಡಿ ಬೇಗನೆ ಮುಗಿಸಬೇಕು.

ಅಧ್ಯಕ್ಷರು.—ಲಕ್ಕಪ್ಪನವರೇ ಬೇಗನೆ ಮುಗಿಸಿ...,

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ನಾವೂ ಕೂಡ ಇಲ್ಲಿ ಕುಳಿತುಕೊಂಡಿರುತ್ತೇವೆ. ನಮ್ಮ ಸಮಸ್ಯೆಗಳ ಬಗ್ಗೆ ನಾವು ಕೇಳಬೇಕಾಗುತ್ತದೆ. ಮಾನ್ಯ ಲಕ್ಷ್ಮೀಸಾಗರ್‌ರವರು ಅಷ್ಟು ಲಘುವಾಗಿ ನಮ್ಮ ಬಗ್ಗೆ ಮಾತನಾಡಬಾರದು.

ಅಧ್ಯಕ್ಷರು.—ಆಯಿತು, ಬೇಗ ಮುಗಿಸಿ, ನೀವು ಶಿಫ್ಟ್ ಪ್ರಕಾರ ಇಲ್ಲಿ ಇರಬಹುದು. ಆದರೆ ಅವರು ಇಲ್ಲಿಯೇ ಕುಳಿತಿರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಬೇಗನೆ ಮುಗಿಸಿ ಎಂದು ಹೇಳಬಹುದು. ಆದರೆ ತಮಾಷೆ ಮಾಡಿದ ಹಾಗೆ ಹೇಳುತ್ತಿದ್ದಾರೆ ಅವರು.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಲಕ್ಷ್ಮೀಸಾಗರ್ ರವರು ಹೇಳಿದ ಹಾಗೆ ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ...

ಅಧ್ಯಕ್ಷರು.—ಸ್ವಲ್ಪ ಸ್ಪೋರ್ಟಿವ್ ಆಗಿ ಇರಬೇಕು... ಲಕ್ಕಪ್ಪನವರು ತಮ್ಮ ಮಾತನ್ನು ಹೇಳಿ ಮುಗಿಸಿ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಕಳೆದ ಸಾರಿ ಸದನದಲ್ಲಿ ನಾನು ಟೂರಿಸಂ ಡೆವಲಪ್‌ಮೆಂಟ್ ಕಾರ್ಪೊರೇಶನ್‌ಗೆ ಸಂಬಂಧಪಟ್ಟ ಹಾಗೆ ಅಲ್ಲಿ ಆಗಿರತಕ್ಕಂಥ ಅವ್ಯವಹಾರಗಳ ಬಗ್ಗೆ ಕೆಲವು ವಿಷಯಗಳನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೆನು, ಅದಕ್ಕೆ ಅವರು ಆ ಕುರಿತು ವಿಚಾರಣೆ ಮಾಡುತ್ತೇನೆ ಎಂದು ಹೇಳಿದ್ದರು. ಆ ಪ್ರಕಾರ ಸದರಿ ಎಂ. ಡಿ. ಯನ್ನು ಅಲ್ಲಿಂದ ವರ್ಗಾವಣೆ ಮಾಡಿದ್ದಾರೆ, ಅದಕ್ಕಾಗಿ ಅಂದರೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಕ್ಕಾಗಿ ಸಚಿವರನ್ನು ಅಭಿನಂದಿಸುತ್ತೇನೆ.

ಆದರೆ ಅಲ್ಲಿ ಏನಾಗಿದೆ ಅಂದರೆ, ಅವರ ಮೇಲೆ ಆಗಿರತಕ್ಕಂಥ ಅಪಾದನೆಗಳ ಬಗ್ಗೆ ವಿಚಾರಣೆಯನ್ನು ತಾವು ಮಾಡಿದ್ದೀರಿ. ಅಲ್ಲಿಯ ಕೆಲವರು ಆ ವ್ಯಕ್ತಿಯ ಇಚ್ಛೆಗೆ ಅನುಸಾರವಾಗಿ ನಡೆದುಕೊಂಡಿಲ್ಲ ಎಂದು ಹೇಳಿ ಸುಮಾರು ೧೫ ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದವರನ್ನು ಕೂಡ ಯಾವುದೋ ಕಾರಣಕ್ಕಾಗಿ ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದಾರೆ. ಒಂದು ವೇಳೆ ಹಾಗೆ ಸಸ್ಪೆಂಡ್ ಮಾಡಿದ್ದರೆ ನಿಗದಿತ ಅವಧಿಯೊಳಗಾಗಿ ಅವರ ವಿಚಾರಣೆ ಮಾಡಿ ಮುಗಿಸ ಬೇಕಾಗುತ್ತದೆ. ಮತ್ತು ಅಪಾದನೆಯು ಸಾಬೀತು ಆದರೆ ಸೂಕ್ತ ಕ್ರಮಂಗಳನ್ನು ತೆಗೆದುಕೊಂಡು ಅವರನ್ನು ರಿವೋಕ್ ಮಾಡಬೇಕಾಗುತ್ತದೆ. ನಿಗದಿತ ಅವಧಿಯಲ್ಲಿ ವಿಚಾರಣೆ ಆಗದಿದ್ದರೆ ಅವರನ್ನು ರಿವೋಕ್ ಮಾಡಿ ನಂತರ ವಿಚಾರಣೆ ನಡೆಸ ಬೇಕೆಂದು ಕಾಣುತ್ತದೆ, ಏನಿದ್ದರೂ ಈ ಕುರಿತು ಯಾರನ್ನು ಸಸ್ಪೆಂಡ್ ಮಾಡಿ ಇನ್ನೂ ವಿಚಾರಣೆ ಮಾಡದೇ ಹಾಗೆಯೇ ಮುಂದುವರಿಸಿದ್ದಾರೆ, ಅಂತಹವರನ್ನು ಮಾನವೀಯತೆಯ ದೃಷ್ಟಿಯಿಂದಾದರೂ ಪುನಃ ರಿವೋಕ್ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಮೊದಲನೆ ಪ್ರಶ್ನೆಗೆ ನಾನು ಸ್ಪಷ್ಟೀಕರಣ ಕೊಡುವುದಾದರೆ ಅವರು ಕೇಳಿರತಕ್ಕಂಥ ಕಲೆಗಾರರಿಗೆ, ಸಾಹಿತಿಗಳಿಗೆ, ರಾಷ್ಟ್ರೀಯ ಕ್ರೀಡಾಪಟುಗಳಿಗೆ, ಮತ್ತು ಸ್ವಾತಂತ್ರ ಹೋರಾಟಗಾರರಿಗೆ ಇನ್ನಿತರ ಈ ವರ್ಗದಲ್ಲಿ ತಮ್ಮ ಬದುಕನ್ನು ಸವೆಸಿರುವವರಿಗೆ ಸುಮಾರು ೧೩೫ ನಿವೇಶನಗಳನ್ನು ಕೊಟ್ಟಿದ್ದೇನೆ ಇದರಲ್ಲಿ ನಾವು ಶೇಕಡ ೫೦ರಷ್ಟು ಸೈಟ್‌ಗಳನ್ನು ಹರಿಜನ ಮತ್ತು ಗಿರಿಜನರಿಗೆ, ೫ ಪರ್ಸೆಂಟ್‌ನಷ್ಟು ಸ್ವಾತಂತ್ರ ಹೋರಾಟಗಾರರಿಗೆ ಇನ್ನುಳಿದ ೨೦ ಪರ್ಸೆಂಟ್‌ನಷ್ಟು ಅಂಗವಿಕಲರಿಗೆ ಕೊಟ್ಟಿದ್ದೇವೆ ಇನ್ನು ೨೫ ಪರ್ಸೆಂಟ್ ಬೇರೆ ಬೇರೆ ರೀತಿಯ ಕಲೆಗಾರರಿಗೆ, ಸಮಾಜ ಸೇವಕರಿಗೆ, ಸಾಹಿತಿಗಳಿಗೆ, ಕೊಡತಕ್ಕಂಥ ನಿರ್ಣಯವನ್ನು ಮಾಡಿದ್ದೇವೆ ಈ ರೀತಿ ೧೩೫ ಸೈಟ್‌ಗಳನ್ನು ನಾವು ಹಂಚಿಕೆ ಮಾಡಿದ್ದೇವೆ ಈ ೧೩೫ ಸೈಟ್‌ಗಳನ್ನು ಮಾರವಾಡಿಗಳಿಗೆ ಮಾರಿಕೊಂಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು, ಯಾರೂ ಮಾರವಾಡಿಗಳಿಗೆ ಮಾರಿಕೊಂಡಿಲ್ಲ ಯಾರೋ ಒಬ್ಬರು ಅನರ್ಹವ್ಯಕ್ತಿ ಸುಳ್ಳು ಮಾಹಿತಿ ಕೊಟ್ಟು ನಿವೇಶನ ಪಡೆದಿದ್ದರೆ ಅಂತಹವರ ಬಗ್ಗೆ ನಾನು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ ಮಾನ್ಯ ಸದಸ್ಯರು ಮಾಹಿತಿ ಇದ್ದರೆ ನನಗೆ ಕೊಡಲಿ ಇನ್ನು ಎರಡನೇ ಪ್ರಶ್ನೆಗೆ ಸ್ಪಷ್ಟೀಕರಣ ಕೊಡಬಯಸುವುದೇನೆಂದರೆ ಅಂಡಮಾನ್‌ನಲ್ಲಿರತಕ್ಕಂಥ ಕನ್ನಡ ಸಂಘದವರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಅವರು ಅವರಲ್ಲಿರತಕ್ಕಂಥ ನೀಲಿ ನಕಾಸೆ ನಮಗೆ ಕಳುಹಿಸಿಕೊಡಲಿ ಅರ್ಧಂಬರ್ಧವಾಗಿರತಕ್ಕಂಥ ಕಟ್ಟಡದ ಕೆಲಸವನ್ನು ಪೂರ್ತಿಗೊಳಿಸುವುದಕ್ಕೆ ಹೊರನಾಡು ಕನ್ನಡಿಗರಿಗಾಗಿ ಮೀಸಲಿಟ್ಟಿರುವ ಹಣದಲ್ಲಿ ಸಹಾಯ ಮಾಡುವುದಕ್ಕೆ ಸರ್ಕಾರ ತಯಾರಾಗಿದೆ ಇನ್ನು ಮಾನ್ಯ ಸದಸ್ಯರ ಮೂರನೇ ಪ್ರಶ್ನೆಗೆ ನಾನು ಸ್ಪಷ್ಟೀಕರಣ ಕೊಡುವುದೇನೆಂದರೆ ಈ ಸದನದಲ್ಲಿ ಅಭಯ ಕೊಟ್ಟಂತೆ ನಮ್ಮ ಇಲಾಖಾ ಕಾರ್ಯದರ್ಶಿಗಳ ನೇತೃತ್ವದಲ್ಲಿ ಒಂದು ವಿಚಾರಣಾ ಆಯೋಗವನ್ನು ರಚನೆ ಮಾಡಿ ಕಂಪನಿ ಆಕ್ಟ್ ನಿಯಮಗಳ ಪ್ರಕಾರ ಏನಿದೆ ಆ ಪ್ರಕಾರ ವರದಿಯನ್ನು ಕೊಡಬೇಕೆಂದು ಹೇಳಿದ್ದೇವೆ. ಅವರಿಗೆ ಸಂಬಂಧಪಟ್ಟ ಕಡತಗಳನ್ನು ಕಳುಹಿಸಿದ್ದಾರೆ ಕಾರ್ಯದರ್ಶಿಗಳು ವಿಚಾರಣೆ ಬಗ್ಗೆ ಎಲ್ಲಾ ವಿಷಯಂಗಳನ್ನು ವರದಿ ಮಾಡುತ್ತಾರೆ ಅವರು ಕಡತಗಳನ್ನು ನೋಡಿ ಅವರಿಗೆ ಎಂತಹ ಒಂದು ಶಿಕ್ಷೆ ಕೊಡಬೇಕೆಂದು ತಿಳಿಸುತ್ತಾರೆ ಈಗಾಗಲೇ ನಾವು ಎನ್‌ಕ್ವೈರಿ ಮಾಡುತ್ತಿದ್ದೇವೆ ಇನ್ನು ಸಸ್‌ಪೆಂಡ್ ಆಗಿರುವಂತಹ ಅಧಿಕಾರಿಗಳು ಯಾರು ಇದ್ದಾರೆ ಅವರನ್ನು ಸಸ್‌ಪೆಂಡ್ ಮಾಡಿ ೮ ತಿಂಗಳಾಗಿದೆ ಇನ್ನು ರಿವೋಕ್ ಮಾಡಿಲ್ಲವೆಂದು ತಿಳಿಸಿದ್ದಾರೆ ಆ ಬಗ್ಗೆ ಇಲಾಖಾ ಕಾರ್ಯದರ್ಶಿಗಳನ್ನು ಕರೆದು ಅವರ ಜೊತೆಯಲ್ಲಿ ಮಾತನಾಡಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ ಪ್ಲಾನ್ ಮತ್ತು ಎಸ್ಟಿಮೇಟ್‌ನ್ನೂ ಅವರು ಈಗಾಗಲೆ ಕಳುಹಿಸಿದ್ದಾರೆ.

ಶ್ರೀ ಎಸ್.ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ ಬೈಲಹೊಂಗಲದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮನ ಸಮಾಧಿ ಬಳಿ ಮತ್ತು ಸಮಾಧಿ ಸುತ್ತಲು ದೀಪದ ವರ್ಣಾಲಂಕಾರ ಮಾಡುವ ಕೆಲಸ ಕೈಗೊಳ್ಳುವರೇ ಮತ್ತು ಶ್ರೀ ಸಂಗೊಳ್ಳಿ ರಾಯಣ್ಣನ ನೆನಪಿನಾರ್ಥವಾಗಿ ಒಂದು ಟ್ರಸ್ಟ್ ಮಾಡಿದ್ದಾರೆ. ಆ ಟ್ರಸ್ಟ್‌ಗೆ ಒಂದು ಜಾಗವನ್ನು ಕೊಡಲಿಕ್ಕೆ ಸರ್ಕಾರದವರು ಮನಸ್ಸು ಮಾಡುತ್ತಾರೆಯೇ ? ಅಲ್ಲಿ ಒಂದು ಬಯಲು ರಂಗಮಂದಿರ ಕಟ್ಟಲಿಕ್ಕೆ ಅವಕಾಶವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಬೈಲಹೊಂಗಲದ ತಾಲ್ಲೂಕಿನಲ್ಲಿ ಒಂದು ಬಯಲು ರಂಗ ಮಂದಿರವನ್ನು ಕಟ್ಟಲು ಸುಮಾರು ೫೦ ಸಾವಿರ ರೂಪಾಯಿಗಳನ್ನು ಕೊಡಲಿಕ್ಕೆ ಸಾಧ್ಯವಿದೆ.

ಅದನ್ನು ಮಂಜೂರು ಮಾಡಿಕೊಡಲಾಗುವುದು ಮತ್ತು ರಾಣಿ ಕಿತ್ತೂರು ಚೆನ್ನಮ್ಮನ ಸಮಾಧಿ ಸುತ್ತಲು ದೀಪಾಲಂಕಾರ ಮಾಡುವ ಸಲುವಾಗಿ ಈ ವರ್ಷ ಆಗುವುದಿಲ್ಲ ಮುಂದಿನ ವರ್ಷ ಮಂಜೂರಾತಿಯನ್ನು ಕೊಡುತ್ತೇನೆಂದು ಮಾನ್ಯ ಸದಸ್ಯರಿಗೆ ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಅಧ್ಯಕ್ಷರು.—ಉತ್ತರ ಮುಕ್ತಾಯವಾಯಿತು ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವೇನೆಂದರೆ.—

"೩೧–೩–೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೧೪ ಮತ್ತು ೨೯ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ ೧೪ ಕಲೆ ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೦೧,೨೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೨೯ ಪ್ರವಾಸೋದ್ಯಮ ವಾರ್ತಾ ಮತ್ತು ಬೆಂಗಳೂರು ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರವಾಸೋದ್ಯಮ ವಾರ್ತಾ ಮತ್ತು ಸಂದಾಯ ಬೆಂಗಳೂರು ಅಭಿವೃದ್ಧಿ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೬೧,೨೯,೦೦೦ ರೂಪಾಯಿಗಳಿಗೆ ಮೀರದಂತೆ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪೨,೦೦,೦೦೦ ರೂಪಾಯಿಗಳಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಧ್ಯಕ್ಷರು.—ಈಗ ಮಾನ್ಯ ಆರೋಗ್ಯ ಸಚಿವರ ಉತ್ತರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲ ಅಧ್ಯಕ್ಷರೇ ಈಗ ಸಾಕಷ್ಟು ಸಮಯವಾಗಿದೆ. ನಾಳೆ ಬೆಳಿಗ್ಗೆ ಬೇಕಾದರೆ ೯–೦೦ ಗಂಟೆಗೆ ಸೇರೋಣ. ನಾವು ಬೆಳಿಗ್ಗೆ ೯ ಗಂಟೆಗೆ ಬಂದಿದ್ದೇವೆ. ಈಗಾಗಲೇ ೮–೨೦ ಗಂಟೆಗಳಾಗಿದೆ......

ಅಧ್ಯಕ್ಷರು.—ಬಿ. ಎ. ಸಿ. ಪ್ರಕಾರ ಇವತ್ತು ಮುಗಿಲೇಬೇಕು, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಿ. ಎ. ಸಿ ಪ್ರಕಾರ ಇಲ್ಲಿ ನಡೆದಿದ್ದರೆ ಇಷ್ಟರ ಸಮಯ ಕುಳಿತುಕೊಳ್ಳುವ ಅವಕಾಶ ಇದರಲ್ಲಿ ನಾಳೆ ಬೆಳಿಗ್ಗೆ ಉತ್ತರ ಕೊಡಲಿ ಈ ಇಲಾಖೆಯಲ್ಲಿ ಪಾಲಿಸಿ ಮ್ಯಾಟರ್ಸ್ ಇವೆ. ಅವೆಲ್ಲವನ್ನು ಈಗ ಚರ್ಚೆ ಮಾಡುವುದಕ್ಕಾಗುವುದಿಲ್ಲ...

ಅಧ್ಯಕ್ಷರು.—ಇಲ್ಲ ಇವತ್ತು ಮುಗಿಸಲೇಬೇಕು ದಯಮಾಡಿ ಸಹಕರಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲ ಅಧ್ಯಕ್ಷರೇ ಆಗುವುದಿಲ್ಲ. ತಮಗೆ ನಡೆಸಲೇಬೇಕೆಂದು ಇದ್ದರೆ ನಡೆಸಿಕೊಂಡು ಹೋಗಿ ನಿಮಗೆಬಹುತ ಇದೆ.

ಅಧ್ಯಕ್ಷರು.— ನನ್ನ ಅಭಿಪ್ರಾಯವೇನಿಲ್ಲ. ಸಭೆಯು ಬಹುಮತದ ಅಭಿಪ್ರಾಯ ಹೇಗಿದ್ದರೆ ಹಾಗೆ ಮಾಡೋಣ.

ಶ್ರೀ ಎ. ಲಕ್ಷ್ಮೀಸಾಗರ್.— ನಾಳೆ ಬೆಳಿಗ್ಗೆ ೮-೦೦ ಗಂಟೆಗೆ ಆಗುವುದಿಲ್ಲ. ದಯವಾಡಿ ಸಹಕರಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇಲ್ಲ ಅಧ್ಯಕ್ಷರೇ, ಆಗುವುದಿಲ್ಲ ನಾಳೆ ಬೇಕಾದರೆ ಕುಳಿತು ಕೊಳ್ಳೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಬೇಗ ಮುಗಿಸಬಿಡುತ್ತೇವೆ. ದಯವಾಡಿ ಸಹಕಾರ ಮಾಡಿ.

ಅಧ್ಯಕ್ಷರು.—೯ ಗಂಟೆಗೆ ಮುಗಿಸೋಣ. ನೀವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೆಳಿಗ್ಗೆ ೯ ಗಂಟೆಗೆ ಬಂದರೆ ರಾತ್ರಿ ೯ ಗಂಟೆವರೆಗೂ ಇರುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ರಾತ್ರಿ ೧೨ ಗಂಟೆಯವರಗೆ ಪಾರ್ಲಿಯಮೆಂಟ್‌ನಲ್ಲಿ ಸಭೆ ನಡೆಸಿದ್ದಾರೆ. ತಾವು ಸಹಕಾರ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆರೋಗ್ಯ ಇಲಾಖೆ ಮೇಲೆ ಉತ್ತರ ಕೊಡುವುದಕ್ಕೆ ಕನಿಷ್ಟ ಒಂದೂವರೆ ತಾಸು ಬೇಕಾಗುತ್ತದೆ ಆಮೇಲೆ ನಾವು ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ. ಸಮಯ ಹೆಚ್ಚು ಆಗಿರುವುದರಿಂದ, ಸಚಿವರು ನಾಳೆ ಉತ್ತರ ಕೊಡಲಿ.

ಅಧ್ಯಕ್ಷರು.—ಬಿಸ್‌ನೆಸ್ ಆಡ್ವೈಸರಿ ಕಮಿಟಿಯಲ್ಲಿ ಇವತ್ತೇ ಮುಗಿಸಬೇಕೆಂದು ತೀರ್ಮಾನ ಆಗಿದೆ. ಅದರ ಪ್ರಕಾರ ನಾವು ಸಭೆಯನ್ನು ನಡೆಸಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ದಯಮಾಡಿ ಕುಳಿತುಕೊಳ್ಳಿ.

ಅಧ್ಯಕ್ಷರು.—ಖರ್ಗೆಯವರೇ ಸ್ವಲ್ಪ ಸಹಕಾರ ಕೊಡಿ. ಬಹುಮತದ ಪ್ರಕಾರ ನಾವು ನಡೆಯ ಬೇಕಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಿಗೆ ಬಹುಮತ ಇದ್ದರೆ ಅವರೇ ಪಾಸ್ ಮಾಡಿಕೊಂಡು ಹೋಗಲಿ.

ಅಧ್ಯಕ್ಷರು.—ಸ್ವಲ್ಪ ತಾವು ಕೇಳಿ.

ಶ್ರೀ ಎಂ. ರಘುಪತಿ.—ಅವರ ಸರ್ಕಾರ ಇದ್ದಾಗ ಒಂದು ಸಾರಿ ಧರ್ಮಸಿಂಗ್‌ರವರ ಡಿಮ್ಯಾಂಡ್‌ನ್ನು ಹತ್ತು ಮುಕ್ಕಾಲು ಗಂಟೆ ಆದರೂ ಪಾಸ್ ಮಾಡಿಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಗ ಸದನ ೯ ಗಂಟೆಗೆ ಸೇರುತ್ತಿರಲಿಲ್ಲ. ಈಗ ಬೆಳಿಗ್ಗೆ ೯ ಗಂಟೆಗೆ ಸಭೆ ಸೇರಿ ರಾತ್ರಿ ೯ ಗಂಟೆಯವರೆಗೆ ಸಭೆ ನಡೆಯಬೇಕೆಂದರೆ ಹೇಗೆ ?

ಶ್ರೀ ಎಂ. ರಘುಪತಿ.—ಇವತ್ತೊಂದು ದಿನ ಸಹಕಾರ ಕೊಡಿ. ನಾಳೆಯಿಂದ ಲೇಟ್ ಮಾಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ಬಹುಮತ ಇದೆ ಎನ್ನುವ ಅಭಿಪ್ರಾಯ ಅವರಲ್ಲಿದ್ದರೆ, ಅವರೇ ಸಭೆಯನ್ನು ನಡೆಸಿಕೊಂಡು ಹೋಗಲಿ. ಅವರಿಗೇ ಸಂಪೂರ್ಣ ಅಧಿಕಾರ ಇದೆ. ಅವರ ಮನಸ್ಸಿಗೆ ಬಂದಹಾಗೆ ಮಾಡಿಕೊಂಡು ಹೋಗಲಿ.

ಅಧ್ಯಕ್ಷರು.—ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಆಗಿರುವ ಪ್ರಕಾರ ಸಭೆಯ ನೆಡೆಯಬೇಡವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಮಯ ಸಾಕಾಗದೇ ಇದ್ದರೆ ಒಂದು ದಿನ ಹೆಚ್ಚಿಗೆ ಸಭೆಯನ್ನು ನಡೆಸಿ.

ಅಧ್ಯಕ್ಷರು.— ಈ ವಾರದಲ್ಲಿ ಶನಿವಾರ ಕೂಡ ಸಭೆ ನಡೆಯುತ್ತದೆ. ಈಗ ನೀವು ಸಹಕಾರ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರೇ ನಡೆಸಿಕೊಂಡು ಹೋಗಲಿ. (ಈ ಸಮಯದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಸೀಟಿನಿಂದ ಎದ್ದು ಹೋಗುವುದಕ್ಕೆ ಹೊರಟರು)

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ನಿಮಿಷ. ಅನಿಮಲ್ ಹಸ್ಬೆಂಡರಿ ಬಗ್ಗೆ ಉತ್ತರ ಕೊಡುವುದು ಇರುವುದರಿಂದ ಅದರ ಬಗ್ಗೆ ಉತ್ತರ ಕೊಡಲಿ. ಆರೋಗ್ಯ ಇಲಾಖೆಗೆ ಮಂತ್ರಿಯವರು ನಾಳೆ ಉತ್ತರ ಕೊಡಲಿ. ಸಭೆ ನಾಳೆ ಬೆಳಿಗ್ಗೆ ೯ ಗಂಟೆಗೆ ಸೇರಿದರೆ ಎಲ್ಲಾ ಸರಿ ಹೋಗುತ್ತದೆ.

ಅಧ್ಯಕ್ಷರು.—ಆಯಿತು. ನಾಳೆ ಬೆಳಿಗ್ಗೆ ೯ ಗಂಟೆಗೆ ಸಭೆ ಸೇರಿ ಹೆಲ್ತ್ ಬಗ್ಗೆ ತೆಗೆದುಕೊಳ್ಳೋಣ. ಈಗ ಅನಿಮಲ್ ಹಸ್ಬೆಂಡರಿ ಇಲಾಖೆಗೆ ಮಾನ್ಯ ಸಚಿವರು ಉತ್ತರ ಕೊಡಲಿ ಇದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು.—ನೀವು ೧೫ ಮಿನಿಟ್‌ನಲ್ಲಿ ಹೇಳಿ ಮುಗಿಸಿಬಿಡಿ (ಮಾನ್ಯ ಮೋಯಿನುದ್ದೀನ್ ರವರನ್ನು ಉದ್ದೇಶಿಸಿ)

ಶ್ರೀ ಮಹಮದ್ ಮೊಯಿನುದ್ದೀನ್ (ಪಶುಸಂಗೋಪನಾ ಇಲಾಖೆಯ ಸಚಿವರು).—ಸನ್ಮಾನ್ಯ ಸಭಾಧ್ಯಕ್ಷರೇ, ಅನಿಮಲ್ ಹಸ್ಬೆಂಡರಿಗೆ ಸಂಬಂಧಪಟ್ಟ ಬೇಡಿಕೆ ಮೇಲೆ ಆಗಿರುವ ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರುಗಳಿಗೆ ವಂದಿಸಿ, ಆ ಮಾನ್ಯ ಸದಸ್ಯರುಗಳು ಕೊಟ್ಟಿರತಕ್ಕ ಸಲಹೆ ಸೂಚನೆಗಳಿಗೆ ಉತ್ತರವನ್ನು ಕೊಡುತ್ತೇನೆ. ನಮ್ಮ ಡಿಪಾರ್ಟ್‌ಮೆಂಟಿನಲ್ಲಿ ಆಗಿರುವ ಕಾರ್ಯಕ್ರಮಗಳ ಬಗ್ಗೆ ಬ್ರೀಫ್ ಆಗಿ ಹೇಳಿ ನನ್ನ ಬೇಡಿಕೆ ಮೇಲಿನ ಉತ್ತರವನ್ನು ಮುಗಿಸುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೇ,

I thank all the hon'ble members of this House who have participated in the discussion. The annual report is on the table of the House and the hon'ble members have appreciated the good work done by the Department of Animal Husbandry. I shall only reply to those points which are raised by the hon'ble members. Hon'ble Members Sri Neelakanthappa mentioned about the rural veterinery dispensaries and that no dispensary has been established yet. It is a fact. Dispensa y were not established because the training personnel were not available but now training personnel is available and so dispensaries can be started. The dispensaries come under the control of Zilla Parishad. So, wherever they require they can start dispensaries.

Hon'ble member Sri Chandrakant Bellad has given a good suggestion about the improvement of local breeds and development of local breeds. Ajjampur farm takes care of Amrit Manal breed. Bankapur farm near Dharwad takes care of Milari breed. Devani breed in Bidar district is now maintained by Karituppe farm in Bellary district. Devani breed farm in Karanja has been handed over to the University of Agricultural Sciences in 1985. In Munirabad farm also we have taken up the work of development of breeds. Sri Chandrakant Bellad mentioned about milk producing co-operative society. The department has a programme to open 700 dairy co-operative socities. There are 4265 existing societies. Hon'ble members Sorke pointed out that 431 posts are vacant, and this has not been filled up. There is no post vacant. The department work has been handed over to Zilla Parishad and now the Zilla

Parishads have to open dispensaries wherever they need. About mobile clinics we have already 137 mobile clinics covering each taluka. 38 mobile clinics have to be opened. But these items come under the purview of Zilla Parishads. About the artificial insemination the position is like this. Artificial insemination done by the Department is 10.98 lakhs. Average consumption is 40%. Four lakh calves are born annually but only the accounts shows Rs. 1.98 lakhs. These are the cases entered and registered with the dispensaries. Many births taken place by artificial insemination are not recorded because the farmers have not reported or got it recorded in the dispensaries. But it is scientifically proved and and established that average consumption is 40%. Regarding the improvement of Koila Farm we have taken up Surthi breed and cross breeding for Jersian and other breeds.

8-30 P.M.

Fodder development and fodder seed development has also been increased. 26 lakh kit materials have been supplied for this farm. All the farms which are under the department are not for profit making. They are established with service motive and to see that the nutritious fodder is supplied as also good breed animals are supplied.

About production of chicks in the State Poultry Farm in Hesaraghatta, even though it is mentioned in the annual report that about 11,24,000 eggs are produced and chicks that are produced are 1,39,986. The production of chicks depends upon the indent, the demand that has been registered by this farm and only the best eggs are chosen for breeding purposes and the rest are sold. Therefore, there is no relevance between the eggs produced and the chicks produced, because chicks produced is only met on demand. If the demand is mare then more number of eggs are taken and then chicks are produced. Otherwise only the chicks which are on demand are produced and then the other chicks are sold out. These are the three Hon. Members who have taken part in the discussion on the demands of Animal Husbandry Department. I have answered comprehensively every point of them.

Briefly I would like to mention the work done by the Department. The department has done a very commendable work especially in two lines – one is artificial insemination and the other is eradication of Rinderpest. Apart from that one of the objectives of the department is socio – economic programmes to help the poorest of the poor to cross poverty line. In this regard the department has

done really a good work. One of the scheme Special livestock breeding programme. This has been taken up in 15 districts at the cost of Rs. 65 lakhs to help the marginal farmers, landless agricultural labourers. SC/STs are also given assistance for establishing sheep, poultry and piggery units. Subsidy is being provided under this scheme for feeding the female crossbreed calves from the age of 4th month to 32nd month. Beneficiaries under the scheme are 1,941. The other scheme is the spcial component plan wherein subsidy element is 60% and loan element is 40%. Beneficiaries under this scheme are 2,039 families, Under the 3rd scheme Tribal Subplan, 5 integrated tribal development projects are there, in Udupi, Puttur, H. D. Kote, Mudigere, Ponnampet. Under this integrated tribal development projeet 75% is provided as subsidy. 422 SC families have been assisted in this behalf.

Hon. Chief Minister in his budget speech has announced the formation of the Egg Board. I am happy to announce that the Board is under formation. We have created a cell in the Directorate of Animal Husbandry and the preliminary work and the project report will be ready by August, 1988 for poultry meat and egg production.

Under fodder development scheme we have taken up fodder development scheme in Amrithmahalkaval lands, for which the Swiss Government's assistance is being sought for. The preliminary field survey has already been done. We hope to see that during the course of this year we will establish a Fooder Development Bank in Amrithmahal Kavol. So far the progress achieved in fodder development is that the departmant has supplied about 55 lakhs of rootslips. Quantity of fooder seed supplied is 78 quintals, the number of minikits supplied and fodder plots raised is 2075 and the fodder produced under Scarcity Relief Programme is 2,420 tonnes.

The third project which the Department is going to take up during the course of this year is Sheep Project, Sheep Development Project is being taken up in Districts. They are Bijapur. Dharwar, Belgaum, Tumkur, Chitradurga, Bellary, Bangalore, Kolar and Mandya, for production of best variety of meat, as also wool. This project is being conceived with the external assistance at the cost of Rs. 289 millions, and the appraisal team is going to come in the month of December, 1988 After the appraisal team visits, in this year we hope to establish sheep development scheme.

The other scheme which the department has now taken up is the Rabbit rearing, because rabbit meat is becoming very popular. This rabbit rearing is now taken up at Sirsi, Ajjampur, Hesaraghatta, Kurikuppi. These are some of the salient works which are going to be taken up and the new schemes that are going to be taken up during the course of this year.

There are four other institutions in this department. They are (1) Karnataka Dairy, i.e., Milk Federation, (2) BAFCO and (3) Sheep and Sheep Development Board and (4) Institute of Animal Health and Veterinary Biologicals. All these institutions have done excealent work as mentioned in the annual report laid on the table of the House.

I would like to mention in short the progress of the Karnataka Milk Federation. During 1987-88 the average procurement has gone up to 8.02 lakh Litres/Day i.e., an increase of 21% over the last year. About the sale price, the KMF milk which is sold under the brand name 'Nandini' costs Rs. 4.50 per litre whereas local Nilagiris is Rs. 4.70 and Sri Milk is Rs. 4.70 per litre.

lastly the most important activity of KMF will be the Operation Flood-III project which is underway, at a cost of Rs. 162 crores, There are certain more salient points and important works done by the department, But, due to paucity of time I conclude my reply to the demand. I would request, through you Sir, the august House to pass my demand so that the department can take up efficient work in 1988-89.

ಅಧ್ಯಕ್ಷರು.—ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

"೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೪ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ- ೪: ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೧,೯೦.೪೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪,೦೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಧ್ಯಕ್ಷರು.—ಸಭೆಯನ್ನು ನಾಳೆ ಬೆಳಿಗ್ಗೆ ೯-೩೦ ಗಂಟೆಗೆ ಮುಂದೂಡಲಾಗಿದೆ.

(ಸದನವು ರಾತ್ರಿ ೮ ಗಂಟೆ ೩೭ ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ ೬ನೇ ಜೂನ್ ಮಾಹೆ ೧೯೮೮ರ ಗುರುವಾರದಂದು ಬೆಳಿಗ್ಗೆ ೯-೩೦ ಗಂಟೆಗೆ ಸೇರಲು ನಿಶ್ಚಯಿಸಿತು)

WD 7269